ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಬುಧವಾರ, ೧೯ನೇ ಏಪ್ರಿಲ್ ೧೯೯೫, ಚೈತ್ರ, ಶಕ ೧೯೧೭

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೦.೦೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ರಮೇಶ್ ಕುಮಾರ್) ಅವರು ಪೀಠವನ್ನು ಅಲಂಕರಿಸಿದ್ದರು.

ನಿಯಮ 159ರ ಮೇರೆಗೆ ಸಾರ್ವಜನಿಕ ಹಿತದೃಷ್ಟಿಯ ವಿಷಯದ ಪ್ರಸ್ತಾಪ :

ರಾಜ್ಯದ ನೀರಾವರಿ ಯೋಜನೆಗಳ ಬಗ್ಗೆ ಚರ್ಚೆ (ಮುಂದುವರಿದದ್ದು)

ಅಧ್ಯಕ್ಷರು : ಸನ್ಮಾನ್ಯ ವಾಟಾಳ್ ನಾಗರಾಜ್ ಅವರು.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ನೀರಾವರಿಗೆ ಸಂಬಂಧಪಟ್ಟಂತೆ ವಿಶೇಷ ಚರ್ಚೆಯನ್ನು ಈ ರಾಜ್ಯದ ಹಿರಿಯ ಮುಂಖಿಡಾರಾದ ಅಪಾರ ಅನುಭವಿಗಳಾದಂಥ ಶ್ರೀಮಾನ್ ನಂಜೇಗೌಡರು ನಿನ್ನೆ ಬಹಳ ಚೆನ್ನಾಗಿ ಹೇಳಿದ್ದಾರೆ ಪ್ರತಿಪಾದನೆ ಮಾಡಿದ್ದಾರೆ. ಮತ್ತು ಅವರ ಕಳಕಳಿ ಏನಿದೆ, ಮೊದಲಿನಿಂದಲೂ ಅವರು ಅದಕ್ಕಾಗಿ ತ್ಯಾಗ ಮಾಡಿದ್ದಾರೆ. ನಾನು ಈ ಸಂಧರ್ಬದಲ್ಲಿ ಅವರ ಬಗ್ಗೆ ನನ್ನ ವಿಶೇಷವಾದಂಥ ಅಭಿನಂದನೆಯನ್ನು ಸಹ ಸಲ್ಲಿಸುತ್ತೇನೆ. ಅದೇ ರೀತಿ ನಮ್ಮರಾಜ್ಯದ ನೀರಾವರಿ ವಿಚಾರಗಳ ಬಗ್ಗೆ ಅಪಾರವಾದಂಥ ಅನುಭವ ಮತ್ತು ಪ್ರಾಮಾಣಿಕತೆ, ಕಳಕಳಿಯನ್ನು ಹೊಂದಿದ್ದಂಥವರು, ದಿವಂಗತ ಶ್ರೀಮಾನ್ ಎಚ್.ಎಂ. ಚನ್ನಬಸವಪ್ಪನವರು. ಈಗಿನ ಮುಖ್ಯ ಮಂತ್ರಿಗಳಾಂಥ ಶ್ರೀಮಾನ್ ದೇವೇಗೌಡರೂ ಸಹ ನೀರಾವರಿ ಬಗ್ಗೆ ಅಪಾರವಾದಂಥ ಕಳಕಳಿಯನ್ನು ಹೊಂದಿದ್ದಾರೆ. ಶ್ರೀಮಾನ್ ದೇವರಾಜ್‌ಅರಸು ಅವರನ್ನು ಸಹ ನಾವು ಈ ಸಂದರ್ಭದಲ್ಲಿ ನೆನೆಸಿಕೊಳ್ಳಬೇಕು. ಹಾಗೆಯೇ ಶ್ರೀಮಾನ್ ವೀರೇಂದ್ರ ಪಾಟೀಲರು ಈ ನೀರಾವರಿ ಬಗ್ಗೆ ಅವರಿಗೆ ಅಪಾರವಾದಂಥ ಕಾಳಜಿ ಮತ್ತು ಅನುಭವ ಮತ್ತು ರಾಜ್ಯದ ನೀರಿನ ಸಮಸ್ಯೆ, ನಮ್ಮ ಹಕ್ಕಿನ ಬಗ್ಗೆ ಅವರು ಬಹಳ ಮೊದಲಿನಿಂದಲೂ ಅತ್ಯಂತ ಪ್ರಾಮಾಣಿಕವಾಗಿ ಈ ನಾಡಿನ ಕನ್ನಡ ಜನತೆಯ ಪರವಾಗಿ ನೇರವಾಗಿ ಹೋರಾಟ ಮಾಡಿದಂಥ ಜನ. ನಾನು ಈ ನೆಲ ಮತ್ತು ಜಲ ಪ್ರಶ್ನೆ ಯಾವಾಗ ಬಂದಾಗಲೂ ಇವರೆಲ್ಲರನ್ನೂ ಒಂದು ಕಡೆ ಸೇರಿಸತಕ್ಕಂಥಾದ್ದು,

ನನಗೆ ಮೊದಲಿಂದಲೂ ಒಂದು ಪದ್ಧತಿ. ಎಲ್ಲಿ ನಮಗೆ ಅನ್ಯಾಯವಾಗುತ್ತದೆ, ಎಲ್ಲಿ ನಮಗೆ ತೊಂದರೆಯಾಗುತ್ತದೆ, ಅದು ನೀರಿನ ಬಗ್ಗೆಯಾಗಲೀ, ಗಡಿ ಸಮಸ್ಯೆಯಾಗಲೀ, ಯಾವುದೇ ರಾಜ್ಯದ ಸಮಸ್ಯೆ ಬಂದಾಗ ನಾನಂತೂ ನಿದ್ರೆಯನ್ನು ಸಹ ಮಾಡದೆ ಪ್ರಾಮಾಣಿಕವಾಗಿ, ಪರಿಣಾಮಕಾರಿಯಾಗಿ ನಮ್ಮೆಲ್ಲಾ ಸ್ನೇಹಿತರನ್ನು ಕರೆದು, ಕುಳಿತು ಚರ್ಚೆ ಮಾಡತಕ್ಕಂಥಾದ್ದು ಇತ್ತು, ಮತ್ತು ನಮ್ಮ ಚರ್ಚೆಯಲ್ಲಿ ಇವರೆಲ್ಲರೂ ಕೂಡ ಭಾಗಿಗಳಾಗುತ್ತಿದ್ದರು. ಮತ್ತೊಬ್ಬರು ಶ್ರೀ ಎಸ್.ಶಿವಪ್ಪನವರನ್ನು ಇಲ್ಲಿ ನೆನೆಸಿಕೊಳ್ಳಬೇಕು. ಯಾವುದೇ ಸಂದರ್ಭದಲ್ಲಿ ಕರೆದಾಗಲೂ ಸಹ ಅವರು ಬಂದು ಚರ್ಚೆಯಲ್ಲಿ ಭಾಗವಹಿಸಿ ಈ ನಾಡಿನ ಕೆಲಸದ ಬಗ್ಗೆ ಅಪಾರವಾದಂಥ ಕಾಳಜಿಯನ್ನು ತೋರಿಸಿಕೊಂಡರು. ಶ್ರೀಮಾನ್ ದೇವೇಗೌಡರು ವಿರೋಧ ಪಕ್ಷದ

ನಾಯಕರಾಗಿ ನೀರಾವರಿ ಬಗ್ಗೆ ಅಪಾರವಾದಂಥ ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ. ಅದೇರೀತಿ ಅವರು ಸಚಿವರಾಗಿದ್ದಾಗಲೂ ಕೂಡ ನೀರಾವರಿಗೆ ಹೆಚ್ಚಿನ ಹಣ ಕೊಟ್ಟಿಲ್ಲೆಂದು ಹೇಳಿ ರಾಜೀನಾಮೆಯನ್ನು ಕೊಟ್ಟಿದ್ದೂ ಉಂಟು. ಅವತ್ತಿನ ಅವರ ಸ್ಥೈರ್ಯ ಆ ಒಂದು ವಿಚಾರಧಾರೆಯನ್ನು ನಾನು ಇವತ್ತಿಗೂ ಮೆಚ್ಚುತ್ತೇನೆ. ಅವರು ಲೋಕಸಭಾ ಸದಸ್ಯರಾದ ಮೇಲೂ ಸಹ ಲೋಕಸಭೆಯಲ್ಲಿ ನಮ್ಮ ರಾಜ್ಯದ ನೀರಾವರಿ ಬಗ್ಗೆ ಅಪಾರವಾದಂಥ ಕೆಲಸವನ್ನು ಮಾಡಿದ್ದಾರೆ. ಅವರು ಲೋಕಸಭೇಯಲ್ಲಿ ಮಾತನಾಡಿರತಕ್ಕಂಥ ಅನೇಕ ವಿಚಾರಗಳು ಏನಿವೆ, ಈ ರಾಜ್ಯದ ಹಿತಕ್ಕೆ ಸಂಬಂಧಪಟ್ಟ ವಿಚಾರಗಳಲ್ಲೂ ಸಹ ಅವರು ಚರ್ಚೆಯನ್ನು ಮಾಡಿದ್ದಾರೆ. ಈಗ ಅವರೇ ಮುಖ್ಯಮಂತ್ರಿಯಾಗಿ ಈ ರಾಜ್ಯದಲ್ಲಿ ಇದ್ದಾರೆ. ನಾನು ಅನೇಕ ವಿಚಾರಗಳಲ್ಲಿ ಅವರನ್ನು ಮೆಚ್ಚುತ್ತೇನೆ ಮತ್ತು ಕೆಲವು ವಿಚಾರಗಳಲ್ಲಿ ನನಗೆ ಮನಸ್ಸಿಗೆ ಅತ್ಯಂತ ನೋವಾಗಿದೆ. ಅವರು ಈ ರಾಜ್ಯದ ಮುಖ್ಯಮಂತ್ರಿಗಳಾದ ತಕ್ಷಣ ತಮ್ಮ ಸರ್ಕಾರದ ನಿಲವು, ಕಾವೇರಿ, ಕೃಷ್ಣಾ ಬಗ್ಗೆ ಸರ್ಕಾಕದ ನಿಲುವು ಏನೆಂದು ಸ್ಪಷ್ಟಪಡಿಸಬೇಕಾಗಿತ್ತು. ಮತ್ತು ಇದಕ್ಕಾಗಿ ಎಲ್ಲಾ ವಿರೋಧ ಪಕ್ಷಗಳ ಮುಖಂಡರುಗಳ ಸಭೆಯನ್ನು ಅವರು ಕರೆಯಬೇಕಾಗಿತ್ತು.

ಕಾವೇರಿ ಮತ್ತು ಕೃಷ್ಣಾ ಬಗ್ಗೆ ಹಿಂದಿನ ಎಲ್ಲಾ ಸರ್ಕಾರಗಳು ಅಂದರೆ, ಶ್ರೀಮಾನ್ ವೀರೇಂದ್ರ ಪಾಟೀಲರಿಂದ ಹಿಡಿದು, ಮೊಯಿಲಿಯವರಿಂದ ಹಿಡಿದು, ಬಂಗಾರಪ್ಪನವರಿಂದ ಹಿಡಿದು ಎಲ್ಲಾ ಮುಖ್ಯಮಂತ್ರಿಗಳೂ ವಿರೋಧಪಕ್ಷಗಳ ಎಲ್ಲಾ ಮುಖಂಡರುಗಳ ಸಭೆಯನ್ನು ಕನಿಷ್ಟ ತಿಂಗಳಿಗೊಂದು ಸಾರಿಯಂತೆ, ಅನೇಕ ಬಾರಿ ಕರೆಯುತ್ತಿದ್ದರು, ಕಾವೇರಿ ಬಗ್ಗೆ ಏನು ಮಾಡಬೇಕು, ಕೃಷ್ಣಾ ಬಗ್ಗೆ ಏನು ನ್ಯಾಯ ಮಂಡಳಿಯ ಪ್ರಗತಿ ಏನು, ಮುಂದೆ ನಾವೇನು ಮಾಡಬೇಕು ಎಂದು ಅನೇಕ ಸಂದರ್ಭಗಳಲ್ಲಿ ಚರ್ಚೆಯನ್ನು ನಡೆಸುತ್ತಿದ್ದರು. ಈ ಚರ್ಚೆಯನ್ನು ನಡೆಸತಕ್ಕಂತಾದ್ದು ಕಡ್ಡಾಯವಾಗಿತ್ತು. ಇದರ ಜೊತೆಗೆ ಪರಿಣತರನ್ನೊಳಗೊಂಡಂತೆ, ವಿರೋಧ ಪಕ್ಷಗಳ ಮುಖಂಡರನ್ನೊಳಗೊಂಡಂತೆ, ನಮ್ಮ ರಾಜ್ಯದಲ್ಲಿ ಒಂದು ಉನ್ನತಮಟ್ಟದ ಸಮಿತಿ ಇತ್ತು. ಆ ಸಮಿತಿಯ ಸಭೆಯನ್ನು ಎರಡು ತಿಂಗಳಿಗೊಂದು ಸಾರಿ ಕರೆಯತಕ್ಕಂತಾದ್ದು ಕಡ್ಡಾಯವಾಗಿತ್ತು. ಆ ಸಮಿತಿಯಲ್ಲಿ ಎಲ್ಲರೂ ಇದ್ದಾರೆ. ಈ ರಾಜ್ಯದ ಎಲ್ಲಾ ಇಲಾಖೆಯ ಪ್ರಮುಖ ಪರಿಮಿತರುಗಳು, ವಿರೋಧಪಕ್ಷಗಳ ಮುಖಂಡರುಗಳು ಮತ್ತು ಈ ಸದನಕ್ಕೆ ಬರದೇ ಇರತಕ್ಕಂಥ ಬೇರೆ ಪಕ್ಷದ ಮುಖಂಡರುಗಳೂ ಸಹ ಅ ಸಮಿತಿಯಲ್ಲಿದ್ದಾರೆ. ಈ ಎರಡು ಸಭೆಗಳನ್ನೂ ಮುಖ್ಯಮಂತ್ರಿಗಳು ಇದುವರೆಗೂ ಕರೆಯಲಿಲ್ಲ. ಇದು ಏನೆನಿಸುತ್ತದೆ? ಹಾಗಾದರೆ ಅವರ ಧೋರಣೆ ಏನು, ಯಾವ ಉದ್ದೇಶದಿಂದ ಕರೆಯಲಿಲ್ಲ ಎನ್ನತಕ್ಕಂಥದ್ದು, ಮನಸ್ಸಿಗೆ ಅತ್ಯಂತ ನೋವಿನ ವಿಚಾರವಾಗಿದೆ.

ಹಿಂದಿನ ಸರ್ಕಾರಗಳು, ಬಂದನಂತರವೇ, ಪ್ರಮಾಣವಚನ ಸ್ವೀಕಾರ ಮಾಡಿದ ಒಂದು ವಾರದಲ್ಲಿಯೇ ವಿರೋಪಕ್ಷಗಳನ್ನು ಕರೆದು, ಕಾವೇರಿ ಬಗ್ಗೆ ಏನು ಮಾಡಬೇಕು, ನಮ್ಮ ಚಿಂತನೆ ಏನು ಎನ್ನುದನ್ನು ಅವರು ಮಾಡಿದ್ದಾರೆ. ಈಗ ಇವರು. ಮುಖ್ಯಮಂತ್ರಿಗಳಾದ ಮೇಲೆ, ಇದಕ್ಕಾಗಿ ಒಂದು ಸಭೆಯನ್ನು ಸಹ ಕರೆಯಲಿಲ್ಲ, ಈ ಸಭೆಗಳನ್ನು ವಿಧಾನ ಸೌದದಲ್ಲಿ ಅಥವಾ ಕೃಷ್ಣಾದಲ್ಲಿ ಕರೆಯತಕ್ಕದ್ದು ಸಂಪ್ರಾದಾಯ. ಆದರೆ, ಇವರು ಇದುವರೆಗೂ ಕರೆಯಲಿಲ್ಲ. ಇವರು ಯಾವ ಕಾರಣಕ್ಕಾಗಿ ಸಭೆಯನ್ನು ಕರೆಯಲಿಲ್ಲ? ಇದು ನೇರವಾಗಿ ಸರ್ಕಾರದ ಒಂದು ತೀರ್ಮಾನ. ಮಾನ್ಯ ಅಧ್ಯಕ್ಷರೇ, ನಾವು ಕೊನೆಯ ಸಭೆಯನ್ನು ಬಹಿಷ್ಕಾರ ಮಾಡಿದ್ದನ್ನು ತಮಗೆ ಜ್ಞಾಪಿಸಿತ್ತೇನೆ. ಶ್ರೀಮಾನ್ ಬಂಗಾರಪ್ಪನವರ ಕೊನೆಯ ಮೂರು ತಿಂಗಳಿನಲ್ಲಿ, ನಮಗೂ ಅವರಿಗೂ ವ್ಯಾಜ್ಯ ಪ್ರಾರಂಭವಾಯಿತು. ಕಾವೇರಿ ನ್ಯಾಯ ಮಂಡಳಿಯನ್ನು ಬಹಿಷ್ಕಾರ ಮಾಡುತ್ತೇಂದು ಹೇಳುವುದಾದರೆ, ತಮ್ಮ ಸಭೆಗೆ ವಿರೋಧಪಕ್ಷದ ಎಲ್ಲಾ ಮುಖಂಡರುಗಳೂ ಬರುತ್ತೇವೆ. ಅದು ಇಲ್ಲವೆಂದು ಹೇಳುವುದಾದರೆ, ನಾವು ಬರುವುದಿಲ್ಲವೆನ್ನುವುದನ್ನು ಸ್ಪಷ್ಟಪಡಿಸಿ,

ಕೊನೆಯ ಸಭೆಗೆ ನಾವು ಹೋಗಲಿಲ್ಲ. ಇದು ತಮಗೂ ಗೊತ್ತಿರಬಹುದು, ಆಗ ಮಾನ್ಯ ಭೈರೇಗೌಡರು ಇದ್ದರು, ಅವರಿಗೂ ಇದು ಗೊತ್ತಿದೆ. ನನಗನಿಸುತ್ತದೆ, ಇವತ್ತು ಒಂದು ದಿನವಾದರೂ ಸಭೆ ಕರೆದು ಕಾವೇರಿ ಬಗ್ಗೆ ನಮ್ಮ ಸರ್ಕಾರದ ನಿಲುವು ಏನು, ಕೃಷ್ಣಾ ಬಗ್ಗೆ ನಮ್ಮ ನಿಲುವು ಏನು, ಈ ಬಗ್ಗೆ ನಾವೇನು ನಿಲುವು ತೆಗೆದುಕೊಳ್ಳಬೇಕೆಂಬುದರ ವಿಚಾರದಲ್ಲಿ ಅವರು ತೀರ್ಮಾನಕ್ಕೆ ಬರಲಿಲ್ಲ. ಆದ್ದರಿಂದ, ನನಗೆನಿಸುತ್ತದೆ, ಈ ಮೂಲಕವಾದರೂ ನಾವು ಚರ್ಚೆ ಮಾಡತಕ್ಕಂಥ ಅವಕಾಶ ದೊರೆತದ್ದು ನನಗಂತೂ ಅತ್ಯಂತ ಸಂತೋಷ. ಅಧ್ಯಕ್ಷರೇ, ಮುಖ್ಯವಾದ ಪ್ರಶ್ನೆ, ಈ ನೀರಾವರಿ ಇಲಾಖೆಯಲ್ಲಿ ಸ್ವಲ್ಪ ಹೆಚ್ಚು ಕಡಿಮೆ, ಸುಮಾರು 34 ಜನ ಮುಖ್ಯ ಇಂಜುನಿಯರುಗಳು ಇದ್ದಾರೆ, ಇವತ್ತು ಮೂವತ್ನಾಲ್ಕಕ್ಕಿಂತ ಇನ್ನೂ ಜಾಸ್ತಿಯೇ ಇದ್ದಾರೆ, ಅವರು ಏನು ಕಡಿಮೆ ಇಲ್ಲ. ಮತ್ತು ಸೂಪರಿಂಟೆಂಡೆಂಟ್ ಇಂಜಿನಿಯರುಗಳು ಸ್ವಲ್ಪ ಹೆಚ್ಚು ಕಡಿಮೆ ಒಂದು ನೂರರಷ್ಟು ಬರುತ್ತಾರೆ. ಇದು ನೀರಾವರಿ ಇಲಾಖೆಯಲ್ಲಿ. ಇನ್ನು ಲೋಕೋಪಯೋಗಿ ಇಲಾಖೆ, ನಗರ ಪಾಲಿಕೆ, ಭೂಸೇನಾ ನಿಗಮ ಇವೆಲ್ಲನ್ನೂ ಲೆಕ್ಕಹಾಕಿದರೆ, ನನಗನಿಸುತ್ತದೆ, ಸ್ವಲ್ಪ ಹೆಚ್ಚುಕಡಿಮೆ ಮುಖ್ಯ ಇಂಜಿನಿಯರುಗಳೇ ನೂರನ್ನು ದಾಟಬಹುದು. ಇದು ಏನಾಗಿದೆ, ಒಂದು ಕಾಲದಲ್ಲಿ ಮಾಣಿಕ್ಯಂ ಎಂಬ ಒಬ್ಬರೇ ಮುಖ್ಯ ಇಂಜಿನಿಯರುಇದ್ದರು ಮತ್ತು ಮಂಚಿಗಯ್ಯ ಎಂಬುವರು ಒಬ್ಬರು ಇದ್ದರು. ಇದೊಂದು ಇಲಾಖೆಯ ಹಣೆಬರಹ ಇಷ್ಟು. ನಿನ್ನೆ ಮಾನ್ಯ ನಂಜೇಗೌಡರು ಮಾತನಾಡುವಾಗ ಹೇಳಿದರು. ನಾವು ಎಲ್ಲಾ ತ್ಯಾಗಕ್ಕೂ ಸಿದ್ಧರಾಗಬೇಕು, ಎಲ್ಲಾ ಜನಪದ ಕಾರ್ಯಕ್ರಮಗಳನ್ನು ನಿಲ್ಲಿಸಿ,

ಇದಕ್ಕೆ ಹಣ ಕೊಡಬೇಕೆಂದು ಹೇಳಿದರು. ನಾನು ಅದನ್ನು ಬೇಕು ಅಥವಾ ಬೇಡ ಎಂದು ಹೇಳದೇ ಇದ್ದರೂ, ಅದೆಲ್ಲಕ್ಕಿಂತಲೂ ಹಣ ಬರುವುದು ಇದು. ನೀವು ಎಲ್ಲಾ ಇಲಾಖೆಯ ಮುಖ್ಯಸ್ಥರ ವಿವರಗಳನ್ನೂ ತೆಗೆಯಿರಿ. ಅವರಿಗೆ ಇರತಕ್ಕ ಸವಲತ್ತುಗಳು, ಕಾರು ಇತ್ಯಾದಿ ವ್ಯವಸ್ಥೆಗಳ ಸಂಪೂರ್ಣ ವಿವರ ತೆಗೆಯಿರಿ. ಏಕೆಂದರೆ, ನಾವು ತ್ಯಾಗ ಮಾಡಬೇಕಲ್ಲಾ. ನಾವು ಈಗ ತ್ಯಾಗಕ್ಕೆ ಹೋಗಬೇಕು. ತ್ಯಾಗಕ್ಕೆ ಹೋಗಬೇಕಾದರೆ, ಯಾವರೀತಿ ಇರಬೇಕು. ಒಂದೊಂದು ಇಲಾಖೆಯಲ್ಲಿ, ಉದಾಹರಣೆಗೆ ಪೋಲೀಸ್ ಇಲಾಖೆ ತೆಗೆದುಕೊಳ್ಳಿ, ಬೇರೆ ಯಾವುದೇ ಇಲಾಖೆ ತೆಗೆದುಕೊಳ್ಳಿ. ಈ ಎಲ್ಲಾ ಇಲಾಖೆಗಳಲ್ಲಿರತಕ್ಕ ಹುದ್ದೆಗಳನ್ನು ನಾವೇನು ಸೃಷ್ಟಿ ಮಾಡಿದ್ದೇವೆ, ಯಾವ ಸರ್ಕಾರ ಬರುತ್ತದೆ, ಆ ಸರ್ಕಾರ ಬಂದಾಗ ಈ ಹುದ್ದೆಗನ್ನುಸೃಷ್ಟಿ ಮಾಡತಕ್ಕಂತಾದ್ದು ನಡೆಯುತ್ತದೆ. ಒಬ್ಬ ಮುಖ್ಯ ಇಂಜಿನಿಯರ್ ಎಂದು ಹೇಳಿದರೆ, ಅವರಿಗೆ ತಕ್ಕಂಥ ವ್ಯವಸ್ಥೆ, ಆ ವ್ಯವಸ್ಥೆಯನ್ನು ನೀವು ಕೊಟ್ಟಿದ್ದೀರಿ. ಅದು ಇಲ್ಲ ಒಂದು ಹೇಳುವುದಕ್ಕೆ ಸಾಧ್ಯವಿಲ್ಲ, ಇವತ್ತಿನ ಪರಿಸ್ಥಿತಿಯಲ್ಲಿ ಈ ವ್ಯವಸ್ಥೆ ಸಾಧುವಲ್ಲ. ಕೃಷ್ಣಾ ಮತ್ತು ಕಾವೇರಿಗೆ ಹಣ ಇಲ್ಲವೆಂದು ಹೇಳುವುದಾದರೆ, ನೀವು ಆದರ್ಶವಾದ ನಿಲುವನ್ನು ತೆಗೆದುಕೊಳ್ಳುವುದಾದರೆ, ನನಗನಿಸುತ್ತದೆ ಈ ನೂರಾರು ಬಿಳಿ ಆನೆಗಳು. ಒಬ್ಬ ಮುಖ್ಯ ಇಂಜಿನಿಯರ್ ಎಂದರೆ ಒಂದು ಬಿಳಿ ಆನೆ ಅದರಲ್ಲೇನೂ ಅನುಮಾನ ಇಲ್ಲ.

ಅಧ್ಯಕ್ಷರು : ತಾವು ಏನು ಹೇಳಿದಿರಿ, ನನಗೆ ಸರಿಯಾಗಿ ಕೇಳಿಸಲಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಬಿಳಿ ಆನೆ...

ಅಧ್ಯಕ್ಷರು : ನನಗೆ ಬಿರಿಯಾನಿ ಎಂದು ಕೇಳಿಸಿತು.

ಶ್ರೀ ವಾಟಾಳ್ ನಾಗರಾಜ್ : ತಮಗೆ, ಇನ್ನೂ ಬೆಳಿಗ್ಗೆ ತಿಂಡಿ ಆಗಿಲ್ಲವೆಂದು ಕಾಣಿಸುತ್ತದೆ. ತಮಗೆ ಬೇಕಾದರೆ ಸಸ್ಯಾಹಾರಿ ಬಿರಿಯಾನಿ ತಂದುಕೊಡುತ್ತೇನೆ.

ಅಧ್ಯಕ್ಷರು : ನಿಮ್ಮನ್ನು ಇಕ್ಕಟ್ಟಿಗೆ ಸಿಕ್ಕಿಸುವುದಿಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ವಾಟಾಳರನ್ನು ದಯಮಾಡಿ, ಬಿರಿಯಾನಿಯವರೆಗೆ ಎಳೆಯಬೇಡಿ.

ಅಧ್ಯಕ್ಷರು : ಇಲ್ಲ, ನಿಮ್ಮದನ್ನೂ ಕೂಡ ಯಾರಿಗೂ ಹೇಳುವುದಿಲ್ಲ, ನೀವು ಅಷ್ಟೇ ಗುಟ್ಟಾಗಿ ತಿನ್ನುತ್ತಿದ್ದೀರಿ.

ಶ್ರೀ ವಾಟಾಳ್ ನಾಗರಾಜ್ : ಬಿರಿಯಾನಿ ತಿನ್ನುವವರೆಲ್ಲರೂ ನನ್ನೊಬ್ಬನನ್ನೇ ಏಕೆ ಕೆಡೆಸಬೇಕೆಂದು, ಲೀಲಾದೇವಿಯವರು ಅದನ್ನೇ ಹೇಳಿದರು, ತಾವು ಅದನ್ನೇ ಹೇಳುತ್ತಿದ್ದೀರಿ. ಇವರೆಲ್ಲರೂ, ನಾವೇ ತಿಂದು ಸಾಕಾಗಿದೆ, ನೀವು ಏಕೆ ಬರುತ್ತೀರಿ ಎಂದು ಹೇಳುತ್ತಿದ್ದಾರೆ. ಸಂತೋಷ, ನಿಮ್ಮ ಅಭಿಮಾನಕ್ಕೆ ನಾನು ಮೆಚ್ಚಿದ್ದೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ನಿಮ್ಮಂತಹವರು ತಿಂದೇ ರೇಟ್ ಜಾಸ್ತಿಯಾಗಿರುವುದು.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ನಂಜೇಗೌಡರು ನನಗೆ 35 ವರ್ಷಗಳಿಂದ ಸ್ನೇಹಿತರು. ನಾನು ತಿಂದೇ ಇಲ್ಲ, ಅದರೂ ಆಪಾದನೆ ಮಾಡುತ್ತಿದ್ದಾರೆ. ಇದು ಹಕ್ಕುಚ್ಯುತಿಗೆ ಹೋಗಬೇಕಾಗುತ್ತದೆ. ನಮ್ಮ ಸ್ನೇಹಿತರ ಮೇಲೆ ಹಕ್ಕುಚ್ಯುತಿ ತರಬೇಕಾಗುತ್ತದೆ. ತಾವು ಎದೆಮುಟ್ಟಿ ಪ್ರಾಮಾಣಿಕವಾಗಿ ಹೇಳಿ, ನೀನು ಬಿರಿಯಾನಿ ತಿನ್ನುತ್ತೇನೆಯೇ? ನಾನು ವೆಜಿಟಬಲ್ ಬಿರಿಯಾನಿ ತಿನ್ನಬಹುದು. ನಾನು ತಮಗೆ ಬಿರಿಯಾನಿ ತಿನ್ನಿಸುತ್ತೇನೆ, ತಾವು ತಯಾರಾಗಿದ್ದರೆ. ಕೊಡಿಸುತ್ತೇನೆ. ನಮ್ಮದೇನೂ ಅಭ್ಯಂತರವಿಲ್ಲ. ತಾವೇ ತಿನ್ನುವುದಾದರೆ, ಅದರಲ್ಲಿ ನನ್ನದೇನೂ ಅಭ್ಯತರವಿಲ್ಲ. ಅದರಿಂದ ನನಗಂತೂ ಖುಷಿ. ನನಗನಿಸುತ್ತದೆ, ಈ ಮಾತನ್ನು ಹೇಳುವಾಗ, ನಾನು ಯಾವುದೇ ವ್ಯಕ್ತಿಯನ್ನು ಕುರಿತು ಮಾತನಾಡುತ್ತೇನೆಂದಲ್ಲ, ಇದರ ಬಗ್ಗೆ ಒಂದು ಚಿಂತನೆ ನಡೆಯಲಿ. ಈ ಹುದ್ದೆಗಳು ಎಷ್ಟು ನಿರ್ಮಾಣವಾಗಿವೆ, ಈ ಹುದ್ದೆಗಳಿಂದ ಅಗತಕ್ಕ ಕೆಲಸಗಳೇನು? ಒಬ್ಬ ಜೂನಿಯರ್ ಇಂಜಿನಿಯರ್ ಮಾಡತಕ್ಕ ಕೆಲಸವನ್ನು ಒಬ್ಬ ಚೀಫ್ ಇಂಜಿನಿಯರ್‌ಗೆ ನಾವು ವಹಿಸಿತ್ತೇವೆ. ಈ ಮಾರ್ಗ ಇದೆಯಲ್ಲಾ ಇದು ಸರಿಯಾದಂಥ ಮಾರ್ಗ ಅಲ್ಲ, ಅದ್ದರಿಂದ, ಈ ಬಗ್ಗೆ ಒಂದು ಪ್ರಾಮಾಣಿಕವಾದ ಚಿಂತನೆ ಆಗಬೇಕು. ನನಗನಿಸುತ್ತದೆ, ಮಾನ್ಯ ನಂಜೇಗೌಡರಿಗೆ ಸನ್ಮಾನ ಮಾಡಿದ್ದರೆ ನಾನು ಸಂತೋಷಪಡುತ್ತಿದ್ದೆ. ಈ ರಾಜ್ಯದಲ್ಲಿ ಹೆಚ್.ಎಂ. ಚನ್ನಬಸಪ್ಪನವರ ಸ್ಮಾರಕ ಆಗಬೇಕು. ಇವತ್ತು ಇದನ್ನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಈ ರಾಜ್ಯದಲ್ಲಿ ಹೆಚ್.ಎಂ. ಚನ್ನಬಸಪ್ಪನವರು ನೀರಾವರಿ ಮಾಡಿದಂಥ, ದುಡಿದಂಥ ತ್ಯಾಗಕ್ಕೆ ನಾವೆಲ್ಲರೂ ಒಕ್ಕೊರಲಿನಿಂದ, ಅವರ ಸ್ಮಾರಕ ನಿರ್ಮಾಣವಾಗಲೇ ಬೇಕೆಂದು ಹೇಳಬೇಕು. ನಾವು ಮರೆತಿದ್ದೇವೆ. ಅವರಾಗಲೀ ಅಥವಾ ಮಾನ್ಯ ಸಿದ್ದವೀರಪ್ಪನವರಾಗಲಿ ಈ ಸದನದಲ್ಲಿ ನಿಂತುಕೊಂಡು ಮಾತನಾಡಿದರೆ, 2-3 ಗಂಟೆಗಳ ಕಾಲ, ದಿನಗಟ್ಟಲೆ ಮಾತನಾಡುತ್ತಿದ್ದರು. ಅಂತಹ ಹೆಚ್.ಎಂ. ಚನ್ನಬಸಪ್ಪನವರನ್ನು ನಾವು ಮರೆತಿದ್ದೇವೆ. ಪ್ರಾಮಾಣಿಕವಾಗಿ ಹೆಚ್.ಎಂ. ಚನ್ನಬಸಪ್ಪನವರಿಗೆ ಸಲ್ಲಿಸಬೇಕಾದ ಗೌರವವನ್ನು ನಾವು ಸಲ್ಲಿಸಲಿಲ್ಲ. ಈ ರಾಜ್ಯಕ್ಕೆ ಅವರು ಮಾಡಿದಂಥ ಕೆಲಸದಲ್ಲಿ ನಾನು ಸಂತೋಷಪಡುತ್ತೇನೆ. ಮಾನ್ಯ ಅಧ್ಯಕ್ಷರೇ, ಮಾನ್ಯ ನಂಜೇಗೌಢರು ಇಲ್ಲಿದ್ದಾರೆಂದು, ನಾನು ಅವರನ್ನು ಪ್ರಶಂಸೆ ಮಾಡುತ್ತೇನೆಂದಲ್ಲ, ಈ ವಿಚಾರದಲ್ಲಿ ಅವರು ಮಾಡಿರತಕ್ಕ ಕೆಲಸಕ್ಕೆ ಗೌರವ ಕೊಡಬೇಕು. ಹಾಗೆಯೇ ಮಾನ್ಯ ದೇವೇಗೌಡರಿಗೆ, ಮಾನ್ಯ ದೇವರಾಜ ಅರಸುರವರಿಗೆ ಮತ್ತು ಮಾನ್ಯ ವೀರೇಂದ್ರಪಾಟೀಲರಿಗೆ ನೀರಾವರಿ ಬಗ್ಗೆ ಇದ್ದಂಥ ಕಾಳಜಿಯನ್ನು ನಾವು ಮೆಚ್ಚಬೇಕು. ಆದರೆ, ನಾವು ಇವರಿಗೆ ಸನ್ಮಾನ ಮಾಡುತ್ತಾ ಇಲ್ಲ. ಮೊನ್ನೆಯಾರೋ ಒಬ್ಬ ಚೀಫ್ ಇಂಜಿನಿಯರ್ ರತ್ನಾನಾಯಕ್ ಎಂದು ಹೇಳಿ, ಅವರಿಗೆ ಏನು. ಸನ್ಮಾನ, ಏನು ವೈಭವ, ಏಕೆ ಸ್ವಾಮಿ, ಏಕೆ ಮಾಡಿದಿರಿ.

ಅವರು ಅಗಾಧವಾದುಂತಹ ಪರಮಪವಿತ್ರವಾದಂತಹ ಕೆಲಸ ಏನು ಮಾಡಿದ್ದಾರೆ ಎಂದು ನಾನು ಇನ್ನು ಕೇಳಿಲ್ಲ. ಬಾಳೇಕುಂದ್ರಿಯವನ್ನು ಮರೆತಿದ್ದೇವೆ. ಸರ್. ಎಂ. ವಿಶ್ವೇಶ್ವರಯ್ಯನವರನ್ನು ಬಿಟ್ಟರೆ ಬಾಳೇಕುಂದ್ರಿಯವರು ಅನ್ನುವಷ್ಟು ಆ ಪ್ರಮಾಣದಲ್ಲಿ ಕೆಲಸ ಮಾಡಿದಂತಹವರು ಬಾಳೇಕುಂದ್ರಿಯವರು ಅದರಲ್ಲಿ ಎರಡನೇ ಅಭಿಪ್ರಾಯವೇ ಇಲ್ಲ. ಅವರನ್ನು ನಾವು ಮರೆತಿದ್ದೇವೆ. ಅವರ ಬಗ್ಗೆ ನಾವು ಯಾವ ಕಾಳಜಿಯನ್ನು ವಹಿಸಿಲ್ಲ, ಆದರೆ ಇಲ್ಲಿ ಅದ್ದೂರಿಯಾದ ಸನ್ಮಾನ ಸಮಾರಂಭಗಳು ನನಗೆ ಅರ್ಥವಾಗಲಿಲ್ಲ. ಅವರಿಗೆ ಸನ್ಮಾನ ಮಾಡುವುದು ಸರಿ ತಪ್ಪು ಎನ್ನುವುದು ಅಲ್ಲ ವೈಯಕ್ತಿಕವಾಗಿ ನನಗೇನೂ ಇಲ್ಲ, ಆದರೆ ಯಾವ ಉದ್ದೇಶಕ್ಕಾಗಿ ಮಾಡಿದಿರಿ. ಏನು ಕಾರಣಗಳು ಇದು ಒಳ್ಳೆಯ ಸೂಚನೆ ಅಲ್ಲ. ಇದು ಸರ್ಕಾರಕ್ಕೆ ಗೌರವ ತರತಕ್ಕಂಥಾದ್ದು ಅಲ್ಲ. ಏಕೆಂದರೆ ಎಲ್ಲಾ ಇಂಜಿನೀಯರ್‌ಗಳನ್ನು ಬಿಟ್ಟು ಬಿಟ್ಟು ನೇರವಾಗಿ ನೀವು ಅವರನ್ನೇ ಸನ್ಮಾನ ಮಾಡತಕ್ಕಂಥಾದ್ದರಲ್ಲಿ ಅಲ್ಲಿ ಏನೋ ಇರಬೇಕು ಎಂದು ಅನಿಸುತ್ತದೆ. ಇಲ್ಲ ಅಂದರೆ ಸುಮ್ಮ ಸುಮ್ಮನೇ ಸನ್ಮಾನ ಏತಕ್ಕೆ ಮಾಡುತ್ತೀರಿ.? ಬೇರೆ ಯಾರಿಗೂ ಮಾಡುವುದಿಲ್ಲ ಇವರಿಗೆ ಮಾಡಬೇಕೆನ್ನುವುದು ಏನು ಅದಕ್ಕೆ ಪ್ರಾಚಾರಗಳು ಎಷ್ಟು ಪತ್ರಿಕೆಗಳ ಮೂಲಕ ಎಷ್ಟು? ತಾವು ಏತಕ್ಕೆ ಮಾಡಿದಿರಿ ಎನ್ನುವುದನ್ನು ಹೇಳಿದರೆ ನಾನು ಸಂತೋಷಪಡುತ್ತೇನೆ. ಮಾಡಿ ನನ್ನದೇನೂ ಅಭ್ಯಂತರವಿಲ್ಲ. ಅವರು ಯಾವುದೋ ಒಂದು ದೊಡ್ಡ ಜಲಾಶಯ ಕಟ್ಟಿದ್ದರೆ ಇತಿಹಾಸ ಇದ್ದರೆ ಮಾಡಿ ನನ್ನದೇನೂ ಅಭ್ಯಂತರ ಇಲ್ಲ. ಯಾವುದೂ ಇಲ್ಲದೇ ನೀವು ಈ ತರಹ ಹೊರಟುಬಿಟ್ಟರೆ ಅದು ತಪ್ಪಾಗುತ್ತದೆ. ಬಿಸಿ ಅಂಗಡಿಯವರು ಪ್ರಾಮಾಣಿಕವಾಗಿ ಕೆಲಸ ಮಾಡಿದ್ದರು ಅವರನ್ನು ಯಾರೂ ಕೇಳುವವರು ಇಲ್ಲ. ನಮ್ಮ ಭಟ್ಟರು ಅವರೆಲ್ಲಾ ಎಲ್ಲಿ ಹೋದರು ಅವರೆಲ್ಲಾ ನಿಮಗೆ ಜ್ಞಾಪಕವೇ ಇಲ್ಲವೇ? ಅವರ ಬಗ್ಗೆ ನಿಮಗೆ ವಿಚಾರವೇ ಇಲ್ಲವೇ? ಅವರೆಲ್ಲಾರನ್ನೂ ಬಿಟ್ಟು ನೀವು ಇವರನ್ನೇ ಮಾಡಬೇಕೆಂದರೆ ಇದು ಸಂಶಯಕ್ಕೆ ಎಡೆ ಮಾಡಿಕೊಡುತ್ತದೆ. ಸನ್ಮಾನ ಮಾಡುವುದು ಇದೆಯಲ್ಲಾ ಇದು ಒಳ್ಳೆಯದು ಅಲ್ಲ. ಸರ್ಕಾರವು ಇದರಲ್ಲಿ ಭಾಗವಹಿಸುತ್ತದೆ. ನಾನು ಅಷ್ಟಕ್ಕೆ ಮುಗಿಸುತ್ತೇನೆ ಅದರ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ಅಧ್ಯಕ್ಷರೇ, ನ್ಯಾಯ ಮಂಡಲಿ ಬಗ್ಗೆ ಹೇಳಬೇಕಾದರೆ ನಾನಂತೂ ನ್ಯಾಯ ಮಂಡಲಿ ಬೇಡ ಎಂದು ಮೊದಲಿನಿಂದಲೂ ಹೇಳಿರುವವನು. ನಾನೊಬ್ಬ ಈ ಸದನದಲ್ಲಿ ಹೇಳಿದ್ದೇನೆ.

ನಾನು ಸ್ವಾಮಿ ಅಲ್ಲಿ ನಮ್ಮ ಪೂಜಾರಿಯವರು ಕುಳಿತಿದ್ದ ಕಡೆ ಕುಳಿತಿದ್ದೆ. ವೀರೇಂದ್ರ ಪಾಟೀಲರು ಅಲ್ಲಿ, ನ್ಯಾಯ ಮಂಡಲಿ ಬಗ್ಗೆ ಒಂದು ನಿರ್ಣಯವನ್ನು ಮಂಡಿಸುವಾಗ ವೀರೇಂದ್ರ ಪಾಟೀಲರೇ ನೀವು ಈ ನ್ಯಾಯ ಮಂಡಲಿಯನ್ನು ಒಪ್ಪುವುದಾದರೆ ಈ ರಾಜ್ಯದ ಜನ ನಿಮ್ಮನ್ನು ಶಪಿಸುತ್ತಾರೆ ಎಂದು ನಾನು ನೇರವಾಗಿ ಹೇಳಿದೆ. ಇವತ್ತೇ ನ್ಯಾಯ ಮಂಡಲಿಯನ್ನು ಬಹಿಷ್ಕಾರ ಮಾಡಬೇಕು ಎಂದು ಹೇಳಿದರು. ವೀರೇಂದ್ರ ಪಾಟೀಲರು ಹೇಳಿದರು ಇಡೀ ಸದನವನ್ನೇ ಒಪ್ಪಿಸಬಹುದು ಆದರೆ ವಾಟಾಳ್ ನಾಗರಾಜ್‌ರವರನ್ನು ಒಪ್ಪಿಸುವುದಕ್ಕೆ ಅಗುವುದಿಲ್ಲ ಎಂದು ನನಗೆ ನೇರವಾಗಿ ಕೈ ತೋರಿಸಿ ಆ ಮಾತನ್ನು ಹೇಳಿದರು. ನನಗನಿಸುತ್ತದೆ ನ್ಯಾಯ ಮಂಡಲಿಯ ತೀರ್ಪು ಖಂಡಿತವಾಗಿ ನಮ್ಮ ಪರ ಬರುವುದಿಲ್ಲ. ನಾವೇನು ಆಕಾಶ ಭೂಮಿಗೆ ಇಳಿದು ಮಾಯ ಮಂತ್ರ ಮಾಡಿ ತಪಸ್ಸು ಮಾಡಿದರೂ ಸಹ ನಿಮಗೆ ಕರ್ನಾಟಕಕ್ಕೆ ಕನ್ನಡಿಗರಿಗೆ ಪ್ರಾಮಾಣಿಕವಾಗಿ ನ್ಯಾಯ ದೊರಕುವುದಿಲ್ಲ. ಇವತ್ತು ನಿಮಗೆ ಕಾಲ ಇನ್ನೂ ಮಿಂಚಿಲ್ಲ, ನಾವು ನ್ಯಾಯ ಮಂಡಲಿಯನ್ನು ಬಹಿಷ್ಕಾರ ಹಾಕಿದ್ದೇವೆ ಎನ್ನುವ ದಿಟ್ಟತನದ ನಿಲುವನ್ನು ತೆಗೆದುಕೊಳ್ಳಿ ಅದು ಏನಾಗುತ್ತದೆ ನ್ಯಾಯ ಮಂಡಲಿಯವರು ಏಕಪಕ್ಷೀಯವಾದ ತೀರ್ಪನ್ನು ಅವರು ಕೊಟ್ಟರು ಎಂದು ಇಟ್ಟುಕೊಳ್ಳೋಣ ನಮ್ಮ ವಿರುದ್ಧವಾಗಿಯೇ ತೀರ್ಪು ಕೊಟ್ಟರು ಎಂದು ಇಟ್ಟುಕೊಳ್ಳೋಣ. ಅವರು ಸೈನ್ಯ ತಂದು ನೀರು ತೆಗೆದುಕೊಂಡು ಹೋಗಲು ಸಾಧ್ಯವೇ ನಮ್ಮಲ್ಲಿ.?

ಅವರು ಸೈನ್ಯ ತರುವುದಕ್ಕೆ ಆಗುತ್ತದೆಯೇ? ಪಂಜಾಬಿನಲ್ಲಿ ಅನೇಕ ಆಯೋಗಗಳನ್ನು ರಚನೆ ಮಾಡಿದರು ಕೊನೆಗೆ ಏನಾಯಿತು? ಹರಿಯಾಣದಲ್ಲಿ ಅನೇಕ ಆಯೋಗಗಳನ್ನು ರಚನೆ ಮಾಡಿದರು ಕೊನೆಗೆ ಏನಾಯಿತು? ಆಯೋಗಗಳು ಕೊಟ್ಟಂತಹ ತೀರ್ಪಿಗಳು ಏನಾದವು? ಕಾಲಕಸ ಎಂದು ತೀರ್ಮಾನ ಮಾಡಿದರು ಪಂಜಾಬಿನಲ್ಲಿ, ಕಸದ ಬುಟ್ಟಿಗೆ ಹಾಕಿದರು. ನ್ಯಾಯ ಮಂಡಲಿ ಬಗ್ಗೆ ನನಗೆ ಗೌರವ ಇಲ್ಲ, ನ್ಯಾಯ ಮಂಡಲಿ ನೇಮಕ ಮಾಡಿದರಲ್ಲಾ ಮೊದಲನೇಯದಾಗಿ ಅದು ಉದ್ಭವವಾಯಿತಲ್ಲ ಅದು ಹುಟ್ಟಿರತಕ್ಕಂಥಾದ್ದನೇ ನಾನು ಪ್ರಶ್ನೆ ಮಾಡುತ್ತೇನೆ. ಅನ್ಯಾಯ ಮಂಡಲಿಯ ಜನನ ಇದೆಯಲ್ಲಾ ಅದು ಅನೈತಿಕವಾದಂತಹ ಜನನ. ಅದು ಅಕ್ರಮವಾದಂತಹ ಜನನ. ನಾನು ಅದರ ಬಗ್ಗೆ....

ಅಧ್ಯಕ್ಷರು : ಮಾನ್ಯ ನಾಗರಾಜುರವರೇ, ಟ್ರಿಬ್ಯುನಲ್‌ನವರು. ಅದು ಸರಿಯೋ ತಪ್ಪೋ ಅಸ್ತಿತ್ವಕ್ಕೆ ಬಂದಿದೆ. ವಿಚಾರಣೆ ನಡೆಯುತ್ತಿದೆ. ಬಹುಶಃ ನಾಳೆ ಬೆಳಿಗ್ಗೆ ಮತ್ತೆ ಕುಳಿತುಕೊಳ್ಳುತ್ತಿದ್ದಾರೆ. ನಿಮ್ಮ ಉದ್ದೇಶ ನಮಗೆ ಅರ್ಥವಾಗುತ್ತದೆ. ನಾವು ಮನುಷ್ಯರು ನೋಡಿ ಎಲ್ಲೋ ಒಂದು ಕಡೆ ಮಾತನಾಡುತ್ತೇವೆ. ಅದರ ಪರಿಣಾಮ ಬೇರೆ ರೀತಿಯಲ್ಲಿ ಈ ರಾಜ್ಯದ ಹಿತಕ್ಕೆ ಆಗುತ್ತದೆಯೇ? ತಾವು ಕನ್ನಡದ ಬಗ್ಗೆ ಕನ್ನಡದ ಹಿತಾಸಕ್ತಿಯ ಬಗ್ಗೆ ಹೆಚ್ಚು ಕಾಳಜಿ ಇರತಕ್ಕಂಥವರು. ನಿಮ್ಮ ಆತಂಕ ಏನು ಇದೆ ಅದನ್ನು ನಾನು ಪೂರ್ಣ ಮೆಚ್ಚಿದ್ದೇನೆ. ಇದು ಬಂದಾಗಿದೆ ಅಸ್ತಿತ್ವದಲ್ಲಿದೆ. ಕೆಲಸ ನಡೆಯುತ್ತಾ ಇರುವುದರಿಂದ ನಾಳೆ ಅವರು ಕುಳಿತುಕೊಳ್ಳುವುದರಿಂದ ನಾವು ಈ ಧೋರಣೆಯನ್ನು ಅನುಸರಿಸಿದರೆ ನಾಳೆ ನಮ್ಮ ರಾಜ್ಯದ ಹಿತಕ್ಕೆ ಏನಾದರೂ ಅಪಾಯ ಆಗಬಹುದೇ? ಅದಕ್ಕೆ ನೀವು ಭಾಗಿಯಾಗುವುದು ನನಗೆ ಇಷ್ಟವಿಲ್ಲ, ಏಕೆಂದರೆ ವಾಟಾಳ್ ನಾಗರಾಜ್‌ರವರು ಮಾತನಾಡಿ ಈ ರೀತಿ ಆಯಿತು ಎಂದು ಬರುವುದು ಬೇಡ ನಿಮಗೆ. ಬೇರೆಯವರಿಗೆ ಬಂದುಕೊಳ್ಳಲಿ ಅದರೆ ನಿಮಗೆ ಬರುವುದು ಬೇಡ ಎಂಬುದು ನನ್ನ ಆಸೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ ನಾನು ಇದೇನೂ ಹೊಸದಾಗಿ ಹೇಳುತ್ತಿಲ್ಲ, ಮೊದಲಿನಿಂದಲೂ ನ್ಯಾಯ ಮಂಡಲಿ ಬೇಡ ಎನ್ನುವುದು ನನ್ನ ಪ್ರತಿಪಾದನೆ.

ಅಧ್ಯಕ್ಷರು : ತಾವು ಬೇಡ ಎಂದು ಹೇಳಿದಿರಿ ಬಂದಾಯಿತು ತಮ್ಮಲ್ಲಿ, ರಾಜ್ಯದ ಹಿತದೃಷ್ಟಿಯಿಂದ ನನ್ನ ಮನವಿ.

ಶ್ರೀ ವಾಟಾಳ್ ನಾಗರಾಜ್ : ರಾಷ್ಟ್ರೀಯ ಜಲ ನೀತಿ ರಚನೆ ಅದ ಮೇಲೆ ಮುಂದೆ ಯೋಚನೆ ಮಾಡೋಣ ಎಂದು ಹೇಳಿದ್ದಾರಲ್ಲ, ಅವರೇ ಹೇಳಿದ್ದಾರೆ ನಂಜೇಗೌಡರು. ರಾಷ್ಟ್ರೀಯ ಜಲ ನೀತಿ ರೂಪ ಆಗುವವರೆಗೂ ನ್ಯಾಯ ಮಂಡಲಿ ಬೇಡ ಎಂದು ಸ್ಪಷ್ಟವಾದ ನಿಲುವು ಹೇಳಿದ್ದಾರೆ.

ಅಧ್ಯಕ್ಷರು : ಸನ್ಮಾನ್ಯ ವಾಟಾಳ್‌ರವರೇ, ನಾವು ಈಗ ಆ ಹಂತ ತಲುಪ್ಪಿದ್ದೇವೆ. ನ್ಯಾಯ ಮಂಡಲಿ ಅಸ್ತಿತ್ವಕ್ಕೆ ಬಂದಿದೆ, ಅದರ ಕೆಲಸ ಆರಂಭವಾಗಿದೆ. ನಾಳೆ ಮತ್ತೇ ಅವರು ಸಿಟಿಂಗ್ಸ್ ಇಟ್ಟು ಕೊಂಡಿದ್ದಾರೆ. ಆ ಒಂದು ಹಿನ್ನಲೆಯಲ್ಲಿ ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ ದಯಮಾಡಿ ಆಲೋಚನೆ ಮಾಡಿ. ಮುಂದಕ್ಕೆ ಹೋದರೆ ಚೆನ್ನಾಗಿರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ತಾವು ಏನು ಹೇಳುತ್ತಿದ್ದೀರಿ, ನನ್ನಿಂದ ನನ್ನ ಮಾತಿನಿಂದ ನ್ಯಾಯ ಮಂಡಲಿಯವರು ನಮ್ಮ ಪರ ಕೊಡುತ್ತಿದ್ದ ತೀರ್ಪು ಬದಲಾವಣೆ ಮಾಡಿಕೊಳ್ಳುವುದಾದರೆ ಅವರು ಕುಳಿತುಕೊಳ್ಳುವುದೇ ಬೇಡ.

ಅಧ್ಯಕ್ಷರು ; ನಾನು ಆ ಅರ್ಥದಲ್ಲಿ ಹೇಳಲಿಲ್ಲ. ನಾವು ಏತಕ್ಕೆ ಅದರ ಬಗ್ಗೆ ವ್ಯಾಖ್ಯಾನ ಮಾಡಬೇಕು? ಅವರು ಪೂರ್ವಭಾವಿಯಾಗಿ ಕೆಲಸ ಮಾಡುತ್ತಿರುವ ಹಂತದಲ್ಲಿಯೇ ನಾವು ಒಂದು ಅಭಿಪ್ರಾಯವನ್ನು ಏತಕ್ಕೆ ವ್ಯಕ್ತ ಮಾಡಬೇಕು? ಸನ್ಮಾನ್ಯ ಹಿರಿಯ ಸದಸ್ಯರಾದ ನಂಜೇಗೌಡರಲ್ಲಿ ನಾನು ನಿನ್ನೆ ಮನವಿ ಮಾಡಿಕೊಂಡೆ. ಅವರು ಕೂಡ ಆಮೇಲೆ ಅದನ್ನು ಪುನರಾಲೋಚನೆ ಮಾಡಿ ನಿಮ್ಮದೇ ಅಭಿಪ್ರಾಯ ಅವರು ಇನ್ನೂ ಕೂಡ ಆ ವಿಚಾರದಲ್ಲಿ ಪರ್ಮ ಆಗಿ ಇರತಕ್ಕಂಥವರು.

ಶ್ರೀ ಹೆಚ್.ಎನ್. ನಂಜೇಗೌಡ : ಅವರು ನ್ಯಾಯಾಧೀಶರುಗಳ ಬಗ್ಗೆ ಹೇಳುತ್ತಿಲ್ಲ. ನ್ಯಾಯ ಮಂಡಳಿ ಹೇಗೆ ಹುಟ್ಟಿಕೊಂಡಿತು. ಏತಕ್ಕೆ ಹುಟ್ಟಿತು ಹಾಗೂ ಅದರ ಉದ್ದೇಶವನ್ನೇ ಪ್ರಶ್ನೆ ಮಾಡುತ್ತಿದ್ದಾರೆ. ನ್ಯಾಯಾಧೀಶರ ಬಗ್ಗೆ ಅಲ್ಲ. ನ್ಯಾಯ ಮಂಡಳಿ ಹುಟ್ಟಬೇಕಾದರೆ ಏನೋ ರಾಜಕೀಯ ನಡೆಯಿತು ಎನ್ನುವುದನ್ನು ಹೇಳಲು ಹೊರಟಿದ್ದಾರೆ ಎಂದು ಕಾಣುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ನ್ಯಾಯ ಮಂಡಳಿ ಜನನ ಅಂದರೆ ಏನು? ನ್ಯಾಯ ಮಂಡಳಿಯ ವ್ಯವಸ್ಥೆ ಮತ್ತು ಅಲ್ಲಿರತಕ್ಕಂಥ ನ್ಯಾಯಾಧೀಶರ ಬಗ್ಗೆ ನಾನು ಮಾತನಾಡುತ್ತಿಲ್ಲ.

ಅಧ್ಯಕ್ಷರು : ಪರಿಸ್ಥಿತಿ ಸಂದರ್ಭ ಅದು ಹೇಗೆ ಜನ್ಮ ತಾಳಿತು?

ಶ್ರೀ ವಾಟಾಳ್ ನಾಗರಾಜ್ : ಹೇಗೆ ಜನ್ಮ ತಾಳೀತು? ಹೇಗೆ ಮರಣ ಶಾಸನವನ್ನು ಕನ್ನಡಿಗರಿಗೆ ಬರೆಯಬೇಕೆನ್ನುವ ನ್ಯಾಯ ಮಂಡಳಿ ನೇಮಕ ಯಾರಿಂದ ಆಯಿತು? ಈ ನ್ಯಾಯ ಮಂಡಳಿ ನೇಮಕ ಅದ್ದದ್ದೇ ಒಂದು ಅಕ್ರಮವಾಗಿ ಆಯಿತು. ಮತ್ತು ದಾರಿ ತಪ್ಪಿ ಆಗಿದೆ. ತಮಗೆ ನೆನಪು ಇರಬಹುದು. ಶ್ರೀಮತಿ ಇಂದಿರಾಗಾಂಧೀಯವರು ಇದ್ದಿದ್ದರೆ ಶ್ರೀ ರಾಜೀವ್ ಗಾಂಧಿಯವರು ಇದ್ದಿದ್ದರೆ ಪ್ರಧಾನ ಮಂತ್ರಿಗಳಾಗಿ ಈ ನ್ಯಾಯ ಮಂಡಳಿ ಖಂಡಿತವಾಗಿ ಬರುತ್ತಿರಲಿಲ್ಲ. ಇದೇನೂ ಹೊಸದು ಅಲ್ಲ. ಮೊದಲಿನಿಂದಲೂ ಕೇಳುತ್ತಿದ್ದಾರೆ. ಅವರು ಹೇಳಬಹುದಿತ್ತಲ್ಲಾ ಪ್ರಧಾನ ಮಂತ್ರಿ ಇಂದಿರಾಗಾಂಧೀ ಇದ್ದಾಗ ರಾಜೀವ್ ಗಾಂಧೀಯವರು ಇದ್ದಾಗ ನ್ಯಾಯ ಮಂಡಳಿ ರಚನೆ ಮಾಡಿಬಿಡಿ ಎಂದು ಹೇಳಬಹುದಿತ್ತಲ್ಲಾ. ಹೇಳಲಿಲ್ಲ. ರಾಜಕೀಯ, ಅವರು ಮಾಡಲಿಲ್ಲ. ಈ ದೇಶ ಎಲ್ಲಾ ಒಂದು ಎಂದು ತೀರ್ಮಾನ ಮಾಡಿದರು. ಕರ್ನಾಟಕ ಬೇರೆ ಇದು ಬೇರೆ ಎಂದು ತೀರ್ಮಾನ ಮಾಡಲಿಲ್ಲ ಅವರು.

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೇ, ಇಂದಿರಾಗಾಂಧೀಯವರು ಇದ್ದಾಗಲೂ ಕೂಡ ಬಚಾವತ್ ನ್ಯಾಯ ಮಂಡಳಿ ಆಯಿತು. ಅದರಿಂದಲೂ ಕೂಡ ಕರ್ನಾಟಕ ರಾಜ್ಯಕ್ಕೆ ಸಾಕಷ್ಟು ಅನ್ಯಾಯ ಆಗಿದೆ. ಅವರು ಇದ್ದಿದ್ದರೆ ಆಗುತ್ತಿರಲಿಲ್ಲ ಎಂದು ಹೇಳುವುದು ತಪ್ಪು. ಆಗಲೂ ಆಗಿದೆ. ಶ್ರೀಮತಿ ಇಂದಿರಾಗಾಂಧಿಯವರು ಇದ್ದಾಗಲೇ ಬಚಾವತ್ ನ್ಯಾಯಮಂಡಳಿ ಆಯಿತು. ಆ ತೀರ್ಪು ನಮ್ಮ ತೀರ್ಪು ಆಯಿತು. ಅದರ ಪರಿಣಾಮ ಏನು ಎಂಬುದು ಎಲ್ಲರಿಗೂ ಗೊತ್ತಿದೆ.

ಶ್ರೀ ವಾಟಾಳ್ ನಾಗರಾಜ್ : ನಾನು ಕಾವೇರಿ ಬಗ್ಗೆ ಮಾತನಾಡುತ್ತಿದ್ದೇನೆ. ಯಾರೋ ದುಬ್ಬಟೆಯನ್ನು ಬೈದರೆ ಕಂಬಳಿಯನ್ನು ಹಿಡಿದುಕೊಳ್ಳಿ ಎನ್ನುವ ವಾದ ಇದು. ರಾಜಕೀಯವಾಗಿ ತಮಿಳುನಾಡನ್ನು ಓಲೈಸುವುದಕ್ಕೋಸ್ಕರವಾಗಿ ತಮಿಳುನಾಡಿಗೆ ಚೌಲ ಬೀಸುವುದಕ್ಕಾಗಿ, ಹಾಗೂ ತಮಿಳುನಾಡಿನಲ್ಲಿ ಕರುಣಾನಿಧಿಯವರನ್ನು ಓಲೈಸುವುದಕ್ಕೋಸ್ಕರವಾಗಿ ಡಿ.ಎಂ.ಕೆ. ಸರ್ಕಾರದ ಬೆಂಬಲ ತೆಗೆದುಕೊಳ್ಳುವುದಕ್ಕೋಸ್ಕರವಾಗಿ ಅಂದಿನ ಪ್ರಧಾನಿಯವರಾದಂತಹ...

ಶ್ರೀ ಆರ್.ಎಲ್. ಜಾಲಪ್ಪ : ರಾಜ್ಯದ ಹಿತದೃಷ್ಟಿಯನ್ನು ಯಾರಾದರೂ ಬಲಿ ಕೊಡುತ್ತಾರೋ? ಸುಮ್ಮನೆ ಏನಾದರೂ ಮಾತನಾಡಬೇಕೆಂದು ಇದ್ದರೆ ಮಾತನಾಡಿ ಸ್ವಾಮಿ.

ಶ್ರೀ ಸಿ. ಬೈರೇಗೌಡ : ಟ್ರಿಬ್ಯೂನಲ್ ರಚನೆಯಾದಾಗ ತಮಿಳುನಾಡಿನಲ್ಲಿ ಇದ್ದುದ್ದು ಯಾವ ಸರ್ಕಾರ? ಕರುಣಾನಿಧಿಯವರ ಪಕ್ಷದಿಂದ ರಾಜ್ಯ ಸಭೆಯಲ್ಲಿ ಒಬ್ಬರು ಸದಸ್ಯರನ್ನು ಬಿಟ್ಟರೆ ಬೇರೆ ಯಾರೂ ಇರಲಿಲ್ಲ? ಅಷ್ಟು ಬಿಟ್ಟರೆ ಮತ್ತೆ ಯಾವ ವಿಧವಾದ ಸಂಪರ್ಕ ಇರಲಿಲ್ಲ, ಅದು ರಾಷ್ಟ್ರೀಯ ರಂಗದಲ್ಲಿ ಅದು ಒಂದು ಅಂಗ ಅಷ್ಟೆ. ಅಷ್ಟು ಬಿಟ್ಟರೆ ಮತ್ತೆ ಏನೂ ಇರಲಿಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ : ನಾನು ಕೇಂದ್ರದಲ್ಲಿ ಮಂತ್ರಿಯಾಗಿದ್ದರೂ ಇದಾಯಿತಲ್ಲಾ ಎಂದು ಮಾನ್ಯ ಗುರುಪಾದ ಸ್ವಾಮಿಯವರು ಕರ್ನಾಟಕದ ಜನತೆಯಲ್ಲಿ ಸಾರ್ವತ್ರಿಕವಾಗಿ ಕ್ಷಮೆ ಕೇಳಿದರು. ಅದಕ್ಕಿಂಥ ಇನ್ನೇನು ಎವಿಡೆನ್ಸ್ ಬೇಕು?

ಶ್ರೀ ಆರ್.ಎಲ್. ಜಾಲಪ್ಪ : ಕ್ಷಮೆ ಕೇಳಿದರೆ ಸಾಲದು, ಅವರು ರಾಜೀನಾಮೆ ಕೊಟ್ಟು ಬರಬೇಕಾಗಿತ್ತು.

ಶ್ರೀ ಹೆಚ್.ಎನ್. ನಂಜೇಗೌಡ : ತಮಿಳುನಾಡಿಗೆ ತೊಂದರೆಯಾದಾಗ ರಾಮಮೂರ್ತಿಯವರು ರಾಜೀನಾಮೆ ಕೊಟ್ಟರು, ನಮ್ಮವರು ಕೊಡುವುದಿಲ್ಲ ಏಕೆಂದರೆ, ಇವರು ಕನ್ನಡಿಗರಿಲ್ಲವೇ, ಡೆಲ್ಲಿಯಲ್ಲಿ ಕುಳಿತರೆ ಅವರು ಅಲ್ ಇಂಡಿಯಾ ಮಿನಿಸ್ಟರ್ ಆಗಿರುತ್ತಾರೆ, ಅದಕ್ಕೆ ನಾವು ಏನು ಮಾಡೋಣ?

ಶ್ರೀ ಆರ್.ಎಲ್. ಜಾಲಪ್ಪ : ನೀವೆಲ್ಲಾ ಏನು ಮಾಡುತ್ತಿದ್ದೀರಿ ಆಗ?

ಶ್ರೀ ಹೆಚ್.ಎನ್. ನಂಜೇಗೌಡ : ನಾನು ಏನು ಮಾಡುತ್ತಿದ್ದೆ ಎನ್ನುವುದಕ್ಕೆ ಅಲ್ಲಿನ ನಡೆದ ಪ್ರೊಸೀಡಿಂಗ್ಸ್‌ನ್ನು ಬೇಕಾದರೆ ಇಲ್ಲಿ ಮಂಡಿಸುತ್ತೇನೆ. ಬಹುಶಃ ನಾನು ಲೋಕಸಭೆಯಲ್ಲಿ ಇಲ್ಲದೆ ಇದ್ದಿದ್ದರೆ 1987ನೇ ಇಸವಿಯಲ್ಲೇ ಇದನ್ನು ಮಾಡುತ್ತಿದ್ದರು. ಇದರ ಬಗ್ಗೆ ಮಾಜಿ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರನ್ನು ಕೇಳಿ, ಹೇಳುತ್ತಾರೆ.

ಅಧ್ಯಕ್ಷರು : ಮಾನ್ಯ ನಂಜೇಗೌಡರೇ, ನೀರಾವರಿಗೆ ನಿಮ್ಮ ಕಮಿಟ್‌ಮೆಂಟ್, ವಿ.ಪಿ. ಸಿಂಗ್‌ರವರಿಗೆ ಜಾಲಪ್ಪನವರ ಕಮಿಟ್‌ಮೆಂಟ್, ಅವೆರಡು ಪರಸ್ಪರ ಬೇರೆ ಬೇರೆ ವಿಚಾರಗಳು. ಈ ಎರಡೂ ವಿಚಾರಗಳಲ್ಲಿ ನನಗೆ ಕಮಿಟ್‌ಮೆಂಟ್ ಇರುವುದರಿಂದ, ಅದನ್ನು ಬಿಟ್ಟು ಮುಂದಕ್ಕೆ ಹೋಗಿ.

ಶ್ರೀ ವಾಟಾಳ್ ನಾಗರಾಜ್ : ಮೂಲಭೂತವಾಗಿ, ಅದನ್ನು ನಾವು ಹೇಳಲೇ ಇಲ್ಲವೆಂದರೆ, ಬುಡ ಬಿಟ್ಟು ರಂಬೆ ಹಿಡಿದುಕೊಂಡು ನಾವು ಏನು ಮಾಡೋಣ? ಜಾಲಪ್ಪನವರೇ, ತಾವು ಕೋಪಿಸಿಕೊಳ್ಳಬಾರದು. ನಗುನಗುತ್ತಾ ನಾವು ವಾದ ಮಾಡೋಣ. ಮಾನ್ಯ ಬೈರೇಗೌಡರೇ, ಈ ಕಡೆ ತಾವು ಕುಳಿತಿದ್ದಾಗ ಗೋಪ್ಯವಾಗಿ ಒಪ್ಪಿಕೊಂಡಿದ್ದೀರಿ. ನಿಜ, ವಿ.ಪಿ. ಸಿಂಗ್ ಅನ್ಯಾಯ ಮಾಡಿಬಿಟ್ಟಿದ್ದಾರೆಂದು ಇಲ್ಲಿ ಹೇಳಿದ್ದೀರಿ.

ಶ್ರೀ ಸಿ. ಬೈರೇಗೌಡ : ನಾನು ಹೇಳಿದುದ್ದು ಬೇರೆ. ಅವರು ನನ್ನನ್ನು ತಪ್ಪು ದಾರಿಗೆ ಎಳೆಯುವ ಪ್ರಯತ್ನ ಮಾಡುತ್ತಿದ್ದಾರೆ. ಆಗ ಅಲ್ಲಿ ಕರುಣಾನಿಧಿಯವರ ಸರ್ಕಾರ ಇತ್ತು, ನಾನು ಹೇಳಿದ್ದು ಏನೆಂದರೆ, ವಾಸ್ತವಾಂಶವನ್ನು ನಾವಾಗಲೀ, ನೀವಾಗಲೀ ಹೇಳಿದರೆ ಅದು ದಾಖಲೆಯಲ್ಲಿರತಕ್ಕಂಥಾದ್ದು.

ಅಧ್ಯಕ್ಷರು : ಮಾನ್ಯ ಜಾಲಪ್ಪನವರು ಹೇಳಿದ್ದು ಸರಿ. ಅಲ್ಲಿ ಡಿ.ಎಂ.ಕೆ ಅವರ ಸರ್ಕಾರ ಇತ್ತು, ಡಿ.ಎಂ.ಕೆ. ವತಿಯಿಂದ ಒಬ್ಬರೂ ಸದಸ್ಯರೂ ಲೋಕಸಭೆಗೆ ಆರಿಸಿ

ಹೋಗದೆ ಇದ್ದುದರಿಂದ ಅವರ ಮೇಲೆ ಅವಲಂಬಿಸುವ ಅಗತ್ಯ ವಿ.ಪಿ. ಸಿಂಗ್‌ರವರಿಗೆ ಇರಲಿಲ್ಲ ಎಂದು ಹೇಳಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಹೇಳುವ ಉದ್ದೇಶವೇನೆಂದರೆ, ಕರುಣಾನಿಧಿಯವರಿಗೆ ಫೇವರ್ ಮಾಡಿಕೊಟ್ಟರೆ ಮುಂದೆ ಬರತಕ್ಕಂಥ ಚುನಾವಣೆಯಲ್ಲಿ ಅವರೇ ಬರಲಿ ಎಂದು.

ಅಧ್ಯಕ್ಷರು : ಅದು ನಿಮ್ಮ ವ್ಯಾಖ್ಯಾನ.

ಶ್ರೀ ಆರ್.ಎಲ್. ಜಾಲಪ್ಪ : ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರ ಇದ್ದಾಗ ವರ್ಷಕ್ಕೆ 2 ಟಿಎಂಸಿಎಫ್‌ಟಿ ಯೋ 5 ಟಿಎಂಸಿಎಫ್‌ಟಿ ನೀರು ಕೊಡುತ್ತಿದ್ದರು, ಆದರಿಂದಾಗಿ ಅದು ಟ್ರಿಬ್ಯೂನಲ್‌ಗೆ ಹೋಗುವ ಅವಕಾಶ ಇರಲಿಲ್ಲ. ನಮ್ಮ ಸರ್ಕಾರ ಹೋದ ಮೇಲೆ ಬೇರೆ ಸರ್ಕಾರ ಬಂತಲ್ಲಾ, ಆಗ ತಮಿಳುನಾಡಿನಿಂದ ಮಂತ್ರಿಗಳು ಬಂದರೆ ಸರಿಯಾಗಿ ಮಾತನಾಡಿಸಲಿಲ್ಲ. ಅವರು ಇಲ್ಲಿ ಎರಡು ದಿನ ಕಾದು ಬೇಜಾರಾಗಿ ಹೋಗಿ ಅಲ್ಲಿ ಒಂದು ರೆಸೆಲ್ಯೂಷನ್ ಪಾಸ್ ಮಾಡಿದರು.

ಶ್ರೀ ವಾಟಾಳ್ ನಾಗರಾಜ್ : ತಮಿಳುನಾಡು ಸರ್ಕಾರದ ಮಂತ್ರಿಗಳು ಬಂದರೆ, ಇಲ್ಲಿ ಮಡಿ ಪಂಚೆ ಹಾಸಿಕೊಂಡು ಎಲ್ಲಾ ವ್ಯವಸ್ಥೆ ಮಾಡಿಕೊಂಡಿದ್ದರೆ ನಮ್ಮ ಪರ ಇರುತ್ತಾರೆಂದು ನಿಮ್ಮ ಅರ್ಥವೇ? ಮಡಿ ಪಂಚೆ ಹಾಸುವವರು, ಚೌಲ ಬೀಸುವವರು ಈ ಕೆಲಸ ಮಾಡಬೇಕೇ? ಬಂದವರ ಕಾಲು ಮತ್ತು ಕೈಗಳಿಗೆ ಎಣ್ಣೆ ಹಾಕಿ ಬೆಣ್ಣೆ ಹಾಕುವುದಕ್ಕೇ ನಾವು ಇರುವುದು? ತಮಿಳುನಾಡಿನವರು ಬಂದರೆ ನಾವು ಗೇಟ್‌ನಲ್ಲಿ ನಿಂತುಕೊಂಡು ಬನ್ನಿ ಸ್ವಾಮಿ, ನಾವು ಎಲ್ಲಾ ಮಾಡುತ್ತೇವೆಂದು ಹೇಳಬೇಕು, ಮಾನ್ಯ ಜಾಲಪ್ಪನವರ ಪ್ರಕಾರ. ಅವರನ್ನು ಹಾಗೆ ಓಲೈಸಿಕೊಂಡು ಅವರ ಕೃಪೆಯನ್ನು ಪಡೆಯಬೇಕು? ಏಕೆ ಕೃಪೆ? ನಮ್ಮ ಹಕ್ಕಿಗೆ ನೀವು ಮಾಡಿದಂಥ ತಪ್ಪಿಗೆ ನಾವು ಹೊಣೆಯೇ?

ಶ್ರೀ ಆರ್.ಎಲ್. ಜಾಲಪ್ಪ : ಇವೆಲ್ಲಾ ಮಾಡಬೇಕಾಗುತ್ತದೆ. ರಾಜಕೀಯ ಎಂದಾಗ ಬೇರೆ ಸ್ಟೇಟ್‌ನವರು ಬಂದಾಗ ಎಲ್ಲಾ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್ : ತಮ್ಮ ಮುಖಾಂತರ ಮಾನ್ಯ ಜಾಲಪ್ಪನವರಿಗೆ ಹೇಳುವುದೇನೆಂದರೆ, ಶ್ರೀಮಾನ್ ದೇವೇಗೌಡರು, ಅವರ ನಾಯಕರು, ಲೋಕಸಭೆಯ ಸದಸ್ಯರಾಗಿದ್ದಾಗ ಈ ರೀತಿ ಹೇಳಿದ್ದಾರೆ. ಇವತ್ತು ಆ ನಿಲುವಿಗೆ ನಿಲ್ಲುತ್ತಾರೋ ಇಲ್ಲವೊ? ಅಥವಾ ಪತ್ರಿಕೆಗಳಲ್ಲಿ ಬಂದಿಲ್ಲವೆಂದು ಹೇಳುತ್ತಾರೇನೋ? ಅವರು ನ್ಯಾಯ ಮಂಡಳಿಯ ಸದಸ್ಯರ ಬಗ್ಗೆ ಹೇಳುತ್ತಾರೆ. ನೀವು ಹೇಳುತ್ತೀರಿ ಅವರಿಗೆ ಸರಿಯಾಗಿ ಔತಣ ಕೊಡಬೇಕಾಗಿತ್ತೆಂದು. "ಔತಣ ಬಾಗೀನ ಆಮಿಷಕ್ಕೆ ತುತ್ತಾದ ಕಾವೇರಿ ನ್ಯಾಯ ಮಂಡಳಿಯ ಸದಸ್ಯರು, ಇದು ನಾವಲ್ಲ ಹೇಳಿರುವುದು, ಇದನ್ನು ದೇವೇಗೌಡರು ಲೋಕಸಭಾ ಸದಸ್ಯರಾಗಿದ್ದಾಗ ಹೇಳಿದುದ್ದು. "ಈ ನ್ಯಾಯ ಮಂಡಳಿಯನ್ನು ರದ್ದು ಮಾಡಬೇಕು, ಬೇರೆ ನ್ಯಾಯ ಮಂಡಳಿ ನಮಗೆ ಬೇಕು" ಇದನ್ನು ಯಾರು ಸ್ವಾಮಿ ಹೇಳಿದುದ್ದು? ಇದನ್ನು ಇಲ್ಲ ಎಂದು ಹೇಳುತ್ತೀರೇ? ಇದನ್ನು ನೀವು ಒಪ್ಪಿಕೊಳ್ಳಲೇಬೇಕಲ್ಲಾ? ಇವತ್ತು ನಿಮ್ಮ ನಿಲುವು ಏನು? ತಮಿಳುನಾಡಿನವರು ಬಂದರೆ ಅವರಿಗೆ ಊಟ ತಿಂಡಿ ಕೊಡಬೇಕೆಂದು ನೀವು ಹೇಳುತ್ತೀರಿ, ಅಲ್ಲಿ ಒಂದು ತರಹ ಹೇಳಲಾಗಿದೆಯಲ್ಲಾ? ಇದು ಹೇಗೆ?

ಶ್ರೀ ಆರ್.ಎಲ್. ಜಾಲಪ್ಪ : ಅವರು ಊಟ ತಿಂಡಿಗಾಗಿಯೇ ಬರುವುದಿಲ್ಲ. ಯಾವುದಕ್ಕೂ ಒಂದು ಸೌಜನ್ಯ ಬೇಕು. ಸೌಜನ್ಯದಿಂದ ಹೋಗಿ ಮಾತನಾಡಿಸುವುದು ಒಂದು ಶಿಷ್ಟಾಚಾರ ಸ್ವಾಮಿ. ನಾವೂ ಊಟ ತಿಂಡಿಗೆ ಹೋಗುತ್ತೇವೆಯೇ?

ಶ್ರೀ ವಾಟಾಳ್ ನಾಗರಾಜ್ : ಶಿಷ್ಟಾಚಾರದ ಬಗ್ಗೆ ನನ್ನ ವಿರೋಧವಿಲ್ಲ. ಅನೇಕ ಸಾರಿ ಜಾಲಪ್ಪನವರು ನಮ್ಮನ್ನು ಕರೆದಿದ್ದಾರೆ, ನಾವುಗಳೂ ಅವರನ್ನು ಕರೆದಿದ್ದೇವೆ, ಇದೆಲ್ಲಾ ಶಿಷ್ಟಾಚಾರ. ಮಾನ್ಯ ಅಧ್ಯಕ್ಷರೇ, ಈ ನ್ಯಾಯ ಮಂಡಳಿಯ ರಚನೆ ರಾಜಕೀಯವಾಗಿ ಆಗಿರುವಂಥಾದ್ದು. ರಾಜಕೀಯವಾಗಿ ತಮಿಳುನಾಡಿಗೆ ಬೆಂಬಲ ಮಾಡುವುದಕ್ಕಾಗಿ ಇದನ್ನು ಮಾಡಿದ್ದಾರೆ ಎಂಬುದರಲ್ಲಿ ಯಾರಲ್ಲೂ ಎರಡನೇ ಅಭಿಪ್ರಾಯ ಇಲ್ಲ. ಆಗ ಪ್ರಧಾನಿಯಾಗಿದ್ದಂಥ ವಿ.ಪಿ. ಸಿಂಗ್‌ರವರು ತಮಿಳುನಾಡಿಗೆ ಬೆಂಬಲ ಕೊಡುವುದಕ್ಕೋಸ್ಕರ ಮಾಡಿದ್ದೇ ಹೊರತು ಬೇರೆ ಪ್ರಶ್ನೆ ಇದರಲ್ಲಿ ಇಲ್ಲ. ಆ ಸಂದರ್ಭದಲ್ಲಿ, ನಮ್ಮವರು ಕೇಂದ್ರದಲ್ಲಿ ಮಂತ್ರಿಗಳಾಗಿದ್ದಂಥವರು ರಾಜೀನಾಮೆ ಕೊಡಬೇಕಾಗಿತ್ತು. ಆಗ ಮಾನ್ಯ ಗುರುಪಾದಸ್ವಾಮಿಯವರು ಮಂತ್ರಿಯಾಗಿದ್ದರು, ಅವರು ರಾಜೀನಾಮೆಯನ್ನು ಕೊಡಬೇಕಾಗಿತ್ತು. ಅದೇ ತಮಿಳುನಾಡಿನಲ್ಲಿ, ರಾಜ್ಯದ ಹಿತಕ್ಕಾಗಿ ರಾಮಮೂರ್ತಿಯವರು ರಾಜೀನಾಮೆಯನ್ನು ಪ್ರಧಾನಿ ಕಾರ್ಯಾಲಯಕ್ಕೆ ಕೊಟ್ಟು ಹೊರಟುಹೋದರು. ಅವರಂತೆ ನಾವು ಏನು ಮಾಡಿದ್ದೇವೆ? ನನ್ನ ಸ್ವಂತ ಅಭಿಪ್ರಾಯದಲ್ಲಿ, ನಮ್ಮ ರಾಜ್ಯದ ಯಾರಾದರೂ ಕಾವೇರಿ ನ್ಯಾಯ ಮಂಡಳಿಯಿಂದ ನಮ್ಮ ಪರವಾಗಿ ತೀರ್ಪು ಬರುತ್ತದೆಂದು ಭಾವಿಸಿದ್ದರೆ ಅದು ಮೂರ್ಖತನದ ಪರಮಾವಧಿ. ಈಗಿರತಕ್ಕಂಥ ನ್ಯಾಯ ಮಂಡಳಿಯನ್ನು ನಾವು ಬಹಿಷ್ಕಾರ ಮಾಡುವುದಕ್ಕೆ ನಾನಾ ಕಾರಣಗಳಿವೆ. ಈ ಕಾರಣಗಳನ್ನು ಒಡ್ಡಿ ರಾಜ್ಯದ ಜನತೆಯ ಹಿತ ದೃಷ್ಟಿಯಿಂದಾಗಿ ನ್ಯಾಯ ಮಂಡಳಿಯನ್ನು ಬಹಿಷ್ಕಾರ ಹಾಕಬೇಕೆಂದು ಮಾನ್ಯ ದೇವೇಗೌಡರಲ್ಲಿ ನಾನು ತಮ್ಮ ಮೂಲಕ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ.

10.30 ಎ.ಎಂ

ಅದಾದ ನಂತರ ತಮಿಳುನಾಡಿನಲ್ಲಿ ಸರ್ಕಾರ ಹೋಯಿತು. ಬೇರೆ ಸರಕಾರ ಬಂತು. ಅದು ಜಯಲಲಿತಾರವರ ಸರಕಾರ. ಆಗ ನ್ಯಾಯಾಲಯ ಕೊಟ್ಟಂಥ ತೀರ್ಪನ್ನು ಕೇಂದ್ರ ಗೆಜೆಟ್‌ನಲ್ಲಿ ಹಾಕಬೇಡಿ ಎಂದು ನಾವೆಲ್ಲರೂ, ಎಲ್ಲಾ ವಿರೋಧಿ ಪಕ್ಷದ ನಾಯಕರುಗಳು ಒಕ್ಕೊರಲಿನಿಂದ ಹೇಳಿ, ದೆಹಲಿಗೆ ಹೋಗಿ ಅಲ್ಲಿನ ಎಲ್ಲಾ ಮಂತ್ರಿಗಳು, ಜಲಸಂಪನ್ಮೂಲ ಮಂತ್ರಿಗಳಾದ ಶ್ರೀಮಾನ್ ವಿ.ಸಿ. ಶುಕ್ಲಾರವರು, ಪ್ರಧಾನ ಮಂತ್ರಿಗಳವರು - ಮುಂತಾಗಿ ಎಲ್ಲರನ್ನು ನೋಡಿ, ಕಾಡಿ, ಬೇಡಿದ್ದಾಯಿತು. ಕೊನೆಗೆ ನಾವು ದೆಹಲಿಯಿಂದ ಬೆಂಗಳೂರಿಗೆ ಬರುವುದರೊಳಗಾಗಿ ಕೇಂದ್ರ ಗೆಜೆಟ್‌ನಲ್ಲಿ ಪ್ರಕಟಣೆಯಾಯಿತು. ಒಂದು ಕಡೆ ವಿ.ಪಿ. ಸಿಂಗ್‌ರವರು ನಮಗೆ ಕೈಕೊಟ್ಟರು, ಮತ್ತೊಂದು ಕಡೆ ತಮಿಳುನಾಡಿನವರನ್ನು ಓಲೈಸುವುದಕ್ಕೋಸ್ಕರವಾಗಿ ಈಗಿನ ಪ್ರಧಾನಿಯವರಾದ ಶ್ರೀಮಾನ್ ನರಸಿಂಹರಾಯರು ಅನ್ಯಾಯ ಮಾಡಿದರು. ಇದನ್ನು ನೋಡಿದಾಗ ನಮ್ಮ ರಾಜ್ಯದ ಪ್ರಶ್ನೆ ಏನು? ನಮ್ಮ ರಾಜ್ಯವನ್ನು ಕಾಪಾಡತಕ್ಕಂಥ ಪ್ರಶ್ನೆ ಏನು? ಮೊದಲಿಂದಲೂ ಕೇಂದ್ರ ಸರಕಾರದವರು ಕರ್ನಾಟಕವನ್ನು ಹೆಜ್ಜೆ ಹೆಜ್ಜೆಗೂ ಮೂಲೆ ಗುಂಪು ಮಾಡಿ ಮಲತಾಯಿ ಧೋರಣೆಯಿಂದ ನೋಡುತ್ತಾ ಇದ್ದಾರೆ. ಕಾರಣ ನಮ್ಮಲ್ಲಿ ರಾಜಕೀಯ ನಾಯಕತ್ವ ಕೇಂದ್ರ ಸರಕಾರವನ್ನು ಹೆದರಿಸಿ ಕೇಂದ್ರ ಸರಕಾರವೇ ರಾಜ್ಯಕ್ಕೆ ಕೊಡಮಾಡಬೇಕಾದಂಥ ಪಾಲನ್ನು ಬರಮಾಡಿಕೊಳ್ಳುವ ಶಕ್ತಿ ನಮ್ಮಲ್ಲಿಲ್ಲ. ಆ ಶಕ್ತಿ ತಮಿಳುನಾಡಿನವರಲ್ಲಿ ಇತ್ತು. ಮುಖ್ಯಮಂತ್ರಿ ಜಯಲಲಿತಾರವರು ಸತ್ಯಾಗ್ರಹ ಮಾಡಿದ ಕೂಡಲೇ ರಾತ್ರೋರಾತ್ರಿ ಜಲಸಂಪನ್ಮೂಲ ಸಚಿವರಾದ ಶುಕ್ಲಾರವರು ಬೆಂಗಳೂರಿಗೆ ಬಂದರು. ಇಲ್ಲಿಂದ ರಾತ್ರಿ ಒಂದು ಗಂಟೆಗೆ ತಮಿಳುನಾಡಿಗೆ ಹೋದರು. ಅಂದರೆ ಅವರಿಗೆ ಎಷ್ಟರ ಮಟ್ಟಿಗೆ ಆ ರಾಜ್ಯದ ಬಗ್ಗೆ ಅಭಿಮಾನ ಮತ್ತು ಭಯ ಇದೆ ಎಂಬುದನ್ನು ಗಮನಿಸಬಹುದು. ಅಷ್ಟೇ ಪ್ರೀತಿ, ಅಭಿಮಾನ, ವಿಶ್ವಾಸ ಮತ್ತು ಕರ್ನಾಟಕವೂ ದೇಶದ ರಾಜ್ಯಗಳಲ್ಲಿ ಒಂದು ಎಂಬ ಒಂದು ವಿಚಾರ ಅವರಿಗೆ ಇಲ್ಲವೇ? ಇದು ಕೇಂದ್ರ ಸರಕಾರಕ್ಕೆ ಬರಲೇ ಇಲ್ಲ.

ಈ ನ್ಯಾಯಮಂಡಳಿಯ ರಚನೆಯ ಹಿಂದೆ ನಮಗೆ ಅನ್ಯಾಯ ಮಾಡತಕ್ಕಂಥ ದೊಡ್ಡ ಪಿತೂರಿಯೇ ಇದೆ. ಈ ಪಿತೂರಿಯಲ್ಲಿ ಈಗಿನ ಪ್ರಧಾನಿಗಳು, ಹಿಂದಿನ ಪ್ರಧಾನಿಗಳು ಹೀಗೆ ಅನೇಕ ಜನರು ಸೇರಿ ಪಿತೂರಿ ಮಾಡಿದ್ದಾರೆ. ನ್ಯಾಯಮಂಡಳಿಯ ತೀರ್ಪನ್ನು ಕೊಡುವುದಕ್ಕಿಂತ ಮುಂಚೆ, ನ್ಯಾಯಮಂಡಳಿಯ ರಚನೆಯನ್ನು ಕುರಿತು ಒಂದು ಸೂಕ್ತ ತನಿಖೆಯಾಗಬೇಕು. ಇದರ ಬಗ್ಗೆ ಒಂದು ಸಮಗ್ರ ತನಿಖೆಯಾಗಬೇಕೆಂಬುದು ನನ್ನ ಸ್ಪಷ್ಟವಾದಂಥ ಆಗ್ರಹ. ಇವೊತ್ತಿಗೂ ಕಾಲ ಮಿಂಚಿಲ್ಲ. ಇದನ್ನು ತನಿಖೆ ಮಾಡಲು ಲೋಕಸಭೆಯ ಸದನ ಸಮಿತಿಯನ್ನು ಮಾಡಲಿ. ಅದರಲ್ಲಿ ಎಲ್ಲಾ ಪಕ್ಷದವರೂ ಸೇರಲಿ. ಅದರ ಮೂಲಕ ನ್ಯಾಯಮಂಡಳಿಯ ರಚನೆಯ ಹಿಂದೆ ಏನು ಪಿತೂರಿ ನಡೆದಿದೆ ಎಂಬುದು ಹೊರಗೆ ಬರಲಿ. 2000ನೇ ಇಸವಿಯ ಒಳಗೆ ಕೃಷ್ಣ ಯೋಜನೆಯನ್ನು ಮುಗಿಸಬೇಕೆಂಬ ಸರಕಾರದ ಸಂಕಲ್ಪ ಇದೆ. ಅದನ್ನು ಇಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ನಮ್ಮ ಎಲ್ಲಾ ಸರಕಾರಗಳವರು ಆ ಒಂದು ಸಂಕಲ್ಪವನ್ನು ಹೇಳಿದ್ದಾರೆ. ಯಾವ ಯಾವ ವರ್ಷಗಳಲ್ಲಿ ಎಷ್ಟೆಷ್ಟು ಹಣವನ್ನು ಖರ್ಚು ಮಾಡಬೇಕೆಂದು ಹಿಂದಿನ ಸರಕಾರಗಳೂ ಕೂಡ ಹೇಳಿವೆ. ಈ ಸರಕಾರದವರು ಕೂಡ ಈ ವರ್ಷ ಒಂದು ಸಾವಿರ ಕೋಟಿ ರೂಪಾಯಿಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ.

ಇವೆಲ್ಲಕ್ಕೂ ಮೊದಲು ಒಂದು ಕಡೆ ನ್ಯಾಯಮಂಡಳಿಯ ತೀರ್ಪು, ಇನ್ನೊಂದು ಕಡೆ ಬಚಾವತ್ ಆಯೋಗದ ತೀರ್ಪು. ಇವೆಲ್ಲಕ್ಕಿಂತಲೂ ನಾವುಗಳು ಸೇರಿ ಮಾತುಕತೆಯ ಮೂಲಕ ಈ ಸಮಸ್ಯೆಯನ್ನು ಬಗೆಹರಿಸುವುದು ಒಳ್ಳೆಯದು. ತಮಿಳುನಾಡು ಶಾಸನಸಭೆಯಲ್ಲಿ ನಾವು ಮಾತುಕತೆಗೆ ತಯಾರಾಗಿಲ್ಲ ಎಂದು ಹೇಳುತ್ತಾರೆ. ಇದು ಅವರ ಮೊಂಡು ವಾದ. ಈ ಸದನದ ಮೂಲಕ ನಾನು ತಮಿಳುನಾಡು ಮುಖ್ಯಮಂತ್ರಿಯವರಿಗೆ ಮನವಿ ಮಾಡುತ್ತೇನೆ. ಈ ವಿಚಾರದಲ್ಲಿ ಇಂಥ ತೀರ್ಪುಗಳಿಂದ, ಆ ತೀರ್ಪುಗಳನ್ನು ಜಾರಿ ಮಾಡುವುದಕ್ಕೆ ಆಗುವುದಿಲ್ಲ. ಎಷ್ಟೇ ತೀರ್ಪು ಬಂದರೂ ಅಂತಿಮವಾಗಿ ಜನರ ಒಂದು ತೀರ್ಪು ಇರುತ್ತದೆ. ಜನರ ಶಕ್ತಿಯ ತೀರ್ಪು ಬಂದಿದೆ. ಆ ತೀರ್ಪಿನ ಮುಂದೆ ಈ ಯಾವ ತೀರ್ಪುಗಳೂ ನಿಲ್ಲುವುದಿಲ್ಲ. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆ ಅಂದರೆ ನಾಳೆ ನ್ಯಾಯಮಂಡಳಿಯ ತೀರ್ಪು ನಮ್ಮ ವಿರುದ್ಧ ಬಂತು ಎಂದು ಇಟ್ಟುಕೊಳ್ಳಿ, ಆಗ ನಾವು ಕೃಷ್ಣರಾಜ ಸಾಗರದ ಬಾಗಿಲು ತೆಗೆದುಬಿಟ್ಟು ನೀರು ತೆಗೆದುಕೊಂಡು ಹೋಗಿ ಎಂದು ನಾವು ಹೇಳುತ್ತೇವೆಯೇ? ನೀವು ಸೈನ್ಯ ತಂದು ನಮ್ಮಿಂದ ನೀರನ್ನು ತೆಗೆದುಕೊಂಡು ಹೋಗಲು ಸಾಧ್ಯವೇ? ಸಾಧ್ಯವಿಲ್ಲ. ಹೀಗಾಗದರೆ ರಾಜ್ಯರಾಜ್ಯಗಳಿಗೆ ಯುದ್ಧವಾಗುತ್ತದೆ. ರಾಜ್ಯರಾಜ್ಯಗಳಲ್ಲಿ ರಕ್ತಪಾತವಾಗುತ್ತದೆ. ಇದು ಅಷ್ಟು ಸುಲಭವೇನಲ್ಲ. ಬರೀ ತೀರ್ಪಿನಿಂದಲೇ ನ್ಯಾಯವನ್ನು ದೊರಕಿಸಿಕೊಡುತ್ತೇವೆದು ಹೇಳುವುದು ಸರಿಯಲ್ಲ. ಅದ್ದರಿಂದ ಈಗಲೂ ನಮ್ಮ ಪ್ರಧಾನಿಯವರು ಸಮಸ್ಯೆಯ ಪರಿಹಾರಕ್ಕೆ ನಾಯಕತ್ವವನ್ನು ವಹಿಸಲಿ. ಕೇಂದ್ರದ ವರಿಷ್ಠರು ಅದರಲ್ಲಿ ಭಾಗಿಯಾಗಲಿ. ಅದರ ಮೂಲಕ ಕರ್ನಾಟಕಕ್ಕೆ ನ್ಯಾಯ ಒದಗಿಸಲಿ.

ಕರ್ನಾಟಕ ತಮಿಳುನಾಡಿನ ಕಾವೇರಿ ಸಮಸ್ಯೆಯನ್ನು ಬಗೆಹರಿಸಲು, ಕರ್ನಾಟಕ ಆಂಧ್ರದ ಕೃಷ್ಣ ಸಮಸ್ಯೆಯನ್ನು ಬಗೆಹರಿಸುವುದಕ್ಕೆ, ಕೇಂದ್ರ ಸರಕಾರದವರು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಬೇಕು. ಪ್ರಧಾನಿಯವರು ಇದರ ನಾಯಕತ್ವವನ್ನು ವಹಿಸಬೇಕೆಂಬ ಮಾತನ್ನು ತಮ್ಮ ಮೂಲಕ ಅರಿಕೆ ಮಾಡಿಕೊಳ್ಳುತ್ತೇನೆ. ಈ ರಾಜ್ಯದ ಜನತೆಯು ಮಾತ್ರ ಯಾವುದೇ ಕಾರಣಕ್ಕೂ ನ್ಯಾಯಮಂಡಳಿಯ ತೀರ್ಪು ಯಾವಾಗಲಾದರೂ ಬರಲಿ, ಅದನ್ನು ತಿರಸ್ಕರಿಸುತ್ತೇವೆ. ಈ ತೀರ್ಪನ್ನು ಮೂಲೆಗೆ ಹಾಕುತ್ತೇವೆ. ಈ ತೀರ್ಪಿನ ಬಗ್ಗೆ ನಮ್ಮ ಯಾವುದೇ ರೀತಿಯ ಸ್ಪಷ್ಟ ಬೆಂಬಲ ಅವರಿಗೆ ಇಲ್ಲ. ನಾನು ಆ ನ್ಯಾಯಮಂಡಳಿಯ ಸದಸ್ಯರು ಬಂದಾಗಲೇ ವಿರೋಧ ಮಾಡಿದೆ. ಅವರು

ಬಂದಾಗಲೆಲ್ಲ ವಿರೋಧ ಮಾಡಿ ಹೊರಗಡೆ ಹಾಕಿದ್ದೇವೆ. ಅವರು ಬರಬಾರದು ಎಂದು ಹೇಳಿ ಅವರಿಗೆ ಬಹಿಷ್ಕಾರ ಹಾಕಿದ್ದೇವೆ. ನ್ಯಾಯಮಂಡಳಿಯನ್ನು ಈ ರಾಜ್ಯದ ಜನರು ಬಯಸಿಲ್ಲ, ಯಾರೋ ಮಾಡಿದ ತಪ್ಪಿಗೆ ರಾಜ್ಯದ ಜನರನ್ನು, ಕನ್ನಡ ಜನತೆಯನ್ನು ಅನ್ಯಾಯಕ್ಕೆ ಒಳಪಡಿಸಬಾರದು, ಅವರ ಕತ್ತನ್ನು ಕುಯ್ಯಬಾರದು, ಅವರನ್ನು ನೇಣುಗಂಬಕ್ಕೆ ಏರಿಸಬಾರದು ಎಂಬ ಮಾತನ್ನು ಹೇಳುತ್ತಾ, ನ್ಯಾಯಮಂಡಳಿಯಿಂದ ಬರತಕ್ಕಂಥ ಯಾವುದೇ ತೀರ್ಪನ್ನು ಬಹಿಷ್ಕರಿಸಬೇಕು, ಈ ಸರಕಾರ ನ್ಯಾಯಮಂಡಳಿಯನ್ನು ಕೂಡಲೇ ಬಹಿಷ್ಕರಿಸಬೇಕೆಂದು ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಬಿ.ಬಿ. ಚಿಮ್ಮನಕಟ್ಟಿ (ಬಾದಾಮಿ) : ಮಾನ್ಯ ಅಧ್ಯಕ್ಷರೇ, ವಿಶೇಷವಾಗಿ ಈ ರಾಜ್ಯದ ನೀರಾವರಿ ಯೋಜನೆಗಳ ಬಗ್ಗೆ, ಬಹಳ ಹೆಚ್ಚು ಒತ್ತು ಕೊಟ್ಟು ವಿಷಯ ಚರ್ಚಿಸಿ, ಹೆಚ್ಚಿನ ಸಂಪನ್ಮೂಲಗಳಿಂದ ಬಹುಶಃ ರಾಜ್ಯದಲ್ಲಿರತಕ್ಕಂಥ ಎಲ್ಲಾ ಯೋಜನೆಗಳನ್ನು ಕಾರ್ಯಗತಗೊಳಿಸಬೇಕೆನ್ನುವ ದಿಸೆಯಲ್ಲಿ ಚರ್ಚೆಗೆ ಅವಕಾಶ ಮಾಡಿಕೊಟ್ಟು ಒಂದು ಒಳ್ಳೆಯ ವಿಷಯವನ್ನು ಚರ್ಚಿಸಲು ತಾವು ಸಹಾಯವನ್ನು ಮಾಡಿದ್ದೀರಿ. ನಿನ್ನೆಯಿಂದಲೂ, ಇವೊತ್ತಿನವರೆಗೆ ನೀರಾವರಿ ಯೋಜನೆಗಳ ಬಗ್ಗೆ, ಕಾರ್ಯಗತಗೊಳಿಸತಕ್ಕಂಥ ವಿಧಾನದಲ್ಲಿ ವಿಶೇಷವಾಗಿ ನಮ್ಮಲ್ಲ ಹಿರಿಯ ಸದಸ್ಯರುಗಳು ಕೂಡ ಒತ್ತು ಕೊಟ್ಟು ವಿಶೇಷವಾದಂಥ ರೀತಿಯಲ್ಲಿ ತಮ್ಮದೇ ಆದ ಶೈಲಿಯಲ್ಲಿ ವಿಚಾರವಿನಿಮಯ ಮಾಡಿಕೊಂಡಿದ್ದಾರೆ. ನಾನು ಈ ವಿಚಾರದಲ್ಲಿ ನಾಲ್ಕು ಮಾತುಗಳನ್ನು ಹೇಳುವುದಾದರೆ ಮೊದಲು ಮೋಕ್ಷ ಗುಂಡಂ ವಿಶ್ವೇಶ್ವರಯ್ಯನವರು ಜೋಗವನ್ನು ನೋಡತಕ್ಕಂಥ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರು. ಇಷ್ಟೊಂದು ಶಕ್ತಿ ನಿರರ್ಥಕವಾಗಿ ಹೋಗುತ್ತಿದೆಯಲ್ಲಾ? ಇದನ್ನು ನಾವು ಏತಕ್ಕೆ ಉಪಯೋಗ ಮಾಡಬಾರದು ಎಂದು ಯೋಚಿಸಿ ಕನಸೊಂದನ್ನು ಕಂಡರು. ಜೋಗದ ಜಲವಿದ್ಯುತ್ ಯೋಜನೆಯನ್ನು ಅವರು ನನಸಾಗಿ ಮಾಡದೇ ಇದ್ದಲ್ಲಿ ರಾಜ್ಯವು ಇವೊತ್ತಿನವರೆಗೂ ಕೂಡ ವಿದ್ಯುಚ್ಛಕ್ತಿಯನ್ನು ಪಡೆಯಲು ಸಾಧ್ಯವಾಗುತ್ತಿರಲಿಲ್ಲ. ಅಷ್ಟೊಂದು ದೂರ ದೃಷ್ಟಿ ಇಟ್ಟುಕೊಂಡಿರತಕ್ಕಂಥ ಮಹನೀಯರು ಒಂದು ಮಹಾನ್ ಉಪಕಾರವನ್ನು ರಾಜ್ಯಕ್ಕೆ ಮಾಡಿದ್ದನ್ನು ನಾವು ನೆನಸಿಕೊಳ್ಳಬೇಕಾಗುತ್ತದೆ. ಅದೇ ರೀತಿಯಲ್ಲಿ ಇವೊತ್ತು ನಿಸರ್ಗದತ್ತವಾಗಿರತಕ್ಕಂಥ ಸಂಪನ್ಮೂಲಗಳನ್ನು, ನಿಧಿಗಳನ್ನು ನಾವು ಈಗಲೂ ದೂರದೃಷ್ಟಿಯಿಂದ ಸದುಪಯೋಗ ಮಾಡಿಕೊಳ್ಳದೇ ಹೋದರೆ ಬಹುಶಃ ಅಧಿಕಾರದಲ್ಲಿರತಕ್ಕಂಥ ನಾವುಗಳೂ ಕೂಡ ಜನರಿಗೆ ವಂಚನೆಯನ್ನು ಮಾಡಿದ ಹಾಗೆ ಆಗುತ್ತದೆ.

ಆ ದಿಸೆಯಲ್ಲಿ ರಾಜ್ಯದ ನೀರಾವರಿಗೆ ಆಗಿರುವ ಅನ್ಯಾಯವನ್ನು ಮಾನ್ಯ ಹಿರಿಯ ಸದಸ್ಯರಾದ ನಂಜೇಗೌಡರಾಗಲಿ ಹಿಂದಿನ ಮುಖ್ಯಮಂತ್ರಿ ಮೊಯ್ಲಿಯವರಾಗಲಿ ಇನ್ನೂ ಹಿರಿಯ ಕಿರಿಯ ಸದಸ್ಯರೂ ಕೂಡ ಬಹಳ ವಿವರವಾದ ವಿಷಯಗಳನ್ನು ಇಟ್ಟಿದ್ದಾರೆ. ನಾನೂ ಕೂಡ ಅದರ ಬಗ್ಗೆ ನನ್ನ ವಿಚಾರ ಹೇಳುತ್ತಾ ಪುನರಾವರ್ತನೆ ಮಾಡುವುದಕ್ಕೆ ಹೋಗುವುದಿಲ್ಲ ಆದರೆ ಒಂದು ಮಾತಂತೂ ನಿಜ, ಬಹುಶಃ ನಾನೂ ಕೂಡ ಒಪ್ಪಿಕೊಳ್ಳುವಂತಹ ವಿಚಾರವೇನು ಅಂದರೆ ನಮ್ಮ ರಾಜ್ಯಕ್ಕೆ ಸಿಗಬೇಕಾಗಿರುವ ನೀರಿನ ಪಾಲಿನಲ್ಲಿ ನಾವು ವಂಚಿತರಾಗಿದ್ದೇವೆ ಎಂದರೆ ಅದು ತಪ್ಪಾಗಲಿಕ್ಕಿಲ್ಲ. ಅದಕ್ಕೆ ಅನೇಕ ಕಾರಣಗಳಿರಬಹುದು ಅಥವಾ ರಾಜ್ಯದ ದೂರದೃಷ್ಟಿ ಇಲ್ಲದೇ ಇರುವುದೂ ಇರಬಹುದು ಮತ್ತು ಮೇಲಾಗಿ ನಾವು ಹೋರಾಟ ಮಾಡಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗದೇ ಇರಬಹುದು ಹೀಗೆ ಹಲವಾರು ಕಾರಣಗಳಿಂದ ನ್ಯಾಯಕ್ಕೆ ಸಿಗಬೇಕಾಗಿದ್ದ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಿಕೊಳ್ಳುವುದರಲ್ಲಿ ಬಹುಶಃ ನಾವು ಸೋತಿದ್ದೇವೆಂದರೆ ತಪ್ಪಾಗಲಿಕ್ಕಿಲ್ಲ. ಆ ವಾದಕ್ಕೆ ನನ್ನ ವಿಚಾರವನ್ನು ಬೆಂಬಲ ಕೊಡುವ ದಿಸೆಯಲ್ಲಿ ಇಟ್ಟುಕೊಂಡಿದ್ದೇನೆ. ಇವತ್ತು ನೀರಾವರಿ ಯೋಜನೆಗಳ ಬಗ್ಗೆ ಬೇರೆ ಬೇರೆ ರಾಜ್ಯಗಳ ತುಲನೆ ಮಾಡಿ ನೋಡಿದಾಗ ಬಹುಶಃ ನಮ್ಮ ರಾಜ್ಯ ಬಹಳ ಹಿಂದುಳಿದಿದ್ದೇವೆ. ತಮಿಳುನಾಡು

ಮಹಾರಾಷ್ಟ್ರ ಆಂಧ್ರದಲ್ಲಿರುವ ನೀರಾವರಿ ಯೋಜನೆಗಳಿಗೆ ತುಲನೆ ಮಾಡಿ ನೋಡಿದಾಗ ನಾವು ಬಹಳ ಹಿಂದುಳಿದಿರುವ ವಿಚಾರ ತೆಗೆದುಕೊಳ್ಳಬೇಕಾಗುತ್ತದೆ.

ಇಷ್ಟಾದರೂ, ನಾವು ಎಷ್ಟೇ ಯೋಜನೆಗಳನ್ನು ಕಾರ್ಯಗತಗೊಳಿಸಿ, ನಮಗೆ ಸ್ವತಂತ್ರ್ಯ ಸಿಕ್ಕಿ 95ನೇ ಇಸವಿವರೆಗೆ ನೀರಾವರಿಗಾಗಿ ನಾವೇನು 5 ಸಾವಿರ ಕೋಟಿ ಖರ್ಚು ಮಾಡಿದ್ದೇವೆ ಅದರಿಂದ ಸುಮಾರು 20 ಲಕ್ಷ ಹೆಕ್ಟೇರಿಗೆ ನೀರಿನ ಸೌಲಭ್ಯ ಕೊಡಲಿಕ್ಕೆ ಸಾಧ್ಯವಾಗಿದೆ. ಬಹುಶಃ ಇನ್ನೂ 35 ಲಕ್ಷ ಹೆಕ್ಟೇರ್‌ಮಾಡಬೇಕಾದರೆ ಸುಮಾರು 15 ಸಾವಿರ ಕೋಟಿ ನಾವು ಖರ್ಚು ಮಾಡಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿದ್ದಾಗ ನನ್ನಗೇನಿನ್ನಸುತ್ತದೆ ಅಂದರೆ ಸುಮಾರು 5 ಸಾವಿರ ಕೋಟಿ ಖರ್ಚು ಮಾಡಿ 20 ಲಕ್ಷವನ್ನು ಪಡೆಯಲಿಕ್ಕೆ ಸಾಧ್ಯವಾಗಿಲ್ಲ, ಇನ್ನೂ 35 ಲಕ್ಷ ಹೆಕ್ಟೇರನ್ನು ಪಡೆಯಬೇಕಾದರೆ 15 ಸಾವಿರ ಕೋಟಿ ಸಂಪನ್ಮೂಲವನ್ನು ಯಾವರೀತಿ ಸರ್ಕಾರ ಕ್ರೋಢೀಕರಿಸುವುತ್ತದೆಂಬುದನ್ನು ಇವತ್ತು ನಾವು ಚರ್ಚೆಯಲ್ಲಿ ಭಾಗವಹಿಸುವ ಅನೇಕ ಸದಸ್ಯರ ಒತ್ತಾಯ ಏನೂ ಅಂದರೆ ಬಹುಶಃ ಮುಂಬರುವ ಯೋಜನೆಗಳಿಗೆ ಯಾವರೀತಿ ಹಣದ ಸಂಪನ್ಮೂಲ ಒದಗಿಸುತ್ತಾರೋ ಎಂಬ ಜಟಿಲ ಸಮಸ್ಯೆಯಾಗಿದೆ. ಈ ಸಮಸ್ಯೆಗೆ ಅನುಗುಣವಾಗಿ ಎಲ್ಲಾ ಸದಸ್ಯರೂ ಬಹಳ ಒತ್ತಾಸೆ ಏನು ಮಾಡಿದ್ದಾರೆಂದರೆ ಹಿಂದೆ ಆಗಿರುವ ಅನಾಹುತಗಳನ್ನು ತಪ್ಪಿಸಬೇಕಾದರೆ ನೀರಾವರಿ ಯೋಜನೆಗಳಿಗೆ ವಿಶೇಷ ಆದ್ಯತೆ ಕೊಟ್ಟು ನಾವು ಹಣಸಂಗ್ರಹಣೆ ಮಾಡಿ ಸರ್ಕಾರ ಜಾಗ್ರತೆಯಾಗಿ ಆ ಯೋಜನೆಯನ್ನು ಮುಗಿಸಿದರೆ ಹಿಂದಾಗಿರುವ ಹಾನಿಯನ್ನು ಮುಂದೆ ತಪ್ಪಿಸಲು ಸಾಧ್ಯವೆಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ ಇವತ್ತು ಕಾರ್ಯಗತವಾಗಿರುವ ಎಲ್ಲಾ ಯೋಜನೆಗಳಲ್ಲಿ ನಾವೆಲ್ಲಾ ಒತ್ತಾಯದಿಂದ ಹೇಳುವ ವಿಚಾರ ಕೃಷ್ಣ ಮೇಲ್ದಂಡೆ ವಿಚಾರ.

ಈ ಬಗ್ಗೆ ಬಹಳ ಹಿರಿಯ ಸದಸ್ಯರು ಅನೇಕ ವಿಚಾರಗಳನ್ನು ಹೇಳಿದ್ದಾರೆ. ಆದರೆ ಆ ಕೃಷ್ಣ ಮೇಲ್ದಂಡೆ ಯೋಜನೆಗೆ ಏಕೆ ನಾವಿಷ್ಟೊಂದು ಆದ್ಯತೆ ಕೊಡಬೇಕಾಗಿದೆ ಎಂದರೆ ಬಹುಶಃ ರಾಜ್ಯದ ಭೌಗೋಳಿಕ 60 ಭಾಗವನ್ನು ಹಸಿರುಕ್ರಾಂತಿಗೊಳಪಡಿಸುವ ಯೋಜನೆ ಇದು ಎಂದು ಆ ಯೋಜನೆಗೆ ಇವತ್ತು ಒತ್ತು ಕೊಡಬೇಕಾಗಿದೆ. ಆ ಯೋಜನೆಗಾಗಿ ಇವತ್ತು ಒದಗಿಸಿರುವ ಹಣದ ಬಗ್ಗೆ ಆಗಲಿ ನನ್ನ ದೃಷ್ಟಿಯಿಂದ ಹೇಳುವುದಾದರೆ ಪ್ರಾರಂಭದಲ್ಲೇ ಅದಕ್ಕೆ ಅನೇಕ ಕುತ್ತುಗಳಾಗಬೇಕಾದ ಪ್ರಸಂಗ ಬಂತು. ಅದರ ಅಣೆಕಟ್ಟು ಪ್ರಾರಂಭದಲ್ಲೇ ಸಿದ್ದಾಪುರದಲ್ಲೆ ಕಟ್ಟಬೇಕೋ ಇಲ್ಲ, ನಾರಾಯಣಪುರದಲ್ಲಿ ಕಟ್ಟಬೇಕೋ ಎಂಬ ತೀರ್ಮಾನ ಬೇಗ ಆಗಲಿಲ್ಲ. ಕೇಂದ್ರ ಸರ್ಕಾರದ ಪರಿಸರ ಮಾಲಿನ್ಯ ಸಮ್ಮತಿ ಕೂಡ ಸಿಗುವುದು ತಡವಾಯಿತು. ಹೀಗೆ ಹತ್ತೂ ಹಲವು ಅಡಚಣೆಗಳ ಕಾರಣ ಆ ಯೋಜನೆ ಬೇಗನೆ ಕಾರ್ಯಗತವಾಗಲು ಸಾಧ್ಯವಾಗಲಿಲ್ಲ. ಆದಾಗ್ಯೂ ಹಿಂದೆ ದೇವರಾಜ ಅರಸು ಅವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ 1978ರಲ್ಲಿ ಯಾವಾಗ ಕೃಷ್ಣ ಮೇಲ್ದಂಡೆ ಯೋಜನೆಗೆ ವಿಶ್ವಬ್ಯಾಂಕಿನ ಹಣ ಬಂತು, ಅವತ್ತಿನಿಂದ ಇಲ್ಲಿಯವರೆಗೆ ಆ ಯೋಜನೆಗೆ ಹೆಚ್ಚು ಒತ್ತು ಕೊಡುತ್ತಿರುವುದನ್ನು ನೋಡುತ್ತಿದ್ದೇವೆ.

ಆ ವಿಶ್ವಬ್ಯಾಂಕಿನಿಂದ ಅವರು ದುಡ್ಡು ತರುವ ಪ್ರಯತ್ನ ಮಾಡದೇ ಹೋಗಿದ್ದರೆ ಇನ್ನು ನೂರು ವರ್ಷವಾದರೂ ಆ ಯೋಜನೆಯನ್ನು ಮುಗಿಸುವುದಕ್ಕೆ ಸಾಧ್ಯವಾಗುತ್ತಿರಲಿಲ್ಲ ಎಂದು ತಿಳಿದುಕೊಳ್ಳಬೇಕಾಗುತ್ತದೆ. ಈ ದೃಷ್ಟಿಯಿಂದ ವಿಚಾರ ಮಾಡಿ ನೋಡಲಾಗಿ ಇವತ್ತು ಕೃಷ್ಣ ಮೇಲ್ದಂಡೆ ಯೋಜನೆಗೆ 1978ರಿಂದ ಈಚೆಗೆ ಅನೇಕ ತೊಂದರೆ ಅನುಭವಿಸಬೇಕಾಯಿತು. ನನ್ನ ದೃಷ್ಟಿ ಹೇಳುವುದಾದರೆ 78ರಲ್ಲಿ ಕೃಷ್ಣ ಮೇಲ್ದಂಡೆ ಯೋಜನೆಗೆ ವಿಶ್ವಬ್ಯಾಂಕ್ ಹಣ ಸಿಕ್ಕಿತು. ಆಗಿದ್ದ ಇಂಜಿನಿಯರ್‌ಗಳು ಏನು ವಿಚಾರ

ಮಾಡಿಬಿಟ್ಟರು ಎಂದರೆ ಆದಷ್ಟು ಬೇಗ ಮುಗಿಸಬೇಕೆನ್ನುವ ಆತುರ ಕಾತುರದಿಂದ ಬಹುಶಃ ಎಡವಿದರೇನೋ ಎಂದನ್ನಿಸುತ್ತಿದೆ. ಅನೇಕ ಪೀಸ್‌ವರ್ಕ್‌ಗಳನ್ನಾಗಿ ಮಾಡಿ ಅಲ್ಲಿರುವ ಗುತ್ತಿಗೆದಾರರಿಗೆ ಅದನ್ನು ಕೊಟ್ಟ ಕಾರಣದಿಂದ ಅನೇಕ ತೊಂದರೆಗಳಾಗಿ ಇನ್ನೂ ಅದನ್ನು ರಿಪೇರಿ ಮಾಡಲಾರದ ಪರಿಸ್ಥಿತಿ ಈ ಯೋಜನೆಗೆ ಬಂತು. ಇಂತಹ ಹತ್ತು ಹಲವಾರು ಕಾರಣಗಳ ಜೊತೆಗೆ ಗುತ್ತಿಗೆ ಆಧಾರದ ಮೇಲಿನ ಕೆಲಸಗಳ ತೊಂದರೆಯಿಂದ ಆ ಕೆಲಸ ಆಗದೇ ಇರಬಹುದು ಮತ್ತು ಭೂಸ್ವಾಧೀನತೆಯಲ್ಲಿ ಬಹಳ ಅಡಚಣೆ ಆಗಿ ಕೆಲಸಗಳು ನಿಂತಿರುವ ಅನೇಕ ಉದಾಹರಣೆ ಹೇಳಬಹುದು, ಮತ್ತು ಪುನರ್‌ವಸತಿ ವಿಚಾರದಲ್ಲೂ ಕೂಡ ಬಾಗಲಕೋಟೆ ಪುನರ್‌ವಸತಿ ಆಗಬೇಕೆಂಬ ವಿಚಾರದಲ್ಲಿ ಬಹಳ ಗೊಂದಲಮಯ ಪರಿಸ್ಥಿತಿ ಸರ್ಕಾರದ ಮುಂದೆ ಬಂದಾಗ ಅದನ್ನು ಸ್ಥಳಾಂತರಿಸಬೇಕೋ ಬೇಡವೋ ಅಥವಾ ಅಲಮಟ್ಟಿ ಡ್ಯಾಮಿನ ಎತ್ತರ ಹೆಚ್ಚು ಮಾಡಬೇಕೋ ಬೇಡವೋ ಹೀಗೆ ಅನೇಕ ವಿಚಾರಗಳ ಕಾರಣದಿಂದ ಈ ಯೋಜನೆ ಅಷ್ಟೊಂದು ಬೇಗನೆ ಮುಗಿಸಲು ಸಾಧ್ಯವಾಗಲಿಲ್ಲ. ಆದರೂ ಎಲ್ಲಾ ಸಮಸ್ಯೆಗಳನ್ನು ಇತ್ಯರ್ಥಪಡಿಸಿ, ಇವತ್ತು ಮುಖ್ಯಮಂತ್ರಿಯಾಗಿ ಕುಳಿತಿರುವ ದೇವೇಗೌಡರು ನೀರಾವರಿಗೇನು ಆದ್ಯತೆ ಕೊಡಬೇಕೆಂದು ಮಾಡಿದ್ದಾರೆ ಅದರ ಬಗ್ಗೆ ಸದಸ್ಯರಾಗಿರುವ ನಾವೆಲ್ಲಾ ಒತ್ತಾಯ ಮಾಡಬೇಕಾಗಿದೆ. ಈ ಎಲ್ಲಾ ಸಂಪನ್ಮೂಲ ಕ್ರೋಢೀಕರಿಸಿ ಎಲ್ಲಾ ಸಮಸ್ಯೆಗಳನ್ನು ಪರಿಹರಿಸಿ ಯೋಜನೆಯನ್ನು ಕಾರ್ಯಗತಗೊಳಿಸಬೇಕಾಗಿದೆ. ಈಗಾಗಲೇ ಅವರು ಹೇಳಿದ್ದಾರೆ, ಜಲನಿಗಮ ಮಾಡಿ ಸುಮಾರು 1000 ಕೋಟಿ ಕೂಡಿಸಿ ಆ ಯೋಜನೆ ಕಾರ್ಯಗತಗೊಳಿಸುತ್ತೇವೆ ಎಂದು. ಪ್ರಾಕ್ಟಿಕಲಾಗಿ ನಾನು ವಿಚಾರ ಮಾಡುವುದಾದರೆ 100 ಕೋಟಿ ಹಣವನ್ನು ಅವರು ಈಕ್ವಿಟಿ ಹಣವೆಂದು ಇಡುತ್ತಾರೆ ಜೊತೆಗೆ ಬಜೆಟ್‌ನಲ್ಲಿ 100 ಕೋಟಿ ಕೊಡುತ್ತಾರೆ ಅದನ್ನೂ ಕೂಡ ವಿಶ್ವಬ್ಯಾಂಕಿಗೆ ರೀಇಂಬರ್ಸ್ ಮಾಡುವುದನ್ನು ನೋಡಿದರೆ ಬಹುಶಃ ಸರ್ಕಾರ ಕೊಟ್ಟಿರುವ ಹಣ ಏನೂ ಸಾಲದು ಎಂಬುದು ನನ್ನ ಅಭಿಪ್ರಾಯ. ಈ 200 ಕೋಟಿ ಜೊತೆಗೆ ನಿಗಮದ ಬಾಂಡ್ ಮೂಲಕ 800 ಕೋಟಿ ಸಂಗ್ರಹಿಸಿ ಈ ಯೋಜನೆಗೆ ಹಣ ಒದಗಿಸುತ್ತೇವೆಂದು ಏನು ಹೇಳುತ್ತಿದ್ದಾರೆ. ಅವರು ಯಾವ ರೀತಿ ಹಣ ಒದಗಿಸುತ್ತಾರೆ ಎಂಬ ಬಗ್ಗೆ ನಿರ್ದಿಷ್ಟ ಉತ್ತರ ಸಿಕ್ಕಿಲ್ಲ. ಬಹುಶಃ ಇದು ಇಂಪ್ರಾಕ್ಟಿಕಲ್ ಆಗುತ್ತದೇನೋ ಎಂದು ನನಗೆ ಅನ್ನಿಸುತ್ತಿದೆ. ರೈತರಿಂದ ಬೆಟರ್‌ಮೆಂಟ್ ಸೆಸ್‌ಗಳನ್ನು ವಸೂಲು ಮಾಡಿ ಕೂಡಿಸುತ್ತೇವೆನ್ನುತ್ತಾರೆ, ಮೇಲಾಗಿ ಬೇರೆ ವಿಧಾನಗಳಿಂದ ಹಣ ಸಂಗ್ರಹಿಸುತ್ತೇವೆನ್ನುವುದನ್ನು ನೋಡಿದಾಗ ಅದು ಕಾರ್ಯಗತವಾಗುತ್ತದೆ ಎಂಬ ವಿಶ್ವಾಸ ನನಗಿಲ್ಲ. ಆದಾಗ್ಯೂ ಈ ಯೋಜನೆಯನ್ನು ನಿಜವಾಗಿಯೂ ಮುಗಿಸುವ ಯೋಚನೆ ಸರ್ಕಾರದಲ್ಲಿದ್ದರೆ ಸಮಗ್ರ ವಿಚಾರ ತಾವು ಮಾಡಬೇಕಾಗುತ್ತದೆ.

7000 ಕೋಟಿ ಕೂಡಿಸುವುದರ ಜೊತೆಗೆ ವಿಧಾನಗಳಿಂದ ಹೆಚ್ಚು ಹಣ ಕೊಟ್ಟು ಮಾಡಿದರೆ ನಿಗದಿಪಡಿಸಿರುವ ಅವಧಿಯಲ್ಲಿ ಯೋಜನೆ ಮುಗಿಸಲು ಸಾಧ್ಯವಾಗಬಹುದು. ಇನ್ನೊಂದು ವಿಚಾರವೆಂದರೆ ಇವತ್ತು ಹಣ ಕೊಟ್ಟರೆ ಯೋಜನೆ ಕಾರ್ಯಗತವಾಗುತ್ತದೆಂದು ತಿಳಿದುಕೊಂಡಿದ್ದರೆ ತಪ್ಪು ಕಾರಣ, ಅಲ್ಲಿ ಸಿಬ್ಬಂದಿಯ ಬಹಳ ಕೊರತೆ ನಾವು ನೋಡುತ್ತೇವೆ. ಈಗ 1000 ಕೋಟಿ ಕೊಡುವುದರಲ್ಲಿ ದಿನವೊಂದಕ್ಕೆ 5 ಕೋಟಿ ಖರ್ಚು ಮಾಡಬೇಕಾಗುತ್ತದೆ. ಇಷ್ಟು ಹಣ ಖರ್ಚು ಮಾಡಲು ಸಿಬ್ಬಂದಿ ವ್ಯವಸ್ಥೆ ಮಾಡಿಕೊಂಡಿದ್ದಾರೋ ಏನೋ ಎಂಬುದು ಬಹಳ ಮುಖ್ಯ. ಅಲ್ಲಿ ರಾಜಾರಾವ್ ಎಂಬ ಚೀಫ್ ಇಂಜಿನಿಯರ್ ಏನಿದ್ದರು, ಆಗ 300 ಜನ ಸಹಾಯಕ ಇಂಜಿನಿಯರ್‌ಗಳನ್ನು ಜೂನಿಯರ್ ಇಂಜಿನಿಯರ್‌ಗಳನ್ನು ತೆಗೆದುಕೊಳ್ಳಬೇಕೆಂದು ವಿಚಾರ ಮಾಡಿದಾಗ ಅದು ಕೋರ್ಟಿನಲ್ಲಿ ಸ್ಟೇ ಆಗಿ ಇವತ್ತಿನವರೆಗೂ ಆ ಸಿಬ್ಬಂದಿಯನ್ನು

ತೆಗೆದುಕೊಳ್ಳಲು ಸಾಧ್ಯವಾಗಿಲ್ಲ. ಅವರಿಗೆ ಪೋಸ್ಟಿಂಗ್ ಕೊಡಲಾಗಿಲ್ಲ. ಕೇವಲ ನಾವು ದುಡ್ಡು ಕೊಟ್ಟರೆ ಅದನ್ನು ಕೂಡಲೇ ಕಾರ್ಯಗತಮಾಡುತ್ತೇವೆಂದು ತಿಳಿದು ಕೊಂಡಿದ್ದರೆ ಅದು ತಪ್ಪು. ಅಲ್ಲಿರುವ ಕೊರತೆ ಸಿಬ್ಬಂದಿ ಬಗ್ಗೆ ಸರ್ಕಾರ ನಿರ್ದಿಷ್ಟವಾದ ಕ್ರಮಗಳನ್ನು ಹಾಕಿಕೊಳ್ಳಬೇಕಾಗುತ್ತದೆ.

ಅಲ್ಲಿಗೆ ಇಂಜಿನಿಯರ್‌ಗಳನ್ನು ಪೋಸ್ಟಿಂಗ್ ಮಾಡಿದ ನಂತರ 5 ವರ್ಷದವರೆಗೂ ಅವರನ್ನು ಹೊರಗೆ ಬಿಡದಂತಹ ನಿರ್ದಾಕ್ಷಿಣ್ಯ ಕ್ರಮ ಕೈಗೊಂಡಿದ್ದೇ ಆದರೆ ನಾವು ಹಾಕಿಕೊಂಡಿರುವ ಯೋಜನೆಗೆ ಸಾವಿರ ಕೋಟಿ ಖರ್ಚು ಮಾಡುವುದಾಗಲಿ 2000 ಇಸವಿಯೊಳಗೆ ಅದನ್ನು ಮುಗಿಸುವುದಕ್ಕಾಗಲಿ ಆಗಬಹುದು. ಇದಕ್ಕೆ ಹೆಚ್ಚು ಒತ್ತು ಕೊಡಬೇಕಾಗಿದೆ. ಅಲ್ಲಿ ರಾಜಾರಾವ್ ಎಂಬ ಬಹಳ ಒಳ್ಳೆಯ ದಕ್ಷ ಅಧಿಕಾರಿಯಿದ್ದಾರೆ. ಹಿಂದಿನ ಮುಖ್ಯಮಂತ್ರಿ ಮೊಯ್ಲಿಯವರೂ ಅವರ ಬಗ್ಗೆ ಪ್ರಶಂಸೆ ಮಾಡಿದ್ದಾರೆ, ನಾನೂ ಕೂಡ ಅವರ ಬಗ್ಗೆ ತಿಳಿದುಕೊಂಡಿದ್ದೇನೆ. ಅಂಥವರಿಗೆ ಪೂರ್ತಿ ಸ್ವಾತಂತ್ರ್ಯ ಕೊಟ್ಟು ಅವರ ನೇತೃತ್ವದಲ್ಲಿ ಕೆಲಸ ನಡೆಯುವುದಕ್ಕೆ ವ್ಯವಸ್ಥೆ ಮಾಡಬೇಕು. ಆ ರೀತಿಯಾಗಿ ಎಲ್ಲ ಇನ್‌ಫ್ರಾಸ್ಟ್ರಕ್ಚರನ್ನು ಕೊಡಬೇಕು, ಕೊಡದೇ ಇದ್ದರೆ, ಕೇವಲ ದುಡ್ಡು ಕೊಟ್ಟರೆ ಕೆಲಸ ಆಗದ ಪರಿಸ್ಥಿತಿ ಇರುವುದರಿಂದ ಹೆಚ್ಚು ಆದ್ಯತೆಯನ್ನು ಕೊಟ್ಟು ಸಿಬ್ಬಂದಿ ಕೊರತೆ ಏನು ಇದೆ ಅದನ್ನು ನೀಗಿಸುವುದಕ್ಕೆ ಸರ್ಕಾರ ಏನು ಕ್ರಮ ಕೈಗೊಂಡಿದೆ? ಏಕೆಂದರೆ 95-96 ಈಗಾಗಲೇ ಮುಗಿದಿದೆ.

ಡಿಸೆಂಬರ್‌ನಿಂದ ಹಿಂದಿನ ಮೂರು ತಿಂಗಳಲ್ಲಿ ಆದ್ಯತೆ ಕೊಡಬೇಕಾದ ನೀರಾವರಿಗೆ ಮಾರ್ಚಿ ಏಪ್ರಿಲ್ ಮೇ ಒಳಗಾಗಿ ಅಂದರೆ ಈ ಪೀಕ್ ಸೀಸನ್ ಎಂದು ಏನು ಹೇಳುತ್ತೇವೆ ಅದೆಲ್ಲಾ ಮುಗಿದಿದೆ. ನಾನು ನಿರ್ದಾಕ್ಷಿಣ್ಯವಾಗಿ ಹೇಳುವುದು ಸರ್ಕಾರ 1995-96ರಲ್ಲಿ ಯಾವುದೇ ನೀರಾವರಿ ಕೆಲಸ ಮಾಡದೆ ನಿರರ್ಥಕವಾಗಿ ಕಳೆದ ತಿಂಗಳು ಎಂದರೆ ತಪ್ಪಾಗಲಾರದು. ಸರ್ಕಾರ ಈ ಮೂರು ತಿಂಗಳು ಕಳೆದಿರುವ ಪ್ರಾಶಸ್ತ್ಯ ಏನಿದೆ ಇನ್ನ್ಯಾವ ಕಾಲಕ್ಕೂ ಅದನ್ನು ನಾವು ಮರಳಿಪಡೆಯಲು ಸಾಧ್ಯವಾಗಲಿಕ್ಕಿಲ್ಲ. ಆ ದೃಷ್ಟಿಯಿಂದ ತಾವು ಯುದ್ಧೋಪಾದಿಯಲ್ಲಿ ಕೆಲಸ ಮಾಡಬೇಕಾಗಿದೆ. ಬಹುಶಃ ತೀರ್ಮಾನ ತೆಗೆದುಕೊಳ್ಳಲೂ ತಮಗೆ ಇನ್ನೂ ಆಗಿಲ್ಲ. ಈ ಮೂರು ತಿಂಗಳಲ್ಲಿ ಆ ಯೋಜನೆಗೆ ಎಷ್ಟೊಂದು ಪೆಟ್ಟು ಬಿದ್ದಿದೆ ಎಂದರೆ ಹೇಳಲಿಕ್ಕೆ ಬಾರದಷ್ಟು ಪೆಟ್ಟು ಬಿದ್ದಿದೆ. ಕಾರ್ಯ ಆಗಬೇಕೆಂದಿದ್ದರೆ ನೀರಾವರಿ ಬಗ್ಗೆ ಶೀಘ್ರವಾಗಿ ತಾವು ನಿರ್ಣಯ ಕೈಗೊಳ್ಳಬೇಕಾಗುತ್ತದೆ ಮತ್ತು ಪುನರ್‌ವಸತಿ ವಿಚಾರದಲ್ಲಿ ಹೇಳಬೇಕಾದರೆ ಈ ಯೋಜನೆಗಳನ್ನು ಕಾರ್ಯಗತಗೊಳಿಸಲು ಎಷ್ಟು ಆಸಕ್ತಿ ತೋರಿಸುತ್ತೇವೆ ಅಷ್ಟೇ ಪ್ರಮಾಣದಲ್ಲಿ ಪುನರ್‌ವಸತಿ ಕಾರ್ಯ ಮಾಡಬೇಕಾಗಿದೆ. ಕಾರಣ, ಅಲಮಟ್ಟಿ ಡ್ಯಾಮನ್ನು ಮುಂದಿನ ವರ್ಷ ನಾವು ಮುಗಿಸಲೇಬೇಕಾಗಿದೆ. ಹಾಗೆ ಮುಗಿಸಿದಾಗ ಹಿಂಡ ನಿಂತ ನೀರಿನಲ್ಲಿ ಸುಮಾರು 260 ಹಳ್ಳಿಗಳು ಮುಳುಗಡೆಯಾಗುತ್ತವೆ.

ಆಮೇಲೆ ಬಾಗಲಕೋಟೆ ಪಟ್ಟಣ ಮುಳುಗಡೆಯಾಗುತ್ತದೆ. ಅಂತಹ ಹಳ್ಳಿ ಪಟ್ಟಣಗಳಿಗೆ ಏನು ವ್ಯವಸ್ಥೆ ನಾವು ಮಾಡಿದ್ದೇವೆ? ಪುನರ್ ವಸತಿ ಬಗ್ಗೆ ನಾವು ಏನಾದರೂ ವ್ಯವಸ್ಥೆ ಮಾಡಲೇಬೇಕು. ಆ ದಿಸೆಯಲ್ಲಿ ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಂಡಿದೆ ಎಂಬುದು ಬಹಳ ಮುಖ್ಯ. ಎಲ್ಲವನ್ನೂ ನಾವು ಪ್ಲಾನಿಂಗ್‌ನಿಂದ ಮಾಡಬೇಕು ಇಲ್ಲದೇ ಹೋದರೆ ಬರೀ ದುಡ್ಡು ಕೊಟ್ಟರೆ ಅದು ನಿರರ್ಥಕವಾಗಬಹುದು. ಭೂಸ್ವಾಧೀನತೆಯಲ್ಲೂ ಇಲ್ಲದೇ ಹೋದರೆ ಬರೀ ದುಡ್ಡು ಕೊಟ್ಟರೆ ಅದು ನಿರರ್ಥಕವಾಗಬಹುದು. ಭೂಸ್ವಾಧೀನತೆಯಲ್ಲೂ ಇವತ್ತು ಅನೇಕ ತೊಂದರೆಗಳಾಗಿವೆ. ಈ ಯೋಜನೆ ಇವತ್ತು ಫೇಲಾಗಿದ್ದರೆ ಭೂಸ್ವಾಧೀನತೆಯ ಅನೇಕ ಕಾರಣಗಳು ಇವೆ. ಅಲ್ಲಿನ ಜನ ಭೂಸ್ವಾಧೀನತೆಗೆ ಕೋರ್ಟಿನಿಂದ ಸ್ಟೆ ತಂದು ತೊಂದರೆ ಉಂಟು ಮಾಡಿ ಕಾಲುವೆಗಳ ಕೆಲಸ ಇದುವರೆಗೂ ಆಗದಿರಲು ಇದೂ ಒಂದು ಕಾರಣ.

ಆದರ ಬಗ್ಗೆ ನಾವು ಸೂಕ್ತ ಚರ್ಚೆ ಮಾಡಿ ಆ ಭೂಮಾಲೀಕರು ಕೂಡ ಒಂದು ಸಂಧಾನ ಮಾಡಿಕೊಂಡು ಅಲ್ಲಿರುವ ಮಾರ್ಕೆಟ್ ರೇಟಿಗೆ ಅವರ ಮನವೊಲಿಸಿ ಕೊಟ್ಟಿದ್ದೇ ಆದರೆ ಬಹುಶಃ ಭೂಸ್ವಾಧೀನತೆ ಕೆಲಸ ಸಾಧ್ಯವಾಗುತ್ತದೆ ಮತ್ತು ಎಲ್ಲಾ ಕೆಲಸವನ್ನು ತ್ವರಿತವಾಗಿ ಮಾಡಲು ಸಾಧ್ಯವಾಗುತ್ತದೆ. ಇಂತಹ ಅನೇಕ ವಿಚಾರಗಳನ್ನು ಗಮನದಲ್ಲಿಟ್ಟುಕೊಂಡು ಅಲ್ಲಿರುವ ಸಮಸ್ಯೆಗಳ ಕಡೆ ಹೆಚ್ಚು ಒತ್ತು ಕೊಟ್ಟು ಅಲ್ಲಿನ ಅಧಿಕಾರಿಗಳನ್ನು ವಿಶ್ವಾಸಕ್ಕೆ ತೆಗೆದುಕೊಂಡು ಸಹಾಯ ಸವಲತ್ತು ಕೊಟ್ಟರೆ ರಾಜ್ಯದಲ್ಲಿ ಇಂತಹ ಯೋಜನೆಗಳು ಕಾರ್ಯಗತವಾಗಲು ಸಹಾಯವಾಗುತ್ತದೆ. ನನ್ನ ಹಾನೆಸ್ಟ್ ಅಭಿಪ್ರಾಯದಲ್ಲಿ ಸರ್ಕಾರ ಒಂದು ತೀರ್ಮಾನ ತೆಗೆದುಕೊಳ್ಳಬೇಕು, ಈ ಯೋಜನೆಗಳ ಬಗ್ಗೆ ಅದು ಮಲಪ್ರಭಾ ಇರಬಹುದು, ಘಟಪ್ರಭಾ ಇರಬಹುದು, 8960ರಲ್ಲಿ ಆಗಿರುವ ಮಲಪ್ರಭಾ ಯೋಜನೆ ಘಟಪ್ರಭಾ ಯೋಜನೆಗಳು 20 ವರ್ಷ ಹಿಂದಿನವು.

ಇವೆಲ್ಲಾ ಪ್ಲಾನ್ಡ್ ಬಜೆಟೆಡ್ ಸ್ಕೀಂಸ್. ಈ ಯೋಜನೆಗಳು ಈಗ ಮುಕ್ತಾಯ ಹಂತದಲ್ಲಿರುವುದರಿಂದ ಅವನ್ನು ಮುಗಿಸಬೇಕಾದರೆ ಹಣದ ವ್ಯವಸ್ಥೆ ಆಗಬೇಕಾಗುತ್ತದೆ. ಸುಮಾರು 15-20 ಸಾವಿರ ಕೋಟಿ ಸಂಗ್ರಹ ಮಾಡುವುದಾದರೆ ಯಾವುದೇ ಸರ್ಕಾರ ಇದನ್ನು ಕೂಡಿಸಲು ಸಾಧ್ಯ ಇದೆಯೇ? ಇದು ಬಹಳ ಜಟಿಲ ಸಮಸ್ಯೆ. ಈಗಾಗಲೇ ಒಂದು ಆಮೂಲಾಗ್ರ ಬಿಲ್ ತಂದು ಮಾಡಬೇಕೆಂದು ಹೊರಟಿದ್ದೀರಿ. ದುರಾದೃಷ್ಟವೇನೆಂದರೆ 5000 ಕೋಟಿ ಖರ್ಚು ಮಾಡಿ 20 ಲಕ್ಷ ಹೆಕ್ಟೇರ್‌ಗೆ ನಾವು ನೀರು ಕೊಟ್ಟಿದ್ದೇವೆ. ಹಾಗಾದರೆ ಸರ್ಕಾರಕ್ಕೆ ನಾನು ಕೇಳುವುದು, 5 ಸಾವಿರ ಕೋಟಿಯಾಗುವ ಯೋಜನೆಗಳಿಂದ ಸರ್ಕಾರಕ್ಕೆ ಬಂದಿರುವ ಆದಾಯ ಎಷ್ಟು ಎಂದರೆ ನಾವೆಲ್ಲರೂ ತಲೆತಗ್ಗಿಸಬೇಕಾಗಿದೆ. ಯಾವುದಾದರೂ ಯೋಜನೆಗೆ ಹಣ ಹಾಕಿದಾಗ ಅದರಿಂದ ಹಣ ಬರುವುದಿತ್ತು ಎಂದರೆ ಅದನ್ನು ಬೇರೆ ಯೋಜನೆಗಳಿಗೆ ಹಾಕಬೇಕು. ಇಂತಹ ಯೋಜನೆಗಳ ಮೂಲಕ ನೀರಾವರಿ ಸವಲತ್ತು ಪಡೆದಿರುವ ರೈತರಿಗೆ ತಾವು ಹೆಚ್ಚು ತೆರಿಗೆ ಹಾಕಿ ನೀರಾವರಿ ಯೋಜನೆಗಳಾಗದೇ ಇರುವ ಬಿಜಾಪುರ ಇರಲಿ, ರಾಯಚೂರು ಇರಲಿ ಮತ್ತು ಬರಗಾಲ ಪೀಡಿತ ಪ್ರದೇಶದಲ್ಲಿರುವ ಯೋಜನೆಗಳಿಗೆ ತಾವು ಹೆಚ್ಚಿನ ಆದ್ಯತೆ ಕೊಟ್ಟು ಅವರಿಂದ ನೀರಾವರಿ ಕರ ವಸೂಲು ಮಾಡಿ ಬರಬೇಕಾಗಿರುವ ಬಾಕಿಯನ್ನು ನಿರ್ದಾಕ್ಷಿಣ್ಯವಾಗಿ ವಸೂಲು ಮಾಡಿ ಇಂತಹ ಯೋಜನೆಗಳಿಗೆ ಕೊಟ್ಟರೆ ಸದುಪಯೋಗವಾಗುತ್ತದೆ. ಅಂತಹ ನಿರ್ದಿಷ್ಟ ನಿಲುವನ್ನು ಸರ್ಕಾರ ತೆಗೆದುಕೊಳ್ಳಬೇಕು. ನನ್ನ ಪ್ರಕಾರ ಅದರಲ್ಲೇನು ದೋಷ ಎಂದರೆ ಈಗಿರುವ ವ್ಯವಸ್ಥೆಯಂತೆ ನೀರಾವರಿಯಾಗಿರುವ ಭೂಮಿಗಾಗಿ ಕರ ವಸೂಲು ಮಾಡಲು ಅಲ್ಲಿನ ರೆವಿನ್ಯೂ ಇಲಾಖೆಯವರಿಗೆ ಅಧಿಕಾರ ಕೊಡುತ್ತಾರೆ. ರೆವಿನ್ಯೂ ಇಲಾಖೆಯವರು ನೀರು ಕೊಟ್ಟಿದ್ದಾರೋ ಬಿಟ್ಟಿದ್ದಾರೋ ಎಂದು ತುಲನೆ ಮಾಡುವ ಹಾಗಿಲ್ಲ ಮತ್ತು ಆ ಕರ ವಸೂಲು ಮಾಡುವುದರಲ್ಲೂ ರೆವಿನ್ಯೂ ಇಲಾಖೆಯವರಿಗೆ ಆಸಕ್ತಿ ಇರಲಿಕ್ಕಿಲ್ಲ. ಹೀಗಾಗಿ ಇವತ್ತಿನ ವ್ಯವಸ್ಥೆ ಏನಾಗಿದೆ ಎಂದರೆ ಯಾರೋ ನೀರಿಗೆ ಕರ ನಿಗದಿ ಮಾಡುವುದು ಮತ್ತೊಬ್ಬರು ಯಾರೋ ಅದನ್ನು ವಸೂಲು ಮಾಡುವುದು. ಹೀಗಾಗಿ ಅಲ್ಲಿ ಬಹಳ ತೊಂದರೆ ಇದೆ. ಅದನ್ನು ಆಮೂಲಾಗ್ರವಾಗಿ ಬದಲಾಯಿಸಿ ನೀರು ಬಳಕೆದಾರರ ಸಂಘ ಮಾಡಬೇಕೆಂದು ನೀವು ಯೋಚಿಸಿದ್ದೀರಿ. ಅವುಗಳಿಗೆ ಕರವಸೂಲು ಮಾಡಲು ಅಧಿಕಾರ ಕೊಟ್ಟಿದ್ದೇ ಆದರೆ ಸದುಪಯೋಗವಾಗಬಹುದೇನೋ. ಆ ದಿಸೆಯೊಳಗೆ ತಾವು ಕೂಡ ವಿಚಾರ ಮಾಡಬೇಕು. ಆಮೂಲಾಗ್ರ ಬದಲಾವಣೆ ಆಗಬೇಕು. ನೀರಾವರಿ ವ್ಯವಸ್ಥೆ ಬಹಳ ಹದಗೆಟ್ಟಿದೆ, ಎಲ್ಲಾ ಕಾಲುವೆಗಳು ದುರಸ್ತಿಯಾಗದೆ ತೊಂದರೆಯಾಗಿದೆ, ಇದರ ಬಗ್ಗೆ ನೀವು ಸಮಗ್ರ ತನಿಖೆ ಮಾಡಬೇಕಾಗಿದೆ. ಈ ಅವ್ಯವಸ್ಥೆಯ ಆಗರವಾಗಿರುವ ಸಮಸ್ಯೆಗಳ ಇತ್ಯರ್ಥ ಮಾಡಲು ತೀರ್ಮಾನ ತೆಗೆದುಕೊಳ್ಳಬೇಕು.

ಮುಖ್ಯವಾಗಿ ಕೃಷ್ಣ ಮೇಲ್ದಂಡೆ ಯೋಜನೆ ಮುಗಿಸುವುದಕ್ಕೆ ತಾವು ಉತ್ತರದಲ್ಲಿ ನಿರ್ದಿಷ್ಟವಾಗಿ ಇಷ್ಟು ಹಣ ಕೊಟ್ಟು ಇಂತಿಂತಹ ಇನ್‌ಫ್ರಾಸ್ಟ್ರಕ್ಚರ್ ಒದಗಿಸುತ್ತೇವೆ ಮತ್ತು ಎಲ್ಲಾ ಸಮಸ್ಯೆ ಬಗೆಹರಿಸುತ್ತೇವೆ ಎನ್ನುವುದಾದರದೆ ಈ ಯೋಜನೆ ಮುಗಿಯುತ್ತದೆ. ಮಲಪ್ರಭಾ ಯೋಜನೆಯಲ್ಲಿ ಸುಮಾರು 165 ಕಿ.ಮೀ. ಉದ್ದವಿರುವ ಎಡದಂಡೆ ಕಾಲುವೆ ಈಗಾಗಲೇ 122 ಕಿ.ಮೀ. ಆಗಿ ಇನ್ನೆರಡು ಮೂರು ಕೋಟಿಯಲ್ಲಿ ಮಲಪ್ರಭಾದ ಎಡದಂಡೆ ಮತ್ತು ಬಲದಂಡೆ ಕಾರ್ಯ ಮುಗಿಸುವ ಯೋಜನೆ ಇದೆ. ತಾವು ಕೂಡ ಹೆಚ್ಚಿನ ಆಸಕ್ತಿ ವಹಿಸಿ ಬರಗಾಲ ಪೀಡಿತ ಪ್ರದೇಶಗಳಿಗೆ ನೀರಾವರಿಗೆ ಹಣ ಒದಗಿಸಬೇಕು ಮತ್ತು ತಮಗೂ ವಿನಂತಿ ಮಾಡಿಕೊಂಡಿದ್ದೇನೆ, ಮೈನರ್ ಇರಿಗೇಷನ್ ಸಚಿವರಾಗಿ ತಾವು ಏತ ನೀರಾವರಿ ಯೋಜನೆಗೆ ಈಗಿನ ಮುಖ್ಯಮಂತ್ರಿಗಳೇ ಅಡಿಗಲ್ಲು ಹಾಕಿದ್ದರು ಅವರು ಲೋಕೋಪಯೋಗಿ ಮಂತ್ರಿಗಳಾಗಿ ನಮ್ಮ ತಾಲ್ಲೂಕಿಗೆ ಬಂದಿದ್ದಾಗ ಇಲ್ಲಿಗೆ ಸುಮಾರು ವರ್ಷವಾದರೂ, ಕೇವಲ 1 ಲಕ್ಷ ರೂ.ಗಳನ್ನು ಬದಗಿಸುತ್ತಾ ಬಂದರೆ ಯೋಜನೆಯ ಅಂದಾಜು 80 ಲಕ್ಷ ರೂಪಾಯಿಗಳ, ಹಾಗಾದರೆ ಅದು ಮುಗಿಯಲು 80 ವರ್ಷ ಆಗಬಹುದು ತಾವೂ ಕೂಡ ನಮ್ಮ ತಾಲ್ಲೂಕಿನ ಏತ ನೀರಾವರಿ ಯೋಜನೆಗೆ ಹೆಚ್ಚು ಆಸಕ್ತಿ ಕೊಡಬೇಕು ಮತ್ತು ನೀರಾವರಿಗೆ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತು ಮುಗಿಸುತ್ತೇನೆ.

11.00 ಎ.ಎಂ

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ನೀರಾವರಿ ಇಲಾಖೆಯ ಮೇಲೆ ಮತ್ತು ನೀರಾವರಿ ಮೇಲೆ ಸಾಕಷ್ಟು ಹಿರಿಯ ಸದಸ್ಯರು ಬೆಳಕು ಚೆಲ್ಲಿದ್ದಾರೆ. ಕಾವೇರಿ ಬೇಸಿನ್‌ನಲ್ಲಿ ಬರತಕ್ಕ ಮತ್ತು ಕಾವೇರಿಗೆ ಸಂಬಂಧಪಟ್ಟಂತೆ ನೀರಾವರಿ ಸಮಸ್ಯೆಗಳ ಬಗ್ಗೆ ಟ್ರಿಬ್ಯೂನಲ್ ಬಗ್ಗೆ ಸಾಕಷ್ಟು ವಿಚಾರವನ್ನು ಮಾನ್ಯ ನಂಜೇಗೌಡರು, ಮಾನ್ಯ ಮೊಯಿಲಿಯವರು ಮಾತನಾಡಿದ್ದಾರೆ. ಬೇರೆ ಮಾನ್ಯ ಸದಸ್ಯರುಗಳು ಕೂಡ ಹೆಚ್ಚಿನ ಬೆಳಕನ್ನು ಚೆಲ್ಲಿದ್ದಾರೆ. ನಾನು ಹೆಚ್ಚು ಕಾಲ ಕಾವೇರಿ ಎಲ್ಲಿ ಹುಟ್ಟಿತು ಎಲ್ಲಿ ಹೋಗಿ ಮುಳುಗುತ್ತದೆ ಎನ್ನುವುದೂ ಕೂಡ ಹೇಳತಕ್ಕ ಅವಶ್ಯಕತೆ ಈ ಸಂದರ್ಭದಲ್ಲಿ ಇಲ್ಲ ಎಂದು ನಾನು ಭಾವಿಸಿದ್ದೇನೆ. ಕಾರಣ ಇಷ್ಟೆ. ಈಗ ಸಧ್ಯದ ಪರಿಸ್ಥಿತಿಯಲ್ಲಿ ಈ ನೀರಾವರಿ ಯೋಜನೆಗಳು ಎಲ್ಲಿ ನಿಂತಿವೆ ಮತ್ತು ಅದರಲ್ಲಿ ವಿಶೇಷವಾಗಿ ನಮ್ಮ ಕರ್ನಾಟಕ ರಾಜ್ಯ ನೀರಾವರಿಯಲ್ಲಿ ಅತ್ಯಂತ ಹಿಂದುಳಿದೆ ಎನ್ನತಕ್ಕದ್ದನ್ನು ನಾವೆಲ್ಲರೂ ಕೂಡ ಒಪ್ಪಿಕೊಂಡಿದ್ದೇವೆ. ನಮ್ಮಲ್ಲಿರತಕ್ಕ ಅಂಕಿ ಸಂಖ್ಯೆಗಳ ಪ್ರಕಾರ ನಮ್ಮ ರಾಜ್ಯದಲ್ಲಿ ಟೋಟಲ್ ಇರಿಗೇಷನ್ ಪೊಟೆನ್ಷಿಯಾಲಿಟಿಯನ್ನು ಕ್ರಿಯೇಟ್ ಮಾಡತಕ್ಕ ಸಾಮರ್ಥ್ಯ 55 ಲಕ್ಷ ಹೆಕ್ಟೇರು ಇದ್ದರೆ ನಾವು ಇಲ್ಲಿಯವರೆಗೆ ಕೇವಲ 31 ಲಕ್ಷ 97 ಸಾವಿರ ಹೆಕ್ಟೇರ್ ಮಾತ್ರ ಸಾಧನೆಯನ್ನು ಮಾಡಿದ್ದೇವೆ. ಅಂದರೆ ಇನ್ನೂ ನಮ್ಮ ಗುರಿ 24 ಲಕ್ಷ ಹೆಕ್ಟೇರನ್ನು ಮಾಡತಕ್ಕದ್ದು ಇದೆ.

ಅಂದಾಗ ನಾವು ಯಾವ ದಿಕ್ಕಿನಲ್ಲಿ ಹೋಗುತ್ತಿದ್ದೇವೆ? ಎಷ್ಟರ ಮಟ್ಟಿಗೆ ನಾವು ಆಸಕ್ತಿ ವಹಿಸಿ ಈ ಯೋಜನೆಗಳನ್ನು ಸಂಪೂರ್ಣವಾಗಿ ಕೈಗೆ ತೆಗೆದುಕೊಂಡು ಮುಗಿಸಬೇಕು ಎನ್ನತಕ್ಕ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ ಎನ್ನತಕ್ಕದ್ದು ಬಹಳ ಮುಖ್ಯ. ಇವತ್ತು ಟ್ರಿಬ್ಯೂನಲ್ ಮುಂದೆ ಇರತಕ್ಕದ್ದು ಯಾವ ರೀತಿಯಾಗಿ ರೆಪ್ರೆಸೆಂಟೇಷನ್ ಮಾಡಬೇಕು? ಈ ವಿಷಯ ಬೇರೆ. ಆದರೆ ಈಗ ನಮ್ಮಲ್ಲಿರತಕ್ಕಂಥ ನೀರನ್ನು ಅಥವಾ ಲಭ್ಯತೆ ಇರತಕ್ಕ ನೀರನ್ನು ಯಾವ ರೀತಿ ಉಪಯೋಗ ಮಾಡಿಕೊಳ್ಳಬೇಕು ಅಥವಾ ನಾವು ಮಾಡಿಕೊಳ್ಳುತ್ತಿದ್ದೇವೆ. ಅದಕ್ಕೆ ನಿಮ್ಮ ಯೋಜನೆಗಳು ಏನು, ನಿಮ್ಮ ಕಾರ್ಯಕ್ರಮ ಏನು, ಅದಕ್ಕೆ ನೀವು ಒದಗಿಸಿದಂತಹ ಹಣ ಎಷ್ಟು

ಎನ್ನತಕ್ಕದ್ದು ಬಹಳ ಮುಖ್ಯ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಬಗ್ಗೆ ಮಾತನಾಡಬೇಕಾದರೆ ಈ ಪ್ರಾಜೆಕ್ಟ್ ಸುಮಾರು ನಮ್ಮ ಭಾರತ ದೇಶದಲ್ಲಿಯೇ ಅತ್ಯಂತ ದೊಡ್ಡದು ಮತ್ತು ವಿಶೇಷವಾಗಿ ಇದು ಎರಡನೆಯ ದೊಡ್ಡ ನದಿ ಎಂದು ಹೇಳಿದರೆ ಅತಿಶಯೋಕ್ತಿಯೇನಲ್ಲ, ಸುಮಾರು 1392 ಕಿಲೋ ಮೀಟರ್ ಉದ್ದ ಮತ್ತು ಮಹಾರಾಷ್ಟ್ರ, ಕರ್ನಾಟಕ, ಆಂಧ್ರಪ್ರದೇಶಕ್ಕೆ ಸಹಾಯ ಆಗತಕ್ಕದ್ದು ಈ ಒಂದು ಕೃಷ್ಣ ನದಿ. ಇದರ ಒಂದು ವ್ಯಾಪ್ತಿ ಏನೆಂದರೆ ಸುಮಾರು ಎರಡು ಲಕ್ಷ ಅರವತ್ತು ಸಾವಿರ ಸ್ಕೇರ್ ಕಿಲೋ ಮೀಟರ್ ಪ್ರದೇಶವು ವ್ಯಾಪ್ತಿಗೆ ಒಳಪಡುತ್ತದೆ. ಇಂತಹ ಒಂದು ದೊಡ್ಡ ನದಿ ನೀರಿನ ಪ್ರಮಾಣ ನಮಗೆ ಏನು ಅಲಾಟ್‌ಮೆಂಟ್ ಆಗಿದೆ ಅಥವಾ ನಾವೇನು ಈಗಾಗಲೇ ಬಚಾವತ್ ಅವಾರ್ಡ್ ಪ್ರಕಾರವಾಗಲಿ ಅಥವಾ ನಾವು ಒಪ್ಪಿಕೊಂಡ ದಾರಿಯಲ್ಲಿ ಏನು ಹೋಗುತ್ತಿದ್ದೇವೆ, ಅದನ್ನು ಉಪಯೋಗಿಸಿ ಕೊಳ್ಳುವುದಕ್ಕೆ ಒಂದು ನಿಗದಿತವಾದಂತಹ ಸಮಯವನ್ನು ಫಿಕ್ಸ್ ಮಾಡಿದ್ದಾರೆ. ಸುಮಾರು ಎರಡು ಸಾವಿರ ಇಸವಿಯೊಳಗೆ ನಾವು ಅದನ್ನು ಉಪಯೋಗ ಮಾಡಿಕೊಳ್ಳಬೇಕು. ಈ ಎರಡು ಸಾವಿರ ಇಸವಿಯೊಳಗೆ ನಾವು ಅದನ್ನು ಉಪಯೋಗ ಮಾಡಿಕೊಳ್ಳಬೇಕು. ಈ ಎರಡು ಸಾವಿರ ಇಸವಿಯೊಳಗೆ ನಾವು ಅದನ್ನು ಉಪಯೋಗ ಮಾಡಿಕೊಳ್ಳಬೇಕು. ಈ ಎರಡು ಸಾವಿರ ಇಸವಿಯೊಳಗೆ ನಾವು ಉಪಯೋಗ ಮಾಡಿಕೊಳ್ಳಬೇಕಾದರೆ ತಾವು ಎಷ್ಟು ಹಣವನ್ನು ಇದಕ್ಕೆ ಒದಗಿಸಿದ್ದೀರಿ? ನಾವು ಬಜೆಟ್‌ನಲ್ಲಿ ನೋಡಿದ್ದೇವೆ. ತಾವು ಕೊಟ್ಟಂತಹ ಹಣ ಎಷ್ಟು ಎಂದರೆ ಕೇವಲ 82 ಕೋಟಿ ರೂಪಾಯಿ ಮಾತ್ರ. ಇನ್ನೊಂದು ನೂರು ಕೋಟಿ ರೂಪಾಯಿ ನಿನ್ನೆ ಮಾನ್ಯ ಮೊಯಿಲಿಯವರು ಹೇಳಿದ ಹಾಗೆ ಅದು ಈಕ್ವಿಟಿ ಷೇರ್ ಎಂದು ಆ ನಿಗಮಕ್ಕೆ ಇಟ್ಟಂತಹ ಹಣ. ಅಂದಾಗ ನಿಮಗೆ ಈ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಬಗ್ಗೆ ಕಾಳಜಿ ಇದ್ದರೆ ಅಥವಾ ಈ ಕಾರ್ಯಕ್ರಮವನ್ನು ಬೇಗನೇ ಮುಗಿಸಬೇಕು ಎಂದು ತಾವು ಒಂದು ಪ್ರಾಮಾಣಿಕ ಪ್ರಯತ್ನ ಮಾಡಬೇಕು ಎಂದರೆ ಇದಕ್ಕೆ ಹೆಚ್ಚಿನ ಹಣವನ್ನು ತಾವು ಇಡತಕ್ಕಂಥ ಅವಶ್ಯಕತೆ ಇತ್ತು. ಇವತ್ತು ಅದನ್ನು ಬಿಟ್ಟು ನೀವು ಬರೀ ಈ ನಿಗಮದ ಮುಖಾಂತರ ಹಣವನ್ನು ಸಂಗ್ರಹಿಸಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟನ್ನು ಕಂಪ್ಲೀಟ್ ಮಾಡುತ್ತೇವೆ. ಸುಮಾರು 20 ಲಕ್ಷ ಎಕರೆಗೆ ನೀರು ಕೊಡತಕ್ಕ ವ್ಯವಸ್ಥೆಯನ್ನು ನಾವು ಮಾಡುತ್ತೇವೆಂದು ಹೇಳಿದರೆ ಅದು ಹೇಗೆ ಸಾಧ್ಯ? ಈಗಾಗಲೇ ಆರು ತಿಂಗಳು ಹೋಗಿ ಬಿಟ್ಟಿದೆ. ತಮಗೆ ಗೊತ್ತಿದೆ ಅಧ್ಯಕ್ಷರೆ, ಅಕ್ಟೋಬರ್ ತಿಂಗಳಿಂದ ಇಲ್ಲಿಯವರೆಗೆ ಯಾವ ಕೆಲಸಗಳೂ ಕೂಡ ನಡೆದಿಲ್ಲ, ಅದು ಕಾರಣಾಂತರದಿಂದ. ಒಂದು ಕಡೆ ಪೀಸ್‌ವರ್ಕ್ ಎಂದು ಹೇಳಿ ತಾವು ಕೆಲಸ ಸ್ಟಾಪ್ ಮಾಡಿದ್ದೀರಿ. ಇನ್ನೊಂದು ಕಡೆ ಈ ವರ್ಲ್ಡ್ ಬ್ಯಾಂಕ್ ಏಡೆಡ್ ಪ್ರಾಜೆಕಟ್ಸ್ ನರಾಯಣಪುರ ಲೆಫ್ಟ್ ಬ್ಯಾಂಕ್ ಕೆನಾಲ್ ಆಗಲಿ, ಅಥವಾ ಅಲಮಟ್ಟಿ ಆಗಲಿ ಎಲ್ಲೆಲ್ಲಿ ಒಪ್ಪಿಕೊಂಡಿದ್ದಾರೆ, ಸಹಾಯ ಸಿಕ್ಕಿದೆ ಅಂತಹ ಕಡೆ ತಾವು ಹೆಚ್ಚಿನ ರೀತಿಯಲ್ಲಿ ಹಣ ಬಿಡುಗಡೆ ಮಾಡಿ ಅದನ್ನು ರೀ ಇಂಬರ್ಸ್ ಮಾಡಿಸಿಕೊಳ್ಳಬೇಕಾಗುತ್ತದೆ. ಅದಕ್ಕೆ ಈ ಕನ್ನಡಿಯೊಳಗಿರತಕ್ಕಂಥ ಗಂಟನ್ನು ನಮಗೆ ತೋರಿಸಿ.

ಅಧ್ಯಕ್ಷರು : ಪೀಸ್ ವರ್ಕ್ ಎಂದರೆ ಏನು? ಎಲ್ಲರೂ ಹೇಳುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪೀಸ್ ವರ್ಕ್ ಅಂದರೆ ತಮಗೂ ಕೂಡ ಗೊತ್ತಿದೆ. ಏನು ಮಾಡುತ್ತಾರೆ ಎಂದರೆ ಅನೇಕ ಸಲ ಈ ಟೆಂಡರ್ ಕಾಲ್‌ಫರ್ ಮಾಡದೇ ಒಂದು ಕಿಲೋ ಮೀಟರ್ ಎರಡು ಕಿಲೋ ಮೀಟರ್ ಕಾಲುವೆಯನ್ನು ತೆಗೆಯುವುದಕ್ಕೆ ಕೊಟ್ಟು ಬಿಡುತ್ತಾರೆ. ಕೆಲವು ಕಡೆ ಏಕೆ ಕೊಡುತ್ತಾರೆ ಎಂದರೆ

ಅಧ್ಯಕ್ಷರು : ಅದನ್ನು ಕೊಡುವಾಗ ಬೇಸಿಸ್ ಏನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬೇಸಿಸ್ ಎಂದರೆ ಒಂದು ರಫ್ ಎಸ್ಟಿಮೆಂಟ್ ಮಾಡಿರುತ್ತಾರೆ. ಎಸ್‌ಆರ್ ರೇಟಿನ ಮೇಲೆ ಅವರೊಂದು ನಿಗದಿತವಾಗಿ ಒಂದು ಕಿಲೋ ಮೀಟರ್‌ಗೆ ಇಷ್ಟು ಆಗುತ್ತದೆ ಎಂದು ಅಂದಾಜು ಮಾಡಿರುತ್ತಾರೆ. ಅದರೊಳಗೆ ಅನೇಕ ಸಲ ಏನಾಗುತ್ತದೆ ಅಂದರೆ ಯಾವುದು ಲಾಭದ ಪೋರ್ಷನ್ ಇರುತ್ತದೆ ಅದನ್ನು ಕಂಟ್ರಾಕ್ಟರ್ ಮಾಡುತ್ತಾರೆ, ಡಿಫಿಕಲ್ಟ್ ಪೋರ್ಷನ್ ಇರುವುದನ್ನು ಬಿಟ್ಟು ಹೋಗುತ್ತಾರೆ. ಅನೇಕ ಸಲ ಹೀಗೆ ಆಗುತ್ತದೆ. ಆದರೆ ಕೆಲವು ಕಡೆ ಏನಾಗುತ್ತದೆ ಎಂದರೆ ಇಂತಹ ಪ್ರಾಜೆಕ್ಟ್....

ಅಧ್ಯಕ್ಷರು : ವರ್ಕ್ ಅವಾರ್ಡ್ ಮಾಡಬೇಕಲ್ಲಾ!

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪೀಸ್ ವರ್ಕ್ ಪ್ರಕಾರ ಮಾಡುತ್ತಾರೆ. ಯಾರು ಕೆಲಸ ಮಾಡುತ್ತಾರೋ....

ಅಧ್ಯಕ್ಷರು : ಅದೇ ಪೀಸ್ ವರ್ಕ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದೇ ಪೀಸ್ ವರ್ಕ್. ಅದು ಎಲ್ಲರ ಕಾಲದಲ್ಲಿ ಪ್ರಾರಂಭ ಆಗಿದ್ದು. ಶ್ರೀಮಾನ್ ವೀರಪ್ಪ ಮೊಯಿಲಿಯವರು ಬಂದಾಗ ಪ್ರಾರಂಭ ಆದದ್ದು ಅಲ್ಲ. ಅಥವಾ ಕಾಂಗ್ರೆಸ್ ಹುಟ್ಟಿದಾಗ ಪ್ರಾರಂಭವಾದದ್ದು ಅಲ್ಲ. ಅದರ ಜನಕರೂ ಕೂಡ ಇವತ್ತು ಜನತಾ ದಳದ ಸರ್ಕಾರದಲ್ಲಿ ಇದ್ದಾರೆ.

ಶ್ರೀ ಹೆಚ್. ಶಿವಪ್ಪ : ಪೀಸ್ ವರ್ಕ್ ಎಂದರೆ ಕೆಲಸ ಮಾಡದೇ ಮೆಷರ್‌ಮೆಂಟ್ ಬುಕ್‌ನಲ್ಲಿ ಬರೆದುಕೊಂಡು ತೆಗೆದುಕೊಳ್ಳುವುದು ಅದೇ ಪೀಸ್ ವರ್ಕ್.

ಅಧ್ಯಕ್ಷರು : ಎರಡು ಭಾಗ ಇರಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಒಂದು ಏನಾಗಿದೆ ಎಂದರೆ, ಇದರಲ್ಲಿ ಒಂದು ವ್ಯತ್ಯಾಸ ಅಂದರೆ ಅನೇಕ ಸಲ ಜೆನ್ಯೈನ್ ರೀಸನ್‌ಗಾಗಿ ಪೀಸ್ ವರ್ಕ್ ಕೊಡುತ್ತಾರೆ. ಹೇಗೆ? ಉದಾಹರಣೆಗೆ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನಲ್ಲಿ ಒಂದು ಕೆನಾಲ್ 200 ಕಿಲೋ ಮೀಟರ್ ಹೋಗಬೇಕು. ಆ 200 ಕಿಲೋ ಮೀಟರ್ ಹೋಗುವಾಗ ಅನೇಕ ಲ್ಯಾಂಡ್ ಲಾರ್ಡ್ಸ್, ಜಮೀನುದಾರರು 'ಏನು ಮಾಡುತ್ತಾರೆ, ಅವರು ಕನ್‌ಸೆಂಟ್ ಕೊಡುವುದಿಲ್ಲ. ನೀವು ಇಲ್ಲಿ ಲ್ಯಾಂಡ್ ಅಕ್ವಿಸಿಷನ್ ಮಾಡಬೇಕು ಎಂದರೆ ಸುಮಾರು ಆರು ತಿಂಗಳು, ಏಳು ತಿಂಗಳು, ಒಂದು ವರ್ಷ, ಕೆಲವೊಮ್ಮೆ ಎರಡು ವರ್ಷ ಕೂಡ ಹೋಗುತ್ತದೆ. ಏಕೆಂದರೆ ಕೆಲವು ಸಲ ಏನು ಮಾಡುತ್ತಾರೆ ಎಂದರೆ ಯಾರಿಗೆ ಆ ಕೆಲಸ ಸಿಗಬೇಕು ಅವನಿಗೆ ಸಿಗಲಿಲ್ಲ ಎಂದರೆ ಅವನೇ ಹೋಗಿ ಸ್ಟೇಯನ್ನು ಆ ಲ್ಯಾಂಡ್ ಲಾರ್ಡ್‌ನಿಂದ ತರಿಸುತ್ತಾನೆ. ಅಥವಾ ಯಾರು ಕೆಲಸ ಮಾಡಬೇಕು ಎನ್ನತಕ್ಕ ಇಚ್ಛೆ ಇರುತ್ತದೆ, ಅವನಿಗೆ ಸಿಗದೇ ಹೋದರೆ ಆತ ಮಾಡುತ್ತಾನೆ. ಇಲ್ಲದೇ ಹೋದರೆ ಇಂಜಿನಿಯರ್‌ಗೆ ಯಾರಿಗೆ ಕೊಡಬೇಕು ಎನ್ನತಕ್ಕ ಮನಸ್ಸು ಇರುತ್ತದೆ. ಅವನಿಗೆ ಸಿಗದೇ ಇದ್ದರೆ ಕೊನೆಗೆ ಅವನೇ ಇನ್ನೊಬ್ಬರಿಗೆ ಹೇಳಿ ಸ್ಟೇ ತರಿಸುತ್ತಾನೆ. ಹೀಗೆ ಅನೇಕ ರೀತಿಯಿಂದ ಈ ಪೀಸ್ ವರ್ಕ್ಸ್ ಮೇಲೆ ಒಳ್ಳೆಯದಕ್ಕಾಗಿಯೂ ಉಪಯೋಗಿಸುತ್ತಾರೆ ಕೆಟ್ಟದ್ದಕಾಗಿಯೂ ಉಪಯೋಗಿಸುತ್ತಾರೆ. ಆದರೆ ಕೆಲವು ಕಡೆ ತ್ವರಿತಗತಿಯಿಂದ ಈ ಕೆಲಸ ಆಗಲಿ ಎಂದು ಆ ಜಮೀನಾದಾರರುಗಳಿಗೆ ಹಿಡಿದು ಕನ್‌ಸೆಂಟ್ ಕೊಡಿಸಿ ಆ ಕಂಟ್ರಾಕ್ಟರ್ಸ್‌ಗೆ ಕೆಲವು ಕಡೆ ಈ ಕೆಲಸವನ್ನು ಮಾಡಿದ್ದುದು ನಿಜ. ಎಲ್ಲಿ ತಪ್ಪಾಗಿದೆ, ಅಥವಾ ಎಲ್ಲಿ ನಿಮ್ಮ ಎಸ್‌ಆರ್ ರೇಟಿಗೆ ಅಥವಾ ನಿಮ್ಮ ಎಸ್ಟಿಮೇಟ್ ಏನು ಇದೆ, ಅದಕ್ಕೂ ವ್ಯತ್ಯಾಸ ಇದ್ದರೆ ಅಥವಾ

ಅದರಲ್ಲಿ ಫೋಲು ಇದ್ದರೆ ಅದನ್ನು ನೀವು ತಕ್ಷಣ ಸ್ಟಾಪ್ ಮಾಡಿ. ಯಾರೂ ಕೂಡ ಅಡ್ಡ ಬರುವುದಿಲ್ಲ. ಇಲ್ಲ ಎಂದರೆ ನೀವು ಒಂದು ಯೋಜನೆ ಹಾಕಿಕೊಳ್ಳಿ.

ಈಗ ನೀವು ಫಿಸಿಕಲ್ ಟಾರ್ಗೆಟ್‌ನ ಒಂದು ಕಾರ್ಯಕ್ರಮ ಹಾಕಿಕೊಳ್ಳಿ. ಈ ಸಲ 200 ಕಿಲೋ ಮೀಟರ್‌ಗಳಷ್ಟು ದೂರ ಕಾಲುವೆ ತೋಡಿಸಬೇಕು. ಇಷ್ಟು ಕಿಲೋಮೀಟರ್‌ಗಳ ಕಾಲುವೆ ತೋಡಿಸಬೇಕಾದರೆ ಬರೀ ಒಬ್ಬರೇ ಗುತ್ತಿಗೆದಾರರಿಗೆ ಕೊಟ್ಟರೆ ಆಗುವುದಿಲ್ಲ, ಹತ್ತು ಗುತ್ತಿಗೆ ದಾರರಿಗಾದರೂ ಕೊಡುವ ವ್ಯವಸ್ಥೆ ಮಾಡಿ ಮತ್ತು ಏಕಕಾಲದಲ್ಲಿ ಟೆಂಡರ್ ಕರೆದು, ಪ್ರಕಟಿಸಿ, ನಿಗದಿತವಾಗಿ ಆರು ತಿಂಗಳುಗಳಲ್ಲಿ ಈ ಕೆಲಸವನ್ನು ಮಾಡಿ ಮುಗಿಸಬೇಕೆನ್ನುವ ಒಂದು ಕಟ್ಟುನಿಟ್ಟಿನ ಆದೇಶ ಮಾಡಿದರೆ ಆ ಕೆಲಸವಾಗುತ್ತದೆ. ಆದರೆ, ಅನೇಕ ಸಲ ಏನಾಗುತ್ತದೆಂದರೆ, ಕೊನೆಗೆ ಅಲ್ಲಿ ಮಾಡಿದಂಥ ಅಂದಾಜು, ಭೀಮರಾಯನಗುಡಿಯಲ್ಲಾಗಲಿ, ಕೆಂಭಾವಿಯಲ್ಲಾಗಲಿ, ಜೇವರ್ಗಿಯಲ್ಲಾಗಲಿ, ಮುಳವಾಡ ಶಾಖೆಯಲ್ಲಾಗಲಿ ಇಂತಹ ಅನೇಕ ಕಡೆಗಳಲ್ಲಾದ ಕೆಲಸಗಳು ಆಲಮಟ್ಟಿಯಲ್ಲಿರುವ ಚೀಫ್ ಇಂಜಿನಿಯರ್‌ಗಳಿಗೆ ಹೋಗಬೇಕು. ಅಲ್ಲಿಗೆ ಹೋದರೆ ಅವರು ಕೆಲವ ದಿವಸ ತೆಗೆದುಕೊಳ್ಳುತ್ತಾರೆ. ಈಗ ಅವರ ಮಿತಿಯಲ್ಲಿಲ್ಲವೆಂದು ತಿಳಿದುಕೊಳ್ಳೋಣ. ಒಂದು ಕೋಟಿ ರೂಪಾಯಿವರೆಗೆ ಅವರಿಗೆ ಅಧಿಕಾರ ಕೊಟ್ಟಿದ್ದಾರೆ. ಒಂದು ಕೋಟಿ ರೂಪಾಯಿಗಿಂತ ಹೆಚ್ಚಿನ ಅಂದಾಜು ಇದ್ದರೆ ಪುನಃ ಸೆಕ್ರೆಟೇರಿಯಟ್‌ಗೆ ಬರಬೇಕು, ಸೆಕ್ರೆಟೇರಿಯಟ್‌ಗೆ ಬರಬೇಕು, ಸೆಕ್ರೆಟೇರಿಯಟ್‌ಗೆ ಬಂದಾಗ ಇಲ್ಲಿ ಆರು ತಿಂಗಳು ಬಿದ್ದಿರುತ್ತದೆ. ಅದಕ್ಕೆ ಶೇಕಡ 10, 20, 30 ಹೀಗೆ ಹೆಚ್ಚು ಕಡಿಮೆ ಎಸ್.ಆರ್. ರೇಟಿನಲ್ಲಿದ್ದರೆ ಅಪ್ರೂವಲ್‌ಗೆ ಬಂದು ಸುಮಾರು ದಿವಸಗಳ ಕಾಲ ಬಿದ್ದಿರುತ್ತದೆ.

ಅಲ್ಲಿಯವರೆಗೆ ಪ್ರತಿ ವರ್ಷ ನಿಮ್ಮ ಫಿಸಿಕಲ್ ಟಾರ್ಗೆಟ್ ಏನಿರುತ್ತದೆ, ಅದೂ ಸಹ ಮುಟ್ಟುವುದಿಲ್ಲ. ಇದಲ್ಲದೆ, ಇನ್ನೊಂದು ವಿಚಾರವನ್ನು ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಬೇಕೆಂದಿದ್ದೇನೆ. ಸದನದಲ್ಲಿ ಸಣ್ಣ ನೀರಾವರಿ ಮಂತ್ರಿಗಳಿದ್ದಾರೆ, ಮಧ್ಯಮ ಮತ್ತು ಭಾರಿ ನೀರಾವರಿ ರಾಜ್ಯ ಸಚಿವರಾದರೂ ಇರಬೇಕಾಗಿತ್ತು, ಅವರೂ ಕೂಡ ಇಲ್ಲ. ಅನೇಕ ಸಲ ಏನು ಮಾಡುತ್ತೇವೆ ಎಂದರೆ ಆಯವ್ಯಯದಲ್ಲಿ ಹಂಚಿಕೆ ಮಾಡಿ ತೋರಿಸುವುದು, ನಂತರ ಹಣವನ್ನು ಬಿಡುಗಡೆ ಮಾಡುವುದಿಲ್ಲ. ಒಂದು ವೇಳೆ ದುಡ್ಡನ್ನು ಬಿಡುಗಡೆ ಮಾಡಿದರೂ ಅಲ್ಲಿ ಅನೇಕ ಪ್ರಾಜೆಕ್ಟ್‌ಗಳ ಹೆಸರಿನ ಮೇಲೆ ಸ್ಟೀಲ್, ಸಿಮೆಂಟ್ ಮತ್ತು ಅನೇಕ ವಸ್ತುಗಳನ್ನು ಅಲ್ಲಿಯೇ ಖರೀದಿಸಿ ಕೊನೆಗೆ ಇನ್ನೊಂದು ಕಡೆಗೆ ಡೈವರ್ಟ್ ಮಾಡುತ್ತಾರೆ. ಏಕೆಂದರೆ, ಅವರಿಗೆ ಅಧಿಕಾರವಿರುತ್ತದೆ. ಇದನ್ನು ರೀ-ಅಪ್ರೊಪ್ರಿಯೇಟ್ ಎನ್ನುತ್ತೀರೋ, ಏನನ್ನುತ್ತೀರೋ ಗೊತ್ತಿಲ್ಲ. ಏಕೆಂದರೆ, ಮೆಟೀರಿಯಲ್ ಅನ್ನು ಶಿಫ್ಟ್ ಮಾಡುವಾಗ ಇದಕ್ಕೆ ಏನೆಂದು ಹೇಳಬೇಕೋ ಗೊತ್ತಿಲ್ಲ. ಕೆಲವು ಸಲ, ಇಲ್ಲಿಯವರೆವಿಗೂ ಮಾಡುತ್ತಾರೆ. ಅಲ್ಲದೆ, ಅನೇಕ ಸಲ ವಿಳಂಬ ಮಾಡುವುದಕ್ಕೆ ಕಾರಣವೇನೆಂದರೆ, ಬಜೆಟ್‌ನಲ್ಲಿ ಒಂದು ಕೋಟಿ ರೂಪಾಯಿ ಹಣ ಕೊಟ್ಟಿದ್ದಾರೆ, ಈ ವರ್ಷ ಸಾಕಷ್ಟು ಕೆಲಸವಾಗುತ್ತದೆಂದು ನಾವು ತಿಳಿದುಕೊಳ್ಳಬೇಕು. ಆದರೆ, ಅಂದಾಜು ಮಾಡಿಸುವುದಕ್ಕೆ, ಟೆಕ್ನಿಕಲ್ ಅಪ್ರೂವಲ್ ಮಾಡಿಸುವುದಕ್ಕೆ ಮತ್ತು ಅಡ್ಮಿನಿಸ್ಟ್ರೇಷನ್ ಅಪ್ರೂವಲ್ ಮಾಡಿಸುವುದಕ್ಕೆ ವಿಳಂಬವಾಗುತ್ತದೆ. ಇವೆಲ್ಲಾ ಆದ ನಂತರ ಕೆಲವು ಸಲ ಅಲ್ಲಿಗೆ ಅಧಿಕಾರಿಗಳನ್ನು ಹಾಕುವುದಿಲ್ಲ. ಹಾಕಿದರೂ ಅವರು ಹೋಗುವುದಿಲ್ಲ.

ಇಂತಹ ಪರಿಸ್ಥಿತಿ ಅಲ್ಲಿರುವಾಗ ನೀವು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? ಅದರ ಬಗ್ಗೆ ನಾನು ನಂತರ ಹೇಳುತ್ತೇನೆ. ಜನತಾ ದಳ ಅಧಿಕಾರಕ್ಕೆ ಬಂದು ನಾಲ್ಕು ತಿಂಗಳು ಆಯಿತಲ್ಲಾ, ಇದು ಬಹಳ ಮಹತ್ವವಾದ ಪ್ರಾಜೆಕ್ಟ್ ಆಗಿದೆ. ಐದು ವರ್ಷಗಳಲ್ಲಿ ಪೂರ್ತಿಗೊಳಿಸಬೇಕೆಂಬ ಪ್ರಾಜೆಕ್ಟ್‌ಗೆ ಈಗಾಗಲೇ ಒಂದು ವರ್ಷವಾಯಿತು, ವರ್ಕಿಂಗ್ ಸೀಜನ್ ಎನ್ನುವುದು ಹೋಯಿತು. ಮೇ ತಿಂಗಳು

ಹೋದರೆ ವರ್ಕಿಂಗ್ ಸೀಜನ್ ಇಲ್ಲ, ಜೂನ್ ತಿಂಗಳಿನಲ್ಲಿ ಮಳೆಗಾಲ, ಜುಲೈ, ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ತಿಂಗಳವರೆಗೆ ನೀವು ಯಾವ ಕೆಲಸವನ್ನೂ ಮಾಡುವುದಕ್ಕಾಗುವುದಿಲ್ಲ. ಆದುದರಿಂದ, ನಮಗೆ ನಿರ್ದಿಷ್ಟವಾದ ಉತ್ತರ ಬೇಕು. ನಾವು ಅಪೇಕ್ಷಿಸಿದುದ್ದು ಏನೆಂದರೆ, ಅವರು ತೋರಿಸಿದಂಥ ನಿಗಮದಿಂದ ಹಣ ಸಂಗ್ರಹಿಸಿ, ಈ ಕೆಲಸವನ್ನು ಜಾರಿಗೆ ತರುತ್ತೇವೆಂದು ಏನು ಹೇಳಿದ್ದಾರೆ, ಇದನ್ನು ಬಿಟ್ಟು ಅವರು ಇದಕ್ಕೊಂದು ವಿಶೇಷ ಇಡಬೇಕಾಗಿತ್ತು. ಆಯವ್ಯಯದಲ್ಲಿ 200-300 ಕೋಟಿ ರೂಪಾಯಿಗಳ ಸಪರೇಟ್ ಪ್ರಾವಿಷನ್ ಇಟ್ಟು, ಅದಕ್ಕೆ ಬೇಕಾದ ರೀತಿಯಲ್ಲಿ ಈ ಹಣವನ್ನು ಕೂಡ ಸಂಗ್ರಹಿಸಿದ್ದರೆ, ಅವರ ಉದ್ದೇಶ ಸರಿಯಾಗಿದೆ, ಒಂದು ನಿಯತ್ತಿನಿಂದ ಕೆಲಸ ಮಾಡುತ್ತಿದ್ದಾರೆಂದು ನಮಗನ್ನಿಸುತ್ತಿತ್ತು. ಆದರೆ, ಅದರಲ್ಲಿ ಹಣ ಇಡದೇ ಜನರಿಂದ ನಾವು ಹಣ ಸಂಗ್ರಹಿಸಿ ಈ ಕೆಲಸ ಮಾಡುತ್ತೇವೆಂದು ತಾವು ಏನು ಹೇಳುತ್ತಿದ್ದೀರಿ, ಇದರಿಂದ ನಿಜವಾಗಿಯೂ ಆ ಭಾಗದ ಜನತೆಗೆ ದ್ರೋಹವೆಸಗಿದಂತಾಗುತ್ತದೆನ್ನುವ ಮಾತು ಈ ಆಯವ್ಯಯದಿಂದ ಸ್ಪಷ್ಟವಾಗುತ್ತದೆಂದು ನಾನು ಹೇಳಬೇಕಾಗುತ್ತದೆ.

ಆ ಭಾಗದ ಜನರು ಎಂದು ಹೇಳುವುದಕ್ಕಿಂತ ಈ ಆಯವ್ಯಯದಲ್ಲಿ ನಿಮ್ಮ ನಿಯತ್ತು, ನೀವು ಮಾಡಿದ ಪ್ರಾವಿಷನ್ ಅನ್ನು ನೋಡಿದಾಗ ನಾನು ಇದನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ, ಅದನ್ನು ನಿರ್ಲಕ್ಷಿಸಬೇಕೆಂದು ಮನಸ್ಸು ಮಾಡಿದ್ದೀರಿ, ಅದನ್ನು ಕಡಿಮೆ ಗೊಳಿಸಬೇಕೆಂಬ ಉದ್ದೇಶ ನಿಮ್ಮದ್ದಾಗಿದೆ ಎನ್ನುವುದು ಇದರಿಂದ ಸ್ಪಷ್ಟವಾಗಿ ಜಗಜ್ಜಾಹೀರಾಗುತ್ತದೆ. ಎರಡನೆಯದಾಗಿ, ನಾವು ಅಧಿಕಾರ ವಹಿಸಿಕೊಂಡು 4-5 ತಿಂಗಳಾಯಿತು, ಅದಕ್ಕೋಸ್ಕರ ನೀವು ಈ ರೀತಿ ದೂರುವುದು ಸರಿಯಲ್ಲವೆಂದು ಅವರಿವರು ಹೇಳಿದರೆಂದು ನಾನು ಹೇಳುತ್ತಿಲ್ಲ.

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಹಿರಿಯ ಸದಸ್ಯರು ಬಹಳ ಗಂಭೀರವಾದ ವಿಚಾರಗಳನ್ನು ಪ್ರಸ್ತಾಪಿಸುತ್ತಿದ್ದು, ಜೊತೆಗೆ ಆಪಾದನೆಗಳನ್ನೂ ಮಾಡುತ್ತಿದ್ದಾರೆ. ಅದನ್ನು ಕಡೆಗಣಿಸಬೇಕೆಂಬ ವಿಷಯ ಸರ್ಕಾರದ ಮನಸ್ಸಿನಲ್ಲಿದೆಯೆಂದು ಹೇಳುತ್ತಿದ್ದಾರೆ. ಸದನದಲ್ಲಿ ಕಂದಾಯ ಸಚಿವರಾದ ಜಾಲಪ್ಪನವರು ಇದ್ದು, ಅವರು ಕಡತಗಳನ್ನು ನೋಡುತ್ತಿದ್ದಾರೆ. ಇಂತಹ ವಿಚಾರಗಳು ಪ್ರಸ್ತಾಪವಾಗುತ್ತಿರುವಾಗ ಸಂಬಂಧಿಸಿದ ಯಾರೂ ಮಂತ್ರಿಗಳಿಲ್ಲವೆಂದರೆ.....

ಅಧ್ಯಕ್ಷರು : ಸನ್ಮಾನ್ಯ ಮುಖ್ಯಮಂತ್ರಿಗಳು ನನ್ನನ್ನು ಸಂಪರ್ಕಿಸಿ ಮಾತನಾಡಿದ್ದಾರೆ.

ಶ್ರೀ ಹೆಚ್.ಎನ್. ನಂಜೇಗೌಡ : ನಾವು ಈಗ ಎದುರುಗಡೆ ಇರುವ ಖಾಲಿ ಕುರ್ಚಿಗೆ ಮಾತನಾಡಿಕೊಂಡು ಕುಳಿತುಕೊಳ್ಳುವುದೇ?

ಅಧ್ಯಕ್ಷರು : ನಿನ್ನೆ ಈ ವಿಚಾರವಾಗಿ ಸನ್ಮಾನ್ಯ ವೀರಪ್ಪ ಮೊಯಿಲಿಯವರೂ ಕೇಳಿದಂತೆ ಅನೇಕ ಸದಸ್ಯರುಗಳು ಪ್ರಸ್ತಾಪಿಸಿರುವುದಕ್ಕೆ ಸನ್ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡಬೇಕಾದರೆ, ಅದಕ್ಕೆ ಸಂಬಂಧಿಸಿದಂತೆ ಕೆಲವು ಮಾಹಿತಿಗಳನ್ನು ಪಡೆದುಕೊಂಡು, ಅಧಿಕಾರಿಗಳ ಜೊತೆ ಚರ್ಚಿಸಿ ಸಿದ್ಧವಾಗಿ ಬರಬೇಕಾಗುತ್ತದೆ. ನಾನು ಬರುವವರೆಗೆ ಸದನದಲ್ಲಿ ಸಣ್ಣ ನೀರಾವರಿ ಸಚಿವರಿರುತ್ತಾರೆ, ಅವರು ಮಾನ್ಯ ಸದಸ್ಯರುಗಳು ಪ್ರಸ್ತಾಪಿಸುವ ಎಲ್ಲಾ ಅಂಶಗಳನ್ನೂ ಟಿಪ್ಪಣಿ ಮಾಡಿಕೊಡುತ್ತಾರೆ, ನಂತರ, ನಾನು ಉತ್ತರ ಕೊಡಲು ತಯಾರಾಗಿ ಬರಬೇಕಾಗುತ್ತದೆ ಎಂದು ಹೇಳಿದ್ದಾರೆ.

ಅಧ್ಯಕ್ಷರು : ನಿನ್ನೆ ಮಾತನಾಡಿರುವುದಕ್ಕೆ ನೀವು ಏಕೆ ಹೀಗೆ ಮಾತನಾಡುತ್ತೀರಿ? ಇವೊತ್ತು ಮೂರು ಜನ ಸದಸ್ಯರುಗಳು ಮಾತ್ರ ಚರ್ಚೆಯಲ್ಲಿ ಪಾಲ್ಗೊಳ್ಳಬೇಕಾಗಿರುವುದು. ಚರ್ಚೆಯಾಗುವಾಗ ಸದನದಲ್ಲಿ ಬೇರೆ ಸಚಿವರಿದ್ದು, ಅವರು ಹೇಳುವ ಅಂಶಗಲನ್ನೆಲ್ಲಾ ಟಿಪ್ಪಣಿ ಮಾಡಿಕೊಂಡು, ಮುಖ್ಯಮಂತ್ರಿಗಳು ಸದನಕ್ಕೆ ಬಂದ ನಂತರ ಅವರಿಗೆ

ಕೊಟ್ಟರೆ ಅದಕ್ಕೂ ಉತ್ತರ ತಯಾರಿಸಿ ಕೊಡುತ್ತಾರೆ. ನಿನ್ನೆ ಸುಮಾರು ಜನ ಸದಸ್ಯರು ಮಾತನಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಇದರ ಬಗ್ಗೆ ತಾವು ಕೊಡುವ ಸಮಜಾಯಿಷಿಗೆ ನಾವು ಇಲ್ಲಿ ಕುಳಿತುಕೊಳ್ಳಬೇಕಷ್ಟೆ. ಮುಖ್ಯಮಂತ್ರಿಗಳು ಪ್ರಾಮಾಣಿಕವಾಗಿ ಸದನದಲ್ಲಿರಬೇಕು. ಏಕೆಂದರೆ, ಪ್ರಾಮುಖ್ಯವಾದ ವಿಚಾರ ಚರ್ಚೆಯಾಗುತ್ತಿದ್ದು, ಅವರು ಕಛೇರಿಯಲ್ಲಿ ಕುಳಿತುಕೊಂಡು ಅಧಿಕಾರಿಗಳ ಜೊತೆ ಚರ್ಚೆ ಮಾಡುತ್ತಾರೆಂದು ಹೇಳಿದರೆ ಹೇಗೆ?

ಅಧ್ಯಕ್ಷರು : ಹಾಗಲ್ಲ, ನಿನ್ನೆ ಸನ್ಮಾನ್ಯ ನಂಜೇಗೌಡರು, ವೀರಪ್ಪ ಮೊಯಿಲಿಯವರೂ ಸೇರಿದಂತೆ ಅನೇಕ ಹಿರಿಯ ಸದಸ್ಯರು ಮಾತನಾಡಿ ಬಹಳ ಗಂಭೀರವಾದ ವಿಚಾರ ಪ್ರಸ್ತಾಪಿಸಿದ್ದಾರೆ. ಅದಕ್ಕೆಲ್ಲಾ ಇಲ್ಲಿ ಸುಮ್ಮನೆ ಕುಳಿತು ಉತ್ತರ ಕೊಡುವುದಕ್ಕಾಗುವುದಿಲ್ಲ. ನಿನ್ನೆ 8.30 ಗಂಟೆವರೆಗೂ ಸದನ ನಡೆಸಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ (ಮುಖ್ಯಮಂತ್ರಿಗಳು) : ಇಲ್ಲಿ ಸುಮ್ಮನೆ ಕುಳಿತುಕೊಳ್ಳುವುದಿಲ್ಲ, ಅವರು ಇರಲೇಬೇಕು. ಇಂತಹ ಗಂಭೀರವಾದ ವಿಷಯಗಳ ಕುರಿತು ಚರ್ಚೆಯಾಗುವಾಗ ಕುಳಿತುಕೊಂಡು ಕೇಳಬೇಕು. ಇಲ್ಲಿ ಏನಾಗಿದೆಯೆಂದರೆ, ಒಂದು ಕಡೆ ಒಬ್ಬ ಅಧಿಕಾರಿ ಇಲ್ಲ, ತಾವು ಸ್ವಲ್ಪ ನೋಡಿ.

ಅಧ್ಯಕ್ಷರು : ಸದನದಲ್ಲಿ ಅವರು ಕುಳಿತಿದ್ದರೆ ಉತ್ತರ ಕೊಡುವುದಾದರೂ ಹೇಗೆ? ಈಗ ಚರ್ಚೆಯಾದ ಬಳಿಕ ಉತ್ತರ ಶುರುವಾಗಬೇಕಲ್ಲಾ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಹೊಸ ಪದ್ಧತಿಯೇನಲ್ಲ. ಇದು ಅವರ ಹೊಸ ಕನ್‌ವೆನ್‌ಷನ್. ಹೀಗಾದರೆ ನಮಗೆ ನಾಳೆಯೇ ಉತ್ತರ ಕೊಡಲಿ.

ಅಧ್ಯಕ್ಷರು : ನಿನ್ನೆ ದಿವಸವೇ ಬಹುತೇಕ ಸದಸ್ಯರು ಮಾತನಾಡಿದ್ದಾರೆ. ಇವೊತ್ತು ವಾಟಾಳ್ ನಾಗರಾಜ್ ಮತ್ತು ಬಂಗಾರಪ್ಪನವರನ್ನು ಬಿಟ್ಟರೆ ಹೆಚ್ಚಿನ ಸದಸ್ಯರು ಮಾತನಾಡುವವರು ಇರಲಿಲ್ಲ. ಈ ಮೂರೂ ಜನ ಸದಸ್ಯರುಗಳು ಮಾತನಾಡುವಾಗ ಮುಖ್ಯವಾದ ವಿಷಯಗಳನ್ನು ಟಿಪ್ಪಣಿ ಮಾಡಿಕೊಳ್ಳಬೇಕೆಂದು ಲೀಲಾದೇವಿ ಆರ್. ಪ್ರಸಾದ್ ಅವರಿಗೆ ಒಪ್ಪಿಸಿದ್ದಾರೆ. ನಿನ್ನೆಯೇ major portion of the debate ಆಗಿರುವುದರಿಂದ ಅದಕ್ಕೆ ಉತ್ತರ ಕೊಡಲು ತಯಾರಾಗಿ ಬರುತ್ತಿದ್ದಾರೆ.

ಶ್ರೀ ಹೆಚ್.ಎನ್. ನಂಜೇಗೌಡ : ಅವರು ಇಲ್ಲಿ ಬಂದು ಕುಳಿತುಕೊಳ್ಳಲಿ ಎಂದು ಹೇಳಲಿಲ್ಲ. ಈಗ 5-6 ಜನ ಮಂತ್ರಿಗಳು ಬಂದರು. ಆದರೆ ಎದುರುಗಡೆ ಖಾಲಿ ಕುರ್ಚಿಗಳಿದ್ದರೆ ಇದರ ಬಗ್ಗೆ ಉಪಮುಖ್ಯಮಂತ್ರಿಗಳಾದ ಜೆ.ಹೆಚ್. ಪಟೇಲ್‌ರವರು "ಹೊರಗಡೆಯಿರುವ ಎಲ್ಲಾ ಜನರು ನಮ್ಮನ್ನು, ಈ ಸಭೆಯನ್ನು ನೋಡುತ್ತಾರೆ" ಎಂದು ಹೇಳುತ್ತಿದ್ದರು.

ಅಧ್ಯಕ್ಷರು : ಜಾಲಪ್ಪನವರು ಈಗ ಮ್ಯಾಗ್ನಿಫೈಯಿಂಗ್ ಪರ್ಸನ್. ಅವರೊಬ್ಬರಿದ್ದರೆ ಅನೇಕರಿದ್ದಂತೆ.

ಶ್ರೀ ಹೆಚ್.ಎನ್. ನಂಜೇಗೌಡ : ಇನ್ನು ಮೇಲೆ ಏನಾಗುತ್ತದೆಂದರೆ, ಸಣ್ಣಪುಟ್ಟ ವಿಧೇಯಕಗಳಿಗೆ ವೋಟ್ ಹಾಕುವುದಕ್ಕೆ ಮಾತ್ರ ಎಲ್ಲರೂ ಬಂದು ಕುಳಿತುಕೊಳ್ಳುತ್ತಾರೆ ಎನ್ನುವ ಲೆಕ್ಕಾಚಾರಕ್ಕೆ ನಾವು ಬರಬೇಕಾಗಿದೆ.

ಶ್ರೀ ಮಂಜುನಾಥ ಸಿ. ಕುನ್ನೂರು : ಅಧ್ಯಕ್ಷರೆ, ಮೇಲ್ಗಡೆ ಕುಳಿತಿರುವ ಜನರು ಇಲ್ಲಿ ಕುಳಿತಿರುವವರಿಗಿಂತ ಜಾಸ್ತಿ ಇದ್ದಾರೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸದಸ್ಯರಾದ ಮಲ್ಲಿಕಾರ್ಜುನ ಖರ್ಗೆಯವರು ಪ್ರಸ್ತಾಪಿಸುತ್ತಿರುವ ಪ್ರತಿಯೊಂದೂ ಅಂಶವನ್ನು

ನಾನು ಟಿಪ್ಪಣಿ ಮಾಡಿಕೊಳ್ಳುತ್ತಿದ್ದು, ಮುಖ್ಯಮಂತ್ರಿಗಳು ತಮ್ಮ ಉತ್ತರ ಕೊಡುವುದಕ್ಕಿಂತ ಮುಂಚಿತವಾಗಿ ನಾನು ಟಿಪ್ಪಣಿ ಮಾಡಿಕೊಂಡಿರುವುದನ್ನು ಅವರ ಗಮನಕ್ಕೆ ತರುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಭಾರಿ ನೀರಾವರಿಗೆ ಇನ್ನೊಬ್ಬರು ಸಚಿವರಿರುವುದು ನಮಗೆ ಗೊತ್ತಿರಲಿಲ್ಲ, ಅವರು ಯಾರು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಇಲ್ಲಿಯೇ ಸದನದಲ್ಲಿದ್ದಾರೆ, ನೋಡಿ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಮುಖ್ಯಮಂತ್ರಿಗಳು ಈ ಸದನಕ್ಕೆ ತಮ್ಮ ಸಚಿವ ಸಂಪುಟದ ಸದಸ್ಯರುಗಳನ್ನು ಪರಿಚಯ ಮಾಡಿಸಲಿಲ್ಲ. ಈಗ ಭಾರಿ ನೀರಾವರಿ ಖಾತೆಗೆ ಇನ್ನೊಬ್ಬರು ಸಚಿವರಿದ್ದಾರೆಂದು ನಮಗೆ ಗೊತ್ತಾಯಿತು. ಇಂತಹ ಪರಿಸ್ಥಿತಿ ಬರಬಾರದು. ಏಕೆಂದರೆ, ಒಂದು ಗಂಭೀರವಾದ ವಿಷಯದ ಬಗ್ಗೆ ಇಲ್ಲಿ ಚರ್ಚೆಯಾಗುತ್ತಿರುವಾಗ.....

ಅಧ್ಯಕ್ಷರು : ಇಲ್ಲಿ ಅಪರಿಚಿತರು ಯಾರೂ ಇಲ್ಲ. ನಿಮಗೆ ಅವರ ಪರಿಚಯದ ಕೊರತೆ ಇದ್ದರೆ, ನಾನು ಒಂದು ಸಲ ನಿಮಗೆ ಹೇಳುತ್ತೇನೆ, ಸಹಾಯ ಮಾಡುತ್ತೇನೆ. ನನಗೆ ಸಚಿವ ಸಂಪುಟದ ಸದಸ್ಯರೆಲ್ಲರೂ ಪರಿಚಯವಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಒಂದೊಂದು ಸಲ ತಮಗೂ ಪರಿಚಯ ತಪ್ಪುತ್ತದೆಂದು ಅನಿಸುತ್ತದೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ವಾಟಾಳ್ ನಾಗರಾಜ್‌ರವರಿಗೆ ಎಲ್ಲರ ಪರಿಚಯವೂ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ನೇರವಾಗಿ ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ಸಣ್ಣ ಉಳಿತಾಯದಲ್ಲಿ ಹಣ ಸಂಗ್ರಹಿಸಬೇಕೆಂದರೆ ನಾವು ಇಡೀ ರಾಜ್ಯದ ಎಲ್ಲಾ ಸಿಬ್ಬಂದಿ ವರ್ಗದವರನ್ನು ತೊಡಗಿಸಿ ಗುರಿಯನ್ನು ಮುಟ್ಟುವುದಕ್ಕೋಸ್ಕರ ಒತ್ತಾಯಿಸಿ ಸಣ್ಣ ಉಳಿತಾಯವನ್ನು ತಾವು ಸಂಗ್ರಹಿಸುತ್ತೀರಿ.

ನಿಮಗೆ ನಿಮ್ಮ ಗುರಿಯಂತೆ ವಸೂಲಿ ಮಾಡಲು ಸಾಧ್ಯವಾಗದಿದ್ದ ಪಕ್ಷದಲ್ಲಿ, ಕೇವಲ ಎಂಟು ತಿಂಗಳಿನಲ್ಲಿ ಈ ಹಣವನ್ನು ಹೇಗೆ ವಸೂಲಿ ಮಾಡುತ್ತೀರಿ? ಇದು ಹೇಗೆ ಸಾಧ್ಯ? ಇಲ್ಲದಿದ್ದರೆ ಹಣವನ್ನು ಪ್ರಿಂಟ್ ಮಾಡಿಸಬೇಕು, ಇದರ ಬಗ್ಗೆ ಅವರು ಬಹಳ ಸೀರಿಯಸ್ ಆಗಿ ಯೋಚನೆ ಮಾಡಿ ಯಾವುದಾದರೊಂದು ಮೂಲದಿಂದ ಎನ್‌ಆರ್‌ಐನಿಂದ ಏನಾದರೂ ಹಣವನ್ನು ತರಿಸಿಕೊಳ್ಳುತ್ತಾರೋ ಅಥವಾ ಹೊಸ ಉದಾರೀಕರಣ ನೀತಿಯ ಅನ್ವಯ ಏನು ದೊಡ್ಡ ದೊಡ್ಡ ಕೈಗಾರಿಕೋದ್ಯಮಿಗಳು ಬರುತ್ತಿದ್ದಾರಲ್ಲಾ ಅವರಿಂದ ಏನಾದರೂ ತರಿಸಿಕೊಳ್ಳುತ್ತಾರೋ ಏನೋ ಎಂಬುದನ್ನು ಹೇಳಬೇಕು. ಏಕೆಂದರೆ ಇದನ್ನು ಮಾಡಲು ಹಣ ಬೇಕಲ್ಲವೇ? ಪ್ರದೇಶದಲ್ಲಿರುವ ಸುಮಾರು 9 ತಾಲ್ಲೂಕುಗಳಿಗೆ ಇದರಿಂದ ನೀರು ಸಿಗುತ್ತದೆ. ಈ ಕೃಷ್ಣಾ ಪ್ರಾಜೆಕ್ಟ್‌ನಿಂದ ಇಡೀ ಗುಲ್ಬರ್ಗಾ, ಬಿಜಾಪುರ, ರಾಯಚೂರು ಜಿಲ್ಲೆಗಳಿಗೆ ನೀರು ಬರುತ್ತದೆಂದು ತಿಳಿದುಕೊಳ್ಳಬಾರದು.

ಗುಲ್ಬರ್ಗಾದಲ್ಲಿ 10 ತಾಲ್ಲೂಕುಗಳಲ್ಲಿ ಮೂರು ತಾಲ್ಲೂಕುಗಳು ಅಂದರೆ ಶಹಪುರ್, ಸುರ್‌ಪುರ್ ಮತ್ತು ಜೇವರ್ಗಿಗೆ ನೀರು ಸಿಗುತ್ತದೆ, ಬಿಜಾಪುರದಲ್ಲಿ ಇಂಡಿ ಮತ್ತು ಸಿಂಧಗಿ, ಮುದ್ದೆಬಿಹಾಳ್ ಬಸವನ ಬಾಗೇವಾಡಿಗಳಿಗೆ, ರಾಯಚೂರಿನಲ್ಲಿ ಲಿಂಗಸೂರಿಗೆ ಮಾತ್ರ ನೀರು ಸಿಗುತ್ತದೆ. ಈ ರೀತಿ 9 ತಾಲ್ಲೂಕುಗಳಲ್ಲಿ ಮಾತ್ರ ಇದಕ್ಕಿಂಥ ನೀರು ದೊರೆಯುತ್ತದೆ. ಅದೂ ಸಹ ನೀವು ಹಣವನ್ನು ಕೊಟ್ಟು ಈ ಯೋಜನೆ ಮಾಡಿದರ ಆದ್ದರಿಂದ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ ಕೊನೆಯ ಪಕ್ಷ ಇದಕ್ಕೆ ಹೋದ ಸಲವೇನು 200-250 ಕೋಟಿ ಪ್ರಾವಿಷನ್ ಇತ್ತು. ಅಷ್ಟು ಹಣವನ್ನು

ಒದಗಿಸಿ ಅನಂತರ ನಿಗಮದ ಮೂಲಕ ಹಣವನ್ನು ಸಂಗ್ರಹಣೆ ಮಾಡತಕ್ಕ ವ್ಯವಸ್ಥೆ ಮಾಡಿಕೊಳ್ಳಬೇಕು. ಇಲ್ಲದಿದ್ದರೆ ಈ ಯೋಜನೆ ಈ ವರ್ಷ ಮುಂದುವರೆಯುವುದಿಲ್ಲ, ಇದನ್ನು ನೀವಾಗಿಯೇ ನಿರ್ಲಕ್ಷ್ಯ ಮಾಡಿದಂತಾಗುತ್ತದೆ. ಮತ್ತು ರಾಯಚೂರಿನಲ್ಲಿ ಇದರ ಬಗ್ಗೆ ಗಲಾಟೆಯಾಗಿ ಬಲದಂಡೆ ನಾಲೆಯನ್ನು ಮಾಡಬೇಕು ಇಲ್ಲದಿದ್ದರೆ ನಾವು ಚಳುವಳಿ ಮಾಡುತ್ತೇವೆಂದು ಅಲ್ಲಿನ ಜನರು ಸನ್ಮಾನ್ಯ ಮುನಿಯಪ್ಪನವರಿಗೆ ತಿಳಿಸಿದ್ದಾರೆ. ಈ ಪರಿಸ್ಥಿತಿ ಇದ್ದರೂ ಸಹ ನಾವು ಏಕೆ ಆ ಕಡೆ ಅಲಕ್ಷ್ಯ ಮಾಡುತ್ತಿದ್ದೇವೆ ಎನ್ನತಕ್ಕ ಮಾತನ್ನು ತಮ್ಮಲ್ಲಿ ಕೇಳುತ್ತೇನೆ. ನಾವು ಕೃಷ್ಣ ಮೇಲ್ದಂಡೆ ಯೋಜನೆಯ ಬಗ್ಗೆ ಮತ್ತು ಇತರೆ ಅನೇಕ ಯೋಜನೆಯ ಬಗ್ಗೆ ಮಾತನಾಡುತ್ತೇವೆ. ಆದರೆ ಅಧಿಕಾರಕ್ಕೆ ಬಂದಾಗ ಅದರ ಕಡೆಗೆ ಲಕ್ಷ್ಯ ಕೊಡುವುದಿಲ್ಲ. ಇದು ದುರ್ದೈವವೋ, ಸುದೈವವೋ ಗೊತ್ತಾಗುತ್ತಿಲ್ಲ, ಈ ಒಂದು ಇಲಾಖೆ ಯಾವಾಗಲೂ ಸಹ ಮುಖ್ಯಮಂತ್ರಿಗಳ ಹತ್ತಿರವೆ ಇರುತ್ತದೆ. ಆ ರೀತಿ ಇದ್ದರೂ ಸಹ ನಾವು ಏನು ಯೋಜನೆಯ ಕಾರ್ಯದಲ್ಲಿ ಅಪೇಕ್ಷೆ ಪಟ್ಟಿರುತ್ತೇವೊ ಅದರ ಪ್ರಕಾರ ಮುಂದೆ ಹೋಗುತ್ತಿಲ್ಲ. ಇದನ್ನು ನಾನು ಬಹಳ ಕಾಲದಿಂದಲೂ ಸಹ ನೋಡುತ್ತಿದ್ದೇನೆ.

ಮೇಜರ್ ಇರಿಗೇಷನ್ ಇಲಾಖೆ ಎಲ್ಲಾ ಕಾಲದಲ್ಲಿಯೂ ಮುಖ್ಯಮಂತ್ರಿಗಳ ಹತ್ತಿರವೇ ಇರುತ್ತದೆ. ನೀವು ಅಧಿಕಾರಕ್ಕೆ ಬಂದು ನಾಲ್ಕು ತಿಂಗಳಾಯಿತೆಂದು ಹೇಳತಕ್ಕದ್ದಲ್ಲ, ಶ್ರೀಮಾನ್ ದೇವರಾಜ್ ಅರಸುರವರ ಕಾಲದಲ್ಲಿ 1972ರಲ್ಲಿ ಈ ಯೋಜನೆ ಪ್ರಾರಂಭವಾಯಿತು. ಮಾನ್ಯ ನಂಜೇಗೌಡರು ಆ ಇಲಾಖೆಯಲ್ಲಿ ಒಂದು ವರ್ಷ ಹತ್ತು ತಿಂಗಳು ಇದ್ದರು, ಇವರು ಏಳು ವರ್ಷ ಇದ್ದರು. ಒಟ್ಟು ಒಂಭತ್ತು ವರ್ಷವಾಯಿತು. ನಾವು ಬಂದು ನಾಲ್ಕೇ ತಿಂಗಳಾಯಿತು ಎನ್ನತಕ್ಕ ಮಾತನ್ನು ಅವರಿಂದ ಅಪೇಕ್ಷೆ ಪಡುವುದಿಲ್ಲ, ನಿಮಗೆ ಅದರ ಮಾಹಿತಿ ಇದೆ, ಆ ಕೆಲಸದ ಬಗ್ಗೆ ತಮಗೆ ಗೊತ್ತಿದೆ, ಅಲ್ಲಿ ಓಡಾಡಿದ್ದೀರಿ, ಕೃಷ್ಣಾ ಮೇಲ್ದಂಡೆ ಯೋಜನೆಯ ಅಲ್‌ಮಟ್ಟಿ ಇರಬಹುದು, ನಾರಾಯಣ್‌ಪುರದು ಇರಬಹುದು ಇಂಡಿ ಬ್ರಾಂಚ್‌ದು ಇರಬಹುದು, ಹಿಪ್ಪರಗಿ ಬ್ಯಾರೇಜ್‌ದು ಇರಬಹುದು ಯಾವುದೇ ಇದ್ದರೂ ಸಹ ಪ್ರತಿಯೊಂದರ ಬಗ್ಗೆ ಮಾಹಿತಿ ಇದೆ, ಆದರೂ ಸಹ ತಾವು ಈ ರೀತಿಯಾದ ನಿರ್ಣಯವನ್ನು ತೆಗೆದುಕೊಳ್ಳಲು ಕಾರಣವೇನು? ತಾವು ಏಕೆ ಇದರ ಬಗ್ಗೆ ಅಲಕ್ಷ್ಯ ಮಾಡಿದ್ದೀರಿ ಎನ್ನತಕ್ಕ ಮಾತನ್ನು ಉತ್ತರದಲ್ಲಿ ಹೇಳಬೇಕು. ತುಂಗಭದ್ರಾದ ಬಗ್ಗೆ ನಿನ್ನೆ ದಿವಸ ವೀರಪ್ಪ ಮೊಯ್ಲಿರವರು, ವಿರೂಪಾಕ್ಷಪ್ಪನವರು ಮತ್ತು ಶ್ರೀರಂಗದೇವರಾಯರವರು ಪ್ರಸ್ತಾಪ ಮಾಡಿದ್ದಾರೆ. ತುಂಗಭದ್ರಾ ಎಡದಂಡೆ ಮುಖ್ಯ ಕಾಲುವೆಯ ಮೂಲಕ ರಾಯಚೂರಿಗೆ ಕೊಡತಕ್ಕಂಥ ನೀರೇನಿದೆ, ಅದನ್ನು ಕೊಟ್ಟಿದ್ದೇವೆ.

ಮತ್ತೆ 8ನೇ ತಾರೀಖು ಆದಮೇಲೆ ಸ್ವಲ್ಪವೂ ಸಹ ನೀರನ್ನು ಕೊಡಲು ಸಾಧ್ಯವಿಲ್ಲವೆನ್ನತಕ್ಕ ಮಾತನ್ನು ಈ ಸಭೆಯಲ್ಲಿ ಹೇಳಿದ್ದಾರೆ. ಆದರೆ ಅಲ್ಲಿ ವಾಸ್ತವಿಕವಾದ ಸ್ಥಿತಿ ಏನಿದೆ ಎಂದರೆ ಗಂಗಾವತಿ, ಸಿಂಧನೂರ್ ಮತ್ತು ಮಾನವಿ ಈ ಮೂರು ತಾಲ್ಲೂಕಿಗೆ ಉಪಯೋಗವಾಗಿರತಕ್ಕ ಈ ನೀರನ್ನು ಮತ್ತು ಇವರಿಗೆ ಕೊಡತಕ್ಕಂಥ 78 ಟಿಎಂಸಿ ನೀರಿನಲ್ಲಿ ಇಲ್ಲಿಯವರೆಗೆ 70 ಟಿಎಂಸಿ ನೀರನ್ನು ಕೊಟ್ಟಿದ್ದಾರೆ. 8 ಟಿಎಂಸಿ ನೀರನ್ನು ಇವರಿಗೆ ಕೊಡಲಿಲ್ಲ, ಆದರೆ ಆಂಧ್ರ ಪ್ರದೇಶದವರು ಬಲದಂಡೆ ನಾಲೆಯು ರಿಪೇರಿಯಲ್ಲಿದೆ ಎಂದು ಅವರು 21 ದಿವಸದ ಕಾಲಾವಧಿಯಲ್ಲಿ ನೀರನ್ನು ಉಪಯೋಗ ಮಾಡಿಕೊಂಡಿಲ್ಲವೆಂದು, ನಾವೇನು ಮೀಸಲಾತಿಯ ಪ್ರಕಾರ ನೇಮಕಾತಿ ಆಗಿರದಿದ್ದರೆ ಬ್ಯಾಕ್‌ಲಾಗ್‌ನ್ನು ತುಂಬಿ ಎಂದು ಹೇಳುತ್ತೇವೆ, ಆ ರೀತಿಯಲ್ಲಿ ನೀರಿನ ವಿಚಾರದಲ್ಲಿಯೂ ಇವತ್ತು ಮಾಡಿದ್ದಾರೆ. ಕಾಲುವೆಯ ರಿಪೇರಿಯ ಕಾಲದಲ್ಲಿನ 21 ದಿವಸ ನಾವು ಅವರಿಗೆ ನೀರನ್ನು ಕೊಡಲಿಲ್ಲ, ಅದಕ್ಕೆ ಈ ಬೇಸಿಗೆಯಲ್ಲಿ ಅವರಿಗೆ ನೀರನ್ನು ಕೊಡುತ್ತಿದ್ದೇವೆ, ಅಂದರೆ ಅನುಕಂಪದ ಆಧಾರದ ಮೇಲೆ ಅವರಿಗೆ ನೀರನ್ನು ಕೊಡತಕ್ಕ

ವ್ಯವಸ್ಥೆಯನ್ನು ಈ ಸರ್ಕಾರ ಮಾಡಿದೆ. ಇದು ಅನ್ಯಾಯವಲ್ಲ, ಸರಿಯೆಂದು ಅವರು ಹೇಳಿದ್ದಾರೆ. ಅಂಕಿಅಂಶದ ಪ್ರಕಾರ ನಿಜವಾಗಿಯೂ ಯಾರಿಗಾದರೂ ಅನ್ಯಾಯವಾಗಿದ್ದರೆ ರಾಯಚೂರಿನ ರೈತರಿಗೆ ಅನ್ಯಾಯವಾಗಿದೆ. ನೂರುಕೋಟಿ ಬೆಳೆ ಇವತ್ತು ಅಲ್ಲಿ ನಾಶವಾಗುತ್ತಿದೆ.

ಇದಕ್ಕೆ ಕಾರಣ ನೇರವಾಗಿ ಸರ್ಕಾರವೆಂದು ಹೇಳುತ್ತೇನೆ. ಮತ್ತು ಇದರ ಬಗ್ಗೆ ಅಲ್ಲಿ ವಿರೋಧ ವ್ಯಕ್ತವಾದಾಗ ಅಲ್ಲಿನ ಜನರ ಮನವನ್ನು ಒಲಿಸಿಕೊಳ್ಳುವುದಕೋಸ್ಕರ ಮುನಿಯಪ್ಪನವರು ಮತ್ತು ವಸತಿ ಸಚಿವರಾದ ರಾಯರೆಡ್ಡಿಯವರು ದೂರವಾಣಿಯ ಮೂಲಕ ಮಾತನಾಡಿ ನಿಮಗೆ ಎಂಟು ದಿವಸ 3215 ಕ್ಯೂಸೆಕ್ಸ್ ನೀರನ್ನು ಬಿಡುತ್ತೇವೆಂದು ಸ್ಪಷ್ಟವಾದ ಆಶ್ವಾಸನೆಯನ್ನು ಕೊಟ್ಟರು. ಆದರೆ ಎಂಟು ದಿವಸಗಳ ಅಂಕಿಅಂಶವನ್ನು ತೆಗೆದುಕೊಂಡರೆ ಮೊದಲು 800, 700 ಕೊನೆಗೆ 300 ಕ್ಯೂಸೆಕ್ಸ್ ನೀರನ್ನು ಬಿಟ್ಟಿದ್ದಾರೆ. ಮತ್ತು ಅವರಿಗೆ ನೀರು ಇಲ್ಲದಂತೆ ಮಾಡಿದರು. ಈ ಪರಿಸ್ಥಿತಿ ಇದ್ದಾಗ ಯಾರನ್ನು ನಂಬುವುದು. ಅಲ್ಲಿನ ಸ್ಥಳೀಯ ಶಾಸಕರು ಮತ್ತು ಸಚಿವರು ಆಸಕ್ತಿವಹಿಸಿ ಈ ಚಳುವಳಿಯನ್ನು ನಿಲ್ಲಿಸಬೇಕೆಂದು ನಿಲ್ಲಿಸಿ ಜನರಿಗೆ ನೀರನ್ನು ಕೊಡುತ್ತೇವೆಂದು ಹೇಳಿ ಮೋಸ ಮಾಡಿದರು. ಅವರು ಮಾನವೀಯತೆಯ ದೃಷ್ಟಿಯಿಂದ ಆಂಧ್ರಪ್ರದೇಶಕ್ಕೆ ನೀರನ್ನು ಕೊಟ್ಟೆವು ಎಂದು ಹೇಳುತ್ತಾರೆ. ನಮ್ಮಲ್ಲಿರುವ ಜನರಿಗೆ ಮಾನವೀಯತೆ ಇಲ್ಲವೇ? ಇಲ್ಲಿರುವವರು ರೈತರಲ್ಲವೇ? ಇವರುಗಳ ಬಗ್ಗೆ ನಿಮಗೆ ಅನುಕಂಪವಿಲ್ಲವೇ? ಇದರ ಬಗ್ಗೆ ತಮ್ಮಿಂದ ಸ್ಪಷ್ಟವಾಗಿ ಕೇಳಬಯಸುತ್ತೇನೆ. ಮತ್ತು ತಮ್ಮ ತಪ್ಪಿನಿಂದ ಅಲ್ಲಿನ ರೈತರೇನು ಮೂರು ಕೋಟಿ ಬೆಳೆಯನ್ನು ಕಳೆದುಕೊಂಡಿದ್ದಾರೆ. ಅವರಿಗೆ ಯಾವ ರೀತಿಯಲ್ಲಿ ಪರಿಹಾರವನ್ನು ಕೊಡುತ್ತೀರಿ ಎಂಬ ಬಗ್ಗೆ ಹೇಳಬೇಕು. ಅವರುಗಳಿಗೆ ಇವತ್ತು ಪರಿಹಾರವನ್ನು ಕೊಡಬೇಕಾಗುತ್ತದೆ. ನೀವು ಒಂದು ವೇಳೆ ಅವರಿಗೆ ನೀರನ್ನು ಕೊಟ್ಟಿದ್ದರೆ ಬಹುಶಃ ಆ ಬೆಳೆ ಉಳಿಯುತ್ತಿತ್ತು. ಆ ಬೆಳೆ ನಾಶವಾಗಲು ಸರ್ಕಾರವೇ ಕಾರಣವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ.

ಇದಕ್ಕೆ ನಮ್ಮ ಎನ್.ಟಿ. ರಾಮರಾವ್ ಅವರೂ ಕೂಡ ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಆರನೇ ತಾರೀಖು ನಮ್ಮ ಪ್ರಜಾವಾಣಿ ಪತ್ರಿಕೆಯಲ್ಲಿ ಕೂಡ ಬಂದಿದೆ. ತುಂಗಭದ್ರಾ ಮೇಲಿನ ನೀರಿನ ಹಕ್ಕನ್ನು ಸರ್ಕಾರ ಅಷ್ಟು ಸುಲಭವಾಗಿ ಬಿಟ್ಟು ಕೊಡುವುದಿಲ್ಲ ಮತ್ತು ಈ ಸಂದರ್ಭದಲ್ಲಿ ಕರ್ನಾಟಕ ಸರ್ಕಾರದ ಜೊತೆ ಸೌಹಾರ್ದಯುತ ಮಾತುಕತೆ ನಡೆಸಿ ಈ ವಿವಾದ ಇತ್ಯರ್ಥಪಡಿಸಿಕೊಳ್ಳಲು ಪ್ರಯತ್ನ ನಡೆಸಲಾಗುವುದು ಎಂದು ಮುಖ್ಯಮಂತ್ರಿ ಎನ್.ಟಿ. ರಾಮರಾವ್ ಹೇಳಿದ್ದಾರೆ. ಈ ರೀತಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಮುಖ್ಯಮಂತ್ರಿಗಳು ಕಳೆದ ರಾತ್ರಿ ತುಂಗಭದ್ರಾ ಮಂಡಳಿ ಸಭೆ ನಡೆಸಿದ್ದು, ಒಂದು ಪಾಯಿಂಟ್ ಆರು ಟಿ.ಎಮ್.ಸಿ. (1.6) ಅಡಿ ನೀರನ್ನು ಬಿಡುಗಡೆ ಮಾಡಲು ನಿರ್ಧರಿಸುವಂತೆ ಸೂಚಿಸಿದ್ದಾರೆ. 2.03 ಟಿ.ಎಮ್.ಸಿ. ನೀರನ್ನು ಕೇಳುವುದು ಏಕೆಂದರೆ ಹಿಂದಿನ ಕಾಂಗ್ರೆಸ್ ಸರ್ಕಾರ ಮಳೆಗಾಲದ ಅವಧಿಯಲ್ಲಿ ನದಿಯ ದುರಸ್ತಿ ಕಾರ್ಯವನ್ನು ಕೈಗೊಂಡಿದ್ದರಿಂದ ಈ ನಾಲೆಯಲ್ಲಿ ಕರ್ನಾಟಕದಿಂದ ಸರಿಯಾದ ಪ್ರಮಾಣದಲ್ಲಿ ನೀರು ಹರಿದು ಬರಲಿಲ್ಲ, ಅದಕ್ಕಾಗಿ ನಾವು ಈಗ ನೀರನ್ನು ಕೇಳುತ್ತಿದ್ದೇವೆ ಎಂದು ಅವರು ಅಲ್ಲಿ ಮಂಡಳಿಯಲ್ಲಿ ಹೇಳಿಕೊಂಡು ನೀರನ್ನು ಬಿಡಿಸಿಕೊಂಡಿದ್ದಾರೆ ಅಂದರೆ ಯಾವ ಸಮಯದಲ್ಲಿ ಅವರಿಗೆ ನಾವು ನೀರು ಕೊಡಬಾರದಾಗಿತ್ತು. ಆ ಸಮಯದಲ್ಲಿ ನೀರನ್ನು ಬಿಡಿಸಿಕೊಂಡಿದ್ದಾರೆ. ಆ ಯಾವ ಪೀರಿಯಡ್‌ನಲ್ಲಿ ತುಂಗಭದ್ರಾದಿಂದ ನೀರು ಆಂಧ್ರಕ್ಕೆ ಹೋಗಬಾರದಿತ್ತು ಆ ಪೀರಿಯಡ್‌ನಲ್ಲಿ ನೀರನ್ನು ಬಿಟ್ಟು ರಾಯಚೂರು ಜನರಿಗೆ ದ್ರೋಹ ಮಾಡಿದ್ದಾರೆ ಎನ್ನತಕ್ಕಂತಹ ಮಾತನ್ನು ನಾನು ಸ್ಪಷ್ಟವಾಗಿ ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರಬಯಸುತ್ತೇನೆ.

ಇದರಿಂದ ಸಾಕಷ್ಟು ತೊಂದರೆ ಆ ಭಾಗದ ಜನರಿಗೆ ಆಗಿದೆ, ಆಗುತ್ತಿದೆ, ಅದಕ್ಕಾಗಿ ಇಲ್ಲಿ ಕೊನೆಯ ಪಕ್ಷ ಕ್ರಾಪ್ ಕಂಪೆನ್‌ಸೇಷನ್ ಆದರೂ ಕೊಡತಕ್ಕಂತಹ

ವ್ಯವಸ್ಥೆಯನ್ನೂ ಸರ್ಕಾರದವರು ಮಾಡಬೇಕು. ಭೀಮ ನದಿಯಿಂದ ಕುಡಿಯುವುದಕ್ಕೆ ನೀರು ಉಜ್ಜನಿ ಡ್ಯಾಮ್‌ನಿಂದ ಬಿಡುಗಡೆ ಮಾಡಿಸುತ್ತೇವೆ ಎಂದು ಹೇಳಿ ಆ ಮಾತು ಇಲ್ಲಿ ಪ್ರಸ್ತಾಪ ಮಾಡಿದಾಗ ನಾವು ಮಹಾರಾಷ್ಟ್ರ ಮುಖ್ಯಮಂತ್ರಿಗಳ ಜೊತೆ ಮಾತನಾಡಿ ಒಂದು ಟಿ.ಎಮ್.ಸಿ. ನೀರನ್ನು ಬಿಡಿಸುತ್ತೇವೆ ಎಂದು ಹೇಳಿದರು, ಆದರೆ ಇಲ್ಲಿಯವರೆಗೆ ಅದೂ ಕೂಡ ಕಾರ್ಯಗತ ಆಗಿಲ್ಲ. ಆ ಭಾಗದಲ್ಲಿ ಕುಡಿಯುವುದಕ್ಕೆ ನೀರೂ ಕೂಡ ಇಲ್ಲ, ಇವತ್ತಿನ ದಿವಸ ಭೀಮ ನದಿಯಲ್ಲಿ ನೀರು ಬಿಟ್ಟರೆ ಅಫಜಲ್‌ಪುರದಲ್ಲಿರುವ ಹಳ್ಳಿಗಳಿಗೆ ಅದು ಅನುಕೂಲವಾಗುತ್ತದೆ. ಮತ್ತೆ ಮೊನ್ನೆ ಬೀದರ್‌ನಲ್ಲಿಯೂ ಕೂಡ ಅದೇ ರೀತಿಯಾಗಿ, ಮಂಜ್ರಾದಲ್ಲಿ ಬಿಡಬೇಕೆಂದು ಹೇಳಿ ನಮ್ಮ ಬೀದರ್ ಶಾಸಕರನ್ನು ಕೇಳಿ ಆ ಪ್ರಯತ್ನ ಕೂಡ ಮಾಡಿದ್ದಾರೆ ಎಂದು ಹೇಳಿ, ನಮ್ಮ ಸಚಿವರು ಬೀದರ್‌ನಲ್ಲಿ ಸ್ಟೇಟ್‌ಮೆಂಟ್ ಕೊಟ್ಟಿದ್ದಾರೆ. ಆದರೆ ಅದೂ ಕೂಡ ಏನಾಯಿತು ಎಂಬುದು ಗೊತ್ತಿಲ್ಲ. ನೀರೂ ಕೂಡ ಬಂದಿಲ್ಲ. ಹೀಗೆ ನಾವು ಹೇಳುವುದು ಒಂದು, ಅದಕ್ಕೆ ತಕ್ಕಂತೆ ನಾವು ನೋಡಿಕೊಳ್ಳದೆ ಹೋದರೆ ಜನರಿಗೆ ತಪ್ಪು ಅಭಿಪ್ರಾಯ ಬರುತ್ತದೆ. ಮತ್ತು ಅದರಿಂದ ಸರ್ಕಾರಕ್ಕೂ ಕೂಡ ಕೆಟ್ಟ ಹೆಸರು ಬರುತ್ತದೆ.

ಸರ್ಕಾರಕ್ಕೆ ಅಷ್ಟೇ ಅಲ್ಲ ಯಾರೇ ಶಾಸಕರು ಯಾವುದೇ ಮಾತನ್ನು ಹೇಳಿದರೂ ಕೂಡ ಶಾಸಕರು ಇದೇ ಮಾತು ಹೇಳುತ್ತಾರೆ ಏನು ಬೇರೆ ಇದೆ ಯಾರು ಕೇಳುತ್ತಾರೆ, ಅವರ ಮಾತು ಇದು ಸುಳ್ಳು, ಸತ್ಯಕ್ಕೆ ದೂರವಾದುದು ಎಂಬ ಅರ್ಥ ಬರುತ್ತದೆ. ಅದಕ್ಕೆ ನಾವು ಒಂದು ಹೇಳಿಕೆಯನ್ನು ಕೊಡತಕ್ಕಂಥದ್ದರಲ್ಲಿ ಎಲ್ಲಿ ಮಾಡುವುದಕ್ಕೆ ಶಕ್ತಿ ಇದೆ ಅಂತಹ ಕಡೆ ತಾವು ಇದನ್ನು ಮಾಡಬೇಕೇ ಹೊರತಾಗಿ, ಸುಮ್ಮನೆ ಹೇಳಿಕೆ ಕೊಟ್ಟು ಜನರಿಗೆ ಒಂದು ದಿಕ್ಕು ತಪ್ಪಿಸುವಂಥದ್ದು ತಾವು ಯಾರೂ ಕೂಡ ದಯವಿಟ್ಟು ಮಾಡಬಾರದು ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೊಂದು ವಿಷಯ ಅಂದರೆ ಮೈನರ್ ಇರಿಗೇಷನ್ ಇದನ್ನು ನಾವು ಮರೆತೇ ಬಿಟ್ಟಿದ್ದೇವೆ. ಏಕೆಂದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ 75 ಪರ್ಸೆಂಟ್ ಭಾಗ ಈ ಡ್ರಾಟ್ ಅಫೆಕ್ಟೆಡ್ ಅಥವಾ ಡ್ರೈ ಲ್ಯಾಂಡ್ ಹೆಚ್ಚಿಗೆ ಇರತಕ್ಕಂಥದ್ದು. ಇದಕ್ಕೆ ನಾವು ಏನಾದರೂ ಒಂದು ಕಾರ್ಯಕ್ರಮ ಹಾಕಿಕೊಳ್ಳಬೇಕು. ಹಿಂದೆ ಸುಮಾರು 30,000 ಕೆರೆ ಮತ್ತು ಅಣೆಕಟ್ಟುಗಳನ್ನು ಇಲ್ಲಿಯವರೆಗೆ ಕಟ್ಟಿದ್ದಿರಿ. ಆದರೆ ಅವಕ್ಕೆ ಮೈಂಟೆನೆನ್ಸ್ ಇಲ್ಲ, ಡೀಸಿಲ್ಟಿಂಗ್ ಇಲ್ಲ, ಅದಕ್ಕೆ ರಿಪೇರಿಗಳಿಲ್ಲ ಅಥವಾ ಅನೇಕ ಕೆಲಸಗಳು ಪ್ರಾರಂಭ ಮಾಡಿ ನಾವು ಅಲ್ಲಿಗೆ ಬಿಟ್ಟು ಬಿಡುತ್ತೇವೆ.

ಈ ಸಾರಿ ಕೂಡ ಏನು ಮಾಡಿದ್ದಾರೆ ಅಂದರೆ ಕೆಲವು ಕೆಲಸಗಳಿಗೆ ಮೂರನೇಯ ಒಂದು ಭಾಗ ಬಡ್ಜೆಟ್ ಪ್ರಾವಿಷನ್ ಇಲ್ಲ, ಬರೀ ಟೋಕನ್ ಗ್ರಾಂಟ್ ಇಟ್ಟಿದ್ದಾರೆ. 10 ಸಾವಿರ, ಎರಡು ಸಾವಿರ, ನಾಲ್ಕು ಸಾವಿರ. ಇದರಿಂದ ಏನಾಗುತ್ತದೆ ಅಂದರೆ ಆ ಬಡ್ಜೆಟ್‌ನಲ್ಲಿ ಮಾತ್ರ ಆ ಕೆಲಸ ಬಂದ ಹಾಗೆ ಆಯಿತು. ಆದರೆ ನಾಳೆ ಅದಕ್ಕೆ ಟೆಕ್ನಿಕಲ್ ಅಪ್ರೂವಲ್ ಕೊಡಬೇಕು. ಅಡ್‌ಮಿನಿಸ್ಟ್ರೇಟಿವ್ ಅಪ್ರೂವಲ್ ಕೊಡಬೇಕಾದರೆ ಮೂರನೇ ಒಂದು ಭಾಗ ಬಡ್ಜೆಟ್ ಪ್ರಾವಿಷನ್ ಇದ್ದರೆ ನಾವು ಕೊಡುತ್ತೇವೆ ಇಲ್ಲ ಅಂದರೆ ಇಲ್ಲ ಎಂದು ಹೇಳುತ್ತಾರೆ. ನಮ್ಮ ಸಮಾಧಾನಕ್ಕೋಸ್ಕರ ತಾವು ಏನು ಹೊಸ ಕೆಲಸ ಸೇರಿಸಿದ ಹಾಗೆ ಆದರೆ ಹಣದ ಕೊರತೆ ಆ ಕೆಲಸ ಆ ಭಾಗದಲ್ಲಿ ಪ್ರಾರಂಭ ಆಗುವುದಿಲ್ಲ. ಎರಡನೆಯದು ಆಶ್ಚರ್ಯ ಅಂದರೆ ನಮ್ಮ ನಂಜೇಗೌಡರು ನಿನ್ನೆ ಬಹಳ ಸ್ಪಷ್ಟವಾಗಿ ಹೇಳಿದರು. ಯಾವ್ಯಾವ ಭಾಗದಲ್ಲಿ ಎಷ್ಟೆಷ್ಟು ಜಮೀನಿಗೆ ನೀರಿದೆ ಮತ್ತು ನೀರು ಇಲ್ಲ, ಸುಮಾರು ಒಂದು ಕೋಟಿ ಎಕರೆಯಷ್ಟು ಹೆಚ್ಚು ಕಡಿಮೆ ಅವರು ಹೇಳಿದರು, ಒಂದು ಚಿಲ್ಲರೆ ಕೋಟಿ ಎಕರೆಗೆ ಆ ಭಾಗದಲ್ಲಿ ಉತ್ತರ ಕರ್ನಾಟಕದಲ್ಲಿ 80 ಲಕ್ಷ ಹೆಕೇರ್ ಅಲ್ಲಿಯೇ ಆಗುತ್ತದೆ.

(ಉಪ ಸಭಾಧ್ಯಕ್ಷರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಇಷ್ಟು ಒಣ ಪ್ರದೇಶ. ಅದಕ್ಕಾಗಿ ನಾನು ಕೇಳುತ್ತೇನೆ, ಏಕೆಂದರೆ 19 ಮಿಲಿಯನ್ ಹೆಕ್ಟೇರ್ ಜಿಯಾಗ್ರಫಿಕಲಿ, ಇದರಲ್ಲಿ ಕಲ್ಟಿವಬಲ್ ಇರತಕ್ಕಂಥದ್ದು ಸುಮಾರು 15 ಮಿಲಿಯನ್ ಹೆಕ್ಟೇರ್ಸ್ ಅದಕ್ಕಾಗಿ ನಾನು ಕೇಳುತ್ತೇನೆ. ಈ ಭಾಗದಲ್ಲಿ ಎಲ್ಲೆಲ್ಲಿ ನದಿಗಳಿವೆ, ಅಲ್ಲಿ ನೀವು ಈ ದೊಡ್ಡ ದೊಡ್ಡ ಯೋಜನೆಗಳನ್ನು ಮಾಡುವುದಕ್ಕೆ ಸಾಧ್ಯ ಇದೆ. ಆದರೆ ಎಲ್ಲಿ ನದಿಗಳು ಇಲ್ಲ ಅಂತಹ ಕಡೆ ಮೈನರ್ ಇರಿಗೇಷನ್, ಲಿಫ್ಟ್ ಇರಿಗೇಷನ್ ಇವೆ ಅಥವಾ ಬೋರ್‌ವೆಲ್ಸ್ ಗಂಗಾಕಲ್ಯಾಣ ಇಂತಹ ಯೋಜನಗಳೇ ಬೇಕು. ಆದರೆ ನೀವು ಇಟ್ಟಿದ್ದು ಎಷ್ಟು, ನೀವು ಬಡ್ಜೆಟ್ ತೆಗೆದು ನೋಡಿ, ಯಾವ ಭಾಗದಲ್ಲಿ ನೀರಾವರಿ ಕಡಿಮೆ ಇದೆ ಆ ಭಾಗಕ್ಕೆ ನೀವು ಏನೂ ಕೂಡ ಆದ್ಯತೆ ಕೊಟ್ಟಿಲ್ಲ. ಇದಕ್ಕೆ ಕಾರಣ ಏನು? ಒಂದು ಕಡೆ ಹೇಳುತ್ತೀರಿ ರೀಜನಲ್ ಇಂಬ್ಯಾಲೆನ್ಸ್ ಇದ್ದುದ್ದನ್ನು ನಾವು ಬ್ಯಾಲೆನ್ಸ್ ಮಾಡುತ್ತೇವೆ ಮತ್ತು ಬರಗಾಲ ಪ್ರದೇಶಗಳಿಗೆ ನಾವು ನೀರು ಕೊಟ್ಟು ಬಹಳ ಒಳ್ಳೆಯ ರೀತಿಯಿಂದ ತೃಪ್ತಿಕರವಾಗಿ ರೈತರನ್ನು ರೈತರ ಜೀವನವನ್ನು ಒಳ್ಳೆಯದು ಮಾಡುತ್ತೇವೆ ಎಂದು ಹೇಳತಕ್ಕಂಥವರು ನೀವು. ಆದ್ದರಿಂದ ಇವತ್ತು ಮುಖ್ಯ ಮಂತ್ರಿಗಳು ನೇರವಾಗಿ ನೀರಾವರಿ ಇಲಾಖೆಯನ್ನು ವಹಿಸಿಕೊಂಡಿದ್ದಾರೆ ಜೊತೆಯಲ್ಲಿ ಸಣ್ಣ ನೀರಾವರಿ ಜವಾಬ್ದಾರಿಯನ್ನು ಕೂಡ ಹೆಚ್ಚು ಕಡಿಮೆ ಅವರ ಹತ್ತಿರ ಇದೆ. ಮತ್ತು ನೀರಾವರಿಗೆ ನಾನು ಆದ್ಯತೆ ಕೊಡುತ್ತೇನೆ ಎಂದು ಪದೇ ಪದೇ ಹೇಳಿಕೊಂಡು ಸಾರಿ ಸಾರಿ ಅವರು ಬರುತ್ತಿದ್ದಾರೆ. ನಾವೂ ಕೂಡ ಅವರಿಗೆ ಒಪ್ಪಿಕೊಂಡಿದ್ದೇವೆ. ನೀರಾವರಿ ಬಗ್ಗೆ ಅವರಿಗೆ ಹೆಚ್ಚಿನ ಆಸಕ್ತಿ ಇದೆ ಎಂದು. ಆದರೆ ಇದರಲ್ಲಿ ಏಕೆ ಅನ್ಯಾಯ ಮಾಡಿದ್ದೀರಿ, ತಾವು? ಡಿಸ್ಟ್ರಿಕ್ಟ್ ವೈಸ್ ನೀವು ಫಿಗರ್ಸ್ ಕೊಡಿ, ಎಷ್ಟೆಷ್ಟು ಹಣ ಕೊಟ್ಟಿದ್ದೀರಿ. ಯಾವ ಯಾವ ಕಾಮಗಾರಿಯನ್ನು ತಾವು ಮಂಜೂರು ಮಾಡಿದ್ದೀರಿ ಎಂಬುದರ ಬಗ್ಗೆ ಇದರಲ್ಲಿ ಪ್ರಿಂಟ್ ಆಗಿರುವುದನ್ನು ನಾವು ನೋಡಿದರೆ ಹಿಂದುಳಿದ ಆ ಭಾಗದಲ್ಲಿ ಇರತಕ್ಕಂಥಕ್ಕೆ ಹಳೇ ಕೆಲಸಗಳಿಗೆ ಮೂರನೇ ಒಂದು ಭಾಗ ಪ್ರಾವಿಷನ್ ಮಾಡಲಿಲ್ಲ.

ಸುಮ್ಮನೆ ಟೋಕನ್ ಗ್ರಾಂಟ್ ಇಟ್ಟಿದ್ದೀರಿ. ಕೇಳಿದರೆ ಸ್ಟಾಂಡಿಂಗ್ ಕಮಿಟಿ, ಎಂದು ಹೇಳುತ್ತಾರೆ. ಸ್ಟಾಂಡಿಂಗ್ ಕಮಿಟಿ ಮುಂದೆ ಬರತಕ್ಕಂಥದ್ದು ಹೊಸ ಕೆಲಸ. ನೀವು ನ್ಯಾಯವಾಗಿ ಡಿಸ್ಟ್ರಿಬ್ಯೂಟ್ ಮಾಡಿ ಕೊನೆಗೆ ಎಲ್ಲಿ ಹಿಂದೆ ಇಂಬ್ಯಾಲೆನ್ಸ್ ಆದರೆ ಅದನ್ನು ನೀವು ಸರಿಪಡಿಸಿ. ಅದನ್ನು ಬಿಟ್ಟು ಅವರು ಇಲಾಖೆಯವರು ಏನು ಮಾಡಿದ್ದಾರೆ ಅದನ್ನು ನೀವು ನಮ್ಮ ಮುಂದಿಟ್ಟು ಇದು ಸರಿ ಇದೆ ಅಂದರೆ ಇದರಂತಹ ದೊಡ್ಡ ಅನ್ಯಾಯ ಯಾವುದೂ ಇಲ್ಲ ಎಂದು ಎನ್ನತಕ್ಕಂತಹ ಮಾತನ್ನು ನಾನು ಹೇಳುತ್ತೇನೆ. ಅದಕ್ಕೆ ನಿಮಗೆ ನೀವು ಸ್ಪಷ್ಟ ಹೇಳಿ, ಬರಗಾಲ ಪೀಡಿತ ಪ್ರದೇಶ ಇದ್ದಂತಹ ಬಿಜಾಪುರವಾಗಲಿ, ರಾಯಚೂರಾಗಲಿ, ಗುಲ್ಬರ್ಗಾ ಆಗಲೀ, ಚಿತ್ರದುರ್ಗವಾಗಲಿ ಬಳ್ಳಾರಿಯಾಗಲಿ ಈ ವಿಭಾಗದಲ್ಲಿ ಎಷ್ಟು ಕೆಲಸಗಳನ್ನು ತೆಗೆದುಕೊಂಡಿದ್ದೀರಿ ಮತ್ತು ಅದಕ್ಕೆ ಎಷ್ಟು ಹೆಚ್ಚಿನ ಒತ್ತನ್ನು ಕೊಟ್ಟಿದ್ದೀರಿ ಎಂಬುದನ್ನು ತಿಳಿಸಬೇಕು. ಏಕೆಂದರೆ ಈ ಭಾಗಗಳನ್ನು ಬೇರೆ ಭಾಗಗಳಿಗೆ ಹೋಲಿಸಿದಾಗ ಅದಕ್ಕೆ ಸರಿಸಮವಾಗಿ ಬರಬೇಕೆಂದು ಹೇಳಿದಾಗ ನೀವು ಅಲ್ಲಿ ಎರಡು ಕೆಲಸ ತೆಗೆದುಕೊಂಡರೆ ಇಲ್ಲಿ ನಾಲ್ಕು ತೆಗೆದುಕೊಳ್ಳಬೇಕಾಗುತ್ತದೆ. ನೀವು ಅಲ್ಲಿ ಎರಡು ಟ್ಯಾಂಕ್‌ರಿಪೇರಿ ಮಾಡಿದರೆ ಇಲ್ಲಿ ನೀವು ನಾಲ್ಕು ಮಾಡಬೇಕಾಗುತ್ತದೆ.

ಅಂದಾಗ ಅದು ಸಾಧ್ಯ ಇದೆ. ನೀವು ಇಂಬ್ಯಾಲೆನ್ಸ್ ಅನ್ನು ಸರಿಪಡಿಸದೆ ಹೋದರೆ ನೀವೂ ಕೂಡ ಅನ್ಯಾಯ ಮಾಡಿದ ಹಾಗೆ ಆಗುತ್ತದೆ. ಅದಕ್ಕೆ ದಯಮಾಡಿ ಮೈನರ್ ಇರಿಗೇಷನ್‌ನಲ್ಲಿ ಕೂಡ ಇವತ್ತಿನ ದಿವಸ ನೀವು.....

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು): ಅಧ್ಯಕ್ಷರೆ, ಸನ್ಮಾನ್ಯ ಖರ್ಗೆಯವರು ಮೈನರ್ ಇರಿಗೇಷನ್ ಬಗ್ಗೆ ಹೇಳುವಾಗ ಆ

ಬಡ್ಜೆಟ್ ಪುಸ್ತಕದಲ್ಲಿ ಬಂದಿರತಕ್ಕಂತಹ ಕೆಲಸ ಎಲ್ಲಾ ಅವರ ಸರ್ಕಾರದಲ್ಲಿ ಮಾಡಿರತಕ್ಕಂತಹ ಕೆಲಸಗಳನ್ನೇ ಮುಂದುವರೆಸಿಕೊಂಡು ಬಂದಿರತಕ್ಕಂಥ ಕೆಲಸಗಳು. ಈ ವರ್ಷ ಏನಾದರೂ ಹೊಸ ಕೆಲಸ ಕೊಡಬೇಕೆಂದರೆ ಅದು ವಿಶೇಷವಾಗಿ ಬೇರೆ ಪಟ್ಟಿ ಮಾಡಿ ಮುಂದೆ ಅವರ ಗಮನಕ್ಕೆ ತರಲಾಗುತ್ತದೆ. ಅದರಲ್ಲಿ ಎಲ್ಲಾ ಹೇಳಿ. 3, 4 ಮತ್ತು 5 ವರ್ಷಗಳಿಂದ ಯಾವ ಯಾವ ಮೈನರ್ ಇರಿಗೇಷನ್‌ನಲ್ಲಿ ನಿಂತಿದೆ ಅದಕ್ಕೆ ಮಾತ್ರ ಅದರಲ್ಲಿ ಪ್ರಾವಿಷನ್ ಮಾಡಿದೆ. ಆ ಶೀರ್ಷಿಕೆಯನ್ನು ಅವರು ನೋಡಬೇಕು. ಹೊಸ ಕಾಮಗಾರಿಗೆ ಪ್ರತ್ಯೇಕವಾಗಿ ಹಣ ಕೂಡ ಇಟ್ಟಿದೆ. ಅದನ್ನು ಇನ್ನು ನಾವು ತೀರ್ಮಾನ ಮಾಡಿಲ್ಲ. ಅದನ್ನು ನಾನು ಅವರ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಳೇ ಕೆಲಸಗಳು ಎಲ್ಲಿ ಜಾಸ್ತಿ ಇದ್ದುವು ಆ ಭಾಗದಲ್ಲಿ ಕೂಡ ಅದಕ್ಕೆ ಇಡಬೇಕಾದಂತಹ ಹಣ ಇಡಲಿಲ್ಲ ಎಂದು ನಾನು ಹೇಳುತ್ತಿದ್ದೇನೆ. ಅದರ ಜೊತೆಯಲ್ಲಿ ತಮ್ಮ ಪೇಜ್ 131 ಈ ಶೀರ್ಷಿಕೆಯಲ್ಲಿ ಕೂಡ ಹೊಸ ಕೆರೆಗಳ ನಿರ್ಮಾಣ ಮುಖ್ಯ ಇಂಜಿನಿಯರಿಂಗ್ ನೀರಾವರಿ (ದಕ್ಷಿಣ) ಮೈಸೂರು, ಇಲ್ಲಿಂದ ನಾವು ನೋಡಿಕೊಂಡು ಹೋದರೆ ನಮ್ಮ ಬಿಜಾಪುರ ಕೂಡ ಬರುತ್ತದೆ. ಅದಕ್ಕೆ ನಾನು ಹೇಳುವುದೇನೆಂದರೆ ತಾವು ಸರಿಪಡಿಸಿ. ಇದು ಒಂದು ದಿವಸದಲ್ಲಿ ಎಲ್ಲಾ ಕೂಡ ಆಗುತ್ತದೆ ಎಂದು ಅಲ್ಲ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ : ಮಾನ್ಯ ಖರ್ಗೆಯವರು ಹೇಳಿದಂತಹ ವಿಷಯವನ್ನು ಸಂಪೂರ್ಣವಾಗಿ ಸರಿಪಡಿಸಲು ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಜಗದೀಶ್ ತಿಮ್ಮನಗೌಡ ಪಾಟೀಲ್ : ಈಗ ಮಂತ್ರಿಗಳು ಚಿಕ್ಕ ನೀರಾವರಿಗೆ ಸಾಕಷ್ಟು ದುಡ್ಡು ಇಟ್ಟಿದ್ದೇವೆ ಎಂದು ಹೇಳಿದರು. ನಮ್ಮ ಬಿಜಾಪುರ ಜಿಲ್ಲೆ ಜಮಖಂಡಿ ತಾಲ್ಲೂಕಿನಲ್ಲಿ ಸಂಬಂಧಪಟ್ಟಂತೆ ನಾಲ್ಕೂವರೆ ಕೋಟಿ ರೂಪಾಯಿಯ ಪ್ರಾಜೆಕ್ಟ್ ಇದೆ. ಈಗಾಗಲೇ ಅಲ್ಲಿ ಒಂದೂವರೆ ಕೋಟಿ ರೂಪಾಯಿ ಖರ್ಚು ಮಾಡಿ ಕೆಲಸ ಪ್ರಾರಂಭವಾಗಿದೆ. ಆದರೆ ಈ ವರ್ಷದ ಬಜೆಟ್‌ನಲ್ಲಿ ಅದಕ್ಕೆ ಕೇವಲ ಒಂದು ಲಕ್ಷ ರೂಪಾಯಿ ಇಟ್ಟಿದ್ದಾರೆ. ಇದರಿಂದ ನಾವು ಯಾವ ರೀತಿ ಕೆಲಸ ಪೂರ್ತಿಗೊಳಿಸುವುದಕ್ಕೆ ಸಾಧ್ಯವೆಂದು ನಿಮ್ಮ ಗಮನಕ್ಕೆ ತರುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಅವರು ಹೇಳಿದರಲ್ಲಾ, ಐದೂವರೆ ಕೋಟಿ ರೂಪಾಯಿಯ ಕೆಲಸಕ್ಕೆ ಈ ಸಾರಿ ಒಂದೂವರೆ ಕೋಟಿ ರೂಪಾಯಿ ಖರ್ಚಾಗಿದೆ. ಆದರೆ ಈಗ ಅದಕ್ಕೆ ಪ್ರಾವಿಷನ್ ಇಟ್ಟಿರುವುದು ಕೇವಲ ಒಂದು ಲಕ್ಷ ರೂಪಾಯಿ. ಇದು ನ್ಯಾಯವೇ? ಹಾಗೆಯೇ ಇನ್ನೂ ಅನೇಕ ಕೆಲಸಗಳಿವೆ. ಇದು ಏನಾಗುತ್ತದೆಯೆಂದರೆ ಕೆಲವು ಸಲ ನೀವು ಆರಿಸಿ ಆರಿಸಿ ಕೊಡುತ್ತಿದ್ದೀರಿ ಎನ್ನುವ ಭಾವನೆ ಬರುತ್ತದೆ. ಇವತ್ತು ನಾನು ಅಲ್ಲಿನ ಶಾಸಕ ಇರಬಹುದು, ನಾಳೆ ಇನ್ನಾರಾದರೂ ಬರಬಹುದು. ಅಥವಾ ನಿಮ್ಮ ಜಾಗದಲ್ಲೇ ಮತ್ತೊಬ್ಬರು ಬರಬಹುದು. ಆದರೆ ಅಲ್ಲಿನ ರೈತನ ಬಗ್ಗೆ ನಿಮಗೆ ಚಿಂತನೆ ಇದ್ದರೆ ನೀವು ಎಲ್ಲಾ ಕಡೆ ಸರಿಸಮಾನವಾಗಿ ನೋಡಬೇಕು. ಸಮಾನ ದೃಷ್ಟಿಯಿಂದ ನೋಡಬೇಕು. ಅದಕ್ಕೆ ನಾನು ತಮ್ಮಲ್ಲಿ ಕೇಳಿಕೊಳ್ಳುವುದು ಇಷ್ಟೇ, ನೀವೇ ಖುದ್ದಾಗಿ ನೋಡಿ ಎಲ್ಲಾ ಸರಿಪಡಿಸತಕ್ಕಂಥ ವ್ಯವಸ್ಥೆ ಮಾಡಬೇಕು. ಇನ್ನೊಂದು ವಿಚಾರ ಏನೆಂದರೆ ರೀ ಹ್ಯಾಬಿಲಿಟೇಷನ್ ಬಗ್ಗೆ ಒಂದು ಮಾತು ಮಾತ್ರ ಹೇಳುತ್ತೇನೆ. ಶ್ರೀಮಾನ್ ಜೆ.ಟಿ. ಪಾಟೀಲರೂ ಕೂಡ ಅನೇಕ ಸಲ ಈ ಮನೆಯಲ್ಲಿ ಹೇಳಿದ್ದಾರೆ. ಏನೆಂದರೆ ಆಲಮಟ್ಟಿ ಡ್ಯಾಂ ಎತ್ತರ ಮಾಡಿದಾಗ ಅಲ್ಲಿ ಇರತಕ್ಕಂಥ ನೂರಾರು ಹಳ್ಳಿಗಳಿಗೆ ಅನ್ಯಾಯವಾಗುತ್ತದೆ, ಮುಳುಗಿ ಹೋಗುತ್ತದೆ ಎಂದು. ಒಟ್ಟು 82 ಸಾವಿರ ಎಕರೆ ಹೋಗಿಬಿಡುತ್ತದೆ. ಅವರಿಗೆ ತಕ್ಷಣ

ಏನೇನು ವ್ಯವಸ್ಥೆ ಮಾಡಬೇಕು ಅದನ್ನು ಮಾಡಬೇಕಾಗುತ್ತದೆ. ಅದಕ್ಕೆ ಕಾರ್ಯಕ್ರಮವನ್ನು ನೀವು ಹಾಕಿಕೊಳ್ಳಬೇಕಾಗುತ್ತದೆ. ಅದಕ್ಕೆ ಬೇಕಾದರೆ ಸ್ಪೆಷಲ್ ಆಫೀಸರ್ ನೇಮಕ ಮಾಡಿ ಪ್ರತಿ ತಿಂಗಳು ಇದರ ಬಗ್ಗೆ ರಿವ್ಯೂ ಮಾಡಬೇಕು. ಏಕೆಂದರೆ ಮುಖ್ಯಮಂತ್ರಿಗಳಿಗೆ ಸಮಯ ಇರುವುದಿಲ್ಲ.

ಆದಕಾರಣ ಸಮಯ ಇರಲಾರದೆ ಕಾರಣ ರಿವ್ಯೂ ಮಾಡುವುದಕ್ಕೆ ಆಗುವುದಿಲ್ಲ. ಅವರ ಹತ್ತಿರ ಜನರಲ್ ಅಡ್ಮಿನಿಸ್ಟ್ರೇಷನ್ ಮೈನರ್ ಇರಿಗೇಷನ್, ಎಕ್ಸೈಸ್ ಹೆಚ್ಚು ಕಡಿಮೆ ಕೆಲವು ಡಿಪಾರ್ಟ್‌ಮೆಂಟ್ಸ್ ಇರುತ್ತವೆ. 50 ಪರ್ಸೆಂಟ್ ಡಿಪಾರ್ಟ್‌ಮೆಂಟ್ಸ್ ಇರುತ್ತವೆ. ಕೆಲವು ಜನ ಕೇಳಿಕೊಂಡು ಮಾಡುತ್ತಾರೆ, ಕೆಲವು ಜನ ಹೇಳಿದ ಮೇಲೆ ಮಾಡುತ್ತಾರೆ. ಕೆಲವು ಜನರ ಮೇಲೆ ಅವರ ಹತೋಟಿ ಇರುತ್ತದೆ. ಅದಕ್ಕಾಗಿ ಅವರಿಗೆ ಪುರುಸೊತ್ತು ಕಡಿಮೆ ಇರುತ್ತದೆ. ಇದಕ್ಕಾಗಿ ನೀವು ಒಂದು ಕಮಿಟಿಯನ್ನೇ ಮಾಡಿ. ಅದಕ್ಕೆ ಸ್ವತಂತ್ರವಾದಂತಹ ಒಬ್ಬ ಮಂತ್ರಿಯನ್ನು ಮಾಡಿ. ಚೀಫ್ ಸೆಕ್ರೆಟರಿಯವರ ಅಧ್ಯಕ್ಷತೆಯಲ್ಲಿ ಅಥವಾ ನೀರಾವರಿ ಬಗ್ಗೆ ಹೆಚ್ಚಿನ ಮಾಹಿತಿ ಇರತಕ್ಕಂಥ ಅಧಿಕಾರಿಗಳಿಗೆ ಸಂಪೂರ್ಣವಾದಂತಹ ಅಧಿಕಾರ ಕೊಟ್ಟು ನೇರವಾಗಿ ಅವರು ಯಾವುದೇ ಒಂದು ಸಲಹೆ ಸೂಚನೆ ಕೊಟ್ಟರೂ ಕೂಡ ಕ್ಯಾಬಿನೆಟ್‌ಗೆ ಬರಬೇಕು. ಅದು ಅಲ್ಲಿ ಇಲ್ಲಿ ಸುತ್ತಾಡಿ ಬರಬೇಕಾಗಿಲ್ಲ. ಅದು ಇರಿಗೇಷನ್ ಸೆಕ್ರೆಟರಿಗೆ ಹೋಯಿತು. ಫೈನಾನ್ಸ್ ಸೆಕ್ರೆಟರಿಗೆ ಹೋಯಿತು ಎಂದು ಸೆಕ್ರೆಟರಿಗಳ ಹತ್ತಿರ ಹೋಗುವುದು ಬೇಡವೇ ಬೇಡ. ನೇರವಾಗಿ ಅವರು ಮತ್ತು ಮುಖ್ಯಮಂತ್ರಿಗಳ ಜೊತೆ ಅಥವಾ ಕ್ಯಾಬಿನೆಟ್‌ನಲ್ಲಿ ಫೈಲ್‌ಗಳು ಬರತಕ್ಕಂಥಾದ್ದು ಮತ್ತು ಕೇಸ್‌ನ್ನು ಬಿಲ್ಡ್‌ಅಫ್ ಮಾಡಿ ಅಲ್ಲಿ ತರುವಂತಹ ವ್ಯವಸ್ಥೆಯಾಗಬೇಕು. ಆಗ ಮಾತ್ರ ಇದನ್ನು ಸ್ವಲ್ಪ ಉಸಿರಾಡಿಸಬಹುದು ಅಲ್ಲಿ. ಇಲ್ಲದೇ ಇದ್ದರೆ ಇದು ಎರಡು ಸಾವಿರ ವರ್ಷದ ಮೇಲೆ ನಾವು ಮಾಡುತ್ತೇವೆ ಎನ್ನುವುದು ಇದು ಒಂದು ಸಾಧ್ಯವಾಗದ ವಿಚಾರವೆಂದು ನಾವು ಹೇಳಿದ್ದೇವೆ, ನೀವು ಹೇಳುತ್ತೀರಿ.

ಇನ್ನೊಬ್ಬರು ಹೇಳುತ್ತಾರೆ. ಅದಕ್ಕೆ ನಾವು ನೀವು ಎನ್ನುವ ಪ್ರಶ್ನೆ ಅಲ್ಲ. ನೀವು ಅರ್ಧ ಭಾಗಿಗಳಾಗಿದ್ದೀರಿ, ನಾವು ಭಾಗೀಗಳಿದ್ದೇವೆ. ಹೆಚ್ಚು ಕಡಿಮೆ ನಾವಿಬ್ಬರೂ ಐವತ್ತು, ಐವತ್ತು ಇದ್ದ ಹಾಗೆ. ನೀವು ಏಳು ವರ್ಷ ಆಳಿದ್ದೀರಿ, ನೀವು ಏನೂ ತಪ್ಪಿಸಿಕೊಳ್ಳುವ ಹಾಗೆ ಇಲ್ಲ. ಅದಕ್ಕೆ ಈಗ ನಾವೂ ನೀವೂ ಕೂಡಿ ಈ ಪ್ರಾಜೆಕ್ಟ್ ಯಾವ ರೀತಿ ಮಾಡಬೇಕು, ರೈತರ ಜೀವನಕ್ಕೆ ಒಳ್ಳೆಯದನ್ನು ಮಾಡುವ ಬಗ್ಗೆ ಚಿಂತನೆ ಮಾಡಬೇಕು. ಮಾನ್ಯ ಮುಖ್ಯಂತ್ರಿಗಳು ಅದರ ಬಗ್ಗೆ ಸಭೆಯನ್ನು ಕರೆಯಬೇಕು. ಈಗಾಗಲೇ ನಾಲ್ಕೂವರೆ ತಿಂಗಳು ಆಯಿತು. ಇದರ ಬಗ್ಗೆ ಒಂದು ಸಭೆಯನ್ನು ಸಹ ಕರೆದಿಲ್ಲ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಬಗ್ಗೆ ಇಲ್ಲ. ಕಾವೇರಿ ಬೇಸಿನ್ ಬಗ್ಗೆ ಇಲ್ಲ. ಒಂದು ದೊಡ್ಡ ಚಳುವಳಿ ತುಮಕೂರಿನಲ್ಲಿ ನಡೆಯಿತು. ನಮ್ಮ ಕಾಂಗ್ರೆಸ್ಸ್ ಪಕ್ಷದವರು ಕೂಡ ಚಳುವಳಿ ಮಾಡಿದರು. ಮಾನ್ಯ ವೈ.ಕೆ. ರಾಮಯ್ಯನವರು ಮಾಡಿದರು. ಎಲ್ಲರೂ ಮಾಡಿದರೂ ಕೂಡ ಅದಕ್ಕೆ ಮಾನ್ಯ ಮುಖ್ಯಮಂತ್ರಿಗಳು ರಾಜಕೀಯ ಬಣ್ಣ ಕೊಡತಕ್ಕಂಥಾದ್ದು ಮಾಡಿದರೇ ಹೊರತು ಆ ಸಮಸ್ಯೆ ಬಗೆಹರಿಸತಕ್ಕಂಥ ಪ್ರಾಮಾಣಿಕ ಪ್ರಯತ್ನವನ್ನು ಮಾಡಲಿಲ್ಲ. ವೈ.ಕೆ. ರಾಮಯ್ಯನವರು ಈ ಕಾರಣಕ್ಕೋಸ್ಕರ ಕುಳಿತಿದ್ದಾರೆ ಎಂದರು. ಅಲ್ಲಿ ಜನ ಏನು ಕೇಳುತ್ತಿದ್ದಾರೆ ಎಂದರೆ ಕಾಲುವೆ ಮುಗಿಸಿ, ಹಣ ಬಿಡುಗಡೆ ಮಾಡಿ, ಈಗ ಅಲ್ಲಿ ಏನು ಕೆಲಸ ನಿಂತಿದೆ ಅದನ್ನು ನೀವು ಮುಂದುವರೆಸಿ ಎಂದು.

ನೀವು ಅದನ್ನು ಮಾಡಿದರೆ ಸಾಕು. ವೈ.ಕೆ. ರಾಮಯ್ಯನವರದು, ನಿಮ್ಮದು ವೈಯುಕ್ತಿಕ ಏನಾದರೂ ಮತಬೇಧಗಳು ಇದ್ದರೆ, ದ್ವೇಷ ಇದ್ದರೆ ಅದನ್ನು ನೀವು ಅಸೆಂಬ್ಲಿಯ ಹೊರಗೆ ಸರಿಪಡಿಸಿಕೊಳ್ಳಿ. ಅಥವಾ ಪಕ್ಷದ ದೃಷ್ಟಿಯಿಂದ ರಾಜಕೀಯವಾಗಿ ನೀವು ಸರಿಪಡಿಸಿಕೊಳ್ಳಿ. ಆ ಸಿಟ್ಟನ್ನು ರೈತರ ಮೇಲೆ ತೀರಿಸಿಕೊಳ್ಳಬೇಡಿ. ಆ ಸಿಟ್ಟನ್ನು

ಬಡವರ ಮೇಲೆ ತೀರಿಸಿಕೊಳ್ಳಬೇಡಿ. ಆ ಸಿಟ್ಟನ್ನು ತುಮಕೂರಿನ ಜನತೆಯ ಮೇಲೆ ತೀರಿಸಿಕೊಳ್ಳಬೇಡಿ. ಇವತ್ತಿನ ದಿವಸ ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಸರ್ಕಾರ ನಾಲ್ಕು ತಿಂಗಳಿನಿಂದ ಎಲ್ಲಾ ಕೆಲಸಗಳನ್ನು ಸ್ಥಗಿತಗೊಳಿಸಿದೆ. ನಾವು ಎಷ್ಟೇ ಹೇಳಿದರೂ ಕೂಡ ಕೇಳುತ್ತಾ ಇಲ್ಲ. ನಾವು ಈ ಸದನದಲ್ಲಿ ಪ್ರಶ್ನೆ ಮುಖಾಂತರ ಕೇಳಿದ್ದೇವೆ, ಶೂನ್ಯ ವೇಳೆಯಲ್ಲಿ ಕೇಳಿದ್ದೇವೆ, ಯಾವುದೇ ರೀತಿಯಲ್ಲಿ ಈ ಕೆಲಸವನ್ನು ಪ್ರಾರಂಭ ಮಾಡಬೇಕು ಎಂದು ಕೇಳಿಕೊಂಡರೂ ಕೂಡ ನಾನು ಇದರ ಬಗ್ಗೆ 11ನೇ ತಾರೀಖಿಗೆ ಉತ್ತರ ಕೊಡುತ್ತೇನೆ ಎಂದರು. ಕೊನೆಗೆ ಪಬ್ಲಿಕ್ ಮೀಟಿಂಗ್‌ನಲ್ಲಿ 11ನೇ ತಾರೀಖಿಗೆ ಎಲ್ಲಾ ಕೆಲಸವನ್ನು ಪ್ರಾರಂಭ ಮಾಡಿಸುತ್ತೇನೆ ಎಂದು ಹೇಳಿದರು. ಈಗ 11ನೇ ತಾರೀಖು ಆಯಿತು. ಇವತ್ತು 19ನೇ ತಾರೀಖು. ಎಲ್ಲಿದೆ, ಏನು ಸೂಚನೆ ಕೊಟ್ಟಿರಿ ತಾವು? ಎಲ್ಲಿ ಕೆಲಸ ಪ್ರಾರಂಬವಾಗಿದೆ? ಇದನ್ನು ನೀವು ಹೇಳುವಾಗವಾದರೂ ತೂಕ ಇರಬೇಕು ಅಥವಾ ಆ ಮಾತಿಗೆ ಬೆಲೆ ಇರಬೇಕಲ್ಲಾ ಈ ರೀತಿ ನೀವು ಆನೆ ನಡೆದ ಹಾಗೆ ನಡೆದರೆ ಎಂದೂ ಕೂಡ ನಾವು ನಮ್ಮ ಗುರಿಯನ್ನು ಮುಟ್ಟುವುದಕ್ಕೆ ಆಗುವುದಿಲ್ಲ ಮತ್ತು ಈ ಬಜಾವತ್ ಅವಾರ್ಡ್‌ನಲ್ಲಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಏನಿದೆ ಅದನ್ನು ಉಳಿಸಿಕೊಳ್ಳುವುದಕ್ಕೆ ಆಗುವುದಿಲ್ಲ.

ಮುಂದೆ ನಾವು ನೀವೆಲ್ಲರೂ ಕೂಡ ಆ ಜನರ ಶಾಪಕ್ಕೆ ಗುರಿಯಾಗುತ್ತೇವೆ. ಅದಕ್ಕಾಗಿ ದಯವಿಟ್ಟು ಇದರ ಬಗ್ಗೆ ಸ್ಪಷ್ಟ ನಿಲುವು ತಿಳಿಸಬೇಕು. ಯಾವ ರೀತಿಯಾಗಿ ಹಣವನ್ನು ಸಂಗ್ರಹಣೆ ಮಾಡುತ್ತಾರೆ ಮತ್ತು ಓವರ್ ಅಂಡ್ ಅಬೌವ್ ನಾನು ಈಗಾಗಲೇ ಹೇಳಬಲ್ಲೆ. 200, 250 ಕೋಟಿ ರೂಪಾಯಿ ಎಕ್ಸ್‌ಟ್ರಾ ಕೊಡಿ ಎಂದು ಕೇಳಿದ್ದೇವೆ. ಅದನ್ನು ಯಾವ ರೀತಿ ಮಾಡುತ್ತಾರೆ, ಮೈನರ್ ಇರಿಗೇಷನ್ ಬಗ್ಗೆ ಯಾವ ರೀತಿ ಮಾಡುತ್ತಾರೆ. ಮತ್ತು ರಾಯಚೂರಿನಲ್ಲಿ ಆದಂತಹ ತುಂಗಭದ್ರಾ ಕೆನಾಲ್‌ನಿಂದ ಕೊಡತಕ್ಕಂಥ ನೀರಿನ ಬಗ್ಗೆ ನಾನು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ. ಆ ಮಾತನ್ನು ಕೂಡ ಅವರು ಉಳಿಸಿಕೊಂಡಿಲ್ಲ. ಅದನ್ನು ಯಾವರೀತಿ ಬಗೆಹರಿಸುತ್ತೀರಿ ಎನ್ನುವ ಮಾತನ್ನು ಹೇಳಬೇಕು, ನಾವು ಇದಕ್ಕೆ ಉತ್ತರ ನಿರೀಕ್ಷಣೆ ಮಾಡುತ್ತೇವೆ. ನನಗೆ ಮಾತನಾಡುವುದಕ್ಕೆ ಸಮಯ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಎಸ್. ಬಂಗಾರಪ್ಪ (ಸೊರಬ) : ಮಾನ್ಯ ಉಪಾಧ್ಯಕ್ಷರೆ, ಅಖಂಡ ನಮ್ಮ ಕರ್ನಾಟಕ ರಾಜ್ಯದಲ್ಲಿ ಅಷ್ಟೇ ಅಲ್ಲದೆ ಅಖಂಡ ಭಾರತದಲ್ಲಿ ಇರತಕ್ಕಂಥ ನಮ್ಮ ಆರ್ಥಿಕ ವ್ಯವಸ್ಥೆ ಏನಿದೆ ಇದು ಕೃಷಿನ ಆಧಾರಿತ ಆರ್ಥಿಕ ವ್ಯವಸ್ಥೆ. ಅಗ್ರಿಕಲ್ಚರ್ ಬೇಸ್ಡ್ ಎಕಾನಮಿ. ಪರದೇಶಗಳಿಗೆ ನಾವು ಹೋಲಿಸಿದರೆ ಅಲ್ಲಿ ಮಳೆ ಕಡಿಮೆಯಾಗಿ ಬೆಳೆ ಹಾಳಾಗಿ ಹೋದರೆ ಅಲ್ಲಿ ಆರ್ಥಿಕ ವ್ಯವಸ್ಥೆ ತನ್ನ ಸಮತೋಲನವನ್ನು ಕಳೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಉದಾಹರಣೆಗೆ ಅಮೇರಿಕಾವನ್ನು ತೆಗೆದುಕೊಳ್ಳೋಣ. ಅಥವಾ ಐರೋಪ್ಯದಲ್ಲಿ ಇರತಕ್ಕ ಹಲವಾರು ರಾಷ್ಟ್ರಗಳನ್ನು ತೆಗೆದುಕೊಳ್ಳೋಣ. ತನ್ನ ಸಮತೋಲನವನ್ನು ಕಳೆದುಕೊಳ್ಳುವುದೇ ಇಲ್ಲ ಅಲ್ಲಿ. ಇವತ್ತು ಅಮೇರಿಕಾದಲ್ಲಿ ಇರತಕ್ಕಂಥ ಟೆನ್ನೀಸಿ ಸ್ಟೇಟ್ ಅನ್ನು ನಾವು ತೆಗೆದುಕೊಂಡರೆ ಅಲ್ಲಿ ಕೂಡ ನೀರಿಗಾಗಿ ಬೇಕಾದಷ್ಟು ಪರದಾಟ ನಡೆದಿರತಕ್ಕಂಥಾದ್ದನ್ನು ಕೂಡ ನಾವು ಕಂಡಿದ್ದೇವೆ. ಚರಿತ್ರೆಯಲ್ಲಿ ಓದಿದ್ದೇವೆ. ಉದಾಹರಣೆಗೆ ಇವತ್ತು ಅಮೇರಿಕಾದ ಲಾಸ್ ಏಜಲೀಸ್‌ನಲ್ಲಿ ವರ್ಷದಲ್ಲಿ ಎಷ್ಟು ಮಳೆಯಾಗುತ್ತದೆ. ಅತೀ ಕಡಿಮೆ ಮಳೆ ಬೀಳತಕ್ಕಂಥ ಪ್ರದೇಶಗಳಲ್ಲಿ ಲಾಸ್ ಏಂಜಲೀಸ್ ಒಂದು. ಆದರೆ ಅಲ್ಲಿ ಅವರು ಸಂಪದ್ಭರಿತವಾಗಿ ಬೆಳೆಸಿ ಇಟ್ಟಿದ್ದಾರೆ. ಔದ್ಯೋಗಿಕ ಆರ್ಥಿಕ ವ್ಯವಸ್ಥೆ ಆಧಾರದ ಮೇಲೆ ಇಂಡಸ್ಟ್ರೀಯಲೈಸ್ಡ್ ಕಂಟ್ರಿ. ಅದಕ್ಕಾಗಿ ಅವರು ಮುಗಿಲನ್ನು ನೋಡಿ ತಮ್ಮ ಆರ್ಥಿಕ ವ್ಯವಸ್ಥೆಯನ್ನು ಗುರುತಿಸತಕ್ಕಂಥ ವಿಚಾರವನ್ನು ಕೈಬಿಟ್ಟಿದ್ದಾರೆ.

ಮುಗಿಲನ್ನು ನಂಬಿಕೊಂಡು ನಾವು ಜೀವನ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವ ವಿಚಾರವನ್ನು ಅವರು ಇಟ್ಟುಕೊಂಡಿದ್ದಾರೆ. But that is not the case where we see many of the things in tropical countries. ಉದಾಹರಣೆಗೆ ನಮ್ಮ ದೇಶ, ಪಾಕಿಸ್ತಾನ, ಬಾಂಗ್ಲಾದೇಶ, ಸಿಲೋನ್, ಥೈಲ್ಯಾಂಡ್ ಇವುಗಳು ಯಾವುದನ್ನೇ ತೆಗೆದುಕೊಂಡರೂ ನಾವು ಮಳೆ ಜಾಸ್ತಿ ಬೀಳತಕ್ಕಂಥ ಪ್ರದೇಶದಲ್ಲಿ ಇರುವುದರಿಂದ ತೆಗೆದುಕೊಂಡರೂ ನಾವು ಮಳೆ ಜಾಸ್ತಿ ಬೀಳತಕ್ಕಂಥ ಪ್ರದೇಶದಲ್ಲಿ ಇರುವುದರಿಂದ ಫಲವತ್ತಾಗಿ ಇರತಕ್ಕಂಥ ಭೂಮಿ ಇರುವುದರಿಂದ ಭೂ ವಾತಾವರಣದ ಹಿನ್ನೆಲೆ ಇರುವುದರಿಂದ ನಾವು ಮಳೆಯನ್ನು ಸದುಪಯೋಗ ಪಡಿಸಿಕೊಳ್ಳತಕ್ಕಂಥ ವಿಚಾರಕ್ಕೆ ಹೆಚ್ಚಿನ ಗಮನ ಕೊಡುತ್ತೇವೆ. ಅದಕ್ಕಾಗಿ ನಾನು ಕೃಷಿ ಆಧಾರಿತ ಆರ್ಥಿಕ ವ್ಯವಸ್ಥೆಗೆ ಗಮನ ಕೊಡುತ್ತೇವೆ. ಇವತ್ತು ಪಟ್ಟಣ ಪ್ರದೇಶಗಳು ಹೆಚ್ಚು ಇವೆ.

ಶೇ. 75-78ರಷ್ಟು ಭಾಗವನ್ನು ಗ್ರಾಮೀಣ ಪ್ರದೇಶಗಳಿಗೆ ಸೇರಿಸಿದ್ದು ಉಳಿದಿದ್ದು ಪಟ್ಟಣ, ನಗರ ಪ್ರದೇಶಗಳಿಗೆ ಬರುತ್ತದೆ. ಪಟ್ಟಣ, ನಗರ ಪ್ರದೇಶಗಳಲ್ಲಿ ಆರ್ಥಿಕ ವ್ಯವಸ್ಥೆ ಎಲ್ಲಿದೆ, ನಮ್ಮಂತಹ ದೇಶಗಳಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಆರ್ಥಿಕ ವ್ಯವಸ್ಥೆಯನ್ನು ಅವಲಂಬನೆ ಮಾಡಿಕೊಂಡಿದೆ. ಅಲ್ಲಿ ಬೆಳೆ ಬಂದರೆ ತಾಲ್ಲೂಕು ಮಟ್ಟದಲ್ಲಿರುವಂತಹ ಅಂಗಡಿಗಳಲ್ಲಿ ವ್ಯಾಪಾರವಾಗುತ್ತದೆ, ಇಲ್ಲದಿದ್ದರೆ ವ್ಯಾಪಾರವಾಗುವುದಿಲ್ಲ. ರೈತರು ಬಂದು ವ್ಯಾಪಾರ ಮಾಡಬೇಕು. ಈ ಒಂದು ದೃಷ್ಟಿಯಿಂದ ಕೃಷಿಯಾಧಾರಿತ ಆರ್ಥಿಕ ವ್ಯವಸ್ಥೆಗೆ ಹೆಚ್ಚಿನ ಗಮನ ಕೊಡತಕ್ಕಂಥ ವಿಚಾರವನ್ನು ಅನುಸರಿಸತಕ್ಕಂಥ ಒಂದು ಕಾರಣಕ್ಕೆ ಯಾವ ರೀತಿಯಾದಂಥ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕೆಂಬುದು ಮೂಲ ಪ್ರಶ್ನೆ. ಅದರ ಬಗ್ಗೆ ಮಾತನಾಡುವವರು ಆ ಕಡೆಯ ಸದಸ್ಯರಾಗಬಹುದು ಈ ಕಡೆಯ ಸದಸ್ಯರಾಗಬಹುದು ನಾವು ಈ ಔಕಟ್ಟನ್ನು ಬಿಟ್ಟು ಹೋಗುವುದಕ್ಕಾಗುವುದಿಲ್ಲ. ಇಡೀ ರಾಷ್ಟ್ರದಲ್ಲಿ ಮತ್ತು ಕರ್ನಾಟಕದಲ್ಲಿ ವರ್ಷದಿಂದ ವರ್ಷಕ್ಕೆ ಮಳೆಯ ಪ್ರಮಾಣ ಕಡಿಮೆಯಾಗುತ್ತಿದೆ ಎಂಬುದನ್ನು ನಾವು ಪರಿಣಿತರು ಕೊಡುವ ಅಂಕಿ ಅಂಶಗಳ ಆಧಾರದ ಮೇಲೆ ಅದನ್ನು ಗುರುತಿಸಿಕೊಂಡಿದ್ದೇವೆ. ಈಗ ನಾವು ಮಳೆಯಿಂದ ಯಾವುದಕ್ಕೆ ಹೆಚ್ಚಿನ ಉಪಯೋಗ ಪಡೆಯುತ್ತಿದ್ದೇವೆಂದರೆ ಬೆಳೆಗಳನ್ನು ಬೆಳೆಯುತ್ತೇವೆ, ಡ್ಯಾಮ್‌ಗಳನ್ನು ಕಟ್ಟಿ ನೀರನ್ನು ಸಂಗ್ರಹಿಸುತ್ತೇವೆ. ಹೊಳೆಗಳಲ್ಲಿರುವಂತಹ ಜಲವನ್ನು ಉಪಯೋಗ ಮಾಡಿ ಸಣ್ಣ, ಅತಿ ಸಣ್ಣ, ಮಧ್ಯಮ ಮತ್ತು ಭಾರಿ ನೀರಾವರಿ ಯೋಜನೆಗಳನ್ನು, ಮತ್ತು ವಿದ್ಯುಚ್ಛಕ್ತಿಯನ್ನು ಉತ್ಪಾದನೆಯನ್ನು ಮಾಡುತ್ತಿದ್ದೇವೆ. ಇವತ್ತು ಡ್ಯಾಮ್‌ಗಳನ್ನು ಕಟ್ಟುವುದು ಬರೀ ಕೃಷಿ ಆಧಾರಿತ ಆರ್ಥಿಕ ವ್ಯವಸ್ಥೆಗೆ ಬೆಂಬಲ ಕೊಡುವುದಕ್ಕೆ ಅಷ್ಟೇ ಅಲ್ಲ, ಈ ಮಳೆ ನೀರನ್ನು ಆಧಾರವಾಗಿಟ್ಟುಕೊಂಡು ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುತ್ತಿದ್ದೇವೆ.

ಉದಾಹರಣೆಗೆ ಶರಾವತಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್, ಶಿಂಷಾ ಇವೆಲ್ಲವನ್ನೂ ನಾವು ಇಟ್ಟುಕೊಂಡಿದ್ದೇವೆ. Memorandum of Agreement ಅಗ್ರಿಮೆಂಟ್‌ಗೆ ಸಹಿ ಮಾಡಿದ್ದರೆ, ಮಾಡಿರುವಂಥಾದ್ದು, ಅಥವಾ ಮಾಡುತ್ತಾ ಇದ್ದರೆ, ನಾವು ನೀರಿನ ಆಧಾರದ ಮೇಲೆ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಲು ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಇಟ್ಟುಕೊಂಡಿದ್ದೇವೆ. ಅದರ ಅರ್ಥ ಇನ್ನೊಂದು ಮಾತು ಹೇಳುವುದಾದರೆ ಈ ಎರಡು ಪ್ರಾಮುಖ್ಯವಾದಂತಹ ವಿಚಾರವನ್ನು ನೋಡಿ ಮಳೆಯನ್ನು ಆಶ್ರಯಿಸಿ ನಾವು ಇದನ್ನು ಇಟ್ಟುಕೊಂಡಿದ್ದೇವೆ. ನಾವು ಎಷ್ಟೋ ಸಾರಿ, ವಿದ್ಯುಚ್ಛಕ್ತಿಯನ್ನು ಉತ್ಪಾದನೆಯನ್ನು ಮಾಡಲು ಡ್ಯಾಮ್‌ಗಳನ್ನು ಕಟ್ಟಿದರೂ ಆ ಡ್ಯಾಮ್‌ಗಳು ತುಂಬುವುದಿಲ್ಲ. ಉದಾಹರಣೆಗೆ ಕಾಳಿ, ಸೂಪ ಅಣೆಕಟ್ಟುಗಳನ್ನು ಕಟ್ಟಿದ ಮೇಲೆ ಎಷ್ಟು ಸಾರಿ ತುಂಬಿದೆ. ಒಂದೆರಡು ಸಾರಿ ಬಿಟ್ಟರೆ ಸೂಪ ಅಣೆಕಟ್ಟು ಮತ್ತೆ ತುಂಬಿಲ್ಲ. ಹಾಗೆಯೇ ಶರಾವತಿ, ಮಲಪ್ರಭಾ, ಎಷ್ಟು ಭಾರಿ ತುಂಬಿದೆ, ಅದೇ ರೀತಿಯಾಗಿ ಭದ್ರಾ ಎಷ್ಟು

ಸಾರಿ ತುಂಬಿದೆ? ಅಣೆಕಟ್ಟುಗಳನ್ನು ಕಟ್ಟಿದ ಮೇಲೆ ನಾವು ಮಳೆಯನ್ನು ಆಶ್ರಯಿಸಿ ಅದರ ಉಪಯೋಗ ಮಾಡಿಕೊಳ್ಳಬೇಕೆಂಬ ಆಸೆಯಿಂದ ಮುಗಿಲ ಕಡೆ ನೋಡಿ ನಾವು ಅಣೆಕಟ್ಟನ್ನು ನಿರ್ಮಾಣ ಮಾಡಿದ್ದೇವೆ. ಆದರೆ ಅದನ್ನು ತುಂಬಿಸುವಂತಹ ಶಕ್ತಿ ನಮ್ಮ ಹತ್ತಿರವಿಲ್ಲ. ಈ ದೃಷ್ಟಿಯಿಂದ ನಾವು ಎಷ್ಟು ಮಳೆ ಬಂದರೂ ಅದನ್ನು ಸದುಪಯೋಗ ಮಾಡಿಕೊಳ್ಳಬೇಕು.

ಈಗ ಇರುವಂತಹ ಭದ್ರಾ ಏನಾಯಿತು. ನಾನು ಮುಖ್ಯಮಂತ್ರಿಯಾಗಿದ್ದಾಗ ಒಂದು ಸಾರಿ ಕಾಲುವೆ ರೈಟ್ ಬ್ಯಾಂಕ್ ಕೆನಾಲ್ ಬ್ರೀಚ್ ಆಯಿತು. ಡ್ಯಾಮ್ ಕೆಳಗೆ ಒಡೆದು ಹೋಯಿತು. ಆಗ ಅಲ್ಲಿ 200-300 ಕೋಟಿ ರೂ.ಗಳ ಬೆಳೆ ಬೆಳೆದು ನಿಂತಿತ್ತು. ನೀರು ಕೊಡದೇ ಇದ್ದರೆ ಬೆಳೆ ಒಣಗಿಹೋಗುತ್ತಿತ್ತು. ಆ ಸಮಯದಲ್ಲಿ ಭದ್ರಾ ಡ್ಯಾಮ್ ತುಂಬಿತ್ತು. ಚಾನಲ್ ನಂ. 4 ಅನ್ನು ಕಟ್ ಮಾಡಿ ಮುಂದಕ್ಕೆ ನೀರನ್ನು ತೆಗೆದುಕೊಂಡು ಒಡೆದಿರುವಂತಹ ಜಾಗವನ್ನು ಬಿಟ್ಟು ಮುಂದಕ್ಕೆ ಸಂಪರ್ಕವನ್ನು ಕೊಟ್ಟು ಸುಮಾರು 15-20 ದಿವಸಗಳಲ್ಲಿ ಈ ವ್ಯವಸ್ಥೆಯನ್ನು ಮಾಡಿ ಬೆಳೆಗೆ ನೀರನ್ನು ಒದಗಿಸಿದೆವು. ಅದು ಶಿವಮೊಗ್ಗ ಜಿಲ್ಲೆಯ ಚೆನ್ನಗಿರಿ ಭಾಗವಾಗಿರಬಹುದು, ಹರಿಹರ, ದಾವಣಗೆರೆ ಈ ಭಾಗಗಳಿಗೆ ನೀರನ್ನು ಕೊಟ್ಟಿದ್ದೇವೆ. ಅದೇ ರೀತಿ ಬಳ್ಳಾರಿ ಜಿಲ್ಲೆ ಹರಪ್ಪನ ಹಳ್ಳಿ, ತಾಲ್ಲೂಕುಗಳಿಗೆ ಇತ್ಯಾದಿ ಭಾಗಗಳಿಗೂ ನೀರನ್ನು ಕೊಟ್ಟಿದ್ದಾರೆ. ನಾನು ಇದನ್ನು ಉದಾಹರಣೆಗೆ ಹೇಳುತ್ತಿದ್ದೇನೆ. ಇದನ್ನು ಪಕ್ಷಾತೀತವಾಗಿ ವಿಚಾರ ಮಾಡುವಂತಹ ವಿಚಾರ. ನಾನು ಏತಕ್ಕಾಗಿ ಮಾತನ್ನು ಹೇಳುತ್ತಿದ್ದೇನೆಂದರೆ ಒಂದೇ ಒಂದು ಕಾರಣದಿಂದ ಒಂದೊಂದು ಸಾರಿ ಡ್ಯಾಮ್ ತುಂಬುವುದಿಲ್ಲ. ಆಗ ನಾವು ನಮ್ಮ ಬೆಳೆಗಳ ಬೆಳೆಯುವ ಪದ್ಧತಿಯನ್ನು ಕೂಡ ಕ್ರಾಪಿಂಗ್ ಪ್ಯಾಟ್ರನ್ ಏನಿದೆ ಅದನ್ನೂ ಕೂಡ ನಾವು ಬದಲಾವಣೆ ಮಾಡದಿದ್ದರೆ ಬಹಳ ಕಷ್ಟವಾಗುತ್ತದೆ. ನಮ್ಮ ದೇಶದಲ್ಲಿ ವೈಜ್ಞಾನಿಕವಾಗಿ ಇದನ್ನು ಬದಲಾಯಿಸಬೇಕು. ಇದನ್ನು ನಾವು ಅಧಿಕಾರದಲ್ಲಿದ್ದಾಗಲೂ ಹೇಳಿದ್ದೇವೆ, ಇಲ್ಲದಾಗಲೂ ಹೇಳಿದ್ದೇವೆ. ಕೇಂದ್ರ ಸರ್ಕಾರದವರು ಇದರ ಬಗ್ಗೆ ಹೆಚ್ಚು ಗಮನ ಕೊಡಬೇಕು.

ಉದಾಹರಣೆಗೆ ಒಬ್ಬ ಮನುಷ್ಯನಿಗೆ 20 ಎಕರೆ ಭೂಮಿ ಇದ್ದರೆ ಏನು ಬೆಳೆಯಬೇಕೆಂಬುದೇ ಗೊತ್ತಿರುವುದಿಲ್ಲ. ರಾಯಚೂರು ಜಿಲ್ಲೆಯಲ್ಲಿ ಉದಾಹರಣೆಗೆ ಅಲ್ಲಿ ಹತ್ತಿ ಬೆಳೆಯುತ್ತಾರೆ, ಶೇಂಗಾ ಬೆಳೆಯುತ್ತಾರೆ, ತುಂಗಾಭದ್ರಾ ಜಲಾಶಯ ನೀರನ್ನು ಉಪಯೋಗಿಸಿಕೊಂಡು ಭತ್ತವನ್ನು ಬೆಳೆಯುವಂತಹ ಭಾಗಗಳು ಇವೆ. ನನ್ನ ಕಾಲದಲ್ಲಿ balancing reservoir ನಿಂದ ಏನು ಮಾಡಿದೆ ಎಂಬುದನ್ನು ಹೇಳುತ್ತೇನೆ. ಅದರಿಂದ ಕುಡಿಯುವ ನೀರು ರಾಯಚೂರು ಟೌನ್‌ಗೂ ಬರುತ್ತದೆ. ನಮಗೆ ಗೊತ್ತಿರುವ ಹಾಗೆ ಸುಮಾರು 60-70 ಸಾವಿರ ಎಕರೆಗಳು ಇರಬಹುದು. ಅದಕ್ಕೆ ನೀರು ಬರುವುದಕ್ಕೆ, ವಿದ್ಯುಚ್ಛಕ್ತಿಗೂ ಕೂಡ ಹಣವನ್ನು ಬಿಡುಗಡೆ ಮಾಡಿದ್ದೇವೆ. ನಾವು ಎಷ್ಟೋ ಸಾರಿ ನೀರನ್ನು ಕೊಟ್ಟರೂ ಸಹ ಬೆಳೆಯನ್ನು ಸಕಾಲದಲ್ಲಿ ತೆಗೆಯುವುದಕ್ಕೆ ಆಗುವುದಿಲ್ಲ, ಕೆಲವೊಮ್ಮೆ ನೀರನ್ನು ಕೊಡಲು ನೀರು ಸಾಕಾಗುವುದಿಲ್ಲ, ಏಕೆಂದರೆ ಡ್ಯಾಮ್‌ನಲ್ಲಿ ನೀರು ಇರುವುದಿಲ್ಲ. tail enders ಬಗ್ಗೆ ನಾವು ಯೋಚನೆ ಮಾಡಬೇಕು. ನಮ್ಮಂತಹ ದೇಶದಲ್ಲಿ ಕೇಂದ್ರ ಸರ್ಕಾರವು ಎಲ್ಲಾ ರಾಜ್ಯ ಸರ್ಕಾರಗಳನ್ನು ಕರೆಸಬೇಕು. ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ನೆನಪು ಮಾಡುವುದೆನೆಂದರೆ ನಾನು ಮುಖ್ಯಮಂತ್ರಿಯಾಗಿದ್ದಾಗ ಈ ಮಾತನ್ನು ಹೇಳಿದ್ದೆ. I had made a renewed request to the Hon'ble Prime Minister at that point of time to call for a meeting of all the concerned Chief Ministers of all the States to discuss only one thing

ನಮ್ಮ ಕ್ರಾಪಿಂಗ್ ಪ್ಯಾಟರ್ನ್ ಇದೆಯಲ್ಲಾ ಅದರಲ್ಲಿ ನಾವು ಮುಂದೆ ಬರುವಂತಹ ಆಹಾರವನ್ನು ದಾಸ್ತಾನು ನಮ್ಮ ರಾಷ್ಟ್ರದಲ್ಲಿ ಉತ್ಪಾದನೆ ಮಾಡಿ ಅದನ್ನು ದಾಸ್ತಾನು

ಮಾಡಿ ಇಡತತಕ್ಕಂಥ ದೃಷ್ಟಿಯಿಂದ ಎಲ್ಲವನ್ನೂ ಕರೆಸಿ ಎಂದು ಕೇಳಿದ್ದೆ. ಇವತ್ತು ಹತ್ತಿಗೆ ಒಳ್ಳೆಯ ಬೆಲೆ ಬಂತು ಎಂದರೆ ರೈತರು ಎಲ್ಲರೂ ಹತ್ತಿಯನ್ನೇ ಬೆಳೆಯುತ್ತಾರೆ. ಆಮೇಲೆ ಹತ್ತಿಯನ್ನು ಕೇಳುವವರು ಗತಿ ಇರುವುದಿಲ್ಲ. ಕೊಳ್ಳುವವರು ಗತಿ ಇರುವುದಿಲ್ಲ. ಹಳೆಯ ಮೈಸೂರು ರಾಜ್ಯದಲ್ಲಿ ಶೇಂಗಾ, ನೆಲಗಡಲೆ ಎಂದು ಕರೆಯುತ್ತಾರೆ? ಟೋಮೊಟೊ ಹೆಚ್ಚಾಗಿ ಬೆಳೆದರೆ 50 ಪೈಸೆ ಕೆ.ಜಿ.ಗೆ ಕೊಳ್ಳುವವರು ಇರುವುದಿಲ್ಲ. ಇದನ್ನು ನಾನು ಉದಾಹರಣೆಗೆ ಹೇಳಿದುದ್ದು. ಹೆಚ್ಚು ನೀರು ಇರುವಂತಹ ಭಾಗಗಳಲ್ಲಿ ಭತ್ತವನ್ನು ಬೆಳೆಯುತ್ತಾರೆ. It is O.K. permanent irrigation facilities ಇರತಕ್ಕ ಕಡೆ ಭತ್ತವನ್ನು ಅಥವಾ ಹತ್ತಿಯನ್ನು ಬೆಳೆಯಬೇಕಾಗುತ್ತದೆ. ಆದರೆ ನಮ್ಮಲ್ಲಿರತಕ್ಕ 20 ಎಕರೆ ಭೂಮಿಯಲ್ಲೂ ಹತ್ತಿಯನ್ನು ಹಾಕುವುದು. ಇಲ್ಲದಿದ್ದರೆ 20 ಎಕರೆಗೂ ಭತ್ತವನ್ನು ಹಾಕಿಕೊಂಡು ಕುಳಿತುಕೊಳ್ಳುವುದು. ಈ cropping pattern ಏನಿದೆ ಈ ರೀತಿಯಲ್ಲಿ ಇದೆಯಲ್ಲಾ, ನಾವು ಇದನ್ನು ಬದಲಾವಣೆ ಮಾಡದೆ ಇದ್ದರೆ ಆಗುವುದಿಲ್ಲ. ಇವತ್ತು ಅಮೇರಿಕಾ, ಜಪಾನ್ ದೇಶಗಳಲ್ಲಿ ಈ ರೀತಿ ಇಲ್ಲ. ನಾನು ಅಮೇರಿಕಾಕ್ಕೆ ಹೋಗಿದ್ದಾಗ ಅಲ್ಲಿನ ಅಧಿಕಾರಿಗಳ ಜೊತೆಯಲ್ಲಿ ಈ ಬಗ್ಗೆ ಮಾತನಾಡಿದೆ.

ನೀರಾವರಿ ಯೋಜನೆಯ ಅಂಕಿ ಅಂಶಗಳ ಬಗ್ಗೆ ನಂಜೇಗೌಡರು, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು, ಮತ್ತು ವೀರಪ್ಪ ಮೊಯಿಲಿಯವರು ಇವರೆಲ್ಲಾ ಮಾತನಾಡಿದ್ದಾರೆ. ಅದುದರಿಂದ ಅದರ ಬಗ್ಗೆ ತಿರುಚಿ ಮುರುಚಿ ಮಾತನಾಡುವಂತಹ ಅವಶ್ಯಕತೆ ಇಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಅಲ್ಲಿ 400 ಎಕರೆ, 5,000 ಎಕರೆಗಳು, 10,000 ಸಾವಿರ ಎಕರೆಗಳುಳ್ಳ ಭೂ ಮಾಲಿಕರು ಇದ್ದಾರೆ. ನಮ್ಮಲ್ಲಿ ಯಾರು ನೌಕರಿ ಮಾಡುತ್ತಾರೆ. ಅವರು ಜಮೀನು ಮಾಡುತ್ತಾರೆ, ಅಂಗಡಿಯನ್ನೂ ಇಡುತ್ತಾರೆ. ಈ ರೀತಿಯಾಗಿ ಎಲ್ಲಾ ಉದ್ಯೋಗಗಳನ್ನು ಮಾಡುತ್ತಾರೆ. ಆದರೆ ಆ ದೇಶಗಳಲ್ಲಿ ಈ ರೀತಿ ಇರುವುದಿಲ್ಲ. ನಾವು ಇಲ್ಲಿ ಏನು ಮಾಡುತ್ತೇವೆಂದರೆ ಈ ವರ್ಷ ರೇಟ್ ಬಂತೆಂದರೆ ಅದೇ ಬೆಳೆಯನ್ನು ಮತ್ತೆ ರೈತರು ಹಾಕುತ್ತಾರೆ. ಇದರಿಂದ ರೈತಗು ಅಧ್ವಾನವಾಗಿ ನರಳಬೇಕಾಗುತ್ತದೆ. ನಾವು ರೈತರ ಮಕ್ಕಳಾಗಿ ಎಲ್ಲವನ್ನೂ ಅನುಭವಿಸಿದ್ದೇವೆ. ಕೇಳುವವರು ಗತಿ ಇರುವುದಿಲ್ಲ, ಸರ್ಕಾರದವರು ಇರುವುದಿಲ್ಲ. ಕೇಂದ್ರ ಸರ್ಕಾರದವರು ಒಂದು ಬೆಂಬಲ ಬೆಲೆಯನ್ನು ಪ್ರಕಟ ಮಾಡುವುದಿಲ್ಲ. ರಾಜ್ಯಸರ್ಕಾರದವರು ಬೆಂಬಲ ಕೊಡುವುದಕ್ಕೆ ಆರ್ಥಿಕ ಶಕ್ತಿ ಇರುವುದಿಲ್ಲ.

ಏನೋ ಗಾಡಿ ಬಾಡಿಗೆ ಹೆಸರಿನಲ್ಲಿ ಕ್ವಿಂಟಾಲ್‌ಗೆ 5-10 ರೂ. ಗಳನ್ನು ಕೊಟ್ಟರೆ ಈಗ ಇರುವಂತಹ ಗೊಬ್ಬರದ, ಕ್ರಿಮಿನಾಶಕದ ಬೆಲೆಗಳನ್ನು ನಾವು ಲೆಕ್ಕ ಹಾಕಿದರೆ ಇವುಗಳ ಖರ್ಚು ನಿಭಾಯಿಸುವುದು ಕಷ್ಟವಾಗುತ್ತದೆ. ಈವತ್ತು cost of production ಏನಿದೆ ಎಂಬುದನ್ನು ನೋಡಬೇಕು. ಇವತ್ತು ಯಾವುದೇ ಬೆಳೆಯನ್ನು ತೆಗೆಯಲಿ ರೈತನು ತಲೆ ಎತ್ತಿ ಗೌರವದಿಂದ ಬಾಳುವುದಕ್ಕೆ ಸಾಧ್ಯವಾಗುವುದಿಲ್ಲ. ಈ ವಿಚಾರವನ್ನು ಮುಖ್ಯಮಂತ್ರಿಗಳ ಸಭೆಯಲ್ಲಿ ನಾನು ಅಧಿಕಾರದಲ್ಲಿದ್ದಾಗ ದೆಹಲಿಯಲ್ಲಿ ಪ್ರಧಾನಮಂತ್ರಿಗಳಿಗೆ ಹೇಳಿದ್ದೆ. ಜಪಾನ್, ಅಮೇರಿಕಾ ದೇಶಗಳಿಗೆ ಇತರ ಐರೋಪ್ಯ ದೇಶಗಳಿಗೆ ನಮ್ಮ ಅಧಿಕಾರಿಗಳನ್ನು ಕಳುಹಿಸಿ ಕೊಡಿ, ಬೇರೆ ದೇಶಗಳಿಂದಲೂ ನಾವು ಕಲಿತುಕೊಳ್ಳುವಂತಹ ವಿಷಯಗಳಿವೆ ಎನ್ನುವಂತಹ ದೃಷ್ಟಿಯಿಂದ ಹೇಳಿದ್ದೆ. ಅಮೇರಿಕಾ ದೇಶದಲ್ಲಿ ಒಬ್ಬ ಮನುಷ್ಯನಿಗೆ 100 ಎಕರೆ ಭೂಮಿ ಇತ್ತು ಎಂದರೆ ಅಲ್ಲಿ 50 ಎಕರೆಯಲ್ಲಿ ಅವನ ಮನಸ್ಸಿಗೆ ಬಂದಂತೆ ಬೆಳೆಯುವುದಕ್ಕೆ ಬರುವುದಿಲ್ಲ. 50 ಎಕರೆ ಭೂಮಿಯಲ್ಲಿ 25 ಎಕರೆಗೆ ಹತ್ತಿಯನ್ನು ಹಾಕಬೇಕು, 20 ಎಕರೆಗೆ ಜೋಳವನ್ನು ಹಾಕಬೇಕು, ಇನ್ನು 5 ಎಕರೆಗೆ ನೆಲಗಡಲೆಯನ್ನು ಹಾಕಬೇಕು, ಈ ರೀತಿಯಾಗಿ ಏನೇನು ಬೆಳೆಯಬೇಕೆಂದು ಅವರಿಗೆ ಒಂದು ಕಾರ್ಡ್ ಕೊಡುತ್ತಾರೆ.

12.00 ಪಿ.ಎಂ

ಅವನು ಅದನ್ನೆ ಕಂಪಲ್‌ಸಾರಿಯಾಗಿ ಬೆಳೆಯಬೇಕು. ಆಮೇಲೆ ಸರ್ಕಾರ ಬೇಕಾಗಿರತಕ್ಕಂಥ ಬೀಜ, ಔಷದೋಪಚಾರಗಳು, ಗೊಬ್ಬರ, ಆಮೇಲೆ ನೀರಾವರಿ ಖರ್ಚು ಅದನ್ನು ಲೆಕ್ಕ ಹಾಕಿ ಅವನಿಗೆ ಜೀವನ ಮಾಡುವುದಕ್ಕೆ ಎಕ್ಸ್‌ಟ್ರಾ ಎಷ್ಟು ಬೇಕು ಅದನ್ನೂ ಕೂಡ ಲೆಕ್ಕ ಹಾಕಿ, ಬೆಲೆ ಏನು ಬರುತ್ತದಲ್ಲಾ ಅದನ್ನೂ ಲೆಕ್ಕ ಹಾಕಿ ಹಣವನ್ನು ಸರ್ಕಾರವೇ ಬ್ಯಾಂಕಿಗೆ ಅವನ ಹೆಸರಿಗೆ ಜಮಾ ಮಾಡಿಬಿಡುತ್ತದೆ. ಆ ಪದ್ಧತಿ ಮಾಡದೇ ಇದ್ದರೆ ರೈತರು ನಮ್ಮಂಥ ದೇಶದಲ್ಲಿ ಉಳಿಯುವುದಕ್ಕಾಗುವುದಿಲ್ಲ. ಅವನ ಹತ್ತಿರ ನೂರು ಎಕರೆಯಲ್ಲಿ ಉಳಿಯುವಂಥ ಐವತ್ತು ಎಕರೆಯಲ್ಲಿ ಆತ ಯಾವ ಬೆಳೆಯನ್ನಾದರೂ ಬೆಳೆಮಕೊಳ್ಳಬಹುದು. ಅದು ಅವನ ಇಚ್ಛೆ. ಸ್ವಾಮಿ ನಮ್ಮ ದೇಶದಲ್ಲಿ ಏನಿದೆ, ಇಲ್ಲಿ ನೂರು ಎಕರೆ ಇದ್ದರೆ, ಅಥವಾ ಹತ್ತು ಎಕರೆ ಇದ್ದರೆ ಏನು ಬೆಳೆಯುತ್ತಾರೆಂದು ಅವರಿಗೆ ಗೊತ್ತಿಲ್ಲ, ರೈತರ ತಪ್ಪಲ್ಲ, ವೈಜ್ಞಾನಿಕ ಬೆಳೆ ವಿಧಾನಗಳು ನಮ್ಮಂಥ ಸಮಾಜದಲ್ಲಿ ಇದ್ದಾಗ, ಉದಾಹರಣೆಗೆ ಕೃಷಿ ವಿಶ್ವವಿದ್ಯಾಲಯ ಇದೆ, ನಾನು ಮುಖ್ಯಮಂತ್ರಿಯಾಗಿದ್ದಂಥ ಕಾಲದಲ್ಲಿ, ದಯವಿಟ್ಟು ಇದನ್ನು ಹೊಗಳಿಕೆ ಎಂದು ತಿಳಿದುಕೊಳ್ಳಬೇಡಿ, We are committed to certain matters. ಧಾರವಾಡಕ್ಕೆ ಕೃಷಿ ವಿಶ್ವವಿದ್ಯಾಲಯವನ್ನು ನಾವು ಮಂಜೂರು ಮಾಡಿದ್ದೇವೆ, ಬಿಜಾಪುರಕ್ಕೆ ಒಂದು ಕೃಷಿ ಕಾಲೇಜನ್ನು ಮಂಜೂರು ಮಾಡಿದೆವು. ಮಂಡ್ಯ, ಶಿವಮೊಗ್ಗ ಇಲ್ಲೆಲ್ಲಾ ಕೊಟ್ಟೆವು. ನಮ್ಮ ಗ್ರಾಮೀಣ ಪ್ರದೇಶದ ಮಕ್ಕಳೆಲ್ಲಾ ಓದಿ ಬುದ್ಧಿವಂತರಾಗಲಿ, ಇದರ ಬಗ್ಗೆ ಬರೀ ನೌಕರಿ ಮಾಡತಕ್ಕಂಥಪ್ರಶ್ನೆ ಇಲ್ಲ, ಅವರು ವಿಜ್ಞಾನಿಗಳಾಗಿ ಹುಟ್ಟಬಹುದು, ನಮ್ಮ ರೈತರ ಮಕ್ಕಳುಗಳು ಬೇಸಾಯ ಪದ್ಧತಿಯಲ್ಲಿ ವಿಜ್ಞಾನಿಗಳಾಗಬೇಕು ಎಂಬ ಆಸೆಯಿಂದ ಈ ಕೆಲಸವನ್ನೂ ಕೂಡ ನಾವು ಮಾಡಿದ್ದೇವೆ.

ನೀವು ಮಾಡಿಲ್ಲ ಎಂದು ನಾನು ಹೇಳುತ್ತಿಲ್ಲ, ನಿಮಗೆ ಆಸೆಯಿಲ್ಲ ಎಂಬ ಮಾತನ್ನು ನಾನು ಅಪಾದನೆಯ ದೃಷ್ಟಿಯಿಂದ ಮಾತನಾಡುತ್ತಿಲ್ಲ. ಈ ಒಂದು ವಿಚಾರವನ್ನು ನಾವು ಗ್ರಾಮೀಣ ಪ್ರದೇಶದ ರೈತರ ಮಕ್ಕಳಿಗೆ ಹಾಕದೆ ಇದ್ದರೆ ರೈತ ಸಮುದಾಯದ, ಅವರ ಬುದ್ಧಿಗೆ ನಾವು ಇದನ್ನು ಬಿಡದೇ ಇದ್ದರೆ, ನಮ್ಮಂಥ ದೇಶದಲ್ಲಿ ನಾವು ವೈಜ್ಞಾನಿಕ ವಿಧಾನದಲ್ಲಿ ನಾವು ತಲೆಯೆತ್ತಿ ತಿರುಗಾಡುವುದಕ್ಕಾಗುವುದಿಲ್ಲ, ಬೆಳೆಯುವುದಕ್ಕೂ ಸಾಧ್ಯವಾಗುವುದಿಲ್ಲ. ಇದು ನನ್ನ ಸ್ಪಷ್ಟವಾಗಿರತಕ್ಕಂಥ ಅಭಿಪ್ರಾಯ. ಇದಕ್ಕೆ ಏನು ಮಾಡಬೇಕು? ಒಂದೊಂದು ಸಾರಿ ಅರಣ್ಯರೋಧನ ಆಗುತ್ತದೆ, ಇದಕ್ಕೆ ಕೇಂದ್ರ ಸರ್ಕಾರ ಗಮನ ಕೊಡಬೇಕು, ಇದು ಬರೀ ರಾಜ್ಯ ಸರ್ಕಾರ ಮಾಡಿದರೆ ಬರುವುದಿಲ್ಲ, ಇವತ್ತು ರಾಜ್ಯಸರ್ಕಾರದ ಆರ್ಥಿಕ ಪರಿಸ್ಥಿತಿಯ ಹಿನ್ನೆಲೆಯನ್ನು ನೋಡಿದರೆ ಅದು ಅಷ್ಟೊಂದು ಚೆನ್ನಾಗಿಲ್ಲ, ಉದಾಹರಣೆಗೆ, ಇವತ್ತು ಒಬ್ಬನಿಗೆ ಇಪ್ಪತ್ತೈದು ಎಕರೆ ಇದ್ದರೆ, ಅವನ ಅರ್ಧದಷ್ಟು ಬೆಳೆಯನ್ನು ಕೊಳ್ಳತಕ್ಕಂಥ ಸರ್ವಶಕ್ತಿ ರಾಜ್ಯ ಸರ್ಕಾರಕ್ಕೆ ಬರುವುದಿಲ್ಲ. The Government of India should come forward. ಅದು ಮುಂದಕ್ಕೆ ಬರಬೇಕು, ಬಂದು ಧೈರ್ಯವನ್ನು ತುಂಬಬೇಕು. ಇವತ್ತು ನಾವು ಆಹಾರದ ದಾಸ್ತನನ್ನು ಜಾಸ್ತಿ ಮಾಡಿದರೆ ಅನೇಕ ರಾಷ್ಟ್ರಗಳಿಗೆ ಬೇಕಾದರೆ ಮಾರಾಟ ಮಾಡಬಹುದು.

ಇದರಿಂದ ಫಾರಿನ್ ಎಕ್ಸ್‌ಚೇಂಜ್ ಬೇಕಾದರೂ ನಾವು ಅರ್ನ್ ಮಾಡಿಕೊಳ್ಳಬಹುದು. ಆ ಬುದ್ಧಿವಂತಿಕೆ ಕೂಡ ನಮ್ಮಂಥ ಟ್ರಾಪಿಕಲ್ ಕಂಟ್ರಿಯಲ್ಲಿ ಉಪಯೋಗವಾಗುತ್ತದೆ. ನಮ್ಮಂಥ ರಾಷ್ಟ್ರದಲ್ಲಿ ಎಷ್ಟೋ ಉಪಯೋಗ ಮಾಡಬಹುದು, ಅದಕ್ಕೆ ಆಸಕ್ತಿ ಹೆಚ್ಚಾಗಿರಬೇಕು. ಅದಕ್ಕಾಗಿ ಹೇಳುವುದು, ರೈತರ ಪಂಪ್‌ಸೆಟ್ಟುಗಳಿಗೆ ಕರೆಂಟ್ ಫ್ರೀ ಮಾಡಬೇಕು ಅಂದರೆ, ನಾನೇನೂ ನನ್ನ ಕಾಲದಲ್ಲಿ ಪುಗಸೆಟ್ಟೆ ಮಾಡಲಿಲ್ಲ, ನಾನು ರೈತರಿಗೆ ಹೆಚ್ಚಿನ ಒತ್ತಡವನ್ನು ಕೊಡಬಾರದು ಎನ್ನುವ ಆಸೆಯಿಂದ ಮಾಡಿದೆ, ಫ್ರೀ ಮಾಡಬೇಕು, ರೈತ ಲಾಭದಾಯಕವಾಗಿ ಜೀವನ ಮಾಡಬೇಕು, ನಾವು ಇನ್ನೂ

ಕೂಡ ಅನೇಕ ಸೌಲಭ್ಯಗಳನ್ನು ರೈತರ ಸಮುದಾಯಕ್ಕೆ ಕೊಡಬೇಕು ಎಂಬ ಒಂದು ಆಸೆಯಿಂದ ಅದಕ್ಕಾಗಿ ಗೊಬ್ಬರಕ್ಕೂ ಕೂಡ ಸಬ್ಸಿಡಿ ಇಡಬೇಕು ಎಂಬ ವಾದ ನನ್ನದು ಈಗಲೂ ಇದೆ. ಕೇಂದ್ರದಲ್ಲಿ ನಾನಾದರೂ ಅಧಿಕಾರ ನಮ್ಮಂಥವರಿಗೆ, ನಿಮ್ಮಂಥವರಿಗೆ ಬಂದರೆ ಈ ಸಬ್ಸಿಡಿಯನ್ನು ನಾವು ಮುಂದುವರೆಸಬೇಕು. ಯಾಕೆ ಅಮೇರಿಕಾದಲ್ಲಿ ಕೊಡುತ್ತಿಲ್ಲವೇ? ಜಪಾನಿನಲ್ಲಿ ಕೊಡುತ್ತಿಲ್ಲವೇ? ಐರೋಪ್ಯ ರಾಷ್ಟ್ರಗಳಲ್ಲಿ ಕೊಡುತ್ತಿಲ್ಲವೇ? ಯಾರೋ ಎಲ್ಲೂ ಕೊಡುತ್ತಿಲ್ಲ. ನಿಲ್ಲಿಸಿ ಬಿಡುತ್ತೇವೆ ಎಂದು ಹೇಳುತ್ತಿದ್ದಾರೆ. ಈ ರೀತಿಯ ದುವರ್ತನೆ ಮಾಡತಕ್ಕಂಥವರನ್ನು ದಯವಿಟ್ಟು ದೂರ ಇಡಬೇಕು. ಆರ್ಥಿಕ ಪರಿಸ್ಥಿತಿ ಕೃಷಿಗೆ ಆಧಾರವಾಗಿದ್ದಾಗ ಅದಕ್ಕೆ ನಮ್ಮ ಹೆಚ್ಚಿನ ಸಂಪನ್ಮೂಲಗಳನ್ನು ನಾವು ಬಂಡವಾಳಗೊಳಿಸಬೇಕು. 50 ರೂಪಾಯಿ ಹಾಕಿದರೆ ನಾಳೆ 65 ರೂಪಾಯಿ ಬರುತ್ತದೆ ಎಂಬ ಆಸೆಯನ್ನು ಇಟ್ಟುಕೊಳ್ಳಬೇಕು. ಒಂದು ಸಾರಿ ಫೈಲಾಗೋಣ, ಆದರೆ ನಾವು ಹೆದರಬಾರದು, ಹೆದರಬಾರದಿತ್ತು, ಇವತ್ತು ಹತ್ತಿ ಬೆಳೆದವರ ಗತಿ ಏನಾಗಿದೆ, ಈಜಿಪ್ಟಿಯನ್ ಕಾಟನ ಬರುತ್ತದೆ ಎಂದು ಇಂಪೊರ್ಟ್ ಮಾಡಿಕೊಂಡು ತಂದು ಹಾಕಿಬಿಟ್ಟರೆ, ಬೆಳೆದವರು ಸತ್ತು ಹೋಗಿ ಬಿಡುತ್ತಾನೆ.

ಉದಾಹರಣೆಗೆ ಇದು ಏತಕ್ಕೂ ಬರುವುದಿಲ್ಲ. ಈ ಜಿನ್ನಿಂಗ್ ಫ್ಯಾಕ್ಟರಿಗಳು ಹಾಳಾಗಿ ಹೋಗುತ್ತವೆ, ಇದರಿಂದ ನಮ್ಮ ಉದ್ಯೋಗವು ಕೂಡ ಕೆಟ್ಟುಹೋಗುತ್ತದೆ. These are all inter-dependents. ನಾವು ವಿಚಾರ ಮಾಡಬೇಕು. ಅಗ್ರಿಕಲ್ಚರ್ ಇಂಪ್ಲಿಮೆಂಟ್ಸ್‌ಗಳನ್ನು ಒಬ್ಬ ರೈತನಿಗೆ ಇದನ್ನು ಒದಗಿಸಿಕೊಡಬೇಕು. ಇದರ ಜೊತೆಗೆ ನಾನು ಒಂದು ತೀರ್ಮಾನವನ್ನು ಮಾಡಿದ್ದೆ, ಇವತ್ತು ಒಬ್ಬ ಬೇಸಾಯಗಾರನಿಗೆ ವ್ಯವಸಾಯದ ಸಲಕರಣೆಗಳನ್ನು ಒದಗಿಸಬೇಕು, ಎಷ್ಟು ಜನಕ್ಕೆ ಇವತ್ತು ಎತ್ತುಗಳಿದ್ದಾವೆ, ನೇಗಿಲಿದ್ದಾವೆ, ಬೇಕಾಗಿರತಕ್ಕಂಥ ಉಪಕರಣಗಳು ಎಲ್ಲಿದ್ದಾವೆ, ನೋಡಿದ್ದೀರೇನು? ಒಂದು ಸಾರಿ ಮಳೆ ಬಂದರೆ, ಅಲ್ಲಿ ಇಪ್ಪತ್ತು ಮನೆ ಇದ್ದರೆ, ನಿಜ ಹೇಳಬೇಕೆಂದರೆ ಬರೀ 5-6ಮನೆ ಕರೆಕ್ಟಾಗಿ ಇರುತ್ತವೆ, ಎತ್ತುಗಳು ಅಥವಾ ಬೇಸಾಯದ ಉಪಕರಣಗಳು, ಗಾಡಿಗಳು, ನೇಗಿಲುಗಳು ಇವೆಲ್ಲಾ. ಉಳಿದವರು ಬೇರೆಯವರದ್ದು ಆಗುವವರೆಗೂ ಕಾಯಬೇಕು, ಅಲ್ಲಿ ಭೂಮಿಯಲ್ಲಿ ಹದ ಬಿದ್ದರೆ ಏನು ಇವರಿಗಾಗಿ ಕಾಯುತ್ತಿರುವುದಕ್ಕಾಗುತ್ತದೆಯೇ? ಇದಕ್ಕೆಲ್ಲಾ ನಾವು ರೈತರಿಗೆ ಸರ್ವಶಕ್ತಿಯನ್ನು ತುಂಬಬೇಕು. ನೀವು ಬರೀ ನೀರು ಕೊಟ್ಟ ತಕ್ಷಣ ಬರುವುದಿಲ್ಲ, ಬಹಳ ಜನ ತಪ್ಪು ತಿಳಿದುಕೊಂಡಿದ್ದಾರೆ, ಈ ವ್ಯವಸ್ಥೆಯನ್ನು ನಾವೇನು ಇನ್‌ಫ್ರಾಸ್ಟ್ರಕ್ಚರ್ ಎಂದು ಕರೆಯುತ್ತೇವೆ.

ಇದನ್ನು ಸಂಪೂರ್ಣವಾಗಿ ತುಂಬಿದರೆ ಮಾತ್ರ ಇದು ಸಾಧ್ಯ. ನಾನು ಈ ರೀತಿ ಮಾತನಾಡುವುದಕ್ಕೆ ಒಂದು ಕಾರಣ ಏನೆಂದರೆ, ನಮ್ಮಲ್ಲಿ ಇರತಕ್ಕಂಥ ಈ ಬೇಸಾಯದ ಪದ್ಧತಿಗೆ ಸಂಬಂಧಪಡತಕ್ಕಂಥ ರೈತರುಗಳಿಗೆ ಈ ಸರ್ವಶಕ್ತಿ ಇವತ್ತು ಅವರ ಹತ್ತಿರ ಉಳಿದಿಲ್ಲ, ನನಗೆ ಗೊತ್ತಿರುವ ಹಾಗೆ ಅವರು ನಾಶದ ಅಂಚಿನಲ್ಲಿದ್ದಾರೆ, ಅದಕ್ಕಾಗಿ ಹೇಳುವುದು ರೈತರಿಗೆ ಸೌಲಭ್ಯ ಕೊಟ್ಟು ಅವನು ಬೆಳೆಯಲಿಲ್ಲ ಅಂದರೆ, ಹಾಗಾದರೆ ನೀವು ತಪ್ಪು ಮಾಡಿದ್ದೀಯಾ ಎನ್ನತಕ್ಕಂಥ ದೃಷ್ಟಿಯಿಂದ ರೈತರನ್ನು ನಾವು ಹಿಡಿದುಕೊಳ್ಳೋಣ. ಅದು ಬಿಟ್ಟು ಈ ಸದನ ರೈತರು ತಪ್ಪು ಮಾಡುವುದಿಲ್ಲ, ನೀವು ತೆಗೆದುಕೊಂಡು ಹೋಗಿ ಬೆಟರ್‌ಮೆಂಟ್ ಕ್ಲೈಮ್‌ಗೆ ಕೊಡಬೇಕು, ಮತ್ತೊಂದು ಮಾಡಬೇಕು, ಇದಲ್ಲ ಸ್ವಾಮಿ ನಾನು ಹೇಳುತ್ತಿರುವುದು. ಈ ರೀತಿ ಮಾತನಾಡಿದರೆ ಬರುವುದಿಲ್ಲ, ಇದರಿಂದ ಉಪಯೋಗವಾಗುವುದಿಲ್ಲ, ನಿಜ ಹೇಳಬೇಕೆಂದರೆ, ನಾವು ವಿನಾಶದ ಅಂಚಿಗೆ ಸಂಪೂರ್ಣವಾಗಿ ಹೋಗುತ್ತಿದ್ದೇವೆ ಎಂಬ ಮಾತನ್ನು ಆಡುತ್ತಿದದೇನೆ. ಇನ್ನು ನೀರಾವರಿ ಬಗ್ಗೆ ನಾನು ಈ ಒಂದು ವಿಚಾರವನ್ನು ಇಟ್ಟೆ, ರೈತರ ಪರವಾಗಿ ನಾನು ಮಾತನಾಡಲೇಬೇಕು ಎನ್ನತಕ್ಕಂಥ ಒಂದು ವಿಚಾರ. ಆ ನಂಬಿಕೆ ಇರತಕ್ಕಂಥ ಜನಗಳಲ್ಲಿ ನಾನೂ ಕೂಡ ಒಬ್ಬನಾಗಿದ್ದು ಈ ಮಾತನ್ನು ನಾನು ಆಡಿದ್ದೇನೆ. ಈ

ಬಗ್ಗೆ ಬಹಳ ವಿವರಗಳಿದ್ದಾವೆ. ಆದರೆ ಎಲ್ಲವನ್ನೂ ನಾನು ಮಾತನಾಡುವುದಿಲ್ಲ, ಈಗ ಕರ್ನಾಟಕ ರಾಜ್ಯದಲ್ಲಿ ನೀರಾವರಿ ವಿಚಾರಕ್ಕೆ ಬರೋಣ. ಸ್ವಾಮಿ, ಇವತ್ತು ಇರತಕ್ಕಂಥ ಬೆಳೆಗೆ ಯೋಗ್ಯ ಇರತಕ್ಕಂಥ ಭೂಮಿ ಪ್ರಮಾಣ ಏನಿದೆಯಲ್ಲಾ ಲಕ್ಷಗಟ್ಟಲೆ ಹೆಕ್ಟೇರ್ಸ್ ಮತ್ತೊಂದು, ಇದೆಲ್ಲವನ್ನೂ ಹೇಳಿದ್ದಾರೆ.

ನನ್ನ ಅಂದಾಜಿನ ಮೇಲೆ ಆಗಿದ್ದರೆ 1/3 of the total cultivable land in Karnataka ಏನಿದೆಯಲ್ಲಾ ಈ ಕರ್ನಾಟಕದಲ್ಲಿ ಅದು ಇರಿಗೇಷನ್‌ಗೆ ಬರುತ್ತದೆ. ನಾವು ಎಷ್ಟು ಸಾಧನೆ ಮಾಡಿದ್ದೇವೆ, ಫೊಟೆನ್ಷಿಯಲ್ ಅಂದ ತಕ್ಷಣವೇ ನೀವು ಉಪಯೋಗ ಮಾಡಿದಷ್ಟಲ್ಲ, ಉಪಯೋಗಕ್ಕೆ ಯೋಗ್ಯವಾಗಿರತಕ್ಕಂಥ ನೀರು ಅಣೆಕಟ್ಟಿನಿಂದ, ಮಧ್ಯಮ ನೀರಾವರಿಯಿಂದ ಮತ್ತು ಲಿಫ್ಟ್ ಇರಿಗೇಷನ್‌ನಿಂದ ಮತ್ತು ಬೋರ್‌ವೆಲ್‌ಗಳು, ಭೂಮಿ ಒಳಗಡೆ ಇರತಕ್ಕಂಥ ಅಂತರಜಲವನ್ನು ಉಪಯೋಗ ಮಾಡಿಯೇ ನಾನು ಈ ಮಾತನ್ನು ಆಡುತ್ತಿದ್ದೇನೆ. ಇವತ್ತು ಕರ್ನಾಟಕ ರಾಜ್ಯದಲ್ಲಿ $\frac{1}{3}$ ರಷ್ಟು ಮಾತ್ರ ಇದೆ. ಇನ್ನು $\frac{2}{3}$ ರಷ್ಟು ನೀರಾವರಿಗೆ ಕರ್ನಾಟಕ ರಾಜ್ಯದಲ್ಲಿ ಯೋಗ್ಯವಲ್ಲ. ಇವತ್ತು ನಾವು ನೀರಾವರಿ ಇದ್ದಲ್ಲಿ ಭತ್ತ ಬೆಳೆಯುತ್ತೇವೆ ಅದು ತುಂಗಭದ್ರಾ ಇರಬಹುದು, ಕೃಷ್ಣಾ ಭಾಗದಲ್ಲಿ ಇರಬಹುದು, ಅಥವಾ ಲಿಫ್ಟ್ ಇರಿಗೇಷನ್ ಮತ್ತೊಂದು ಭಾಗದಲ್ಲಿರಬಹುದು, ಕಾವೇರಿ ಜಲಾನಯನ ಪ್ರದೇಶ, ಕೃಷ್ಣಾ ಜಲಾನಯ ಪ್ರದೇಶ, ಗೋದಾವರಿ ಇದೆ, ಉದಾಹರಣೆಗೆ ಗೋದಾವರಿ ಬೇಸಿನ್ ಜಲಾನಯದ ಪ್ರದೇಶ ಇದೆ. ಬೀದರ್‌ನಲ್ಲಿ ಕಾರಂಜ ಪ್ರಾಜೆಕ್ಟ್‌ಗಳು ನಾರಂಜ ಭಾಗಗಳು ಇದ್ದಾವೆ. ಮಹಾರಾಷ್ಟ್ರದಲ್ಲಿ ಒಂದು ಡ್ಯಾಂ ಕಟ್ಟಿದ್ದಾರೆ, ಔರಾದ್ ತಾಲ್ಲೂಕಿಗೆ ಬಂದ ನೀರು ಅಲ್ಲಿಗೆ ಹೋಗುತ್ತಿವೆ. ಅದಕ್ಕೆ ಲಿಫ್ಟ್ ಇರಿಗೇಷನ್ ಕೇಳುತ್ತಿದ್ದಾರೆ, ಉದಾಹರಣಗೆ ನಾನಿದನ್ನು ಹೇಳುವುದು, ಇವೆಲ್ಲವನ್ನೂ ಕೂಡ ನಾವು ವಿಚಾರ ಮಾಡಬೇಕು. ಅದಕ್ಕೆ ನಾನು ಏನು ಹೇಳುತ್ತೇನೆಂದರೆ, ಇವತ್ತು ನಾವು ಬೆಳೆಯನ್ನು ತೆಗೆಯತಕ್ಕಂಥ

ವಿಚಾರದಲ್ಲಿ ಈಗ ಸೊಯಾಬಿನ್ ಬೆಳೆಯುವುದರಲ್ಲಿ Madhya Pradesh - they are the leaders in the cultivation of Soyabean.ಹಾಗೆ ಗುಜರಾತಿನಲ್ಲಿ ಕಡಲೆಕಾಯಿಯನ್ನು ಹೆಚ್ಚಾಗಿ ಬೆಳೆಯುತ್ತಾರೆ. ಬರೀ ಅದು ಒಂದೇ ಅಲ್ಲ ಅನೇಕ ಬೆಳೆಗಳು, We are the leaders in Sunflower; ಈಗ ಲೇಟೆಸ್ಟ್ ಇರತಕ್ಕಂಥದ್ದು. ಕೃಷಿ ಇಲಾಖೆಯವರನ್ನು ಕೇಳಿದರೆ ಅವರು ಹೇಳುತ್ತಾರೆ. ನಾವು ಕಡಲೆಕಾಯಿಯನ್ನು ಬೆಳೆಯುವುದರಲ್ಲಿ ನಾವು ಲೀಡರ್ಸ್ ಆಗುತ್ತಿದ್ದೇವೆ. ಬಹಳ ಫಲವತ್ತಾದ ಭೂಮಿ ನೀವು ಅದರಲ್ಲಿ ಒಳ್ಳೊಳ್ಳೆಯ ಬೆಳೆಗಳನ್ನು ಬೆಳೆಯಬಹುದು. A part from Paddy ; ನಾವೊಬ್ಬರೇ ಅಲ್ಲ. ಒಂದು ಕಾಲದಲ್ಲಿ ಮೊದಲು ನಾವಿದ್ದೆವು, ಈಗ ನಮ್ಮದನ್ನು ತಮಿಳುನಾಡಿನವರು ಕಸಿದು ಕೊಂಡುಬಿಟ್ಟರು, ಬಹಳ ಮುಂದೆ ಹೋದರು, ಇವತ್ತು ಅವರು ಒಂದು ಎಕರೆಗೆ ಜಾಸ್ತಿ ಬತ್ತ ಬೆಳೆಯತಕ್ಕಂಥವರು ಆಗಿದ್ದಾರೆ, ಅದೇ ರೀತಿ ಆಂಧ್ರ ಬರುತ್ತಾ ಇದೆ, ಎಲ್ಲರನ್ನೂ ಮೀರಿ ಪಂಜಾಬ್ ಬೆಳೆಯುತ್ತಿದೆ. ಪಂಬಾಬ್, ಹರಿಯಾಣ ಭಾಗಗಳು they have already got first placs in the while of the country's economy.

ಬೆಳೆಗಳನ್ನು ಬೆಳೆಯತಕ್ಕ ವಿಚಾರದಲ್ಲಿ ಈಗಾಗಲೇ ಬಂದಿರುವ ಹಾಗೆ, ನಾನು ಅದಕ್ಕೆ ಹೇಳುವುದು ನಾವು ಎಷ್ಟೇ ಪ್ರಯತ್ನ ಮಾಡಿದರೂ ಕೂಡ ನೀರೀವರಿ ಬಗ್ಗೆ ಬರೀ 1/3 ಮಾತ್ರ ಬರುತ್ತೇವೆ. ಇನ್ನು 2/3 ರಷ್ಟು ನಾವುಮಳೆಯನ್ನು ನೋಡಿಕೊಂಡೇ ಜೀವನ ಮಾಡಬೇಕು. ಅದಕ್ಕಾಗಿಯೇ ನಾನು ಹೇಳಿದ್ದುದು ಈ ಕೃಷಿ ವಿಶ್ವವಿಧ್ಯಾನಿಲಯಗಳು ಮತ್ತೊಂದು ಏನಿದ್ದಾವೆ ಅಲ್ಲಿರತಕ್ಕ ನಮ್ಮ ವಿಜ್ಞಾನಿಗಳು

ಕಡಿಮೆಯೇನಲ್ಲಾ; ಪರದೇಶದಲ್ಲಿ ನಮ್ಮನ್ನು ಹಾಡಿಹೊಗಳುತ್ತಾರೆ ನಮ್ಮ ದೇಶದಲ್ಲಿ ನಾವು ಅವರನ್ನು ಗುರುತಿಸುತ್ತಿಲ್ಲ ನಾವು ಇದರ ಬಗ್ಗೆ ಸಂಪೂರ್ಣವಾದ ಗಮನವನ್ನು ಕೊಡಬೇಕಾದಂಥ ಅವಶ್ಯಕತೆ ಬಹಳ ಇದೆ. ಇದು ಒಂದು ವಿಚಾರ. ಇನ್ನು ನೇರವಾಗಿ ಪ್ರಾಮುಖ್ಯ ಇರತಕ್ಕಂಥ ಎರಡು ಜಲಾನಯನ ಪ್ರದೇಶಗಳು, ಕಾವೇರಿ ಮತ್ತು ಕೃಷ್ಣಾ.

A part from Godavari which we see in Bidar

ಆಮೇಲೆ ಸಣ್ಣ ಪುಟ್ಟ ಬೇಸನ್‌ಗಳೂ ಕೂಡ ಬರುತ್ತವೆ ನಮ್ಮ ಕರ್ನಾಟಕ ರಾಜ್ಯದಲ್ಲಿ ನಾಲ್ಕೈದು ಬೇಸನ್‌ಗಳು ಬರುತ್ತವೆ. ಇವತ್ತು ಬೇಸನ್ ಟು ಬೇಸನ್. ಅದನ್ನು ನಂಜೇಗೌಡರು ಮಾತನಾಡುತ್ತಿದ್ದರು ನಾನು ಅದನ್ನು ಕಿವಿಕೊಟ್ಟು ಆಲಿಸಿದೆ. ಬೇಸನ್ ಟು ಬೇಸನ್ ನೀರು ತೆಗೆದು ಕೊಳ್ಳಬೇಕು ಅಂದರೆ, ಕೆಲವುಸಾರಿ ಹಲವಾರು ಅಡೆತಡೆಗಳನ್ನು ಕೂಡ ನಾವೆಲ್ಲಾ ಕಾಣುತ್ತೇವೆ. ನೀನು ಈ ಬಗ್ಗೆ ವಿವರ ಕೊಡುವುದಕ್ಕೆ ಹೋಗುವುದಿಲ್ಲ. ಕಾವೇರಿ ವಿಚಾರದಲ್ಲಿ ನಾನು ಹೆಚ್ಚು ಮಾತನಾಡಬಾರದು ಎಂದು ತೀರ್ಮಾನ ಮಾಡಿದ್ದೇನೆ, ಅದಕ್ಕೆ ಹಲವಾರು ಕಾರಣಗಳಿದ್ದಾವೆ, ಏಕೆಂದರೆ ನಾನು ಹೇಳುವುದು ಅಂಕಿಅಂಶದ ಪ್ರಶ್ನೆಯಲ್ಲ, ನಾವು ಟ್ರಿಬ್ಯೂನಲ್ ಮುಂದೆ ಇರಬಹುದು. ಇದರಲ್ಲಿ ಅಂಕಿಅಂಶದ ಪ್ರಶ್ನೆ ಇಲ್ಲ, ನಾವು ಪ್ರತಿಯೊಂದಕ್ಕೂ ಕೂಡ ಇಟ್ಟು ನಾವು ಮಾತನಾಡತಕ್ಕಂಥ ಒಂದು ವಿಚಾರದ ದಾರಿಗೆ ಹೋಗಬಾರದು ಎಂಬುದು ನನ್ನ ಭಾವನೆ ಇದೆ. ಏಕೆಂದರೆ ನಾವು ಇಲ್ಲೊಂದು ರೆಶಲ್ಯೂಷನ್ ಅನ್ನು ಸರ್ವಾನುಮತದಿಂದ ಅದಾಷ್ಟೊ ಮಾಡಿದ್ದೇವೆ. ನಾನು ಅಧಿಕಾದಲ್ಲಿ ಇದ್ದಂಥ ಕಾಲದಲ್ಲಿ ಒಂದು ನಿರ್ಣಯವನ್ನು ಈ ಸದನದಲ್ಲಿ ಮತ್ತು ಮೇಲ್ಮನೆಯಲ್ಲಿ ಮಾಡಿದ್ದೇವೆ. ಸ್ವಾಮಿ ನಾವು ಅಲ್ಲಿ ಏನು ನಿರ್ಣಯ ಮಾಡಿದ್ದೇವೆ. ಆವಾಗಲೂ ಬಂತು Better we boycott the proceedings that the Inter-State Water Disputes Act 1954

ಅದರ ಪ್ರಕಾರ ಎನ್ನತಕ್ಕಂಥ ಮಾತು ಬಂದಾಗ, ನಾನು ಅಧಿಕಾರದಲ್ಲಿದ್ದಾಗ ವಿರೇಧ ಪಕ್ಷದ ನಾಯಕರುಗಳನ್ನೆಲ್ಲಾ ಮೀಟಿಂಗ್‌ಗೆ ಕರೆದೆ, ಎಲ್ಲರೂ ಒಪ್ಪಿಕೊಂಡರು.

I must thank the then Hon'ble Members and the Leaders and also the Members who are now in the present august House.

ನಿಜ ಈ ಸದನದಲ್ಲೂ ಕೂಡ ನಾವು ಆ ಬಗ್ಗೆ ಸರ್ವಾನುಮತದಿಂದ ತೀರ್ಮಾನ ಮಾಡಿದ್ದೇವೆ. ಇದರಲ್ಲಿ ಅಡಗಿರತಕ್ಕ ಅಂಶಗಳೇನು? ನನಗೆ ಗೊತ್ತಿರುವಂತೆ ಟ್ರಿಬುನಲ್ ಬಾಯಕಾಟ ಮಾಡಬೇಕೆನ್ನುವ ಮಾತು ಬಂದಾಗ ಕಾನೂನು ತಜ್ಞರು ಮತ್ತು ನೀರಾವರಿ ತಜ್ಞರು ಇವರಲ್ಲಾ ಕೂಡಿ ಸಲಹೆ ನೀಡಿದ ವಿಚಾರಗಳನ್ನು ನಾವು ಗಮನದಲ್ಲಿಟ್ಟುಕೊಂಡು ಮಾತನಾಡಿದ್ದೇ. ಅದರ ವಿವರಗಳಿಗೆ ನಾನು ಈಗ ಹೋಗುವುದಿಲ್ಲ, ಏಕೆಂದರೆ ಸದನದಲ್ಲಿ ಓಪನ್ ಆಗಿ ಹೇಳಿದರೆ ನಮ್ಮ ಭಾಷಣ ನಾಳೆ ಪತ್ರಿಕೆಯಲ್ಲಿ ಅಚ್ಚಾಗಿ ಬರುತ್ತದೆ. ನಾನು ಅದಕ್ಕೆ ತಯಾರಾಗಿಲ್ಲ. ನಮ್ಮ ಭಾಷಣ ಈ ವಿಚಾರದಲ್ಲಿ ಪತ್ರಿಕೆಯಲ್ಲಿ ಬರಬಾರದು ಎಂಬುದು ನನ್ನ ಆಸೆಯಾಗಿದೆ. ಈ ಬಾಂಡ್‌ಗಗಳ ವಿಚಾರದಲ್ಲಿ ಕೆಲವು ಮಾತು ಹೇಳಬೇಕಾಗುತ್ತದೆ. ಆದರೆ ನಾನು ಅದನ್ನು ಹೇಳುತ್ತಿಲ್ಲ. ಕರ್ನಾಟಕ ರಾಜ್ಯದ ಹಿತ ಅಂದರೆ, ಅದು ನಮ್ಮ ರಾಜ್ಯದ ರೈತರ ಹಿತ. ನಾಳೆ ರಾಜ್ಯದ ರೈತರ ಹಿತಕ್ಕೆ ಮಾರಕ ಆಗತಕ್ಕಂತಹ ಒಂದು ಮಾತನ್ನೂ ಕೂಡ ನಾವು ಆಡಬಾರದು. We are all committed. ಇಷ್ಟು ದಿವಸ ರಾಜಕಾರಣ ಮಾಡಿದ್ದೇವೆ ಜವಾಬ್ದಾರಿ ಹೊತ್ತಿದ್ದೇ. ವಿರೋಧ ಪಕ್ಷ ಆಡಳಿತ ಪಕ್ಷ ಇದೆಲ್ಲಾ ನೋಡಿದ ಮೇಲೂ ಕೂಡ ನಾವು ಈ ರೀತಿಯಾಗಿ ಮಾತನಾಡುತ್ತಾ ಹೋಗಬಾರದು. ವಿವಾದ ಇನ್ನೂ ಟ್ರಿಬ್ಯುನಲ್ ಮುಂದೆ ಇರುವುದರಿಂದ ನಾವು

ಆ ರೀತಿ ಮಾತನಾಡಬಾರದು. ವಿವಾದ ಟ್ರಿಬ್ಯುನಲ್ ಮುಂದೆ ಇಲ್ಲದಿದ್ದರೆ ಆ ಪ್ರಶ್ನೆ ಬೇರೆ. ಟ್ರಿಬ್ಯುನಲ್ ಬಾಯಕಾಟ ಮಾಡಬೇಕೆನ್ನುವುದು ನೀತಿ ಅಲ್ಲ ನಾವು ಅಲ್ಲಿಗೆ ಹೋಗಬೇಕು. ನಮ್ಮ ವಿಚಾರ ಅಲ್ಲಿಡಬೇಕು. ಪರ ಅಪರ ವಿಚಾರಗಳನ್ನು ಅನಂತರ ತೆಗೆದುಕೊಳ್ಳೋಣ ಎನ್ನತಕ್ಕದ್ದು ನಿಜ. ಆ ಮಾತನ್ನು ನಾನು ಒಪ್ಪುತ್ತೇನೆ. ಅನೇಕ ಮಾನ್ಯ ಸದಸ್ಯರುಗಳು ಭಾಷಣ ಮಾಡುವಾಗ ಈ ಬಗ್ಗೆ ಹೇಳಿದ್ದಾರೆ. ಮಾನ್ಯ ನಂಜೇಗೌಡರು ಹೇಳಿದರು, ಮೊಯ್ಲಿಯವರೂ ಕೂಡ ಹೇಳಿದರು ಎಂದು ಕಾಣಿಸುತ್ತದೆ. I do not know. ನಾನು ಅವರ ಭಾಷಣ ಪೂರ್ತಿ ಕೇಳಲಿಲ್ಲ, ನೀವೂ ಕೂಡ ಹೇಳಿದ್ದೀರಿ. ಈ ವಿಚಾರ ಬಂದಾಗ ಅದರಲ್ಲೂ ಕೂಡ ಗಿವ್ ಅಂಡ್ ಟೇಕ್ ಪಲಿಸಿ ಮೇಲೆ, ಅಡ್ಜೇಸ್ಟಮೆಂಟ್ ಮೇಲೆ ಇವಲ್ಲಾ ಹೋಗುತ್ತದೆ. ಐರೋಪ್ಯ ರಾಷ್ಟ್ರಗಳಲ್ಲಿಯೂ ಕೂಡ ರಾಜಿ ಮುಖಾಂತರ ಇಂತಹ ಡಿಸ್ಪೂಟ್ಸ್ ತೀರ್ಮಾನಿಸುತ್ತಾರೆ. ಅಮೇರಿಕಾದಲ್ಲಿ ಇಂಟರ್-ಸ್ಟೇಟ್ ಡಿಸ್ಪೂಟ್ಸ್ ಬಂದಾಗ ಟೆನ್ನಿಸ್ಸೀ ಸ್ಟೇಟ್ ಮತ್ತು ಬೇರೆ ರಾಜ್ಯಗಳಿಗೆ ರಾಜೀ ಮುಖಾಂತರ ಮಾತುಕತೆ ಆಗಿ ಫೆಡರಲ್ ಗೌರ್ನಮೆಂಟ್‌ನವರು ತೀರ್ಮಾನ ಮಾಡಿದ್ದಾರೆ. ಇಂಟರ್‌ನ್ಯಾಷನಲ್ ಕೋರ್ಟು ಹೇಗ್‌ನಲ್ಲಿದೆ.

ಅಲ್ಲಿ ಜಡ್ಜ್ ಆಗಿರತಕ್ಕವರ ಅಭಿಪ್ರಾಯ ಕೂಡ ಇಲ್ಲಿದೆ. ಹೆಲ್ಸಂಕಿಯಿಂದ ಬಂದಿರತಕ್ಕ ಜಡ್ಜ್‌ಮೆಂಟ್ ಇದು ಅವರ ಅಭಿಪ್ರಾಯಗಳು ಏನೆಂಬುದನ್ನು ಹೇಳುತ್ತೇನೆ. ಯಾವಾಗಲೂ ವಾಟರ್ ಡಿಸ್ಪೂಟ್ಸ್ ಎರಡು ರಾಜ್ಯಗಳ ನಡುವೆ ಬಂದಾಗ ಉಭಯತ್ನರು ಎಲ್ಲರೂ ಸೇರಿಕೊಂಡು ಮಾತುಕತೆ ಮುಖಾಂತರ ಸಮಸ್ಯೆ ಬಗಹರಿಸಿಕೊಳ್ಳಬೇಕೆಂಬ ವಿಚಾರವನ್ನು ಅವರು ಇಟ್ಟುಕೊಂಡಿದ್ದಾರೆ. ಈ ಮಾತನ್ನು ನಾವು ಯಾವಾಗಲೂ ಕೂಡ ಮರೆಯಬಾರದು. ಈ ವಿಚಾರವನ್ನು ಇಟ್ಟು ಕೊಂಡು, ನಾವು ಇದನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದೆವು 1934 ಒಪ್ಪಂದ 50 ವರ್ಷ ಆದ ಮೇಲೆ 1974 ಕ್ಕೆ ಕ್ಲೋಸ್ ಆಯಿತು . ನಾನು ನಿಜ ಹೇಳುತ್ತೇನೆ. ಈ ಸಂದರ್ಭದಲ್ಲಿ ನಾವು ದಿವಂಗತ ದೇವರಾಜ್‌ಅರಸ್ ಅವರನ್ನು ನೆನಪಿಸಿಕೊಳ್ಳಬೇಕು. He was the man who had an iron mind to take up decisions and to go ahead with the project and execute them.

ನಾನು ಅಂತಹ ವ್ಯಕ್ತಿಯನ್ನು ಇನ್ನೂ ಕೂಡ ನೋಡಬೇಕಾಗಿದೆ. ನನ್ನ ರಾಜಕೀಯ ಜೀವನದಲ್ಲಿ ದೇವರಾಜಅರಸ್‌ರಂತಹ ಗಟ್ಟಿ ವ್ಯಕ್ತಿ ರಾಜ್ಯದ ಹಿತದೃಷ್ಟಿಯಿಂದ ಆ ರೀತಿ ಕೆಲಸ ಮಾಡತಕ್ಕ ಮತ್ತೊಬ್ಬ ವ್ಯಕ್ತಿಯನ್ನು ನಮ್ಮ ರಾಜ್ಯದಲ್ಲಿ ನಾನಂತೂ ಕಂಡಿಲ್ಲ. ಏತಕ್ಕೆ ಈ ಮಾತನ್ನು ನಾನು ಆಡುತ್ತಿದ್ದೇನೆ. ಕೇಂದ್ರ ಸರ್ಕಾರದವರು ಹೇಳಿದರು ವಾಟರ್‌ಡಿಸ್ಪೂಟ್ಸ್ ತಮಿಳುನಾಡಿಗೆ ನಿಮಗೆ ಇದೆ. ಪಾಂಡಿಚೇರಿ ನಿಮಗೆ ಇದೆ ಎಂದು ಹಾಗೆಯೇ Kerala is also a party to the dispute. ಎಂದು ಆದುದರಿಂದ ಇದಕ್ಕೆಲ್ಲಾ ನಾವು ಬರುವುದಿಲ್ಲ ಎನ್ನತಕ್ಕ ಮಾತನ್ನು ಹೇಳಿ ಅವರು ಅಪ್ರೂವಲ್ ಕೊಡಲಿಲ್ಲ. Even now ಇವತ್ತು ನೀವು ಏನು ಬಡ್ಜೆಟ್‌ನಲ್ಲಿ ಹಣ ಇಡುತ್ತೀರಿ ಅಂಡರ್ ನಾನ್ ಪ್ಲಾನ್ ಇಡುತ್ತೀರಿ. ಪ್ಲಾನ್‌ನಲ್ಲಿ ಒಂದು ರೂಪಾಯಿ ಕೂಡ ಇಡತಕ್ಕದ್ದು ಇಲ್ಲ, ಪ್ಲಾನ್‌ಗೆ ನಾವು ತೆಗೆದುಕೊಂಡು ಬಂದರೆ ಕೇಂದ್ರ ಸರ್ಕಾರದ ಪಾಲು ಕೂಡ ನಾವು ಹಣ ಕೇಳತಕ್ಕ ಹಕ್ಕೂ ಕೂಡ ನಮಗೆ ಬರುತ್ತದೆ. ದೇವರಾಜ್ ಅರಸ್ ಅವರು ಏನು ಮಾಡಿದ್ದಾರೆ ಎಂಬುದನ್ನು ಅವರ ಭಾಷೆಯಲ್ಲೇ ಹೇಳಬೇಕು. ಮಾನ್ಯ ಸಿದ್ದರಾಮಯ್ಯನವರೇ ಅವರ ಶೈಲಿ ನಿಮಗೆ ಗೊತ್ತು. 'ಅಯ್ಯೋ ಬಿಡಿ ಕೇಂದ್ರ ಸರ್ಕಾರ ಕೊಡದಿದ್ದರೆ ಚಿಂತೆ ಇಲ್ಲ.' ಈ ರೀತಿ ಅವರು ವಿರೋಧ ಪಕ್ಷದಲ್ಲಿ ಕುಳಿತಿದ್ದಾಗ ಸದನದಲ್ಲೇ ಆಈ ಮಾತನ್ನು ಹೇಳಿದ್ದರು. ನಿಜ ಹೇಳಬೇಕೆಂದರೆ, ಆ ವ್ಯಕ್ತಿ ಮಹಾನ್ ವ್ಯಕ್ತಿಯಾಗಿ ರಾಜ್ಯದ ಹಿತದೃಷ್ಟಿಯಿಂದ ಮಾತನಾಡುತ್ತಿದ್ದರು. ಆ ಗುಂಡಿಗೆ ಅವರಲ್ಲಿ ಇತ್ತು. ಅವರೇನು ಹೇಳುತ್ತಿದ್ದರು ಎಂದರೆ. 'ಅಯ್ಯೋ

ಬಿಡ್ರಿ ಕೇಂದ್ರದವರು ಕೊಡದಿದ್ದರೆ ಪರವಾಗಿಲ್ಲ, ಅ ಕೆಲಸವನ್ನು ನಾವು ನೀವು ಎಲ್ಲಾ ಸೇರಿಕೊಂಡು ಕರ್ನಾಟಕದಲ್ಲಿ ಮಾಡಿ ಹಾಕೋಣ' ಎನ್ನತಕ್ಕ ಮಾತನ್ನು ಅವರು ಹೇಳುತ್ತಿದ್ದರು. ಹಾರಂಗಿ. ಹೇಮಾವತಿ, ಕಬಿನಿ, ಕೆ.ಅರ್.ಎಸ್. ಬಿಟ್ಟರೆ ನಮ್ಮ ರಾಜ್ಯ.ರಲ್ಲೆ ಇರತಕ್ಕ ನಾಲ್ಕು ಮೇಜರ ಡ್ಯಾಮ್ಸಗಳು ಕೆ.ಅರ್.ಎಸ್. ಅವರ ಕಾಲದ್ದಲ್ಲ. ತಮಗೆಲ್ಲಾ ಗೊತ್ತಿದೆ. ಸರ್.ಎಂ. ವಿಶ್ವೇಶ್ವರಯ್ಯನವರನ್ನು ನಾವು ನೀವು ಎಲ್ಲಾ ಸೇರಿ ಇವತ್ತು ನೆನಪಿಸಿಕೊಳ್ಳುತ್ತೇವೆ. ಮಾನವಂತ ವ್ಯಕ್ತಿ ಅವರು. ದಕ್ಷ ಇಂಜಿನಿಯರ್ ಮತ್ತು ಆಡಳಿತಗಾರರಾಗಿದ್ದರು. ದಿವಾನರೂ ಆಗಿದ್ದರು. Hats off to that great Statesman But Devarajaars is in noway inferior to anybody. Hats off.

ಇವತ್ತು ಹಾಸನ ಜಿಲ್ಲೆ ತುಮಕೂರು ಜಿಲ್ಲೆಗೆ ನೀರಿಗೆ ಪರದಾಟ ಮಾಡಿ ನಾವೆಲ್ಲಾ ಗಲಾಟೆ ಮಾಡಿಕೊಳ್ಳುತ್ತೇವೆ. ಇವತ್ತು ಅದೇ ಹೇಮಾವತಿ ಡ್ಯಾಮನ್ನು ಕಟ್ಟದೇ ಇದ್ದಿದ್ದರೆ. ಯಾರೂ ಕೂಡ ಜಗಳ ಆಡುವುದಕ್ಕೆ ಅಲ್ಲಿ ಅವಶ್ಯಕತೆ ಇರುತ್ತಿರಲಿಲ್ಲ. ನಮ್ಮ ಪಾಲಿನ ನೀರನ್ನು ನಾವು ಪಡೆಯಬೇಕು. ಎಷ್ಟು ಪಾಲು ಎನು ಎನ್ನತಕ್ಕ ವಿವರಕ್ಕೆ ನಾನು ಹೋಗುವುದಿಲ್ಲ. since the matter is pending before the Tribunal there ನಾನು ಅದನ್ನು ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ he had that farsightedncess in his mind with lot of commitment at his disposal.

ದೇವರಾಜ್‌ಅರಸರವರು ಹಣ ಕೊಟ್ಟು ಡ್ಯಾಮ್ ಕಟ್ಟಿಸುವುದು. ಕೆನಾಲ್ ಅನ್ನು ಕಟ್ಟಿಸುವುದು ಮುಂತಾದ ಕೆಲಸಗಳನ್ನು ಮಾಡಿದರು ನನ್ನ ಕಾಲದಲ್ಲಿ ಅದಕ್ಕೆ ಅವೆಲ್ಲವನ್ನೂ ನೋಡಿ, ನೋಡಿ ನಾನು ಅಧಿಕಾರದಲ್ಲಿ ಇದ್ದಾಗ ಅಧಿಕಾರಕ್ಕೆ ಬರುವುದಕ್ಕೆ ಮುಂಚೆ, ಬಿಟ್ಟ ಮೇಲೂ ಕೂಡ ನಾವು ನೋಡಿದ್ದೇವೆ. ಅದಕ್ಕಾಗಿ ನಾವು ಕರಡಿಲೆಕ್ಕನ ಕೆರೆ ಹಾರಂಗಿ ಕೆನಾಲ್ ಎನು ಹೋಗುತ್ತದೆ ಅದರಿಂದ ಇವತ್ತು ಮೈಸೂರು ಜಿಲ್ಲೆಯ ಪಿರಿಯಾಪಟ್ಟಎ ತಾಲ್ಲೂಕಿಗೆ ನೀರು ಬರುತ್ತದೆ. ಕರಡಿಲೆಕ್ಕನ ಕೆರೆ 60-70 ಕೋಟಿ ರೂಪಾಯಿಗಳ ಯೊಜನೆ. That life irrigation is going to be the biggest lift irigation project in the whole of the country.

ಲೇಟೆಸ್ಟ್ ಅಂಕಿ ಅಂಶಗಳು ನನಗೆ ಗೊತ್ತಿಲ್ಲ. ಕರಡಿಲೆಕ್ಕನ ನನ್ನ ಕಾಲದಲ್ಲಿ 10Ë12 ಕೋಟಿ ರೂಪಾಯಿ ಬಿಡುಗಡೆ ಮಾಡಿ ಕೆಲಸ ಪ್ರಾರಂಭಮಾಡಿಸಿದ್ದೇನೆ. ದುರ್ದೈವದ ಸಂಗತಿ ಎಂದರೆ. ಅಮೇಲೆ ಈ ಯೋಜನೆಗೆ ಹಣ ಕೊಡದೇ ಆ ಕೆಲಸ ಬಹಳ ನಿಧಾನವಾಗಿ ಹೋಗಿದ್ದೆ. ಈ ಬಗ್ಗೆ ನನ್ನ ಮನಸ್ಸಿಗೆ ಯೋಚನೆ ಇದೆ. ತಾವು ಇದನ್ನು ನೋಟ್ ಮಾಡಿಕೊಂಡು ಹಣ ಬಿಡುಗಡೆ ಮಾಡಿ ಎನಾದರೂ ಮಾಡಿ ಇದರ ಉಪಯೋಗವನ್ನು ರೈತರಿಗೆ ಮಾಡಿ ಕೊಟ್ಟು ನೀರು ಕೊಡುವುದು ಬಹಳ ಒಳ್ಳೆಯದು ಅದೇ ರೀತಿ ಹೆಗ್ಗಡೆದೇವನ ಕೋಟೆ ತಾಲ್ಲೂಕು ತಾರಕ ಯೋಜನೆ. ಕಬಿನಿಗೆ ಸಂಬಂಧಪಟ್ಟಿದ್ದು ತಾರಕ ಯೋಜನೆ ಸುಮಾರು 10-12 ಕೋಟಿ ರೂಪಾಯಿಗಳ ಯೋರನೆ. ನನ್ನ ಕಾಲದಲ್ಲಿ 4-41/2 ಕೋಟಿ ರೂಪಾಯಿಗಳು ಹಣ ಬಿಡುಗಡೆ ಮಾಡಿದೆ ಒಂದೇ ಬಾರಿಗೆ. ದಯವಿಟ್ಟು ಈ ಬಗ್ಗೆ ಎಲ್ಲಾ ದಾಖಲೆಗಳನ್ನೂ ನೀವು ತರಿಸಿ ನೋಡಿ. ಈ ತಾರಕ ಯೋಜನೆ ಪ್ರಾರಂಭಿಸಿ ಎನು ವರ್ಕ ಮಾಡಿದ್ದೀರಿ. ನಾನು ನಿಮ್ಮ ಮೇಲೆ ಒಬ್ಬರಿಗೇ ಹೇಳುತ್ತಿಲ್ಲ. ನೀವು ಬಂದು ಬರೀ 3-4 ತಿಂಗಳು ಅಗಿದೆ. ನಾನು ನಿಮ್ಮ ಮೇಲೆ ಗೂಬೆ ಕೂರಿಸುವುದಕ್ಕೆ ಆ ಮಾತು ಆಡುತ್ತಿಲ್ಲ. ಬಹಳ ನನ್ನ ಮನಸ್ಸಿಗೆ ನೋವು ಆಗುತ್ತದೆ. ಅದೇ ರೀತಿಯಾಗಿ ಬಿಜಾಪುರದಲ್ಲಿರತಕ್ಕ ಮುಳವಾಡ ಲಿಫ್ಟ್ ಇರಿಗೇಷನ್ ಮನಸ್ಸಿಗೆ ಎಷ್ಟು

ನೋವಾಗುತ್ತದೆ. ಇವತ್ತು ಪೂರ್ತಿ ನೀರು ಹೋಗುತ್ತಿದೆ ಜಾಬವಲ ವರ್ಕ ಅಲ್ಲಿರತಕ್ಕಂಥದ್ದು. ಸುಮಾರಾಗಿ ಹೊಸದಾಗಿ ಆ ಕೆನಾಲ್‌ಗೆ ಆ ಜಮೀನು ಹೋಗಿ ಅಕ್ವಿಸಿಷನ್ ನಡೆಯಲಿಲ್ಲ, ಹಿಪ್ಪರಗಿ ಬ್ಯಾರೇಜ್ ಗತಿ ಎನಾಯಿತು. ಬಿಜಾಪುರ ಜಿಲ್ಲೆಯ ಮಾನ್ಯ ಶಾಸಕರುಗಳು ಇಲ್ಲೆಲ್ಲಾ ಕುಳಿತುಕೊಂಡಿದ್ದಾರೆ. ಮಾನ್ಯ ಸಭಾಧ್ಯಕ್ಷರೇ ನನ್ನ ಮನಸ್ಸಿಗೆ ನೋವಾಗುತ್ತದೆ. ಹಿಪ್ಪರಗಿ ಬ್ಯಾರೇಡಿಗೆ ಕೂಡ ನಾನು ಹಣವನ್ನು ಬಿಡುಗಡೆ ಮಾಡಿ ಕೆಲಸವನ್ನು ಪ್ರಾರಂಭಮಾಡಿದೆ. ಇವತ್ತು ಅಲ್ಲಿ ಕೆಲಸ ಸ್ಥಗಿತಗೊಂಡಿದೆ. ಹಿಪ್ಪರಗಿ ಯೋಡನೆ ಸ್ಥಗಿತಗೊಂಡಿದೆ. ಮುಳುವಾದ ಯೋಜನೆ ಸ್ಥಗಿತಗೊಂಡಿದೆ. ಅದು ಅಷ್ಟೇ ಅಲ್ಲ, ನಾನು ಹೇಳುತ್ತೇನೆ ನಿಮ್ಮ ಭಾಗದ ಗೋಕಾಕ್ ತಾಲ್ಲೂಕು ಆಮೇಲೆ ಬಿಜಾಪುರ ಜಿಲ್ಲೆ ಬೀಳಗಿಯವರೆಗೂ ನೀರು ಹೋಗುತ್ತದೆ. ನಿಮ್ಮ ಜಿ.ಆರ್.ಬಿ.ಸಿ. Right bank camal of Ghtaprabha ನನ್ನ ಕಾಲದಲ್ಲಿ ಕೂಡ ಅದಕ್ಕೆ ಹಣ ಬಿಡುಗಡೆ ಮಾಡಿದ್ದೇವೆ, ಇವೆಲ್ಲಾ ಕೆಲಸ ಕಾರ್ಯಗಳು ಇವತ್ತು ಎಲ್ಲಿ ಹೋಗಿವೆ? ಇವತ್ತು ನಾವು ಕಾವೇರಿ ಬೇಸಿನ್ ಬಗ್ಗೆ ಮಾತನಾಡುತ್ತೇವೆ, ಕೃಷ್ಣ ಬೇಸನ್ ಬಗ್ಗೆ ಮಾತನಾಡುತ್ತೇವೆ. ಮಾನ್ಯ ಸಭಾಧ್ಯಕ್ಷರೇ ಬಹಳ ಮನಸ್ಸಿಗೆ ನೋವಾಗುತ್ತದೆ. ನಾನು ಅಧಿಕಾರ ಬಿಟ್ಟ ಮೇಲೆ ಮೊಯಿಲಿಯವರು ಬಂದರು ನಾನು ಆ ಸರ್ಕಾರದ ಮೇಲೆ ಅಪಾದನೆ ಮಾಡಬೇಕು ಎನ್ನು ದೃಷ್ಟಿಯಿಂದ ಮಾತನಾಡುತ್ತಿಲ್ಲ. Atleast you pleace take up the work ಅರ್ಥದಲ್ಲಿರುವ ಅಥವಾ ಮಂಜೂರಾತಿ ನೀಡಿರುವ ಹಣ ಬಿಡಿಗಡೆ ಮಾಡಿರುವ ಯೋಜನೆಗಳನ್ನು ತೆಗೆದುಕೊಳ್ಳಿ ಅಥವಾ ನೀವೇ ಹೊಸದನ್ನು ಮಾಡಿ, ಮಾಡಿ ಒಳ್ಳೆಯ ಹೆಸರನ್ನು ಪಡೆದುಕೊಳ್ಳಿ ಅಪ್ಪರ ಕೃಷ್ಣಾ ಪ್ರಾಜೆಕ್ಟ್ ಇದೆ, ಅದನ್ನೂ ಮುಗಿಸಿ ತಮಗೆ ಗೊತ್ತಿರುವಂತೆ ಇವೆಲ್ಲಾ ಕೃಷ್ಣಾ ಬೇಸಿನ್‌ನಲ್ಲಿ ಬರುತ್ತವೆ. ಕೃಷ್ಣಾ ಬೇಸಿನ್ ಎಲ್ಲಿಯವರೆಗೆ ಬರುತ್ತದೆ ಎಂಬುದು ತಮಗೆಲ್ಲಾ ಗೊತ್ತಿದೆ.ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನವರೆಗೆ, ಅದು ಬಿಟ್ಟ ತಕ್ಷಣ ನಿಮ್ಮ ಕಾವೇರಿ ಬೇಸಿನ್ ಸ್ಟರ್ಟ ಆಗುತ್ತದೆ. ಬೇಲೂರಿನಲ್ಲಿ ಇರತಕ್ಕದ್ದು ಯಗಚಿ ಯೋಡನೆ. ಯಗಚಿ ಯೋಜನೆ ಬಗ್ಗೆ ನನ್ನ ಕಾಲದಲ್ಲಿ ಒಂದು ದೊಡ್ಡ ಮೀಟಿಂಗ್ ಕರೆದೆ ಅ ಬಗ್ಗೆ ರೈತ ಸಂಘದವರು ಚಳುವಳಿ ಮಾಡುತ್ತಿದ್ದರು ನಾನು ಮುಖ್ಯ ಮಂತ್ರಿ ಆಗಿದ್ದಾಗ. ನಾನು ಎಲ್ಲರನ್ನೂ ಮೀಟಿಂಗೆಗೆ ಕರೆಯಿಸಿದೆ. ಅವರೆಲ್ಲರನ್ನೂ ಮೀಟಿಂಗೆಗೆ ಕರೆಯಿಸಿ,

ವಿಧಾನಸೌಧದಲ್ಲಿ ದೊಡ್ಡ ಮೀಟಿಂಗೆ ಮಾಡಿದೆ. ಅವರುಗಳು ನಮ್ಮ ಜಮೀನೆಲ್ಲಾ ಮುಳುಗದೆ ಆಗಿದೆ. ನೀರಾವರಿ ತೆಗೆದುಕೊಳ್ಳಬೇಕು. ಅದರೆ ಅದು ಇಂಟರ್ ಬೇಸಿನ್ ಡಿಸಿಷನ್ ದು ನನಗೆ ಹೇಳುದರು ಇಂಟರ್ ಬೇಸಿನ್ ಬರುವುದಿಲ್ಲ ಎನ್ನತಕ್ಕದ್ದನ್ನು ನಾವು ತೀರ್ಮಾನ ಮಾಡಿಸಿ, ಹಣ ಬಿಡುಗಡೆ ಮಾಡಿಸಿದೆ. ಸ್ವಾಮಿ ಇವತ್ತು ಅವರ ಗತಿ ಎನಾಗಿದೆ. ಹಾಸನ ಜಿಲ್ಲೆಯಲ್ಲಿ ಮಾನ್ಯ ಮುಖ್ಯಮಂತ್ರಿಗಳ ಜಿಲ್ಲೆ ಒಂದು ಯಗಚಿ ಆ ಪ್ರದೇಶದ ಜನರ ಗತಿ ಎನಾಗಬೇಕು?. ಅದಕ್ಕೆ ನಾನು ಹೇಳುವುದು. ಹೇಮಾತಿ ಡ್ಯಾಮ್ ಹತ್ತಿರ ಇರತಕ್ಕ ಲೆಪ್ಟ ಇರಿಗೇಷನ್ಗಳು ಹಾಗೆ ಉಳಿದಿವೆ. ಆ ಬಗ್ಗೆ ಒಂದು ಲಿಸ್ಟೇ ನನ್ನ ಬಳಿ ಇದೆ. ಯಗಚಿ ಇರಬಹುದು. ಮತ್ತೊಂದು ಇರಬಹುದು. ಇದಕ್ಕೆ ಎನಾದರೂ ಮಾಡಿ ತಾರತಮ್ಯ ಸ್ವಲ್ಪವೂ ಕೂಡ ನೋಡದನೇ, ವಿಚಾರ ಮಾಡದನೇ ಇದಕ್ಕೆಲ್ಲಾ ಗಮನ ಕೊಟ್ಟು ಹಣ ಬಿಡುಗಡೆ ಮಾಡಿ. ಸ್ವಾಮಿ ತಾ ಇಟ್ಟಿರತಕ್ಕ ಹಣ ನೋಡಿದರೆ ಬಹಳ ಮನಸ್ಸಿಗೆ ನೋವಾಗುತ್ತದೆ. ಅಪ್ಪರ್ ತುಂಗಾ ಪ್ರಾಜೆಕ್ಟ ಸುಮಾರು 200 ಕೋಟಿ ರೂಪಾಯಿ ಅಂದಾಜು ಇದೆ. ಶಿವಮೊಗ್ಗ ತಾಲ್ಲೂಕು ಸುಮಾರು 16-18 ಸಾವಿರ ಎಕರೆ, ಹೊನ್ನಾಳಿ ತಾಲ್ಲೂಕು ಸುಮಾರು ಒಂದು 20 ಸಾವಿರ ಎಕರೆ ಅನಂತರ ಧಾರವಾಡ ಜಿಲ್ಲೆಗೆ ಅದು ಹೋಗುತ್ತದೆ. ಹಿರೇಕೆರೂರು ತಾಲ್ಲೂಕು 24 ಸಾವಿರ ಎಕರೆ ಅದು ಬರೀ ಎರಿಯಲ್

ಸರ್ವೆ. 50 ಲಕ್ಷ ರೂಪಾಯಿಗಳನ್ನು ನಾವು ಕ್ಯಾಬಿನೆಟ್‌ನಲ್ಲಿ ಮಂಜೂರು ಮಾಡಿ ಎರಿಯಲ್ ಸರ್ವೆ ಮಾಡಿದ ಮೇಲೆ ನಿಮಗೆ ಕರಾರುವಾಕ್ಕಾಗಿ ಸಿಗುತ್ತದೆ. ಸುಮಾರು 30Ë35 ಸಾವಿರ ಎಕರೆಯವರೆಗೆ ಹಿರೇಕೆರೂರು ತಾಲ್ಲೂಕಿಗೆ ಹೋಗಿದೆ. ನಿಮ್ಮ ತಾಲ್ಲೂಕಿನಲ್ಲಿ ನಿಮಗೆ ಬಹಳ ಉಪಯೋಗ. ಅದಕ್ಕೆ ಹೇಳುವುದು ನಾನು. ಇದಾದ ಮೇಲೆ ಹಾನಗಲ್ ತಾಲ್ಲೂಕು ಸುಮಾರು 8-10 ಸಾವಿರ ಎಕರೆ. ಬ್ಯಾಡಗಿ ತಾಲ್ಲೂಕು ಒಂದು ಇರುವುದು ರಾಣಬೆನ್ನೂರು ತಾಲ್ಲೂಕಿನಲ್ಲಿ. ರಾಣೆಬೆನ್ನೂರಿನಿಂದ ಬಂದಿರತಕ್ಕ ಮಾನ್ಯ ಶಾಸಸರು ಇಲ್ಲಿ ಕುಳಿತುಕೊಂಡಿದ್ದಾರೆ. 1 ಲಕ್ಷ 8 ಸಾವಿರ ಎಕರೆ ಇದ್ದಿದ್ದು ಎರಿಯಲ್ ಸರ್ವ ಆದ ಮೇಲೆ 1 ಲಕ್ಷ 22 ಸಾವಿರ ಎಕರೆಗೆ ಹೋಗಿದೆ. ರಾಣೆಬೆನ್ನೂರು ತಾಲ್ಲೂಕಿನಲ್ಲಿ. ಟೋಟಲ್ ಮಾಡಿದರೆ 2-21/2 ಲಕ್ಷ, 3 ಲಕ್ಷ ಎಕರೆಯಾಗುತ್ತದೆ.

ಸ್ವಾಮಿ ನಾನು ಒಂದು ಮಾತನ್ನು ಹೇಳುತ್ತೇನೆ. ನಾನು ಅಮೇರಿಕಾಕ್ಕೆ ಹೋಗಿದ್ದಾಗ ಅಲ್ಲಿ ವರ್ಲ್ಡ್ ಬ್ಯಾಂಕ್ ವೈಸ್ ಚೇರಮನ್ ಹತ್ತಿರ ಇದನ್ನು ಮಾತನಾಡಿ ಅವರ ಮುಂದೆ ನಮ್ಮ ಕೇಸನ್ನು ಸರಿಯಾಗಿ ಇಟ್ಟು ಅವರ ಒಪ್ಪಿಗೆಯನ್ನು ಪಡೆದುಕೊಂಡು ಬಂದೆ. ಇವೊತ್ತು ಅದು ನಾಗಿದೆ. ಇದಕ್ಕೆ ಹಣವನ್ನು ಕೊಡತಕ್ಕಂತಹವರು ಹಣಕಾಸು ಸಚಿವರು ಆದ್ದರಿಂದ ಶ್ರೀ ಸಿದ್ದರಾಮಯ್ಯನವರು ಸ್ವಲ್ಪ ಇದರ ಗಮನಕೊಡುವುದು ಒಳ್ಳೆಯದು ಏಕೆಂದರೆ ರಾಜಕಾರಣದಲ್ಲಿ ಭಾಷಣ ಮಾಡುವುದು ಮತ್ತೊಂದು ಇದ್ದೇ ಇರುತ್ತದೆ. That is not the point ಅದರೆ ಬಡ್ಜೆಟ್‌ನಲ್ಲಿ ಎಷ್ಟು ಇಟ್ಟಿದ್ದೀರಿ ಎಂಬುದು ಮುಖ್ಯ. ಒಂದು ವೇಳೆ ಅಸಮತೋಲನ ಆದರೆ ಮತ್ತೇ ಅದನ್ನು ,ಸರಿಪಡಿಸಲಿಕ್ಕೆ ಬರುತ್ತದೆ. ನಾನು ಈ ದೃಷ್ಟಿಯಿಂದ ಸಲಹೆಗಳನ್ನು ಕೊಡುತ್ತಿದ್ದೇನೆ. ಅದು ಕಾವೇರಿ ಬೇಸ್ನ್ ಇವ್ ಅವು ಅಗಿರಬಹುದು, ನಾನು ಅದರ ಬಗ್ಗೆ ಏನೂ ಹೇಳುತ್ತಿಲ್ಲ. ಇವೊತ್ತು ಅಪ್ಪರ್ ತುಂಗಾ ಪ್ರಾಜಿಕ್ಟ ನೀವು ಏಕೆ ನಿಲ್ಲಿಸಿದ್ದೀರಿ. ನೀವು ನಿಲ್ಲಿಸಿದ್ದೀರಿ ಎಂದು ನಾನು ಹೇಳುತ್ತಿಲ್ಲ, ನೀವು ಬರುವುದಕ್ಕಿಂತ ಮುಂಚೆ ಅದು ನಿಂತಿದೆ. ನನಗೆ ಎಲ್ಲಾ ಗೊತ್ತಿದೆ. ಚೀಫ್ ಇಂಜಿನಿಯರ್ ಪೋಸ್ಟ್ ಒಂದು ಕಡೆ ಮಂಜೂರು ಮಾಡಿ, ಆಫೀಸ್ ಮಾಡಿ ತುಂಗಾ ಡ್ಯಮ್ ಹತ್ತಿರ ಆ ಎಕ್ಸಸ್ ನೀರನ್ನು ಡೈವರ್ಟ ಮಾಡಿಕೊಂಡು ಕ್ರಸ್ಟೆ ಗೇಟ್ ಮುಖಾಂತರ ಕೊಡಬೇಕು ಎನ್ನತಕ್ಕಂಥ ತೀರ್ಮಾನ ನಾವು ಮಾಡಿದ್ದವು ಅದರೆ ದುರ್ದೈವದ ಸಂಗತಿ ಎನೆಂದರೆ ಆಮೇಲೆ ಬಂದ ಸರ್ಕಾರ ಅದನ್ನು ಹಾಳು ಮಾಡಿತು. ಸೂಪರಿಂಟೆಂಡಿಂಗ್ ಇಂಜಿನಿಯರ್ ಆಫೀಸ್ ಒಪನ್ ಮಾಡಿ ಬಂದೇ ನಾನೇ. ರಾಣೇಬೆನ್ನೂರನಲ್ಲಿ ಇವೊತ್ತು ಅದನ್ನು ಯಾರೂ ಕೂಡ ಕೇಳುವವರು ಗತೀ ಇಲ್ಲ. ಅದಕ್ಕೆ ಹಾಗಾದರೆ ಆ ಧಾರವಾಡ ಜಿಲ್ಲೆಯ ಜನರ ಗತಿ ಏನಾಗಬೇಕು? ಅಖಂಡ ಕರ್ನಾಟಕದ ಸರ್ವತೋಮುಖ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ನಾವು ಯಾವಾಗಲೂ ಈ ವಿಚಾರದ ಬಗ್ಗೆ ಗಮನ ಕೊಡಬೇಕು ಆದರೆ ನೀವು ವಿಚಾರದ ಬಗ್ಗೆ ಗಮನ ಕೊಡುತ್ತಿಲ್ಲ. ಮಹಾದಾಯಿ ಡೈವರ್ಷನ್ ಸ್ಕೀಮ್ ಅಥವಾ ಮಲಪ್ರಭ ಏನಾಗಿದೆ? ನಮ್ಮ ಕಾಲದಲ್ಲಿ ನಾವು ಹಣ ಬಿಡುಗಡೆ ಮಾಡಿದ್ದೇವೆ ಬೇಕಾದರೆ ತಾವು ದಯವಿಟ್ಟು ರೆಕಾರ್ಡ್ಸಗಳನ್ನು ತೆಗೆದು ನೋಡಿ. ಈಗ ಮಲಪ್ರಭಾ ತುಂಬುತ್ತಾ ಇಲ್ಲ. ಚಿಮನಕಟ್ಟಿಯವರು ಮಾತನಾಡಬೇಕಾದರೆ ಹೇಳಿದರು ನಮ್ಮ ಕಡೆ ನೀರು ಬರಬೇಕು, ಇನ್ನು 30-40 ಕಿ.ಮಿ. ಅಥವಾ ಮೈಲಿ ಚಾನಲ್ ಆಗುವುದಿದೆ ಎಂದು ಭಾಷಣ ಮಾಡಿದರು. ನಾನು ಒಂದೇ ಒಂದು ಹೇಳುವುದು, ಮಲಪ್ರಭಾ ಡ್ಯಾಮ್ ಕಟ್ಟಿದಮೇಲೆ ಎಷ್ಟು ಸಾರಿ ತುಂಬಿತು. ಅದಕ್ಕಾಗಿ ನಾವು ಮಹಾದಾಯಿರಿವರ್ ಡೈವರ್ಷನ್ ಯೋಜನೆಯನ್ನು ತೆಗೆದು ಕೊಂಡಿದ್ದವು ಕಡೆಗೆ ಅದವು ಸಮುದ್ರಕ್ಕೆ ಹೊರಟು ಹೋಗುತ್ತದೆ. ಮಹಾದಾಯಿ ಡೈವಷನ್ ಸ್ಕೀಮ್‌ಗೆ ನಾವು ಕ್ಯಾಬಿನೆಟ್ನಲ್ಲಿ ಮಂಜೂರಾತಿ ನೀಡಿದ್ದೇವೆ. ಒಂದು

ತೀರ್ಮಾನ ನೀವು ಮಾಡಿದರೆ ಅದನ್ನು ಹಾಗೆಯೇ ಮಲಗಲು ಬಿಡಬೇಕೇನು? ಹಾಗಾದರೆ ಏತಕ್ಕೆ ಮಾಡಿದ್ದು ನಾವು ನನಗೆ ಗೊತ್ತಿರುವ ಹಾಗೆ ಮಲಪ್ರಭ ಕಟ್ಟಿದ ಮೇಲೆ ಅದು ತುಂಬಿರತಕ್ಕದ್ದು ಬಹಳ ಅಪರೂಪ. ಅದಕ್ಕೆ ಸರಿಯಾಗಿ ಕ್ಯಾಚಮೆಂಟ್ ಎರಿಯಾದಲ್ಲಿ ನೀರು ಬರುತ್ತಾ ಇಲ್ಲ, ಆ ಡ್ಯಾಮ್ ತುಂಬುತ್ತಾ ಇಲ್ಲ, ವದತ್ತಿ ಟೌನ್ ಹತ್ತಿರ ಇರತಕ್ಕಂಥ ಡ್ಯಾಮ್ ಅದು ಅದಕ್ಕಾಗಿ ನಾನು ಹೇಳಿದ್ದುದು ಈ ಮಹಾದಾಯಿ ಡೈವರ್ಷನ್ ಸ್ಕೀಮ್ ಇಂಪಾರ್ಟೆಂಟ್ ಇದನ್ನು ಕೂಡ ನಾನು ನಮ್ಮ ಕಾಲದಲ್ಲಿ ವರ್ಲ್ಡ್ ಬ್ಯಾಂಕಿಗೆ ಪ್ರೋಸ್ ಮಾಡಿದ್ದೇವೆ. ನಾನು ಹೊಗಳಿಕೆಗೆ ಹೇಳುತ್ತಿಲ್ಲ. ನನ್ನ ಕರ್ತವ್ಯ ನಾನು ಮಾಡಿದ್ದೇನೆ. ನಿಮ್ಮ ಕರ್ತವ್ಯ ನಾನು ಮಾಡಿದ್ದೇನೆ. ನಿಮ್ಮ ಕರ್ತವ್ಯ ನೀವು ಮಾಡಿ ಎನ್ನತಕ್ಕಂಥ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಇನ್ನು ಜಿ.ಅರ್.ಬಿ.ಸಿ. ಕೂಡ ಅಷ್ಟೇನೇ ಕೃಷ್ಣಾ ಹರಿದುಕೊಂಡು ಬರುತ್ತದೆ. ಪಕ್ಕದಲ್ಲಿ ಘಟಪ್ರಭ ಇವೆಲ್ಲಾ ಕೊನೆಗೆ ಕೃಷ್ಣಗೆ ಸೇರಿಕೊಳ್ಳುತ್ತವೆ. ಸ್ವಾಮಿ ಇವೊತ್ತು ನಾನು ಕೇಳುತ್ತೇನೆ ಲಿಫ್ಟ್ ಇರಿಗೇಷನ್ ಸ್ಕೀಮ್ ಮಹಾರಾಷ್ಟ್ರದಲ್ಲಿ ಬೇಕಾದಷ್ಟು ಮಾಡಿ ಶುಗರ್ ಫ್ಯಾಕ್ಟರಿ ಮಾಡಿ ಅವರು ಶುಗರ್ ಲಾರ್ಡ್ಸ ಆಗಿದ್ದಾರೆ. ನಾವು ಬಿಜಾಪುರನಲ್ಲಿ ನಂದಿ ಶುಗರ್ ಫ್ಯಾಕ್ಟರಿಗೆ ಮಂಜೂರಾತಿ ನೀಡಿ ಸುಮಾರು ಎರಡು -ಎರಡುವರೆ ಕೋಟಿ ಹಣವನ್ನು ಕೂಡ ಬಿಡುಗಡೆ ಮಾಡಿದ್ದೆ ನನಗೆ ಎಲ್ಲಾ ನೆನಪಿದೆ. ಇಲ್ಲದಿದ್ದರೆ ಇವೊತ್ತು ಆ ಶುಗರ್ ಫ್ಯಾಕ್ಟರಿ ನಡೆಸಲೂ ಕೂಡ ಸಾಧ್ಯವಾಗುತ್ತಿರಲಿಲ್ಲ. ಹಾಗೂ ಬೆಳಗಾಂ ಜಿಲ್ಲೆಯ ಅಥಣಿಯಲ್ಲೂ ಕೂಡ ಶೇರನ್ನು ಎತ್ತಿ ಕೃಷ್ಣ ಸಹಕಾರ ಸಕ್ಕರೆ ಕಾರ್ಖಾನೆ ಹಾಗೂ ಖಾನಾಪೂರ ತಾಲ್ಲೂಕಿನಲ್ಲಿ ಭಾಗ್ಯಲಕ್ಷ್ಮಿ ಸಹಕಾರ ಸಕ್ಕರೆ ಕಾರ್ಖಾನೆಗೆ ಶೇರ್ ಸಹ ದುಡ್ಡನ್ನು ಕೊಟ್ಟಿದ್ದೆವು. ರೈತರಿಗೆ ಲಿಫ್ಟ್ ಇರಿಗೇ,ನ್ ಮುಖಾಂತರ ನೀರು ತೆಗೆದುಕೊಳ್ಳಲು ಬೇಕಾದಷ್ಟು ಅವಕಾಶಗಳು ಇವೆ. ನೀವು ಟೂರ್ ಹೋಗಬೇಕು. ಈ ಅದಿವೇಶನ ಮುಗಿದಕೂಡಲೇ ಮುಖ್ಯಮಂತ್ರಿಗಳು, ನೀವು ಇರಿಗೇಷನ್ ಸಚಿವರಾಗಿದಿಂದ ಮುನಿಯಪ್ಪನವರು ಮತ್ತೊಬ್ಬರು ಕಮಿಟ್‌ಮೆಂಟ್ ಇರತಕ್ಕವರು ಆ ಭಾಗಗಳಿಗೆ ಟೂರ್ ಹೋಗಬೇಕು. ನೀವು ಎಲ್ಲರೂ ಹೋದರೆ ಬಹಳ ಸಂತೋಷವೇ. ಆ ನಂಬಿಕೆಯನ್ನು ಇಟ್ಟುಕೊಂಡು ನಾನು ನಿಮ್ಮಿಂದ ಬಹಳ ನಿರೀಕ್ಷೆಯನ್ನು ಮಾಡುತ್ತಿದ್ದೇನೆ. ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡುವಾಗ ಹೇಳಿದರು ನಾಳೆ ನೀವು ಶಾಪಕ್ಕೆ ತುತ್ತಾಗುತ್ತೀರಿ ಎಂದು. ನೀವು ಅಷ್ಟೇ ಅಲ್ಲ ನಾವೂ ಕೂಡ ಮೊಯಿಲಿಯವರ ಸರ್ಕಾರ ಇರಬಹುದು, ಕಾಂಗ್ರೆಸ್ ಸರ್ಕಾರ ಇರಬಹುದು, ದಳ ಸರ್ಕಾರ ಇರಬಹುದು ಆ ಪ್ರಶ್ನೆ ಇಲ್ಲಿ ಬರೋದಿಲ್ಲ, ಎಲ್ಲರೂ ಸಹ ಆ ಶಾಪಕ್ಕೆ ತುತ್ತಾಗುತ್ತೇವೆ. ಕಾವೇರಿ ಜಲಾನಯನ ನೀರು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ಮಂಡ್ಯ ಜಿಲ್ಲೆಯಲ್ಲಿ ಮಾಡರ್ನೈಸೇಷನ್ ಕೆನಾಲಿಗೆ ನಾನು ಎರಡು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೆ. ಈ ಕೆನಾಲಿಗೆ ಜಾಸ್ತಿ ಹಣ ಖರ್ಚು ಮಾಡಬೇಕಾಗುತ್ತದೆ. ಕಾಸ್ಟ್ ಎಸ್ಕಲೇಟ್ ಆಗಿರುವುದರಿಂದ ಈಗ ಅದು 30-32 ಕೋಟಿಗೆ ಹೊಗಬಹುದು. ನಾನು ಇದ್ದಾಗ ಇದಕ್ಕೆ ಎರಡು ಕೋಟಿರೂಪಾಯಿ ಬಿಡುಗಡೆ ಮಾಡಿದ್ದೆ.

ಇನ್ನು ವರುಣಾ ಕೆನಾಲ್‌ಗೂ ತಾವು ಕೊಟ್ಟಿದ್ದೀರಿ. ಇದರ ಬಗ್ಗೆ ಅ ಕಡೆಯಿಂದ ನಾಗೇಗೌಡರು ಶ್ಲಾಘನೆಯನ್ನು ಮಾಡಿದರು. ಅದೇ ರೀತಿ ಮಂಡ್ಯಕ್ಕೂ ಸಹ ಹಣವನ್ನು ಬಿಡಿಗಡೆ ಮಾಡಿದ್ದಾರಿ. ದೇವರಾಜ್ ಅರಸ್ ಇತರಕ್ಕ ಕಾಲದಲ್ಲಿ ಪ್ರತಿಯೊಂದು ಅಂಕಿ ಅಂಸಗಳನ್ನು ನಾವು ನೋಡಿದ್ದೇವೆ. ಕಾಂಪ್ರೋಮೈಸ್ ಅಗ್ರಿಮೆಂಟ್‌ನಲ್ಲಿ ಎನು ಇತ್ತು ಎಂಬುದನ್ನು ನಾನು ನೋಡಿದ್ದೇನೆ ಆ ದೃಷ್ಟಿಯಿಂದ ಹಣವನ್ನು ಬ್ಯಾಲನ್ಸ ಆಗಿ ಕೊಟ್ಟುಕೊಂಡು ಹೋಗಿ.

ಶ್ರೀ ಎಸ್.ಡಿ. ಜಯರಾಮ್: ನಾವು ಅವು ಎರಡಕ್ಕೆ 32 ಕೋಟಿ ಕೊಟ್ಟಿದ್ದೇವೆ.

ಶ್ರೀ ಎಸ್. ಬಂಗಾರಪ್ಪ: ಅದೇ ರೀತಿ ನೀವು ಮಾಡಿಕೊಂಡು ಹೋಗಿ. ಯಾವಾಗಲೂ ನೀರಾವರಿಗೆ ಹಣ ಇಲ್ಲ ಎಂದು ಹೇಳಬಾರದು. ತುಮಕೂರಿನಲ್ಲಿ ಸತ್ಯಾಗ್ರಹ ಮಾಡಿದರು. ಶ್ರೀ ವೈ.ಕೆ. ರಾಮಯ್ಯನವರು ಹಿಂದೆ ಮಂತ್ರಿಗಳು ಆಗಿದ್ದರು, ಅವರ ಬಗ್ಗೆ ನಾನೇನೂ ಮಾತನಾಡುವುದಿಲ್ಲ. ಆದರೆ ನಾನು ಅಧಿಕಾರದಲ್ಲಿ ಇದ್ದಾಗ ನಾರಾವರಿಗೆ ದುಡ್ಡಿಲ್ಲ ಎಂದು ಎಲ್ಲೂ ಹೇಳಲಿಲ್ಲ. ಹಾಗೂ ಯಾರೂ ದುಡ್ಡು ಕೊಡಲಿಲ್ಲ ಎಂದು ಭಾಷಣ ಮಾಡಲಿಲ್ಲ. ತಾವು ರೆಕಾರ್ಡ್ ತೆಗೆದು ನೋಡಿ. ಆದರೆ ನಂತರ ಏನಾಯಿತು ಎಂದರೆ ದುರ್ದೈವದ ಸಂಗತಿ ನಂತರ ಬಂದ ಸರ್ಕಾರವು ಎಕಾನಮಿ ಆರ್ಡರ್ಸ್ ಎಲ್ಲಾ ತೆಗೆದುಕೊಂಡು ಬಂದು ನಿಲ್ಲಿಸಿಬಿಟ್ಟರು. ಸರ್ಕಾರದಿಂದ ಬಿಲ್ಲಗಳು ಪಾವತಿ ಆಗದೇ ಉಳಿದುಕೊಂಡಿದ್ದಿ ಕಂಟ್ರಾಕ್ಟರ್‌ಗಳು ಬ್ಯಾಂಕ್‌ಗಳಿಂದ ಸಾಲ ತೆಗೆದುಕೊಂಡಿದ್ದವರು ಕಡೆಗೆ ಮನೆ ಕಾರ್ ಎಲ್ಲಾ ಮಾರಿಕೊಂಡು ಹೋಗುವ ಸ್ಥಿತಿ ಬಂತು. ಸನ್ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ನಾನು ತರುವುದೇನೆಂದರೆ ನಾವು ಈ ವಿಷಯಕ್ಕೆ ಸಂಭಂಧಪಟ್ಟ ಹಾಗೆ ಹಣಕಾಸಿನ ಕೊರತೆ ಇದೆ ಎಂಬ ಮಾತನ್ನು ಆಡಬಾರದು. ಕಾವೇರಿ ಜಲಾನಯನಕ್ಕೆ ಸಂಬಂಧಪಟ್ಟ ಹಾಗೆ ನಮ್ಮ ಪಾಲಿನ ನೀರು ಎಷ್ಟು ಹಾಗೂ ಇತರ ವಿವರಗಳಿಗೆ ನಾನು ಹೋಗುವುದಿಲ್ಲ. ಎತಕ್ಕೆಂದರೆ the same matter is in dispute which is waiting decision before the Tribunal.

ಆದರೆ ಒಂದೇ ಒಂದು ವಿಚಾರ ನೀವು ಹಣವನ್ನು ಜಾಸ್ತಿ ಬಿಡುಗಡೆ ಮಾಡಿ ಹಎವನ್ನು ಬಿಡುಗಡೆ ಮಾಡಿಕೊಂಡು ಹೋಗುತ್ತಾ ಇರಿ. ತಮ್ಮ ಕರ್ತವ್ಯವನ್ನು ತಾವು ಸಮರ್ಪಕವಾಗಿ ಮಾಡಬೇಕು ಮುಂದೆ ಯಾವ ರೀತಿ ತೀರ್ಮಾನ ಬರುತ್ತದೆ ಅದು ಯಾವ ವಿಷಯಕ್ಕೂ ಈಗ ಹೋಗಲೇ ಬೇಡಿ. ಇವಲ್ಲಾ ವಾಟರ್ ಡಿಸ್‌ಪ್ಯೂಟ್‌ಗಳು ಅಂತಿಮವಾಗಿ ಮಾತುಕತೆ ಮೂಲಕ ಬಗೆಹರಿಕೊಳ್ಳಬೇಕಾಗುತ್ತದೆ. ನಾನು ಮುಖ್ಯಮಂತ್ರಿ ಅಗಿದ್ದಂತಹ ಕಾಲದಲ್ಲಿ ಕೇಂದ್ರ ಸರ್ಕಾರಕ್ಕೆ ರೆಸ್‌ಲ್ಯೂಷನ್ ಮೂಲಕ ಒತ್ತಡ ಮಾಡಿದ್ದೆವು ಪ್ರಧಾನ ಮಂತ್ರಿಗಳಾದ ಶ್ರೀ ಪಿ.ವಿ. ನರಸಿಂಹರಾವರವರು ಒಂದು ಮಿಟಿಂಗೆ ಕರೆದು. ಒಂದ್ ಒಂದು ಮಿಟಿಂಗೆ ವರು ಕರೆದದ್ದು ಅದರಲ್ಲಿ ತಮಿಳುನಾಡಿನ ಮುಖ್ಯಮಂತ್ರಿಗಳಾದ ಶ್ರೀಮತಿ ಡಯಲಲಿತಾರವವು ಹಾಗೂ ನಮ್ಮ ಕಡೆಯಿಂದ ಮುಖ್ಯಮಂತ್ರಿಯಾಗಿ ನಾನು ಹೋಗಿದ್ದೆ. ಅವೊತ್ತು ನಾವು ಯಾವುದೇ ಇಷ್ಯಗಳನ್ನು ತೆಗೆದುಕೊಂಡು ಬಂದು 1,2,3 ಒಂದು ಹೋಗಲಿಲ್ಲ. ನಾವು ಪ್ರಿಲಿಮಿನರಿ ಮಿಟಿಂಗ್ ಎಂಬುದನ್ನು ಇಟ್ಟುಕೋಂಡಿದ್ದೆ.ಮಿಂದೆ ಸಭೆಯು ನಡೆಯಬಹುದು ಎಂಬ ಆಸೆಯನ್ನು ನಾನು ಬಹಳ ಇಟ್ಟುಕೊಂಡಿದ್ದೆ. ನಾವು ನಿರ್ಣಯವನ್ನು ಅಂತಿಮವಾಗಿ ಮಾತುಗಳ ಮೂಲಕ ಮಾಡಿಕೊಳ್ಳಬೇಕಾಗುತ್ತದೆ. ತಂಜಾವೂರಿನಲ್ಲಿ ಇರತಕ್ಕ ರೈತರು ನಮ್ಮ ದೇಶದ ರೈತರು ಅಲ್ಲವೆ? ಆದರಿಂದ್ದ ನಾವೆಲ್ಲರೂ ಅಣ್ಣತಮ್ಮಂದಿರಾಗಿ, ಅಕ್ಕತಂಗಿಯಾರಾಗಿ ಪ್ರೀತಿ ವಿಶ್ವಾಸದಿಂದ ಹೋಗಬೇಕೇ ಹೊರತು ಬೇರೆ ರೀತಿಯಲ್ಲಿ ಮುಂದುವರಿಯಲು ಸಾಧ್ಯವಿಲ್ಲ. ಈ ಮಾತನ್ನು ನಾನು ನೂರು ಸಾರಿ ಆ ಜಾಗದಲ್ಲಿ ಇದ್ದಾಗ ಆಡಿದ್ದೇನೆ ಉಭಯತ್ರರು ಮತ್ತೆ ಸಂಧಾನದ ಮುಖಾಂತರ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕು. ಟ್ರಿಬ್ಯೂನಲ್ ಬೈಕಾಟ್ ಮಾಡಬಾರದು ಎನ್ನತಕ್ಕ ವಿಚಾರಗಳು ಇಟ್ಟು ಆಗ ನಿರ್ಣಯ ಮಾಡಿದ್ದೆವು ಆ ನಿರ್ಣಯದಲ್ಲಿ ನ್ನೂ ಅನೇಕ ವಿಚಾರಗಳು ಇವೆ. All the Political parties are parties to the unanimous resolution by the Houses of the St ate Legislature ಇದನ್ನೆಲ್ಲಾ ನಾವು ಮರೆಯಬಾರದು. ಆ ಆಂಬಿಟ್‌ನಲ್ಲಿ ನಾವು ಇರಲೇಬೇಕಾಗುತ್ತದೆ. ಎಂಬುದನ್ನು ನಾವು ಮರೆಯಬಾರದು. ಇದು ಅಲ್ಲದೇ ಕಾವೇರಿ ಬೇಸಿನ್ ಸಂಬಂಧಪಟ್ಟ ಹಾಗೆ ಶ್ರೀ ದೇವೇಗೌಡರಿಗೆ ಅವೆಲ್ಲಾ ಗೊತ್ತಿಲ್ಲ ಎನ್ನತಕ್ಕ ದೃಷ್ಟಿಯಿಂದ ನಾನು ಹೇಳುತ್ತಿಲ್ಲ. ದಯವಿಟ್ಟು ಹಣ ಜಾಸ್ತಿ ಇಟ್ಟು ಕೆನಾಲ್ ವರ್ಕ, ಡ್ಯಾಮ್ ವರ್ಕ. ಎಲ್ಲವನ್ನೂ ತೆಗೆದುಕೊಂಡು ಹೋಗಿ. ನೀವು ಸುಮ್ಮನೆ ಎಲ್ಲಾ ಕೆಲಸವನ್ನು ಮಾಡಿ. ಎಲ್ಲವನ್ನೂ ಕಟ್ಟಿಕೊಂಡು

ಹೋಗೋಣ. ಈ ಡಿಸಿಷನ್ ಬಗ್ಗೆ ತಲೆ ಕೆಡಿಸಿಕೊಳ್ಳಲು ಹೋಗಬಾರದು ಕಾನೂನು ಪ್ರಕಾರ ಏನಾಗಿತ್ತದೆ ಅದು ಆಗುತ್ತದೆ. ಇದರ ಬಗ್ಗೆ ಹೆಚ್ಚು ಚರ್ಚೆ ಮಾಡದೇ ಇಲ್ಲಿ ನಾವು ಬೇರೆ ತಯಾರಿ ಸಿದ್ಧತೆಗಳನ್ನು ಮಾಡಕೊಳ್ಳಬೇಕು. ಇವೋತ್ತು ಮೇಲುಗಡೆ ಇರತಕ್ಕವರಿಗೆ ಅಪ್ಪರ್ ರೈಪೇರಿಯನ್ ಸ್ಟೇಟ್ಸ್‌ನವರು ನಾವು ಅವರಿಗೆ ನೀರು ಕೊಡಿವುದಿಲ್ಲ ಎಂದು ಹೇಳಲಿಲ್ಲ. ಕೊಡುತ್ತೇವೆ ಆದರೆ ಎಷ್ಟು ಕೊಡುತ್ತೇವೆ ಎನ್ನತಕ್ಕ ಪ್ರಶ್ನೆ.

ಶ್ರೀ ಎಸ್. ಬಂಗಾರಪ್ಪ(ಮುಂ.ವ) : ನಮಗೆ ಜಾಸ್ತಿ ನೀರು ಬೇಕು ಎಂಬ ವಿಚಾರವನ್ನು ಬಿಟ್ಟರೆ ಅದರಲ್ಲಿ ಬೇರೆ ಏನನ್ನೂ ನಾನು ಕಾಣುತ್ತಿಲ್ಲ. ಈ ವಿಚಾರ ದೊಡ್ಡ ವಿಚಾರ. ಈಗ ಸುಪ್ರೀಂ ಕೋರ್ಟ ಡಿಸಿಷನ್ ಹೇಗಾಯಿತು? ಏಕೆ ಅದನ್ನು ರೆಫ್ ಮಾಡಿದರು Inter-State Water Disputes Act- ಪ್ರಚಾರ ಇದನ್ನು ತೆಗೆದುಕೊಂಡು ಹೋಗಿ ಟ್ರಿಬ್ಯೂನಲ್ ಏಕೆ ಕಾನ್‌ಸ್ಟ್ಯೂಟ್ ಮಾಡಿದರು, these are all the matters in dispute. ಬೇಕಾದಷ್ಟು ಸಲ ಹಿಂದೆಯೂ ಕೂಡ ಇದರ ಬಗ್ಗೆ ಚರ್ಚೆ ಮಾಡಿದ್ದೇ. ಇದರ ವಿವರಗಳಿಗೆ ಈ ಸಂದರ್ಭದಲ್ಲಿ ನಾನು ಹೋಗುವುದಕ್ಕೆ ತಯಾರಾಗಿಲ್ಲ, ಏಕೆಂದರೆ ಅದರಲ್ಲಿ ನಮಗೆ ಎಷ್ಟು ಗೊತ್ತಿದೆಯೋ ಅದರಿಂದ ಇನ್ನೂ ಹೆಚ್ಚು ತೊಂದರೆ ಕಾಣುಸುತ್ತಿರುವುದರಿಂದ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಇನ್ನು ಕೃಷ್ಣಾಗೆ ಸಂಬಂಪಟ್ಟ ಹಾಗೆ ಬಂದಾಗ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ಒಂದೇ ಒಂದು ವಿಚಾರವನ್ನು ತರುತ್ತೇನೆ. ನಮ್ಮ ದೇಶದಲ್ಲಿ ದಾಮೋದರ್ ವ್ಯಾಲ್ಲಿ ಪ್ರಾಜೆಕ್ಟ್ ಏನು ಇದೆಯೋ ಅದರ ಆಧಾರದ ಮೇಲೆ ನಾನು ಅಧಿಕಾರದಲ್ಲಿ ಇದ್ದಾಗ ಒಂದು ತೀರ್ಮಾನ ಮಾಡಿ ಕೃಷ್ಣಾ ಬೇಸಿನ್ ಅಥಾರಿಟಿ ಎಂದು ಮಾಡಿದೆ. ಎರಡೂ ಸದನಗಳಲ್ಲಿ ಎಲ್ಲಾ ರಾಜಕೀಯ ಪಕ್ಷದವರನ್ನೂ ಕರೆದು ಒಪ್ಪಿಗೆ ಪಡೆದು ಸರ್ವಾನುಮತದಿಂದ ನಾವು ತೀರ್ಮಾನ ಮಾಡಿ ಕೃಷ್ಣಾ ಬೇಸಿನ್ ಅಥಾರಿಟಿಯನ್ನು ಮಾಡಿದೆವು ಅದಕ್ಕೆ ತಮ್ಮ ಪಕ್ಷದವರೂ ಕೂಡ ಒಪ್ಪಿದ್ದರು ನಾನು ಇದನ್ನು ಮಾಡಬೇಕು ಎಂದು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟೆ, ಆಮೇಲೆ ನಾನು ಅಧಿಕಾರ ಬಿಟ್ಟೆ ನನಗೆ ಈಗ ಸಂತೋಷವಾಗಿದೆ ಏಕೆಂದರೆ ಇದು ಕೇಂದ್ರ ಸರ್ಕಾರದಲ್ಲಿ ರಾಷ್ಟ್ರಾಧ್ಯಕ್ಷರ ಅನುಮತಿ ಪಡೆದು ಬಂದಿದೆ. ಕೃಷ್ಣಾ ಬೇಸಿನ್ ಅಥಾರಿಟಿ ಈಗ ಕಾನೂನು ಆಗಿದೆ ಆ ಕಾನೂನಿನಲ್ಲಿ ನೀವೇನು ಇರಿಗೇಷನ್ ಬಾಂಡ್ಸ್ ರೈಸ್ ಮಾಡಬೇಕೆಂದು ಹೇಳುತ್ತೀರಲ್ಲಾ ದಯವಿಟ್ಟು ಓದಿ ನೋಡಿ, ಸಂದರ್ಭ ಬಂದರೆ ಬೇಕಾಗುತ್ತದೆ ಎಂದು ಅದಕ್ಕೂ ಕೂಡ ಪ್ರಾವಿಷನ್ ಮಾಡಿಕೊಂಡಿದ್ದೆವು ಈ ಬಗ್ಗೆ ನನಗೆ ಚೆನ್ನಾಗಿ ನೆನಪು ಇದೆ ಅದಕ್ಕೆ ಕಲಮುಗಳನ್ನು ಕೂಡ ಹಾಕಿದ್ದೇನೆ ಈ ಕೃಷ್ಣಾ ಭಾಗ್ಯ ಜಲ ನಿಗಮವನ್ನು ನೀವು ಏಕೆ ಮಾಡಿದಿರಿ ಎಂದು ನನಗೆ ಅರ್ಥವಾಗುತ್ತಿಲ್ಲ. ಇದನ್ನು ಮಾಡುವುದಕ್ಕೆ ಏನು ಕಾರಣವಿತ್ತು ಏಕೆಂದರೆ ಕೃಷ್ಣಾ ಬೇಸನ್ ಅಥಾರಿಟಿಗೆ ಪರ್ಟಿಕ್ಯೂಲರ್ ಅಗಿ ಇದನ್ನು ಸರ್ವಾನುಮತದಿಂದ ನಾವೆಲ್ಲಾ ಪಾಸ್ ಮಾಜಿ ಕೇಂದ್ರ ಸರ್ಕಾರಕ್ಕೆ ಅದನ್ನು ಕಳುಹಿಸಿ ಅವರ ಒಪ್ಪಿಗೆ ಪಡೆದು ಬಂದಮೇಲೆ ಇವೋತ್ತು ನೀವು ಮತ್ತೊಂದು ಕೃಷ್ಣಾ ಭಾಗ್ಯ ಜಲ ನಿಗಮ ಮಾಡುವುದಕ್ಕೆ ವ್ಯತ್ಯಾಸ ಏನಿದೆ ಈ ರೀತಿ ನೀವು ಮಾಡುವುದಾದರೆ ಕೃಷ್ಣಾ ಬೇಸಿನ್ ಅಥಾರಿಟಿಯನ್ನು ನೀವು ಏನು ಮಾಡುತ್ತೀರ? ಇದಕ್ಕೆ ಒಂದು ಕಾನೂನು ಮಾಡಿ ಗೂಡಿನಲ್ಲಿ ಇಟ್ಟುಕೊಂಡು ಪೂಜೆ ಮಾಡುತ್ತೀರೇನು? ಹಿಂದೆ ನಾವು ನೀವು ವಿರೋಧ ಪಕ್ಷದವರೆಲ್ಲರೂ ಸೇರಿ ಒಂದು ಕಾನೂನು ಮಾಡಿ ಕೃಷ್ಣಾ ಬೇಸಿನ್ ಅಥಾರಿಟಿಯನ್ನು ಮಾಡಿದ ಮೇಲೆ ಈಗ ಆ ಕಾನೂನನ್ನು ಏನು ಮಾಡುತ್ತೀರಿ? ಇವೋತ್ತೋ ನೀವು ಇರಿಗೇಷನ್, ಬಾಂಡ್ ರೈಸ್ ಮಾಡಬೇಕೆಂದು ಹೇಳುತ್ತೀರಲ್ಲಾ, ಇದನ್ನೇ ನಾನು ಕೇಳುತ್ತಿರುವುದು, ಅದಕ್ಕೆ ಉತ್ತರ ಕೊಡಬೇಕೋ, ಬಿಡಬೇಕೋ ಎಂಬುದು ನಿಮಗೆ ಬಿಟ್ಟದ್ದುದು. ದೇಶದ ಜನ ಅದನ್ನು ನೋಡುತ್ತಾರೆ. ನಾನು

ಒಂದೇ ಒಂದು ಮಾತು ಹೇಳುವುದು ಈ ಇರಿಗೇಷನ್ ಬಾಂಡ್ಸ್ ಬಗ್ಗೆ ನನಗೆ ಬಹಳ ಅನುಮಾನಗಳು ಇವೆ. ನಾನು ಇದನ್ನು ಸುಮ್ಮಸುಮ್ಮನೆ ಹೇಳಬೇಕು ಎನ್ನತಕ್ಕಂಥ ದೃಷ್ಟಿ ನನಗೆ ಇಲ್ಲ. ನನ್ನ ಕಾರದಲ್ಲಿ ಕೂಡ ಇರಿಗೇಷನ್ ಬ್ಯಾಂಡ್ಸ್ ರೈಸ್ ಮಾಡುವುದಕ್ಕೆ ನಾವು ಕೇಂದ್ರ ಸರ್ಕಾರದ ಅನುಮತಿಯನ್ನು ಕೇಳಿದ್ದೇವೆ. ನಾನು ಇದರ ಬಗ್ಗೆ ಪ್ರಧಾನಮಂತ್ರಿಗಳ ಹತ್ತಿರ ಮಾತುಕತೆ ಮಾಡಿದೆ. ಹಣಕಾಸು ಸಚಿರ ಹತ್ತಿರ ಮಾಡಿದೆವು, ಇರಿಗೇಷನ್ ಮಿನಿಸ್ಟರ್ ಹತ್ತಿರ ಮಾಡಿದೆವು, ಅಲ್ಲೆಲ್ಲಾ ಹೇಗೆ ಎಂದರೆ ನೀವು ಪೂರ್ವದ ಕಡೆ ಮಾತನಾಡಿದರೆ ಅವರು ಪಶ್ಚಿಮದ ಕಡೆ ನೋಡುತ್ತಿರುತ್ತಾರೆ. ಇದು ನಿಮಗೆ ಗೊತ್ತಿರುವ ವಿಚಾರವೇ , ಎಕೆಂದರೆ ಅಂಥವರ ಹತ್ತಿರ ನೀವೂ ವ್ಯವಹಾರ ಮಾಡಿದ್ದೀರಿ ನಾವೂ ಕೂಡ ವ್ಯವಹಾರ ಮಾಡಿದ್ದೇವೆ. ಬಹ ಎಚ್ಚರಿಕೆಯಿಂದ ವ್ಯವಹಾರ ಮಾಡಬೇಕು. ನಾನು ಇದನ್ನು ಎಕೆ ಹೇಳುತ್ತಿದ್ದೇನೆಂದರೆ ಕಾಲ ಈ ರೀತಿ ಹಾಳಾಗುತ್ತಾ ಹೋಗಿಬಿಟ್ಟರೆ ಬಚಾವಾತ್ ಅವಾರ್ಡಿನ್ ಅಲಾಟ್ ಮೆಂಟ್ ಪ್ರಕಾರ ನಮ್ಮಪಾಲಿನ ನೀರನ್ನು ನಾವು ಎನು ಸದುಪಯೋಗ ಮಾಡಬೇಕು ಅದರ ಬಗ್ಗೆ ಎಷ್ಟು ಭಾಷಣ ಮಾಡಿದರೂ ಕೂಡ ನಾವು ಪುನಃ ಅಲ್ಲಿಗೆ ಹೋಗಿ ನಿಲ್ಲುತ್ತೇವೆ. ಇದಕ್ಕೆ ಬೇಕಾಗಿರತಕ್ಕಂಥ ಹಣವನ್ನು ನಾವು ರೂಢಿಸಿ ಕೋಳ್ಳಬೇಕು. ನಾನು ಅದಕ್ಕೆ ಬೇಕಾದರೆ ಇನ್‌ಫ್ರಾಸ್ಟ್ರಕ್ಚರ್ ರೆಡಿ ಮಾಡಬಲ್ಲೆ. ನನ್ನ ಕಾಲದಲ್ಲಿ ಒಂದು ತೀರ್ಮಾನ ಮಾಡಿದೆ. ಹೈದ್ರಾಬಾದ್ ಕರ್ನಾಟಕ್ ಬೀದರ್, ಗುಲ್ಬರ್ಗಾ, ರಾಯಚೂರು, ಬಳ್ಳಾರಿ ಮತ್ತು ಬಿಜಾಪುರ ಇವುಗಳನ್ನೂ ಕೂಡ ನಾನು ಸೇರಿಸಿದ್ದೇನೆ. ರಾಯಚೂರು ಜಿಲ್ಲೆಯ ಲಿಂಗಸಗೂರ್ ಸ್ಥಳಕ್ಕೆ ಖುದ್ದಾಗಿ ನಾನು ಹೋಗಿ ಫೌಂಡೇಷನ್ ಮಾಡಿ "ರಾಮ್‌ಫರ್ ಲಿಫ್ಟ್ ಇರಿಗೇಷನ್"ಗೆ ಹಣವನ್ನು ಬಿಡುಗಡೆ ಮಾಡಿದ್ದೇನೆ. ನಾನು ಈಗ ಕೇಳುತ್ತೇನೆ, ಇದರ ಗತಿ ಈಗ ಎನಾಗಬೇಕು. ಇದರಿಂದ ಲಿಂಗಸಗೂರ್ ತಾಲ್ಲೂಕಿಗೆ ನೀರು ಬರುತ್ತದೆ. ಅಲ್ಲಿ ಎಲ್ಲಾ ಬರಗಾಲ ಪ್ರದೇಶ ಇರುವುದು. ನಾನು ಎತಕ್ಕೆ ಈ ಮಾತನ್ನು ಹೇಳುತ್ತೇನೆಂದರೆ ಇವನ್ನೆಲ್ಲಾ ನಾವು ಹಣ ಕೊಟ್ಟು ಕೊಟ್ಟು ಕೆಲಸ ಪ್ರಾರಂಭ ಮಾಡಿಸಬೇಕು. ಹಾಗದರೆ ಅಲ್ಲಿಗೆ ಬೇಕಾದ ಇಂಜಿನಿಯರ್ಸ್‌ಗಳನ್ನು ಎಲ್ಲಿಂದ ತರಬೇಕು. ಈ ಬಗ್ಗೆ ಮಾನ್ಯ ಖರ್ಗೆಯವರು ಮತ್ತು ಚಿಮ್ಮಣ್ಣ ಕಟ್ಟಿಯವರು ತಮ್ಮ ಸಲಹೆಯನ್ನು ಹೇಳುತ್ತಾ ಎಲ್ಲಾ ಸಿದ್ಧತೆಗಳನ್ನು ಮಾಡುವುದರ ಮೂಲಕ ನೀವು ಅಸಿಸ್ಟೆಂಟ್ ಇಂಜಿನಿಯರ್ ಮತ್ತು ಅಸಿಸ್ಟೆಂಟ್ ಎಕ್ಸಿಕ್ಯುಟಿವ್ ಇಂಜಿನಿಯರ್ ಇವರನ್ನೆಲ್ಲಾ ನೀವು ರೆಡಿ ಮಾಡಿಕೊಳ್ಳಿ, ಅಂದರೆ ಇವೋತ್ತು ಆ ಭಾಗದಲ್ಲಿ ಬಿ.ಇ. ಮಾಡಿರತಕ್ಕಂಥ ಯುವಕರು ಇದ್ದಾರೆ. ಅವರಿಗೆ ಸ್ವಲ್ಪ ವೈಯ್‌ಟೇಜ್ ಕೊಟ್ಟು ಬೀದರ್, ಗುಲ್ಬರ್ಗಾ, ರಾಯಚೂರು ಮತ್ತು ಬಿಜಾಪುರ ಮತ್ತು ಬಳ್ಳಾರಿ ಈ ಐದು ಜಿಲ್ಲೆಯಲ್ಲಿ ಬಂದಿರತಕ್ಕಂಥ ಬಿ.ಇ. ಪದವೀಧರರೂ ಯಾರು ಯಾರು ಇದ್ದಾರೆ ಅವರಿಗೆ ನಾವು ಅಪಾಯಿಂಟ್‌ಮೆಂಟ್‌ನ್ನು ಈ ಕೃಷ್ಣಾ ಬೇಸಿನ್‌ನಲ್ಲಿ ಕೊಟ್ಟರೆ ಒಳ್ಳೆಯದು ಎಕೆಂದರೆ ಅವರು ವರ್ಗಾವಣೆಯನ್ನು ಕೇಳುವುದಿಲ್ಲ. ಅವರು ಬಿಸಿಲಿನಲ್ಲೇ ಹುಟ್ಟಿರತಕ್ಕಂಥವರು ಮತ್ತು ಬಿಸಿಲಿನಲ್ಲೇ ಬೆಳೆದಿದ್ದಾರೆ. ಅದಕ್ಕಾಗಿ ನಾವು ಅದನ್ನು ಮೊದಲು ಮಾಡಬೇಕೆಂದು ತೀರ್ಮಾನ ಮಾಡಿದ್ದರೆ ಎಲ್ಲಾ ಈಗ ಹಾಳಾಗಿ ಹೋಯಿತಲ್ಲಾ ಈ ಹೊಸ ಸ್ಕೀಮ್ ಬಂದಾಗ ಮೇಲೆ, ಈ ರೀತಿ ಮಾಡುವುದಕ್ಕೆ ಲೀಗಲ್ ಆಗಿ ತೊಂದರೆ ಬಂತು ಮತ್ತು ರಾಜ್ಯದವರಿಂದ ಆಬ್ಲಿಗೇಷನ್ ಬಂತು ಎಂದು ನೀವು ಹೇಳುವುದಾದರೆ ಅವರನ್ನೆಲ್ಲಾ ಕರೆಯಿರಿ ಕರೆದು ಒಂದು ಇತ್ಯರ್ಥ ಮಾಡಿ ಅಲ್ಲಿರುವ ಯುವಕರಿಗೆ ಸ್ವಲ್ಪ ವೈಯ್‌ಟೇಜ್ ಕೊಟ್ಟು ನೌಕರಿ ಕೊಟ್ಟು ಉದ್ಯೋಗ ಮಾಡುವಂತೆ ಮಾಡಬೇಕು. ಎಕೆಂದರೆ ಆ ಜಾಗಗಳಲ್ಲಿ ಹಳೇ ಮೈಸೂರಿನವರಿಗೆ ಕೊಟ್ಟರೆ ಅವರು 2 ತಿಂಗಳೂ ಕೂಡ ಅಲ್ಲಿ ಇರುವುದಿಲ್ಲ. ವರ್ಗಾವಣೆ ಮಾಡಿಸಿಕೊಡು ಬೆಂಗಳೂರು ಮೈಸೂರಿಗೆ ಬಂದು ಕುಳಿತುಬಿಡುತ್ತಾರೆ. ಈ ರೀತಿ ಆಗಿರುವುದರಿಂದಲೇ ಆ ಭಾಗದಲ್ಲಿ ಒಂದೂ ಕೆಲಸವೂ ಕೂಡ ಆಗದೇ

ಇರುವುದಕ್ಕೆ ಕಾರಣವಾಗಿದೆ. ಆಡಳಿತದಲ್ಲಿ ಇರತಕ್ಕಂಥ ಲೋಪದೋಷಗಳೂ ಇದಕ್ಕೆ ಕಾರಣವಾಗಿದೆ, ಆದರೆ ಇವು ನನ್ನ ಕಾಲ'ದಲ್ಲಿ ಆದವುಗಳಲ್ಲ, ಅನಂತರ ಆಗಿರತಕ್ಕಂಥದ್ದು, ನಾನು ಯಾರ ಮೇಲೂ ಕೂಡ ಗೂಬೆ ಕೂರಿಸುವಂಥ ಮಾತನ್ನು ಆಡುತ್ತಿಲ್ಲ, ಇವೆಲ್ಲಾ ವಾಸ್ತವಾಂಶಗಳು. ಇವೊತ್ತು ಕೃಷ್ಣಾ ಬೇಸಿನ್‌ನಲ್ಲಿ ಕೆಲಸ ಕಾರ್ಯಗಳು ಹಾಳಾಗುವುದಕ್ಕೆ ಇವೆಲ್ಲಾ ಮುಖ್ಯ ಕಾರಣಗಳು ಎನ್ನುವ ದೃಷ್ಟಿಯಿಂದ ಈ ಮಾತನ್ನು ಹೇಳುತ್ತಿದ್ದೇನೆ. ಮಾನ್ಯ ಸಭಾಧ್ಯಕ್ಷರೇ, ಇವೊತ್ತು ಕೃಷ್ಣಾ ಬೇಸಿನ್‌ಗೆ ಸಂಬಂಧಪಟ್ಟ ಹಾಗೆ ಹಲವಾರು ಯೋಜನೆಗಳು ಇನ್ನೂ ಮುಗಿಯಬೇಕಾಗಿದೆ. ಇದನ್ನು ಮಾಡದೇ ನೀವು ಇರಿಗೇಷನ್‌ಬಾಂಡ್ಸ್ ಬಗ್ಗೆ ಹಣ ಜೋಡಿಸುತ್ತೇನೆ ಎನ್ನತಕ್ಕಂಥ ಮಾತನ್ನು ಆಡಿ ಬಜೆಟ್‌ನಲ್ಲಿ ನೀವು ಏನು ಪ್ರಾವಿಷನ್ ಮಾಡಿದ್ದೀರೋ ಅದರ ಬಗ್ಗೆ ನಾನು ಅವೊತ್ತು ಕೂಡ ಭಾಷಣ ಮಾಡಬೇಕಾದರೆ ಹೇಳಿದ್ದೇನೆ. ನೀವು ಇಟ್ಟಿರತಕ್ಕಂಥ ಹಣ ಬಹಳ ಕಡಿಮೆ ಇದೆ. ಇವೊತ್ತು ದೊಡ್ಡ ದೊಡ್ಡ ಮಾತುಗಳನ್ನಾಡಿ ಸಾವಿರಾರು ಕೋಟಿ ರೂಪಾಯಿಗಳು ಎಂದು ಹೇಳುತ್ತಾ, including the money that you are going to raise through irrigation bonds ನೀವು ಅದನ್ನೆಲ್ಲಾ ನೋಡಿಕೊಂಡು ಲೆಕ್ಕಾಚಾರ ಹಾಕುತ್ತಿದ್ದೀರಿ. ಸ್ವಾಮಿ ನೀನು ಇರಿಗೇಷನ್ ಬಾಂಡ್ಸ್ ಬಗ್ಗೆ I have got my own doubts again.

ನಾವು ಜನರಿಂದ ಇದನ್ನು ಮಾಡುತ್ತಿಲ್ಲ ಬೇರೆ ರೀತಿಯಿಂದ ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ನಾನು ಕೇಳಿದ್ದೇನೆ. ಹಾಗಾದರೆ ನೀವು ಯಾವ ರೀತಿ ರೈಸ್ ಮಾಡುತ್ತೀರಿ ಎನ್ನತಕ್ಕಂಥದ್ದರ ಬಗ್ಗೆ ನನಗೆ ಇನ್ನೂ ಕೂಡ ರೂಪು ರೇಖೆಗಳು ಇನ್ನೂ ಸಿಕ್ಕಿಲ್ಲ. If you are really a believer in that line of thinking , I have no objection. but be careful while raising the irrigation bonds.

ಇದು ಅಪ್ರೂವಲ್ ಆಗುವುದಕ್ಕೆ ಸೆಂಟ್ರಲ್ ಗೌವರ್ನಮೆಂಟ್ ಪ್ರಶ್ನೆ ಬರುವುದರಿಂದ ಬಹಳ ಎಚ್ಚರಿಕೆಯ ಮಾತನ್ನು ನಾನು ನಿಮಗೆ ಕೊಡಬಲ್ಲೆ. ಅದಕ್ಕಿಂತ ಹೆಚ್ಚು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಸಭಾಧ್ಯಕ್ಷರೇ, ಕೃಷ್ಣಾ ಬೇಸನ್ ಯೋಜನೆಗೆ ಬರತಕ್ಕಂಥದ್ದರ ಯೋಜನೆಯ ರೀತಿಯಲ್ಲೇ ತುಂಗಭದ್ರಾಗೇ ಸಂಬಂಧಪಟ್ಟ ಹಾಗೆ ಇವೊತ್ತು ನೀರನ್ನು ಅನವಶ್ಯಕವಾಗಿ ಆಂಧ್ರಪ್ರದೇಶಕ್ಕೆ ಕೊಟ್ಟಿದ್ದೀರಿ ಎನ್ನತಕ್ಕಂಥ ವಿಚಾರ ನಿಜವಾಗಿಯೂ it is a matter of very big concern. ಇವೊತ್ತು ಅಲ್ಲಿ ಕೆನಾಲ್‌ಯಾವಾಗಲೂ ಬ್ರೀಚ್ ಆಗಿ ಹೋಗುತ್ತಲೇ ಇರುತ್ತದೆ. ತಮಗೆಲ್ಲಾ ಗೊತ್ತಿರುವ ಹಾಗೆ ರಾಯಚೂರು ಜಿಲ್ಲೆಯಲ್ಲಿ ಜನ ಯಾವಾಗಲೂ ಒತ್ತಡ ಮಾಡುತ್ತಿರುತ್ತಾರೆ. ಅಲ್ಲಿ ಪರ್ಮನೆಂಟ್ ಆಗಿ ಇನ್ನೂ ಕೂಡ ಕೆಲಸ ಆಗಿಲ್ಲವೆಂದು ಒತ್ತಡ ತರುತ್ತಿದ್ದಾರೆ. ನಮ್ಮ ಕಾಲದಲ್ಲಿ till-enders ನೀರು ಬರುವುದಿಲ್ಲ ಎಂದು balancing ರಿಸರ್ವ್ಯಯರ್‌ನ್ನು ನಾವು ಮಾಡಿದೆವು by including the component of drinking water to Raichur town. ನನಗೆ ಗೊತ್ತಿರುವ ಹಾಗೆ 60 ರಿಂದ 80 ಸಾವಿರ ಎಕರೆಯಿರಬಹುದು. ಅದಕ್ಕಾಗಿ ನಾನು ಹೇಳುವುದು ಏನೆಂದರೆ ಈ ರೀತಿ ಇರತಕ್ಕಂಥ ನೀರನ್ನು ಕೊಡುತ್ತಲೇ ಹೋದರೆ ನಿಮಗೇ ಗೊತ್ತಿರುವ ಹಾಗೆ silt ಸಿಕ್ಕಾಪಟ್ಟೆ ಆಗುತ್ತದೆ. ತುಂಗಭದ್ರಾ ಡ್ಯಾಮ್ ವಿಷಯ ನಿಮಗೆಲ್ಲಾ ಚೆನ್ನಾಗಿ ಗೊತ್ತು. ವಿದೇಶೀ ಪರಿಣಿತರನ್ನು ಕರೆಯಿಸಿ ಮಾತುಕತೆ ಮಾಡಿದ್ದೇವೆ, ಈ ಕೆಲಸ ಕೂಡ ಬಹಳಷ್ಟು ಇವೆ. ನೀವು ಇದರ ಬಗ್ಗೆ ವಿಚಾರ ಮಾಡಿ ಈ ಸಿಲ್ಟ್ ತುಂಬಿರತಕ್ಕಂಥ ಪ್ರಮಾಣ ನೀರು ನಿಲ್ಲತಕ್ಕಂಥ ಪ್ರಮಾಣವನ್ನು ತಿಳಿದು ಕೆಲಸವನ್ನು ಮಾಡಸಬೇಕು. ನಾನು ಕೇವಲ ತುಂಗಬದ್ರಾ ಡ್ಯಾಮ್‌ಗೆ ಸಂಬಂಧಪಟ್ಟ ಹಾಗೆ ಮಾತ್ರ ಈ ವಿಷಯವನ್ನು ಹೇಳುತ್ತಿಲ್ಲ. ತುಂಬಾ ಡ್ಯಾಮ್‌ಗಳಲ್ಲಿ ಸಿಲ್ಟ್ ತುಂಬಿರತಕ್ಕಂಥ ಒಂದು ಪ್ರವೃತ್ತಿ ನಮ್ಮಂಥ ದೇಶಗಳಲ್ಲಿ ಇದ್ದೇ ಇರುತ್ತದೆ. ನನಗೆ ಗೊತ್ತಿರುವ ಹಾಗೆ ಮಲಪ್ರಭ ಮತ್ತು ಘಟಪ್ರಭಾಗಳಲ್ಲೂ

ಸಿಕ್ಕಾಪಟ್ಟೆ ಸಿಲ್ಟ್ ತುಂಬಿಕೊಂಡಿದೆ. ಈ ರೀತಿಯ ಪ್ರಶ್ನೆಗಳು ಇರುವುದರಿಂದ desilting of all these bigger dams ಬಗ್ಗೆ ಒಂದು ಯೋಜನೆಯನ್ನು ಕೂಡ ತಾವು ಹಾಕಿಕೊಳ್ಳಬೇಕು; including your KRS which is an oldest dam in the State. ನನಗೆ ಗೊತ್ತಿರುವ ಹಾಗೆ ಈ ಸ್ಕೀಮ್‌ನಲ್ಲಿರುತ್ತದೆ. ಮಾನ್ಯ ಸಭಾಧ್ಯಕ್ಷರೇ, ಇದಾದಮೇಲೆ ಸಣ್ಣ ನೀರಾವರಿಗೆ ಸಂಬಂಧಪಟ್ಟ ಹಾಗೆ ನಾನು ಒಂದೇ ಒಂದು ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ. ಇದರಲ್ಲಿ ಪರ್ಸೆಂಟೇಜ್ ತುಂಬಾ ಡ್ರಾಪ್ ಆಗಿದೆ. ಇವೊತ್ತು ಅಂಡರ್ ಗ್ರೌಂಡ್ ವಾಟರ್ ಟ್ಯಾಪ್ ಮಾಡುವುದಕ್ಕೆ ಸಂಬಂಧಪಟ್ಟ ಹಾಗೆ ಹೇಳಬೇಕಾದರೆ, ಇವೊತ್ತು ಇದನ್ನು ಇತಿಮಿತಿಯಲ್ಲಿ ಇಟ್ಟುಕೊಂಡು ಉಪಯೋಗ ಮಾಡಿಕೊಳ್ಳತಕ್ಕಂಥ ಕಾಲ, ಸಿಕ್ಕಾಪಟ್ಟೆ ಜಲ ಉಪಯೋಗಿಸಿದರೆ ನಮಗೆ ಅಂತರ್ಜಲ ಹೋಗಿಬಿಟ್ಟರೆ ಅದರ ಪರಿಣಾಮ ಸಿಕ್ಕಾಪಟ್ಟೆ ಆಗುತ್ತದೆಯೆಂದು ಎನ್‌ವೈರ್ನಮೆಂಟ್ ಪರಿಣಿತರು ಹೇಳಿದ್ದಾರೆ. ಅವರು ಬಹಳ ಎಚ್ಚರಿಕೆ ಕೊಡುತ್ತಲೇ ಇದ್ದಾರೆ.

ನಾನು ಮೊನ್ನೆ ಬಿ.ಬಿ.ಸಿ. ಯನ್ನು ನೋಡಬೇಕಾದರೆ ಬಹಳ ಒಳ್ಳೆಯ ವ್ಯಾಖ್ಯಾನ ಅದರ ಮೇಲೆ ಬಂತು. ಯಾವ ಯಾವ ಪ್ರದೇದಲ್ಲಿ ಎನೇನು ಪರಿಸರದ ಬಗ್ಗೆ ಆಗಿದೆ ಎನ್ನತಕ್ಕ ವಿವರಣೆಯನ್ನು ಕೊಟ್ಟು ಬಹಳ ಜಾಗ್ರತೆಯಾಗಿ ಇರಬೇಕೆನ್ನುವ ಎಚ್ಚರಿಕೆಯನ್ನು ಕೂಡ ಪರಿಣಿತರು ಇಡೀ ಪ್ರಪಂಚಕ್ಕೆ ಕೊಡುತ್ತಾರೆ. ಡಿಫಾರೆಸ್ಟೇಷನ್ ಅಂತರ್ ಜಲವನ್ನು ಅತಿಯಾಗಿ ಟ್ಯಾಪ್ ಮಾಡತಕ್ಕಂಥ, ಇವೆಲ್ಲವನ್ನು ಕೂಡ ಗಮನದಲ್ಲಿಡಬೇಕು. ಅದಕ್ಕಾಗಿ ಎಷ್ಟು ಸಾಧ್ಯವೋ ಅಷ್ಟನ್ನು ಇತಿಮಿತಿಗೆ ಒಳಪಡಿಸ ಬೇಕಾಗುತ್ತದೆ, ಎತನೀರಾವರಿಗೆ ಗಮನ ಕೊಡಬೇಕಾಗುತ್ತಲಿದೆ ಎಂದು ನಾನು ಹೇಳುವುದು. ಅದಕ್ಕಾಗಿ ಹಣವನ್ನು ತೊಡಗಿಸುವಂಥ ವಿಚಾರದಲ್ಲಿ ಬಹಳ ಎಚ್ಚರಿಕೆಯನ್ನು ವಹಿಸಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಮಾನ್ಯ ಸಭಾಪತಚಿಯವರೇ ನಾನು ಅಂಕಿ ಅಂಶಗಳ ವಿಚಾರಕ್ಕೆ ಹೋಗುವುದಿಲ್ಲ. ಕಾವೇರಿ ಬಗ್ಗೆ ನಾನು ಮಾತನಾಡುವುದಿಲ್ಲವೆನ್ನುವ ಮಾತನ್ನು ಹೇಳಿದ್ದೇನೆ, because it is a matter pending before the Tribunal.

ಇನ್ನು ಕೃಷ್ಣಾ ಬಗ್ಗೆ ಅಂಕಿಅಂಶಗಳನ್ನು ಇಟ್ಟು ಬಹಳ ಜನ ಮಾನ್ಯಸದಸ್ಯರು ಮಾತನಾಡಿದ್ದಾರೆ. ಅದರ ನಾವು ಬಹಳ ಹಿಂದಿದ್ದೇವೆ, ಕಾಲಮೀರಿ ಹೋಗುತ್ತಿದೆ, ಬಹಳ ಎಚ್ಚರಿಕೆಯಿಂದ ಹಣವನ್ನು ರೂಢಿಸಿಕೊಂಡು, ಪೂರ್ವಬಾವಿ ವ್ಯವಸ್ಥೆಯನ್ನೆಲ್ಲಾ ಬಹಳ ದೊಡ್ಡ ಪ್ರಮಾಣದಲ್ಲಿ ಮಾಡಿ ಕೊಂಡು ಯುದ್ಧೋಪಾದಿಯಲ್ಲಿ ಹೋದರೆ ಮಾತ್ರ ನೀವು ಗುರಿಯನ್ನು ತಲುಪುವುದಕ್ಕೆ ವೇಗವನ್ನು ಜಾಸ್ತಿ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇಲ್ಲದಿದ್ದರೆ, ನೀವು ಕೂಡ ಕಾಲಗರ್ಬದಲ್ಲಿ ಸೇರಿ ಹೋಗುತ್ತೀರಿ. ನಾಳೆ ಅಪಾದನೆ ಬಂದಾಗ, ನಿಮ್ಮ ತಲೆಯ ಮೇಲು ಕೂಡ ಆ ಒಂದು ಆಪಾದನೆಯ ಹೊರೆ ಮತ್ತೊಮ್ಮೆ ಕೂಡತಕ್ಕಂಥ ಸಂದರ್ಭ ಬಂದೀತೆಂದು ಈ ಮಾತನ್ನು ಹೇಳುತ್ತಿದ್ದೇನೆ. ನೀರಾವರಿ ವಿಚಾರ ಬಂದಾಗ ಮಾನ್ಯ ಮುಖ್ಯಮಂತ್ರಿಗಳು. ವಿರೋಧಪಕ್ಷದವರನ್ನೆಲ್ಲಾ ಕರೆದು ಮಾತನಾಡುತ್ತೀರಿ. ಅ ಒಂದು ಪ್ರವೃತ್ತಿ ಬಹಳ ಒಳ್ಳೆಯದು, ಅದೊಂದು ಒಳ್ಳೆಯ ವಿಚಾರಧಾರೆ. ಹಿಂದಿನ ಪದ್ಧತಿಯನ್ನು ಹೇಳುತ್ತಿದ್ದೇನೆ. ಇದು ನಮ್ಮ ಪದ್ಧತಿಯಾಗಿದೆ. ಇನ್ನು ಮುಂದೆ ಅವರು ಕರೆಯುತ್ತಾರೆ. ಮೊನ್ನೆ ಒಂದು ಸಭೆಯನ್ನು ಕಾವೇರಿಯ ಬಗ್ಗೆ ಕರೆದಿದ್ದರು, ಆಸಭೆ ಮುಂದಕ್ಕೆ ಹೋಯಿತು. ಅದಕ್ಕಾಗಿ ನೀವು ಕಳೆದ ನಾಲ್ಕು ತಿಂಗಳಲ್ಲಿ ಕಾವೇರಿಯ ಬಗ್ಗೆ ಸಭೆಯನ್ನು ಕರೆದಿದ್ದೀರೆಂದು ಹೇಳುವುದು...

ಅಧ್ಯಕ್ಷರು :- ಶ್ರೀ ಮಲ್ಲಿಕಾರ್ಜಿನ ಖರ್ಗೆಯವರು ಇನ್ನು ಮುಖ್ಯಮಂತ್ರಿಯಾಗಲಿಲ್ಲ, ಅವರು ಮುಖ್ಯಮಂತ್ರಿಗಳಾಗಿದ್ದವರು. ಅವರಿಗೆ ಕಷ್ಟಗಳೆಲ್ಲಾ ಗೊತ್ತಾಗುತ್ತದೆ. ನೋಡಿ how generous he is?

ಶ್ರೀ ಎಸ್.ಬಂಗಾರಪ್ಪ: ಆದರೂ ಕೂಡ ಅವರು ಮುಖ್ಯಮಂತ್ರಿಗಳ ಪಕ್ಕದಲ್ಲಿ ಎರಡು ಸಾರಿ ಇದ್ದವರು.

ಶ್ರೀ ಕೆ.ಎನ್. ನಾಗೇಗೌಡ : ಬಂಗಾರಪ್ಪಾಜಿಯವರೇ ಖರ್ಗೆಯವರಿಗೆ, ಧರ್ಮಸಿಂಗ್‌ರವರಿಗೆ ಹಾಗೂ ಮೊಯಿಲಿಯವರಿಗೆ, ಈ ಮೂರು ಜನಕ್ಕೂ ಗೊತ್ತಿರತಕ್ಕಂತಹದ್ದು ಮೂರು ವಿಚಾರ.ಒಂದು ಏನೆಂದರೆ ಕಾಂಗ್ರೆಸ್ ಅರ್ಥ ಮಾಡಿಕೊಂಡಿರುವವರು ಈ ಮೂರು ಜನರೇ ಕುರ್ಚಿ ಅರ್ಥ ಮಾಡಿಕೊಂಡಿರುವವರು ಈ ಮೂರು ಜನರೇ ಹಾಗೂ ದೆಹಲಿ ಅರ್ಥ ಮಾಡಿಕೊಂಡಿರುವವರು ಈ ಮೂರು ಜನರೇ.

ಶ್ರೀ ಎಸ್. ಬಂಗಾರಪ್ಪ : ಅಂದರೆ ಇವರು ನಿತ್ಯ ಸುಮಂಗಲಿಯರು ಎಂದು ನೀವು ಹೇಳುವುದು. On the lighter side of the matter don't think otherwise ಮಾನ್ಯ ಅಧ್ಯಕ್ಷರೇ ಇಷ್ಟು ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಿ, ದೇವೇಗೌಡರ ಸರ್ಕಾರದವರು, ದಯವಿಟ್ಟು, ಇದನ್ನೆಲ್ಲಾ ವಿಚಾರ ಮಾಡಿ ಹೆಚ್ಚಿನ ಗಮನವನ್ನು ತಾವು ಕೊಟ್ಟು ನಮ್ಮ ಗುರಿಯನ್ನು ನಾವು ತಲುಪುವುದಕ್ಕೆ ಬೇಕಾದಂಥ ಪೂರ್ವಭಾವಿ ವ್ಯವಸ್ಥೆಗಳ ಸಿದ್ಧತೆಯನ್ನು ಮಾಡಿಕೊಳ್ಳತಕ್ಕಂತಹದ್ದು ಅತೀ ಅವಶ್ಯಕವೆಂದು ಹೇಳುತ್ತೇನೆ. ಇಲ್ಲೆಲ್ಲಾ ನಾವು ಕುಳಿತಿದ್ದೇವೆ, ನಿಮಗೆ ಯಾವ ರೀತಿಯ ಸಹಕಾರ, ಬೆಂಬಲ ಈ ವಿಚಾರದಲ್ಲಿ ಬೇಕೋ ನಾವು ಅದನ್ನು ಕೊಡುತ್ತೇವೆ. ಅದರ ಬಗ್ಗೆ ಅನುಮಾನ ಬೇಕಾಗಿಲ್ಲ, You please increase the velocity, move forward with all the speed required and we will give you all the support that are required. ಇಷ್ಟು ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಸಭಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಅಧ್ಯಕ್ಷರು : ಸನ್ಮಾನ್ಯ ಸಭಾನಾಯಕರು ಉತ್ತರವನ್ನು ಪ್ರಾರಂಭ ಮಾಡಿ.

+ ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯಮಂತ್ರಿ) : ಸನ್ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಕರ್ನಾಟಕ ರಾಜ್ಯದ ನೀರಾವರಿಯ ಬಗ್ಗೆ, ವಿಶೇಷವಾದಂತಹ ಚರ್ಚೆಯನ್ನು, ಅದರಲ್ಲೂ ಆಯವ್ಯಯ ಪತ್ರದ ಚರ್ಚೆಗೆ ಹೊರತಾದಂತೆ ವಿಶೇಷ ಚರ್ಚೆಯನ್ನು ಮಾಡುವುದರ ಬಗ್ಗೆ ಮಾಜೀ ನೀರಾವರಿ ಮಂತ್ರಿಗಳಾದ ಸನ್ಮಾನ್ಯ ಶ್ರೀ ಹೆಚ್.ಎನ್. ನಂಜೇಗೌಡರು ತಮ್ಮ ಅನುಮತಿಯನ್ನು, ಅವಕಾಶವನ್ನು ಪಡೆದುಕೊಂಡು, ಅವರ ಜೊತೆಗೆ ಸುಮಾರು 37-38 ಜನ ಗೌರವಾನ್ವಿತ ಈ ಸದನದ ಸದಸ್ಯರುಗಳು ತಮ್ಮ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಅವರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸತಕ್ಕಂತಹ ಕಾಲದಲ್ಲಿ ಎಲ್ಲರ ಗುರಿ ಒಂದೇ, ನಮ್ಮ ರಾಜ್ಯದ ನೀರಿನ ಹಕ್ಕನ್ನು ನಾವು ಉಳಿಸಿಕೊಳ್ಳಬೇಕು, ಇದನ್ನು ಎಲ್ಲಾ ರೀತಿಯಲ್ಲಿ ಬಳಕೆ ಮಾಡಿಕೊಳ್ಳಬೇಕು, ಯಾವುದೇ ಕಾರಣದಿಂದ ಸರ್ಕಾರ ಇದರಲ್ಲಿ ಮುಗ್ಗರಿಸಬಾರದು, ಈ ಒಂದು ಸೂಚನೆಯನ್ನು ಕೊಟ್ಟಿದ್ದಕ್ಕೆ ನಾನು ಅವರೆಲ್ಲರಿಗೂ ಅಭಾರಿಯಾಗಿದ್ದೇನೆ. ಕೆಲವು ಸಂದರ್ಭದಲ್ಲಿ ಸರ್ಕಾರದ ವೈಫಲ್ಯತೆಯನ್ನು ನಾನು ಅವರೆಲ್ಲರಿಗೂ ಅಭಾರಿಯಾಗಿದ್ದೇನೆ. ಕೆಲವು ಸಂದರ್ಭದಲ್ಲಿ ಸರ್ಕಾರದ ವೈಫಲ್ಯತೆಯನ್ನು ಕೂಡ ಹೇಳಬೇಕಾಗುತ್ತದೆ. ಇದು ವಿರೋಧಪಕ್ಷದ ಧರ್ಮ. ಅದರ ಬಗ್ಗೆಯೂ ಕೂಡ ನಾನು ಎಷ್ಟೇ ತೀಕ್ಷಣವಾದ ಟೀಕೆಗಳು ಬಂದರೂ ಈ ಸ್ಥಾನದಲ್ಲಿ ಕುಳಿತು, ನಾನು ಕೇಳುವಾಗ, ಯಾವುದೇ ಸಂದರ್ಭದಲ್ಲಿ ನಾನು ಯಾರ ಭಾಷಣಕ್ಕೂ ಮಧ್ಯೆ ಪ್ರವೇಶ ಮಾಡಲಿಕ್ಕೆ ಹೋಗಲಿಲ್ಲ. ಇವತ್ತು ಬೆಳಿಗ್ಗೆ ಹಿರಿಯ ಸದಸ್ಯರಾದ ಖರ್ಗೆಯವರು ಮಾತನಾಡುವಾಗ ನಾನು ಇಲ್ಲಿ ಬರಲಿಲ್ಲವೆಂದು, ಶ್ರೀಮಾನ್ ನಂಜೇಗೌಡರು, ಮುಖ್ಯಮಂತ್ರಿಗಳು ಈ ಸದನದಲ್ಲಿ ಇಲ್ಲವೆನ್ನುವ ಒಂದು ಸೂಚನೆಯನ್ನು ಮಾಡಿದಾಗ, ನೀವು ನನ್ನ ರಕ್ಷಣೆಗೆ ಬಂದಾಗ, ನಾನು ನೀವೇ ವ್ಯವಸ್ಥೆ ಮಾಡಿರತಕ್ಕಂಥ

ದೂರದರ್ಶನದಲ್ಲಿ ಮಾತನಾಡುತ್ತಿದ್ದನ್ನು ಕೇಳುತ್ತಿದ್ದೆ. ಬೇರೆ ಕಡೆ ನಾನು ಹೋಗಿರಲಿಲ್ಲ. ನಿಮ್ಮ ಭಾಷಣವನ್ನು ಪೂರ್ತಿ ಕೇಳಿದೆ, ಚಿಮ್ಮಣಕಟ್ಟಿಯವರು ಮಾಡಿದಂಥ ಭಾಷಣವನ್ನು ಹಾಗೂ ವಾಟಾಳ್ ನಾಗರಾಜ್‌ರವರು ಮಾಡಿದಂಥ ಭಾಷಣವನ್ನೂ ಸಹ ಕೇಳಿದ್ದೇನೆ. ಅದಕ್ಕಾಗಿ ಸಹೋದ್ಯೋಗಿಗಳು ಏನು ಬರೆದುಕೊಂಡಿದ್ದಾರೆ ಅದರ ಅವಶ್ಯಕತೆಯಿಲ್ಲ, ನಾನೇ ಕೇಳಿದ್ದೇನೆ. ಆದರೆ ಈ ಸಭೆಗೆ ಬರದೆ ನಾನು ಬೇರೆ ಕಡೆ ಕೊಠಡಿಯಲ್ಲಿ ಕುಳಿತು ಅಧಿಕಾರಿಗಳ ಜೊತೆ ಚರ್ಚೆ ಮಾಡುವಾಗ ಅಗೌರವ ತೋರಿಸಿದ್ದೀರೆಂದು ಹೇಳಿದ್ದೀರಿ, ಅದಕ್ಕೆ ನಾನು ಕ್ಷಮೆ ಕೇಳುತ್ತೇನೆ. ಆದರೆ ಈ ಸದನದಲ್ಲಿ ಉತ್ತರವನ್ನು ಕೊಡುವಾಗ ಸತ್ಯಾಸತ್ಯತೆಯನ್ನು ಹೊರಗೆ ಇಡಬೇಕಾದದ್ದು ನನ್ನ ಧರ್ಮ.

ನೀವು ಹೇಳಿದ್ದನ್ನು ಜನ ವಿಮರ್ಶೆ ಮಾಡುತ್ತಾರೆ, ನಾನು ಹೇಳಿದ್ದನ್ನು ಜನ ವಿಮರ್ಶೆ ಮಾಡುತ್ತಾರೆ, ಅಂತಿಮ ತೀರ್ಪನ್ನು ಕೊಡುವವರು ಮಹಾಜನರು. ಶ್ರೀಮಾನ್ ಹೆಚ್.ಎನ್. ನಂಜೇಗೌಡರು ಮಾತನಾಡುತ್ತಾ, ಈ ರಾಜ್ಯದಲ್ಲಿ ನೀರಾವರಿ ಬಗ್ಗೆ ದಿವಂಗತ ಹೆಚ್.ಎಂ. ಚೆನ್ನಬಸಪ್ಪನವರು, ಆಳವಾಗಿ ಅಧ್ಯಯನ ಮಾಡಿ ಮಾತನಾಡಿದಂತಹವರು. ಒಂದು ರೀತಿ ನನಗೂ ಗುರುಗಳು ಮತ್ತು ದೇವೇಗೌಡರಿಗೂ ಗುರುಗಳು ಎನ್ನುವ ಮಾತನ್ನು ಹೇಳಿದರು. ನಾನು ಅವರ ಇಡೀ ಭಾಷಣವನ್ನು ಕೇಳಿದೆ. ನಾನೇನಾದರೂ ಅವರ ಭಾಷಣದ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸಿದರೆ, ಯಾರು ಅನ್ಯಥಾ ಭಾವನೆ ಮಾಡಬೇಕಾದ್ದಿಲ್ಲ, ಈ ಸದನದಲ್ಲಿ ಅನೇಕ ಜನ ಹೊಸ ಸದಸ್ಯರುಗಳು ಬಂದಿದ್ದಾರೆ. ಈ ಎರಡು ನದಿಗಳ ನೀರಿನ ಹಂಚಿಕೆಯಲ್ಲಿ ನಡೆದು ಬಂದಂಥ ದಾರಿ ಹೇಗೆ? ಇವೆಲ್ಲವನ್ನೂ ಎಳೆಎಳೆಯಾಗಿ ಬಿಡಿಸಿ ಹೇಳಿದ್ದಾರೆ. ಒಂದು ರೀತಿ ನನಗೂ ಕೂಡ, ಹಲವಾರು ವಿಷಯಗಳು ಪುನಃ ಜ್ಞಾಪಕಕ್ಕೆ ತಂದುಕೊಳ್ಳಲಿಕ್ಕೆ ಎಡೆ ಮಾಡಿಕೊಟ್ಟಿತು ನಿಮ್ಮ ಭಾಷಣ. ಅತ್ಯಂತ ಮೇಲ್ಮಟ್ಟದ ಸಲಹೆಗಳನ್ನು ಈ ಸದನದಲ್ಲಿ ನೀವು ಕೊಟ್ಟಿರಿ. ಒಂದು ಹಂತದಲ್ಲಿ ನನ್ನ ಮನಸ್ಸಿಗೆ ಸ್ವಲ್ಪಮಟ್ಟಿಗೆ ಸಂಶಯ ಬಂತು. ಇದು ರಾಜ್ಯದ ದೃಷ್ಟಿಯಿಂದ ಇದು ಸರಿ ಹೋಗುತ್ತೋ ಇಲ್ಲವೋ ಎನ್ನುವ ಮಾತನ್ನು ಹೇಳಿದಾಗ, ಪುನಃ ನೀವು ವಿರಾಮ ವೇಳೆಯ ನಂತರ ಅದನ್ನು ಸ್ವಲ್ಪಮಟ್ಟಿಗೆ ಮಾರ್ಪಾಡು ಮಾಡಿಕೊಳ್ಳುವುದಕ್ಕೆ ಕೂಡ ಪ್ರಯತ್ನ ಮಾಡಿದಿರಿ. ನೀವು ಕೊಟ್ಟಂಥ ಸಲಹೆಗಳು, ಹೇಗೆ ಈ ಎರಡು ನದಿಗಳ ವ್ಯಾಜ್ಯ ಪ್ರಾರಂಭವಾಯಿತು, ಯಾವ ಯಾವ ಹಂತದಲ್ಲಿ ನಾವು ಎಡವಿದ್ದೇವೆ, ತಾವು ಎಲ್ಲವನ್ನೂ ಪ್ರತಿಯೊಬ್ಬರಿಗೂ ಮನವರಿಕೆಯಾಗುವ ರೀತಿಯಲ್ಲಿ ಈ ಸಭೆಯಲ್ಲಿ ಸುಮಾರು ಎರಡು, ಎರಡೂವರೆ ಗಂಟೆಗಳ ಕಾಲ ಏನು ವಿಶ್ಲೇಷಣೆ ಮಾಡಿದಿರಿ, ಅದಕ್ಕೆ ನಾನು ನಿಮಗೆ ಅಭಾರಿಯಾಗಿದ್ದೇನೆ. ಅದೇ ರೀತಿಯಾಗಿ ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಶ್ರೀಮಾನ್ ವೀರಪ್ಪ ಮೊಯಿಲಿಯವರು ನಾವು ಎಲ್ಲಿ ಎಡವುತ್ತಿದ್ದೇವೆ, ಹೇಗೆ ಸರಿಪಡಿಸಿಕೊಳ್ಳಬೇಕು, ಸರ್ಕಾರ ಯಾವುದಾದರೂ ಪೂರ್ವಗ್ರಹಪೀಡಿತವಾದಂತಹ ಕ್ರಮಗಳನ್ನು ತೆಗೆದುಕೊಳ್ಳಬಾರದು, ಇದರಿಂದ ರಾಜ್ಯಕ್ಕೆ ಅನ್ಯಯವಾಗುತ್ತದೆಂದು ಎಲ್ಲಾ ವಿಷಯಗಳನ್ನು ಹೇಳಿದ್ದಾರೆ. ಅವರಿಗೂ ಕೂಡ ನಾನು ಋಣಿಯಾಗಿದ್ದೇನೆ.

ಕೊನೆಯದಾಗಿ ಮಾಜಿ ಮುಖ್ಯಮಂತ್ರಿಗಳಾದ ಶ್ರೀಮಾನ್ ಬಂಗಾರಪ್ಪನವರು ಈ ರಾಜ್ಯದ ನೀರಾವರಿ ಯೋಜನೆಗಳು ಬಹಳ ವೇಗದಿಂದ ಹೋಗಬೇಕು, ನಮ್ಮ ಪೂರ್ಣ ಸಹಕಾರ ಇದೆ ಎಂದು ಹೇಳಿದ್ದಾರೆ. ಅದೇ ರೀತಿ ವಾಟಾಳ್ ನಾಗರಾಜ್‌ರವರು ಟ್ರಿಬ್ಯೂನಲ್ ಬಿಟ್ಟು ನೀವು ಹೊರಗಡೆ ಬರಲೇಬೇಕು ಎಂದು ಅವರು ತಮ್ಮ ಭಾಷಣವನ್ನು ಮುಗಿಸುವ ಸಂದರ್ಭದಲ್ಲಿ ಹೇಳಿದರು. ನಾನು ನಿಮ್ಮೆಲ್ಲರಿಗೂ ನಾನು ಋಣಿಯಾಗಿರುತ್ತೇನೆ. ತುಮಕೂರು ಜಿಲ್ಲೆ ಬಗ್ಗೆ ಬಹಳ ಕಾಳಜಿಯನ್ನು ಈ ಸದನದಲ್ಲಿ ಬಹಳ ಜನ ವಹಿಸಿದ್ದಾರೆ. ಆ ಎಲ್ಲಾ ಸದಸ್ಯರಿಗೂ ನನ್ನ ಧನ್ಯವಾದಗಳು. ಆದರೆ ದುರಂತ ಏನು ಎಂದು ಹೇಳಿದರೆ ಯಾವ ನಂಜೇಗೌಡರು ಈ ನಿಲುವಳಿಯ ಸೂಚನೆಯನ್ನು ವಿಶೇಷ ಚರ್ಚೆಗೆ ಮಂಡನೆ ಮಾಡಿದರೋ ಅವರೇ ಹೇಳಿದಂತಹ

ಒಂದು ಶಬ್ದ, ದಿವಂಗತ ಚನ್ನಬಸಪ್ಪನವರೂ ನನಗೂ ಗುರುಗಳು. ಅವರಿಗೂ ಗುರುಗಳು ಎಂದು ಹೇಳಿದಂಥ ಮಾತು. ಬಹುಶಃ ನಾನು ಮಾನ್ಯ ಬಂಗಾರಪ್ಪನವರಿಗಿಂತ ಮುಂಚೆ ಬಂದೆನೋ ಅವರ ಜೊತೆಯಲ್ಲೇ ಬಂದೆನೋ ಗೊತ್ತಿಲ್ಲ, 1962ರಲ್ಲಿ ನಾನು ಬಂದೆ, ಅವರು 1967ರಲ್ಲಿ ಬಂದರು, ಮೊಯಿಲಿಯವರು 1972ರಲ್ಲಿ ಬಂದರು. ನಾನು ಅಷ್ಟೊಂದು ತಾಂತ್ರಿಕ ಪಂಡಿತನೂ ಅಲ್ಲ, ಕಾನೂನು ಪಂಡಿತನೂ ಅಲ್ಲ, ಸಾಮಾನ್ಯ ಸದಸ್ಯನಾಗಿ ಈ ಸದನಕ್ಕೆ ಬಂದೆ. 1964ರಲ್ಲಿ ಮೊದಲನೇ ಬಾರಿಗೆ ಈ ಸದನದಲ್ಲಿ ಕಾವೇರಿ ನದಿ ನೀರಿನ ಬಳಕೆ ಬಗ್ಗೆ ನಮಗೆ ಏನು ಅನ್ಯಾಯವಾಗಿದೆ ಎನ್ನುವುದರ ಬಗ್ಗೆ ಒಂದು ಖಾಸಗಿ ನಿರ್ಣಯವನ್ನು ಮಂಡನೆ ಮಾಡಿ 22 ಶನಿವಾರಗಳು ಚರ್ಚೆಯಾಯಿತು. ಆಗ ಪ್ರತಿ ಶನಿವಾರ ನಾನ್ ಅಫಿಷಿಯಲ್ ರೆಸಲ್ಯೂಷನ್ಸ್ ಆಗುತ್ತಾ ಇತ್ತು. ಅವೊತ್ತು ನಾನು ಬರೀ ಹೊಳೇನರಸೀಪುರದ ಬಗ್ಗೆ ಯೋಚನೆ ಮಾಡಲಿಲ್ಲ, ಅಥವಾ ಬರೀ ಹಾಸನದ ಜಿಲ್ಲೆ ಬಗ್ಗೆ ನಾನು ಯೋಚನೆ ಮಾಡಲಿಲ್ಲ. ಅವೊತ್ತು ನನ್ನ ದೃಷ್ಟಿಕೋನ ನಾನು ಈ ರಾಜ್ಯದ ಮುಖ್ಯಮಂತ್ರಿಯಾಗುತ್ತೇನೆ, ಇಂತಹ ಚರ್ಚೆಗೆ ಉತ್ತರ ಕೊಡಬೇಕಾಗುತ್ತದೆ ಎಂದು ನಾನು ಕನಸು ಕಂಡಿರಲಿಲ್ಲ. ಅಥವಾ ನೀರಿನ ರಾಜಕೀಯ ಮಾಡಿ ಈ ರಾಜ್ಯದಲ್ಲಿ ಮುಖ್ಯಮಂತ್ರಿಯಾಗಬೇಕೆಂಬ ಬಯಕೆಯನ್ನು ಬಯಸಿದವನಲ್ಲ.

ಸನ್ಮಾನ್ಯ ಅಧ್ಯಕ್ಷರೇ, ಇವೆರಡೇ ಶಬ್ದವನ್ನು ಹೇಳಿ ನಾನು ಮುಂದಕ್ಕೆ ಹೋಗುತ್ತೇನೆ. ಏಕೆಂದರೆ ಇವೆಲ್ಲಾ ದಾಖಲೆಗಳು ಇತಿಹಾಸದ ಪುಟಗಳಲ್ಲಿ ಇವನ್ನು ಯಾರೂ ಅಳಿಸಿ ಹಾಕುವುದಕ್ಕೂ ಆಗುವುದಿಲ್ಲ. 1964ನೇ ಇಸವಿಯಲ್ಲಿ ನಾನ್ ಅಫಿಷಿಯಲ್ ರೆಸಲ್ಯೂಷನ್‌ನ್ನು ನಾನು ಈ ಸದನದಲ್ಲಿ ಮಂಡನೆ ಮಾಡಿದ್ದೆ.

ಅಧ್ಯಕ್ಷರು : ನಾನು ನೆನೆಸಿಕೊಂಡೆ

ಶ್ರೀ ಹೆಚ್.ಡಿ. ದೇವೇಗೌಡ : ಅದಕ್ಕೆ ನಾನು ತಮಗೆ ಧನ್ಯವಾದಗಳನ್ನು ಹೇಳಿದೆ. ಋಣಿಯಾಗಿದ್ದೇನೆ ಎಂದೂ ಸಹ ಹೇಳಿದೆ. ಅತ್ಯಂತ ಉತ್ತಮವಾದ ಭಾಷಣವನ್ನು ಮಾಡಿದಿರಿ ಎಂದು ಹೇಳಿದ್ದೇನೆ. ಒಂದು ಸಣ್ಣ ಅಪಾಯ ಸ್ವಲ್ಪ ಮಟ್ಟಿಗೆ ಆಗಬಹುದೇನೋ ಎಂಬ ಸೂಚನೆಯನ್ನು ಮಾನ್ಯ ಅಧ್ಯಕ್ಷರ ಮುಖೇನ ಹೇಳಿದಾಗ ಅದನ್ನು ಮಾರ್ಪಾಡು ಮಾಡಿದಿರಿ. ಅದು ತಮ್ಮ ದೊಡ್ಡತನವನ್ನು ತೋರಿಸುತ್ತದೆ ಎಂದು ಹೇಳಿದ್ದೇನೆ. ಅದಕ್ಕಿಂತಲೂ ಹೆಚ್ಚು ಹೇಳಲಿಕ್ಕೆ ಹೋಗುವುದಿಲ್ಲ.

ಹಾಸನ, ಮಂಡ್ಯ, ಮೈಸೂರು, ತುಮಕೂರು, ಮತ್ತು ಚಿತ್ರದುರ್ಗ ಈ ಭಾಗ ರೈತರಿಗೆ ಈ ಒಂದು ನದಿಯಿಂದ ಪ್ರತಿನಿತ್ಯ ನೀರನ್ನು ಬಳಕೆ ಮಾಡಿಕೊಳ್ಳಲಿಕ್ಕೆ ಸರ್ಕಾರ ಹಿಂದೆ ಬೀಳಬಾರದು, ಸರ್ಕಾರ ಕಣ್ಣನ್ನು ತೆರೆಸಲಿಕ್ಕೆ ಮೊದಲನೆಯ ರೆಸಲ್ಯೂಷನ್‌ನ್ನು ಈ ಸದನದಲ್ಲಿ ಮಂಡನೆ ಮಾಡಿ. ಅವತ್ತು ಶ್ರೀಮಾನ್ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿ ಈ ಜಾಗದಲ್ಲಿ ಕುಳಿತಿದ್ದರು. ಇವತ್ತು ನನಗೆ ಮನಸ್ಸಿನೊಳಗೆ ಒಂದು ಕಡೆ ನೋವೂ ಇದೆ ಇನ್ನೊಂದು ಕಡೆ ಮನಸ್ಸಿಗೆ ಸಮಾಧಾನವೂ ಇದೆ. ನನಗೆ ಈ ಚರ್ಚೆ ಬೇಕಾಗಿತ್ತು 1966ರಲ್ಲಿ ಈ ರಾಜ್ಯದ ಇತಿಹಾಸದಲ್ಲಿ ಒಬ್ಬ ವಿರೋಧಿ ಪಕ್ಷದ ಸದಸ್ಯ ಮಂಡನೆ ಮಾಡಿದಂತಹ ಒಂದು ಖಾಸಗಿ ನಿರ್ಣಯ ಈ ರಾಜ್ಯದ 47 ವರ್ಷದ ಶಾಸನ ಸಭೆಯ ಇತಿಹಾಸದಲ್ಲಿ ಸರ್ವಾನುಮತದಿಂದ ಪಾಸ್ ಆಗಲಿಲ್ಲ, ಚರ್ಚೆಯಾಯಿತು. ಇವತ್ತು ಮಾಜಿ ಮುಖ್ಯಮಂತ್ರಿಗಳು ಯಾರು ಇದ್ದಾರೋ ಅವರು ಖಾಯಿಲೆ ಬಿದ್ದಿದ್ದಾರೆ. ಅವರ ಬಗ್ಗೆ ಚರ್ಚೆ ಮಾಡಲಿಕ್ಕೆ ಹೋಗುವುದಿಲ್ಲ, ಹೇಗೆ ಆಯಿತು ಎನ್ನುವುದರ ಬಗ್ಗೆ ನಾನು ಚರ್ಚೆ ಮಾಡುವುದು ಬೇಡ. ಒಂದೂವರೆ ದಿನ ಹೋರಾಟ ಆಯಿತು. ಇವತ್ತು ದಿವಂಗ ವೈಕುಂಠ ಬಾಳಿಗರವರು ನಮ್ಮ ಮಧ್ಯೆ ಇಲ್ಲ, ಶ್ರೀಮಾನ್ ಎಸ್. ಶಿವಪ್ಪನವರು ಇವತ್ತು ನಮ್ಮ ಈ ಸಭೆಯಲ್ಲಿಲ್ಲ, ಅದೇ ರೀತಿ ಶ್ರೀಮಾನ್

ಕಂಠಿಯವರು ಇವತ್ತು ಈ ಸಭೆಯಲ್ಲಿ ಇಲ್ಲ. ಅವತ್ತು ಆ ನಿರ್ಣಯ ಪಾಸ್ ಆಗಬೇಕಾಗಿದ್ದರೆ ಏನು ಹೋರಾಟ ಆಯಿತು ಎನ್ನುವುದು ನನಗೆ ಗೊತ್ತು. ಅದನ್ನೆಲ್ಲಾ ವಿಶ್ಲೇಷಣೆ ಮಾಡಲಿಕ್ಕೆ ನಾನು ಹೋಗುವುದಿಲ್ಲ. ಇಡೀ ಸದನ ಈ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರ ಮಾಡಲಿಕ್ಕೆ ನಾನು ಹೋಗುವುದಿಲ್ಲ. ಇಡೀ ಸದನ ಆ ನಿರ್ಣಯವನ್ನು ಸರ್ವಾನುಮಂತದಿಂದ ಅಂಗೀಕರ ಮಾಡಿತು, ಕೆಲವು ಪತ್ರಿಕೆಗಳಲ್ಲಿ ಅಗ್ರ ಲೇಖನಗಳೂ ಕೂಡ ಬಂತು. ಇವತ್ತು ತುಮಕೂರು ಜಿಲ್ಲೆಗೆ ನಾನು ನೀರು ನಿಲ್ಲಿಸಿದ್ದೇನೆ, ನೀರು ಕೊಡಬಾರದು ಎಂದು ಅಲ್ಲ. ಬಸ್‌ಗಳ ಮೇಲೆ ಬರಹಗಳು, ನನ್ನ ಮತ್ತೆ ನನ್ನ ಕುಟುಂಬದವರ ಹೆಸರುಗಳು. ತಾವು ಯಾರ ಹೆಸರನ್ನು ಎತ್ತಿ ಭಾಷಣ ಮಾಡಿದಿರಿ ಈ ಸಭೆಯಲ್ಲಿ ಅವರ ಹೆಸರನ್ನು ಹೇಳುವುದಿಲ್ಲ. ನೀವು ಎತ್ತಿದ್ದು ನನಗೆ ಕೇಳಿಸುತ್ತಿದೆ. ಆದರೆ ಅವರು ಈ ಸದನದ ಸದಸ್ಯ ಅಲ್ಲದ ಕಾರಣ ಅವರ ಹೆಸರನ್ನು ಹೇಳಿ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ನೀವು ಎತ್ತಿದ ವಿಚಾರ ನನ್ನ ಕಿವಿಗೆ ಬಿತ್ತು. ಅದನ್ನು ಅಲ್ಲಿಗೆ ನಿಲ್ಲಿಸುತ್ತೇನೆ. ಎಲ್ಲಾ ಸರ್ಕಾರಿ ಬಸ್‌ಗಳ ಮೇಲೆ ನನ್ನ ಹೆಸರು ತುಂಬಾ ಪ್ರಚಾರವಾಗಿದೆ.

ಇಂತಹ ಸನ್ನಿವೇಶ ಏಕೆ ಉದ್ಭವ ಆಯಿತು? ಈ ರೀತಿ ಉದ್ಭವವಾಗುವುದಕ್ಕೆ ಕಾರಣ ನಾನು ತೆಗೆದುಕೊಂಡ ನಿರ್ಣಯ 22-12-1994ರ ಗೌರ್‍ನಮೆಂಟ್ ಆರ್ಡರ್‌ನ್ನು ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಮೊಯಿಲಿಯವರು ಓದಿದ್ದರು. ಅದರಲ್ಲಿ ನಾನು ಏನು ಹೇಳಿದ್ದೇನೆ? ಯಾವುದೇ ಕೆಲಸವನ್ನು ನೀವು ತೆಗೆದುಕೊಳ್ಳುವಾಗ ಇವತ್ತು ಹಣ ವಿನಿಯೋಗ ಮಾಡತಕ್ಕಂತಹ ಕಾಲದಲ್ಲಿ ಇರಿಗೇಷನ್ ಡೆವಲಪ್‌ಮೆಂಟ್ ಆದರೆ, ಪೊಟೆನಿಯಲಿಟಿ ಕ್ರಿಯೇಟ್ ಆದರೆ ಮಾತ್ರ ಮಾಡಬೇಕು ಎಂದು ಹೇಳಿದ್ದೇನೆ. ಇದಕ್ಕೆ ಅನಂತರ ಬರುತ್ತೇನೆ. ಇನ್ನು ಎರಡನೆಯದಾಗಿ "no other non-developmental works shall be taken" - ಹೌದು, ಹೇಳಿದ್ದೇನೆ. "No Department work, hereafterwards, will be taken without the approval of the Government."

ಅಂತ ಹೇಳಿದ್ದೇನೆ. ಇಲ್ಲದೇ ಇದ್ದರೆ ಈ ಚರ್ಚೆಗೆ ಬರಲಿಕ್ಕೆ ಕಾರಣ ಇಲ್ಲ. ಈ ಸರ್ಕಾರಿ ಆರ್ಡರ್ ಇಲ್ಲದೆ, ಈ ಸನ್ನಿವೇಶ ಏಕೆ ಬಂತು, ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳಿಗೆ ನಾನು ಜನವರಿ 1993ರಲ್ಲಿ ಒಂದು ಕಾಗದವನ್ನು ಬರೆದೆ, ಅದರಲ್ಲಿ ಹೇಳಿದ್ದೇನೆ "The Government, in the Finance Department, should issue LOC for plan and non-plan separately"

ಒಂದು ಪ್ರಾಜೆಕ್ಟ್ ಇನ್ನೊಂದು ಪ್ರಾಜೆಕ್ಟ್ ಇಲ್ಲ.. ಅಟ್ ಫೀಲ್ಡ್ ಲೆವೆಲ್ ನಾನು ಡೆವಲಪ್‌ಮೆಂಟ್ ವರ್ಕನ್ನು ಹೇಗೆ ಮಾಡಿದ್ದಾರೆಂಬುದನ್ನು ಇಲ್ಲೇ ಹೇಳುತ್ತೇನೆ. "The diversation from plan to plan at field level results in unplanned development in addition to resulting wasteful expenditure. The Chief Engineer is responsible and accountable for achieving targets. The C.Es should make proper planning and budgeting in their respective zones to ensure that the money spent yields quick results and bringing to completion the slow onËgoing works and utilise resources made available.

Codal rules should be strictly enforced in the areas like execution of works, plans, design.

Sanction should be accorded for quantum of work. National provisions should be done away with".

1.00 ಪಿ.ಎಂ

The work should be executed through only open tenders and not under piece work system or departmental execution. Piece work system gives room to nepotism, favouritism and entrustment of work without details, as officers will have no idea of the works without details, as officers will have no idea of the works and hence no proper instructions or supervision can be effected. Taking up of works departmentally may result in abuse of the system, irregular expenditure, uncontrolled outlay, substantial excesses. These two systems both departmentally and piece work are also resulting in large scale misuse of cement and asphalt. Primary approval of the works may be indicated by the Government and the Department may be asked to finalise plans, etimates, designs etc. before including them in the Budget and according sanctions. 5) The necessary lumpsum amounts, grants be placed in each circle with the Superintending Engineer to take up only very urgent works in an emergent situation like flood damage work to culverts and briges. Flood damages and scarcity works costing not more than 50000 eachh piece work with prior written approval of the Chief Engineer. Then I have told the Codal rules. The Karnataka State Construction Corporation, a tool agency to get large works executed committing grave irregularities, so and so. No advantage can be seen from the procedure that has been adopted. Regarding Krishna Valley Development Authority and Krishna Bhagya Nigam, I will answer later.

ಅದಕ್ಕೆ ನಾನು ಉತ್ತರ ನಂತರ ಕೊಡುತ್ತೇನೆ. ಅವೆರಡೂ ತಂದಿರುವುದು, ಬಹುಶಃ ಒಂದು ನಿಮ್ಮ ಸರ್ಕಾರ ಇದ್ದಾಗ ಇರಬೇಕು, ಮೊಯಿಲಿಯವರದ್ದು. Officers should be allowed to function, exercise powers vested with them and to take decision according to powers delegated by the Government. When I was in office I brought some measures, making contractors responsible for quality of work and also made provision for prosecuting the contractors when necessary. This is the changes I have made.

ಇದನ್ನು ಅವರಿಗೆ ಪತ್ರ ಬರೆದಿದ್ದೇನೆ. ಅವರು ಒಬ್ಬರಿಗೆ ಬರೆಯಲಿಲ್ಲ. ಉಪ ಮುಖ್ಯಮಂತ್ರಿಗಳಿಗೂ ಬರೆದಿದ್ದೇನೆ. ಆದರ ಕಾಪಿ ಇದು. ಅಂದಿನ ಸಣ್ಣ ನೀರಾವರಿ ಮಂತ್ರಿಗಳು ಚೌಧರಿ ಎಂದು ಇದ್ದರು. ಅವರಿಗೂ ಒಂದು ಕಾಗದ ಕಳುಹಿಸಿದ್ದೆ. ಲೋಕೋಪಯೋಗಿ ಮಂತ್ರಿಗಳಿಗೂ ಒಂದು ಕಾಗದ ಕಳುಹಿಸಿದ್ದೆ. ಆ ಕಾಗದದ ಮೇಲೆ ಆ ಹೆಸರು ಯಾರೆಂದು ತೆಗಯಬೇಕಾದ ಅವಶ್ಯಕತೆ ಇಲ್ಲ. ಉಪಮುಖ್ಯಮಂತ್ರಿಗಳು ನನಗೆ ಒಂದು ಕಾಗದ ಬರೆದರು, ನಾನು ನಿಮ್ಮ ಹತ್ತಿರ ಡಿಸ್‌ಕಸ್ ಮಾಡಬೇಕೆಂದು ಬರೆದಿದ್ದಾರೆ. ಮೊಯಿಲಿ ಮನೆಗೆ ಹೋಗಿ ಡಿಸ್‌ಕಸ್ ಮಾಡಿದೆವು. ಇವರಿಗೂ ಹೇಳಬೇಕೆಂಬ ಮನಸ್ಸು ಇತ್ತು. I officially wrote a letter to grant me some time. He replied :

"I intend to visit Delhi during the first week of May tentatively from 4th May to 6th May, 1993. I would like to discuss with you regarding

Krishna and Cauvery Basin Projects and various power projects to ascertain your valuable views and suggestions in this regard. I am informing you in advance so that you should be able to spare some time during my stay in Delhi."

ಅದು ದುರಾದೃಷ್ಟಕ್ಕೆ ಕೈಗೂಡಲಿಲ್ಲ. ಪುನಃ ಅವರ ಪ್ರೈವೇಟ್ ಸೆಕ್ರೆಟರಿಯವರಿಗೆ ಒಂದು ಕಾಗದ ಬರೆದೆ. ನಿಮ್ಮ ಹತ್ತಿರ ಚರ್ಚೆ ಮಾಡಬೇಕು ಇದರ ಬಗ್ಗೆ ಏನು ಅನ್ಯಾಯ ನಡೆಯುತ್ತಾ ಇದೆ ಎಂಬ ಬಗ್ಗೆ ಆದರೆ ಅದು ಆಗಲಿಲ್ಲ. ಸನ್ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ವೀರಪ್ಪ ಮೊಯಿಲಿಯವರಿಗೆ 29-3-1993 ರಂದು ನಾನು ಕಾಗದ ಬರೆದೆ. ಆದರೆ ಇದಕ್ಕೆ ಜಾಸ್ತಿ ಬಣ್ಣ ಹಚ್ಚಿಬಿಡಬಹುದು. ಏಕೆಂದರೆ ನಾವು ರಾಜಕೀಯದ ಮೇಲೆ ಹೋಗುತ್ತೇವೆ, ನಮ್ಮ ದೃಷ್ಟಿಕೋನ ಹಾಗೆ ಹೋಗುತ್ತದೆ.

Respected Sri Veerappa Moily, Hon'ble Chief Minister of Karnataka, Bangalore.

Belgaum District Contractors, Association

We have submitted many representations to your high offices in connection with the PWD officials, the style of working and leakage in Government funds.

ಅವರು ಲಿಕ್ಕರ್ ಲಾಬಿ ದೂರ ಇಟ್ಟರು. This is the issue now.

In a line, we wish to bring to your notice that the PWD Lobby is more bigger than the liquor lobby. Outside parties are benefitted. But tin PWD, 90%T of the Government investments expenditure is benefitted by the Government officials and some MLAs. Necessary attention given by your Honour to stop the leakage then many irrigation projects can be completed without taking loan or aid from the Central Government or other agencies.

In the entire State, the whole PWD Deparment officials have violated the rules of PWD code and the expenditure is booked only in books and practically works are not improved or developed.

ಈ ಕಾಗದದ ಒಂದು ಪ್ರತಿಯನ್ನು ನನಗೂ ಕಳುಹಿಸಿದರು.

"We are really very glad to go through your proper views regarding PWD Lobby etc.

Please find enclosed letter addressed to the Hon'ble Chief Minister of Karnataka. We were not able to get your Bangalore address.

ಎಂದು ಹೇಳಿಕೊಂಡು ಬಂದಿದ್ದಾರೆ. ನಿಮ್ಮ ಅಡ್ರೆಸ್ ನಮಗೆ ಗೊತ್ತಿಲ್ಲ.

"Please be kind enough to reply with your Bangalore Address."

ಸನ್ಮಾನ್ಯ ಅಧ್ಯಕ್ಷರೆ, ನಾನು ಉತ್ತರ ಕೊಡುವಾಗ ಯಾರ ಮೇಲೂ ಆಸ್ಪರ್ಶನ್ ಮಾಡುತ್ತಿಲ್ಲ. ಇರುವ ವಿವರಣೆಯನ್ನು ಸಭೆಗೆ ಕೊಡಬೇಕಾಗುತ್ತದೆ. ಹೇಮಾವತಿ ಎಡದಂಡೆ ನಾಲಾ ವಿಭಾಗ ತುರುವೇಕೆರೆ ಕಾರ್ಯ ಯೋಜನೆಯಡಿ ಇರತಕ್ಕಂತಹ ಅಕ್ರಮ ವ್ಯವಹಾರಗಳ ಬಗ್ಗೆ ಮುಖ್ಯಮಂತ್ರಿಗಳಿಗೆ ಕೃಷ್ಣ, ಡಿ. ಮಂಜುನಾಥ್,

ಹುಚ್ಚಮಾಸ್ತಿಗೌಡರು, ಎಸ್. ಮಲ್ಲಿಕಾರ್ಜುನಯ್ಯ, ಹೆಚ್.ಡಿ. ದೇವೇಗೌಡ, ಲೋಕಸಭಾ ಸದಸ್ಯರು ಇವರಿಗೆಲ್ಲಾ ಬರೆದಿದ್ದಾರೆ. ವೈ.ಕೆ. ಅವರು ಹೆಸರು ಹೇಳುವುದಿಲ್ಲ, ಅವರಿಗೂ ಬರೆದಿದ್ದಾರೆ. ಏನೇನು ಅಕ್ರಮ ನಡೆದಿದೆ ಎಂದು ಹೇಳಿ ಬರೆದಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ, ಅವರು ಹೇಳಿದಂಥ ಸನ್ಮಾನ್ಯ ಸದಸ್ಯರು ಈ ಸದನಕ್ಕೆ ಬಂದಮೇಲೆ ಅಲ್ಲಿ ಕಂಟ್ರಾಕ್ಟರಿಗೆ ದುಡ್ಡು ಬಿಡುಗಡೆ ಆಗಲಿಲ್ಲ ಎಂದು ಏನು ಒಂದು ನಡೆಯಿತು, ಅದರ ಬಗ್ಗೆ ಹೇಳುತ್ತೇನೆ. ನನಗೂ ಕರೆದಿದ್ದರು ಬರಬೇಕೆಂದು ಹೇಳಿ. ಆಗ ನಾನು ಲೋಕಸಭಾ ಸದಸ್ಯ, ಜನತಾದಳ ಅಧ್ಯಕ್ಷ, ತಾವು ಸಾರ್ವಜನಿಕರ ಹಣ ಅದರಲ್ಲೂ ನೀರಾವರಿಗೆ ರೈತರ ಹೆಸರಿನಲ್ಲಿ ಪೋಲಾಗುತ್ತಿರುವ ಹಣವನ್ನು ತಡೆಗಟ್ಟುವುದರಲ್ಲಿ ತಮಗೆ ಬೇರೆ ಎಲ್ಲರಿಗಿಂತ ಹೆಚ್ಚಿನ ಶ್ರದ್ಧೆ ಮತ್ತು ಆಸಕ್ತಿ ಇರುವುದರಿಂದ ನಾನು ಮುಖ್ಯಮಂತ್ರಿಗಳಿಗೆ ಹಾಗೂ ಉಪ ಮುಖ್ಯಮಂತ್ರಿಗಳಿಗೆ ಬರೆದಿರುವ ಪ್ರತಿಗಳನ್ನು ಕೂಡ ಲಗತ್ತಿಸಿದ್ದೇನೆ.

(ಗೊಂದಲ)

ನೀವು ಬೈರೇಗೌಡರು ಆ ಕಡೆ ಒಬ್ಬರೇ ಕುಳಿತಿದ್ದಿರಿ. ಆ ದಿನ ಒಟ್ಟಾಗಿ ಇದ್ದೆವು ಅವತ್ತಿನ ದಿವಸ. ಬೈರೇಗೌಡರ ಜೊತೆಯಲ್ಲಿ ಒಬ್ಬರು ಹೋದರೆ ಎಷ್ಟರ ಮಟ್ಟಿಗೆ ಕೆಲಸ ಆಗಬಹುದೆಂದು ಹೇಳಿ ಈ ಹಣ ದುರುಪಯೋಗವನ್ನು ನೀವು ತಡೆಗಟ್ಟಬಹುದೆಂದು ಪತ್ರ ಬರೆದರು. ಸನ್ಮಾನ್ಯ ಅಧ್ಯಕ್ಷರೇ, ನನಗೆ ಮಾರ್ಗದರ್ಶನ ಯಾವುದು, ಈ ಸದನ. ನನಗೆ ಮಾರ್ಗದರ್ಶನ ಕೊಡತಕ್ಕಂಥದ್ದು ಈ ಸದನ ಈ ಸದನದ ಸಮಿತಿ ವರದಿಗಳು ಹಾಗೂ ಸದನದಲ್ಲಿ ನೀವು ಕೊಡತಕ್ಕಂತಹ ಸಲಹೆಗಳು. ನಮ್ಮ ಮಾಜಿ ಮುಖ್ಯಮಂತ್ರಿಗಳೇ ಪಿ.ಎ.ಸಿ. ಸಮಿತಿಯ ಚೇರ್ಮನ್ನರು. ಬಾಗಲೂರು ಚಾನಲ್ ಬಗ್ಗೆ ಜ್ಯುಡಿಷಿಯಲ್ ಎನ್‌ಕ್ವೈಯರಿ ಆಗಬೇಕೆಂದು ಬರೆದರು. ನಾನು ಅದನ್ನು ಮರುಕ್ಷಣ ಮಾತನಾಡದೆ ಒಪ್ಪಿಕೊಂಡೆ. Not even a fraction of second.

ಈ ಸದನ ಅಡ್‌ಜರ್ನ್ ಆಗಿತ್ತು. ಆ ಸದನದಲ್ಲಿ ಹಿಂದಿನ ಸಂಜೆ ಸ್ಪೀಕರ್‌ಗೆ ಹೋಯಿತು. ಬೆಳಿಗ್ಗೆ ಯಾರೋ ರೈಸ್ ಮಾಡಿದರು. Without even consulting the Cabinet, this objection was raised by one of the senior Cabinet colleague, "How dare is he to take a decision on his own". I said, "No".

I am not prepared to hold the entire Cabinet responsible on the principle of joint responsibility because I am responsible. When in my Department, the Public Accounts Committee which is supreme, which is a mini-Legislature, has asked for a judicial enquiry, there is no question of hesitation on my part. I quote from the P.A.C. report :

"Entrustment of works to piece work Contractors : In Government Order PWD 111 GHK 82, dated 20th May 1983, Government enhanced the powers of the Chief Engineers to entrust work of distribution system in all Irrigation works to contractors on piece work system at the schedule of rates prevailing at the time of entrustment without calling for quotations subject to certain conditions namely :

(i) The distribution system should not have more than 50 cusecs discharge and the kilometer wise cost should not exceed Rs. 6 lakhs."

It is not the main canal we have ordered.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 1985ರಲ್ಲಿ ಏನಾಯಿತು ಎಂಬುದನ್ನು ಹೇಳಿ.

ಶ್ರೀ ಹೆಚ್.ಡಿ. ದೇವೇಗೌಡ : ಅದಕ್ಕೂ ಬರುತ್ತೇನೆ. ನನ್ನ ಮುಂದೆ ಎಲ್ಲವನ್ನೂ ಇಟ್ಟುಕೊಂಡಿದ್ದೇನೆ. ಮುಂದೆ ಬಂದಾಗ ಚರ್ಚೆ ಮಾಡೋಣ. ಏನು ನಡೆಯುತ್ತದೆ ಎಂದು ಅಲ್ಲಿ ಹೋಗಿ ಇನ್ಸ್‌ಪೆಕ್ಷನ್ ಮಾಡಿ ಗೊತ್ತಾದ ಮೇಲೆ I myself took the subject before the Cabinet and I asked them to close this issue.

"The work should be split into convenient bits, the cost of each bit should not exceed Rs. 50,000/- The work should be entrusted only to contractors who have been listed by the division as capable of carrying out the work by securing the co-operation of the land owners. No contractors should be allowed to have on hand at any time more than two works to ensure effective local participation and to prevent concentration of works in the hands of a few local contractors. When the Committee enquired whether the conditions prescribed by Government have been complied with or wether there was any deviation from those conditions, they were informed that in five cases there were deviations. The details are as follows :

(1)	G.P. Gopala Gowda	Rs. 5.78 lakhs
(2)	K. Sidda Reddy	Rs. 11.94 lakhs
(3)	H.S. Sreekantaiah	Rs. 5.57 lakhs
(4)	G. Narayana Reddy	Rs. 14.98 lakhs
(5)	K. Siddaiah ..	Rs. 5.50 lakhs

These are the five cases, the Public Accounts Committee has picked up. The value of the work entrusted to these contractors far exceeded the limit of Rs. 50,000/- prescribed in the Government Order. The Chief Engineer stated that these works were entrusted to piece work contractors as per the directions of the Government, since the Karnataka Land Army Corporation to whom the work had been entrusted earlier pleaded their inability to complete it and there was urgent necessity to create the potential under the project. This matter was discussed in a meeting convened by the Special Secretary, Irrigation on 2nd March 1984, when it was reported that the Karnataka Land Army Corporation had suspended the work in this reach due to flow of water in the canal. The Managing Director of the Corporation stated that the Corporation was not in a position to resume the work before 15th April 1984, As it was obligatory to achieve the target for creation of fresh potential under a crash programme, the Chief Engineer was permitted to take up the balance work on piece work system and complete the same before release of water for Khariff 1984 by observing the formalities in closing the contract of

Karnataka Land Army Corporation and in taking up the balance work on piece work system.

The Committee find that the Government had not issued any direction to entrust the works of the magnitude of Rs. five lakhs to Rs. 15/- lakhs to a single contractor in relexation of the general orders issued by them. On the contrary, they have stipulated that all the formalities in closing the contract and in taking up balance works on piece work system should be observed. In entrusting the works to the five contractors mentioned above, the Chief Engineer had violated the conditions contained in the Government order. Apart from the lack of authority, the entrustment of work of such magnitude to the five contractors also lacked justification.“

ಈ ರಾಜ್ಯದಲ್ಲಿ ನೀರಾವರಿ ಬಗ್ಗೆ ನನ್ನ ಹೋರಾಟದ ಬಗ್ಗೆ ಹೇಳುವ ಅವಶ್ಯಕತೆ ಇಲ್ಲ.

January 7th 1993 :

"It has been brought to my notice that the Executive Engineer, Irrigation Department, Mandya had entered into an agreement with Sri Singarigowda, Class I Contractors, Badaganur village for the supply of machineries for the work of Earth Excavation for existing Exit cuts from B.H. 18,000/- to 18,220 Metres of Lined Canal. The above Contractor has also paid E.M.D., towards this work. But that the work has been entrusted to K.S.C.C. to some other Contractor at the behest of the Chairman, on the direction of the Chief Minister. I request you to direct the K.S.C.C., to continue the original agreement which has been entered into by the Executive Engineer, Mandya for the above work dated 4-1-1994 to Sri Singari Gowda and in case the K.S.C.C. does not agree..“ This is how the Departmental handles.

It has been written by the Deputy Chief Minister to the Irrigation Secretary. The work has been entrusted by K.P.C.C., to some other Contractor at the behest of the Chairman on the director of the Chief Minister. This is number one. "I request you to direct the K.S.C.C., to continue the original agreement which has been entered into by the Executive Engineer, Mandya for the above work dated 4-1-1994, to Sri Singari Gowda and in case the K.S.C.C., does not agree to honour the above agreement, the above work may be withdrawn from the K.S.C.C. immediately. Action taken in this regard may be brought to my notice Secretary to Government, Irrigation Department.“ The Karnataka Construction Corporation was my brain child.

ಅಲ್ಲಿ ನಿಮ್ಮ ಹಿಂದುಗಡೆ ನಾನು ಕುಳಿತಿದ್ದೆ. 1964-65ರಲ್ಲಿ ನಾನು ಅಲ್ಲಿ ಕುಳಿತಿದ್ದೆ. ಮಾನ್ಯ ಗೋಪಾಲಗೌಡರು ಮಾನ್ಯ ಖರ್ಗೆಯವರ ಜಾಗದಲ್ಲಿ ಕೂಡುತ್ತಿದ್ದರು. ಈ ರಾಜ್ಯದಲ್ಲಿ ಪಿ.ಡಬ್ಲ್ಯು.ಡಿ ಕಂಟ್ರಾಕ್ಟರ್‌ಗಳಿದ್ದು ಒಂದು ದೊಡ್ಡ ವೆಸ್ಟೆಡ್ ಇಂಟರೆಸ್ಟ್ ಇದೆ. ಇದನ್ನು ನಾವು ಸ್ವಲ್ಪಮಟ್ಟಿಗೆ ಮುರಿಯಬೇಕಾದರೆ ತಾವು ಹೇಳಿದಂತೆ

ದಾಮೋದರ್ ವ್ಯಾಲಿ ಕನ್‌ಸ್ಟ್ರಕ್ಷನ್ಸ್ ಕಾರ್ಪೊರೇಷನ್ಸ್ ರೀತಿಯಲ್ಲಿ ಒಂದು ಕನ್‌ಸ್ಟ್ರಕ್ಷನ್ಸ್ ಕಾರ್ಪೊರೇಷನ್‌ನ್ನು ಮಾಡಬೇಕೆಂದು ಈ ಸದನದಲ್ಲಿ ಆಗ ಚರ್ಚೆ ನಡೆಯಿತು. Then, at that time Mr. Veerandra Patil was the P.W.D., Minister. He welcomed my suggestion. How this has been handled-there are various lapses. I am not going to read out all those cases.

ತುಂದುಗುತ್ತಿಗೆ ಆಧಾರದ ಮೇಲೆ ಎ.ಬಿ.ಸಿ.ಡಿ. ಎಕ್ಸ್.ವೈ. ಅವರೆಲ್ಲರ ಹೆಸರನ್ನೂ ಹೇಳಿ ಚರ್ಚೆ ಮಾಡಬೇಕಾಗುತ್ತದೆ.

Sri H.N. Nanjegowda : What are you trying to make out?

Sri H.D. Devegowda : Please wait. I never disturbed you. I was little bit worried about the remarks, I only approached the Speaker.

ನಾನು ಡಿಸೆಂಬರ್ 22ರ ಆರ್ಡರನ್ನು ಕೋಟ್ ಮಾಡಿದ್ದೇನೆ. ಇರಿಗೇಷನ್ ಮೇಲೆ ಹಣವನ್ನು ಖರ್ಚು ಮಾಡುವಾಗ ಪೊಟೆನ್‌ಷಿಯಲ್‌ನ್ನು ಕ್ರಿಯೇಟ್ ಮಾಡುವ ಬಗ್ಗೆ ಯೋಚನೆ ಮಾಡೋಣವೆಂದು ನಾನು ಹೇಳಿದೆ. ನಾನು ಪತ್ರದಲ್ಲಿ ಬರೆದಿದ್ದೇನೆ. ಯಾವುದೇ ಸರ್ಕಾರ ಇರಲಿ. ನಾವು ಎಷ್ಟೇ ಪ್ರಯತ್ನ ಮಾಡಿದರೂ ಹಣವನ್ನು ಕೂಡಿಸುವುದು ಬಹಳ ಕಷ್ಟವಿದೆ. ಇಲ್ಲಿ ಸುಮಾರು ನೂರು ಎಸ್ಟಿಮೇಟ್ಸ್ ಇರಬಹುದು. ಮಾನ್ಯ ನಂಜೇಗೌಡರೇ, ತಾವೂ ಹಿಂದೆ ನೀರಾವರಿ ಖಾತೆಯ ಮಂತ್ರಿಗಳಾಗಿದ್ದಿರಿ. 39 ಸಾವಿರ, ಹೀಗೆಲ್ಲಾ ಇಲ್ಲಿ ಸುಮಾರು ಎಸ್ಟಿಮೇಟ್ಸ್ ಇವೆ. ತಮಗೆ ಒಂದನ್ನು ಮಾತ್ರ ಉದಾಹರಣೆಗೆ ಹೇಳುತ್ತಿದ್ದೇನೆ. ಇವುಗಳ ಪೈಕಿ ಯಾವುದಾದರೂ ಒಂದು ಕೆಲಸಕ್ಕೆ, ಒಂದು ಗಂಟೆಗೆ ನೀರನ್ನು ಮುಂದಕ್ಕೆ ತರತಕ್ಕ ಬಗ್ಗೆ ಕೆಲಸ ಆಗಿದೆಯೇ? ಈ ಎಸ್ಟಿಮೇಟ್ಸ್ ಆಗಿವೆ ಎಂದರೆ Yes I must apologise to the House if I have taken a decision not to waste money on such works. If my direction to the Chief Engineers on December 20th, if I have done any injusitce. ಕರ್ನಾಟಕ ರಾಜ್ಯದ ಜನತೆಗೆ ಈ ದಿಸೆಯಲ್ಲಿ ನನ್ನಿಂದ ಅನ್ಯಾಯವಾಗಿದೆ ಎಂದು ಹೇಳುವುದಾದರೆ, ನಾನು ರಾಜ್ಯದ ಜನತೆಯ ಕ್ಷಮೆ ಕೇಳುತ್ತೇನೆ. ಒಂದೊಂದು ರೂಪಾಯಿಗೂ ನಾವು ಯೋಚನೆ ಮಾಡುವ ಈ ಕಾಲದಲ್ಲಿ ಲಿಸ್ಟ್ ಆಫ್ ಎಸ್ಟಿಮೇಟ್ಸ್‌ನ್ನು ನಾನು ಹೇಳಿದ್ದುದು ದೊಡ್ಡ ಅಪರಾಧವಾಯಿತು. ನಾನು ಸರ್ಕಾರೀ ಆದೇಶವನ್ನು ಕೋಟ್ ಮಾಡಿದ್ದರಿಂದ ಹೇಳುತ್ತಿದ್ದೇನೆ ಅಷ್ಟೆ. ಮಾಜಿ ಮುಖ್ಯಮಂತ್ರಿಗಳು ಕೇಳಿದಂಥ ಪ್ರಶ್ನೆಗಳಿಗೆ ನಾನು ಉತ್ತರವನ್ನು ಕೊಡುವಾಗ ನನ್ನ ಮನಸ್ಸಿನಲ್ಲಿರುವ ನೋವನ್ನು ನಾನು ಹೇಳಿಕೊಳ್ಳಬೇಕಾಗಿದೆಯೇ ಹೊರತು ಬೇರೇನೂ ಇಲ್ಲ. ಕರ್ನಾಟಕ ಕನ್‌ಸ್ಟ್ರಕ್ಷನ್ಸ್ ಕಾರ್ಪೊರೇಷನ್‌ರವರಿಗೆ ಕೆಲಸ ಒಪ್ಪಿಸಿದ್ದು 80 ಕೋಟಿ ರೂ.ಗೆ ಒಬ್ಬೊಬ್ಬ ಕಂಟ್ರಾಕ್ಟರ್‌ಗೂ ಕೊಟ್ಟಿರತಕ್ಕದ್ದು 20 ಕೋಟಿ, 8 ಕೋಟಿ, 18 ಕೋಟಿ, ಹೀಗೆ. ಇವರಿಗೆ ಅಡಿಷನಲ್ ಆಗಿ ಕೊಟ್ಟಿದ್ದರೆ ವಿತ್‌ಡ್ರಾ ಮಾಡಿ ಎಂದು ಇನ್ನೊಬ್ಬರು ಹೇಳುತ್ತಾರೆ. ನೀವೇನು ಮಾಡಬೇಕು? Rs. 180 crores worth of work has been given through the Construction Corporation to handful Contractors.

ಬೆಳಗಾಂ ಡಿವಿಜನ್‌ನ ಕಂಟ್ರಾಕ್ಟರ್ಸ್ ಅಸೋಸಿಯೇಷನ್‌ರೊಬ್ಬರು The P.W.D. Lobby, Irrigation Contractors Lobby is bigger than the Liquor Lobby ಎಂದು ಬರೆದಿದ್ದಾರೆ.

ಡಿಪಾರ್ಟ್‌ಮೆಂಟಲ್ ವರ್ಕ್ಸ್ ಬಗ್ಗೆ ಹೇಳುವುದಾದರೆ, ಈ ರಾಜ್ಯದಲ್ಲಿ ಇಲಾಖಾ ಕೆಲಸಗಳನ್ನು 8 ಕೋಟಿ, 10 ಕೋಟಿ ರೂ.ಗಳಿಗೆ ಮಾಡುವ ಅಧಿಕಾರಿಗಳು ಯಾರಾದರೂ

ಸಿಕ್ಕಿದರೆ ಅವನಿಗೆ ದೀರ್ಘದಂಡ ನಮಸ್ಕಾರ ಮಾಡುತ್ತೇನೆ. 230 ಕೋಟಿ ರೂ. ಡಿಪಾರ್ಟ್‌ಮೆಂಟ್ ವರ್ಕ್ಸ್ ಅಂದರೆ ಒಟ್ಟು 410 ಕೋಟಿ ರೂ. ಈ ಕನ್‌ಸ್ಟ್ರಕ್ಷನ್ಸ್ ಕಾರ್ಪೊರೇಷನ್‌ಗೆ ಕೊಡುವಾಗ ಷೆಡ್ಯೂಲ್ಡ್ ರೇಟ್ಸ್ ಮೇಲೆ 12 ಪರ್ಸೆಂಟ್ ಎಕ್ಸೆಸ್ ಕೊಟ್ಟಿದ್ದಾರೆ. ಅಲ್ಲಿ ಅವರು ಗಳ್ಳಾಳಿ ಕೆಲಸ ಮಾಡುತ್ತಾರೆ. ಇಲ್ಲಿ ಯಾರೋ ಒಬ್ಬ ವಿಧಾನಸೌಧ 3ನೇ ಮಹಡಿಗೆ ಬಂದು ಇಲ್ಲಿ ಮುದುಕುತೊರೆ ಹಳ್ಳದ್ದೋ, ಮಸ್ಕಿ ನಾಲಾದ್ದೋ, ಇನ್ನಾವುದೋ ಒಂದಕ್ಕೆ ಸಂಬಂಧಪಟ್ಟಂಥ ಗೌರ್ನ್‌ಮೆಂಟ್ ಆರ್ಡರ್ ಎಲ್ಲಿದೆ ಎಂದು ಅದಕ್ಕೆ ಸಂಬಂಧಪಟ್ಟ ಆಫೀಸಿಗೆ ಹೋಗಿ ಆ ಆರ್ಡರನ್ನು ಕೊಡಿ ಎಂದು ತರುತ್ತಾರೆ. ಅಲ್ಲಿ 12 ಪರ್ಸೆಂಟ್ ಎಕ್ಸೆಸ್ ಆಗಿ ಸರ್ಕಾರ ಕೊಡುತ್ತದೆ. ಆದರೆ ಅಲ್ಲಿ 5-6 ಪರ್ಸೆಂಟ್‌ಗೋ ಕೊಡುತ್ತಾನೆ. ಇದು ಒಂದು ರೀತಿಯಲ್ಲಿ ಅಂಡರ್ ಬಾಹರ್ ಆಟ ಆಡಿದಂತೆ. ಒಂದು ಕಡೆ 230 ಕೋಟಿ, ಇನ್ನೊಂದು ಕಡೆ 180 ಕೋಟಿ ರೂ. ಇದನ್ನು ನಿಲ್ಲಿಸಿ ಎಂದು ನಾನು ಹೇಳಿ ತಪ್ಪು ಮಾಡಿದ್ದೇನೆ. ನಾನು ಈ ರಾಜ್ಯದ ಜನತೆಗೆ ದ್ರೋಹ ಮಾಡಿದ್ದೇನೆ. ಅದಕ್ಕೆ ರಾಜ್ಯದ ಜನತೆ ಶಿಕ್ಷೆಯನ್ನೂ ಕೊಟ್ಟಿದ್ದಾರೆ. ಏಕೆಂದರೆ ಇದನ್ನು ನಾನು ಡಿಸೆಂಬರ್‌ನಲ್ಲಿ ನಿಲ್ಲಿಸಿದೆ. ಇದರ ಬಗ್ಗೆ ದೊಡ್ಡ ಪ್ರಚಾರವೇ ನಡೆಯಿತು. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದರು, ನೀವು ಇಲ್ಲಿಗೆ ಸೂಟು ಹಾಕಿಕೊಂಡು ಬನ್ನಿ ಎಂದು. ಇಂಡಸ್ಟ್ರಿಯಲಿಸ್ಟ್ ಕರೆದುಕೊಂಡು ಬರುವುದಕ್ಕೋ, ಇನ್ನೊಂದಕ್ಕೋ ನಾನು ದಾವೂಸ್‌ಗೆ ಹೋದುದಕ್ಕೆ ಇವನು ಯಾರೋ ಕಲ್ಲಿನ ಮಗನೋ, ಮಣ್ಣಿನ ಮಗನೋ, ಇವನಿಗೆ ನೀರಾವರಿ ಬಗ್ಗೆ ಎಲ್ಲಿ ಅನುಭವ ಇದೆ, ಇವನಿಗೆ ನೀರಾವರಿ ಬಗ್ಗೆ ಯೋಚನೆಯಾದರೂ ಇದೆಯೇ ಎಂದು ಪ್ರಚಾರ ಶುರುವಾಯಿತು. ಇನ್ನೂ ಮುಂದೆ ಹೋಗಿ ಹೇಳುವುದಾದರೆ, ಇವನು ಸ್ವಿಸ್ ಬ್ಯಾಂಕ್‌ನಲ್ಲಿ ಹಣ ಇಟ್ಟಿದ್ದಾನೆಂದು ಹೇಳಿದರು. ಅಂದರೆ ನಾನು ದಾವೂಸ್‌ಗೆ ಹೋದುದು ಸ್ವಿಸ್ ಬ್ಯಾಂಕ್‌ನಲ್ಲಿ ಹಣವನ್ನು ಇಡುವುದಕ್ಕೆ? ಇದು ಮುಂದೆ ಪೇಪರ್‌ನಲ್ಲಿ ಬರುತ್ತದೆ. ನನ್ನ ಈ ರಾಜಕೀಯ ಜೀವನದಲ್ಲಿ ಇಂಥಾದ್ದನ್ನೆಲ್ಲಾ ಎದುರಿಸಿದ್ದೇನೆ. ಏಕೆಂದರೆ ಡೆಲ್ಲಿಯಲ್ಲಿ 3 ಕಾಸಿನದೋ, 6 ಕಾಸಿನದೋ ಪತ್ರಿಕೆಯಲ್ಲಿ ಬರೆದಿರುವುದನ್ನು ನಾನು ನೋಡಿದೆ. ಇದರ ಬಗ್ಗೆ ಹೆಚ್ಚು ಹೇಳುವುದಕ್ಕೆ ನಾನು ಹೋಗುವುದಿಲ್ಲ, ನೆರೆ ರಾಜ್ಯದ ಮುಖ್ಯಮಂತ್ರಿಯ ಬಗ್ಗೆ ಹೇಳಿದಾಗ ಅದು ಏನಾಯಿತು ಎಂಬುದು ತಮಗೆ ಗೊತ್ತಿದೆ. ಅದರ ಬಗ್ಗೆ ಈಗ ಚರ್ಚೆಬೇಡ.

ಮಾನ್ಯ ಅಧ್ಯಕ್ಷರೆ, ಮೆಟೀರಿಯಲ್ಸ್‌ನ್ನು ಪರ್ಚೇಸ್ ಮಾಡಬೇಕಾದರೆ ನನಗೆ ಜೀವ ಹೋಯಿತು. ಮಾನ್ಯ ನಂಜೇಗೌಡರೂ ಕೂಡ ಹಿಂದೆ ನೀರಾವರಿ ಖಾತೆ ಮಂತ್ರಿಗಳಾಗಿದ್ದವರು. The Public Accounts Committee which gave the report in 1982 before we came to power. ಬೇರೆ ಬೇರೆ ಡಿವಿಜನ್‌ಗಳಲ್ಲಿ ಸುಮಾರು 10 ಕೋಟಿ ರೂ.ಗಳಷ್ಟು ಬೆಲೆ ಬಾಳುವ ಮೆಟೀರಿಯಲ್ಸ್ ಅನುಪಯುಕ್ತ ಹಾಗೂ ಅನಪೇಕ್ಷಿತವಾದುದು ಬಿದ್ದಿದೆ. ಒಂದು ಡಿವಿಜನ್‌ನಲ್ಲಿ 9.37 ಕೋಟಿ ರೂ. ನ ಮೆಟೀರಿಯಲ್ಸ್‌ನ್ನು ಪರ್ಚೇಸ್ ಮಾಡಿದ್ದಾರೆ. ನಾನು ಇಡೀ ರಾಜ್ಯದಲ್ಲಿ ಎಲ್ಲಾ ಕಡೆಯಲ್ಲೂ ಎಷ್ಟು ತಪಾಸಣೆ ಎಂದು ಮಾಡಿಸಲಿ ನಾನು. ಅವರು ಹೇಳಿದ್ದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. In only one Division, in 4 years Rs 9.37 crores worth of material is purchased. ಬುಕ್‌ನಲ್ಲಿ ಬರೆದುಕೊಂಡಿದ್ದಾನೆ. ನಮ್ಮ ಅಧಿಕಾರಿ ಅಲ್ಲಿಗೆ ಹೋದಾಗ ಅಲ್ಲಿ ಯಾವ ಮೆಟೀರಿಯಲ್ಸ್ ಕೂಡ ಇಲ್ಲ, ಪಾಪ್ಯುಲರ್ ಪ್ರೋಗ್ರಾಂ ಎಂದು ತಾವು ಹೇಳಿದಿರಿ. ನನಗೂ ಕೂಡ ಈ ಪಾಪ್ಯುಲರ್ ಪ್ರೋಗ್ರಾಂ ಮಾಡಬೇಕೆಂಬ ಬಗ್ಗೆ ಹುಚ್ಚು ಹಿಡಿದಿದೆ. ಈ ರೀತಿ ಇರುವುದನ್ನು ಬಿಟ್ಟುಕೊಂಡು ಬರಬೇಕೋ, ಬಿಡಬೇಕೋ ನೋಡೋಣ.

1.30 ಪಿ.ಎಂ

ಸ್ವಾಮಿ, ನಾವು ಮೆಟೀರಿಯಲ್ ಪರ್ಚೇಸ್ ಮಾಡಿ ಯಾವ ರೀತಿ ನಿರ್ಣಯ ಮಾಡಿದ್ದೇವೆ ಯಾವ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ರಿಪೋರ್ಟ್ ಕೊಟ್ಟರು ಹತ್ತು ಕೋಟಿ ರೂಪಾಯಿ ರಾಜ್ಯದಲ್ಲಿ ಅನುಪಯುಕ್ತ ಮೆಟೀರಿಯಲ್ ಇದೆ ಎಂದು, ಆ ರಿಪೋರ್ಟಿನ ಹಿನ್ನೆಲೆಯಲ್ಲಿ ಒಂದು ನಿರ್ಣಯ ಮಾಡಿದೆ. ಹದಿನೈದು ಸಾವಿರ ರೂಪಾಯಿಗಳಿಗಿಂತ ಹೆಚ್ಚು ಯಾವುದೇ ಡಿವಿಷನ್‌ನಲ್ಲಿ ಎಕ್ಸಿಕ್ಯೂಟಿವ್ ಇಂಜಿನಿಯರ್‌ರವರು ಮೆಟೀರಿಯಲ್ ಪರ್ಚೇಸ್ ಮಾಡಕೂಡದು, ಹಾಗೆ ಮಾಡಬೇಕಾದರೆ ಸರ್ಕಲ್ ಎಸ್.ಇ. ಏನಿದ್ದಾನೆ ಅವನು ಚೇರ್ಮನ್ ಇರಬೇಕು, ಅಲ್ಲಿರತಕ್ಕ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳೆಲ್ಲಾ ಮೆಂಬರ್ಸ್ ಇರಬೇಕು. ಯಾವುದೇ ಸಂದರ್ಭದಲ್ಲಿ ಹದಿನೈದು ಸಾವಿರ ರೂಪಾಯಿಗಳಿಗಿಂತ ಹೆಚ್ಚು ಮೆಟೀರಿಯಲ್ ಪರ್ಚೇಸ್ ಮಾಡಬಾರದು. ಒಂದು ಬ್ಯಾಟರಿ ತೆಗೆದುಕೊಳ್ಳುವುದು, ಅದು ಟೆಂಪೋಗೆ ಅಥವಾ ಕಾರಿಗೆ, ಆಗಬಹುದು. ಅದು ಬಿಟ್ಟರೆ if it exceeds Rs. 15,000/-, he must inform the government. That is the government order. It has been given a go-by.

ಪಿ.ಡಬ್ಲ್ಯುಡಿ ಷೆಡ್ಯೂಲ್ ರೇಟ್ಸ್ ಹೇಗೆ ರಾಜ್ಯದ ದುರಂತ ಎಂದು ಕರೆಯಬೇಕಾಗುತ್ತದೆ. In the schedule rates up to 1989-90, excavation in all kinds of soil, soft rock including bearing out storm water, we used to ask for the rates from the contractors. That was deleted. What happened in turn? ನಾನು ರಾಜೀನಾಮೆ ಕೊಟ್ಟದ್ದು ಮೂರನೇ ಸಾರಿ 1989ರಲ್ಲಿ ಒಂದೇ ಒಂದು ಹೇಳುತ್ತೇನೆ. ಎಲ್ಲಾ ಹೇಳುತ್ತಾ ಹೋದರೆ ಸಮಯ ಬಹಳ ಬೇಕಾಗುತ್ತದೆ. ತುಮಕೂರಿಗೆ 40,000 ನೀರು ಬರುವುದು ತಪ್ಪಿಸಿದೆ ನೋಡಿ ನಾನು. ವೈ ಅಲೈನ್‌ಮೆಂಟ್ ಅಪ್ರೂವ್ ಮಾಡಿಸಿಕೊಂಡು ಕಪ್ಪು ಬಾವುಟ ಹಿಡಿಸಿಕೊಂಡ ದೇವೇಗೌಡ. ಎರಡು ವರ್ಷ ನೆನಗುದಿಗೆ ಬಿದ್ದ ಟನಲ್ ವರ್ಕ್ಸ್ ಇನ್ನು ಕ್ಲಿಯರ್ ಮಾಡಿ ಜ್ಯುಡಿಷಿಯಲ್ ಎನ್‌ಕ್ವೈರಿಗೆ ಆರ್ಡರ್ ಮಾಡಿಸಿದ ದೇವೇಗೌಡ, ಅವನು ಪಾಪ ಸತ್ತು ಸರ್ಗದಲ್ಲಿದ್ದಾನೆ, ನಾನು ತುಮಕೂರು ಜಿಲ್ಲೆಗೆ ಅನ್ಯಾಯ ಮಾಡಿದ್ದೇನೆಯೇ? Sir, in one case Rs. 1 crore 91 lakhs is given for dewatering. Rs. 1.91 crores, for Rs. 40 lakhs, tunnel work. The estimate according to the Public Accounts Committee is Rs. 1.21 crores. But, here is a case where in for Rs. 1.91 crore, was given for dewatering ಹೊಸ ಸಿಸ್ಟಮ್‌ನಲ್ಲಿ ಪಂಪುಗಳ ಎನರ್ಜಿ ಲೆಕ್ಕ ಹಿಡಿದು ಕೊಡುವುದು. ಅದು ಡೀಸೆಲ್ ಆಗಬಹುದು, ಕರೆಂಟ್ ಆದರೂ ಆಗಬಹುದು. I am grateful to you.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಈಗ ಊಟಕ್ಕೆ ಹೋಗುವುದು ಉಂಟೋ ಇಲ್ಲವೋ ಎಂಬುದು ಒಂದು ಪ್ರಶ್ನೆ. ಅದಕ್ಕೆ ಏತಕ್ಕೆ ಇವರೆಲ್ಲಾ ಕೂಗಿಕೊಳ್ಳುತ್ತಿದ್ದಾರೆ. ಒಳ್ಳೆಯ ತಮಾಷೆ ಆಯಿತಲ್ಲಾ, ಇವರು ಏನಿದು, ಇಷ್ಟು ಸ್ವಾಮಿನಿಷ್ಠೆಯಿಂದ ಹೀಗೆ ಕೂಗಿಕೊಂಡರೆ ಪರಿಸ್ಥಿತಿ ಹೇಗೆ, ಬಹಳ ಕಷ್ಟ. ನಾವು ಮನುಷ್ಯರೋ ಅಥವಾ ಮರಗಳೋ, ಈ ತರಹ ಕೂಗಿಕೊಂಡರೆ?

ಶ್ರೀ ಕೃಷ್ಣಮೂರ್ತಿ : ವಾಟಾಳ್ ನಾಗರಾಜ್‌ರವರು ಶಿವಪೂಜೆಯಲ್ಲಿ ಕರಡಿ ಬಿಟ್ಟ ಹಾಗೆ ಮಧ್ಯೆ ಪ್ರವೇಶ ಮಾಡುತ್ತಾರೆ. ಬಹಳ ಗಂಭೀರವಾಗಿ ಚರ್ಚೆಯಾಗುತ್ತಿದೆ, ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಏಕೆ ಸೋಮಣ್ಣ, ಏನಾಯಿತು ನಿಮಗೆ? ಇವರೆಲ್ಲಾ ಉಪವಾಸ ಇರುವ ಸನ್ಯಾಸಿಗಳು ಇದ್ದ ಹಾಗೆ ಮಾತನಾಡುತ್ತಿದ್ದಾರಲ್ಲಾ. ಮಾನ್ಯ ಮುಖ್ಯ ಮಂತ್ರಿಗಳು ಸುದೀರ್ಘವಾಗಿ ಉತ್ತರ ಕೊಡುತ್ತಿದ್ದಾರೆ. ನಾವೆಲ್ಲಾ ಬಹಳ ಸಂತೋಷದಿಂದ ಕೇಳುತ್ತಿದ್ದೇವೆ. ಉತ್ತರದ ಬಗ್ಗೆ ನನ್ನದೇನೂ ತಕರಾರು ಇಲ್ಲ.

ಅಧ್ಯಕ್ಷರು : ಅವರು ಏನು ತೊಂದರೆ ಮಾಡಿದರು ನಿಮಗೆ?

ಶ್ರೀ ವಾಟಾಳ್ ನಾಗರಾಜ್ : ನಾನೇನು ತೊಂದರೆ ಮಾಡಿದೆ ಎಂಬುದು ಅರ್ಥವಾಗಲಿಲ್ಲ.

ಅಧ್ಯಕ್ಷರು : ಕೃಷ್ಣಮೂರ್ತಿಯವರೇ, ಎಲ್ಲರೂ ಬೆಳಿಗ್ಗೆ ಒಂಭತ್ತೂವರೆಗೆ ಬಂದಿದ್ದಾರೆ. ಮುಖ್ಯಮಂತ್ರಿಗಳು ಸುದೀರ್ಘವಾಗಿ ಉತ್ತರ ಹೇಳುತ್ತಿದ್ದಾರೆ. ನಾಗರಾಜ್ ಅವರು ಊಟಕ್ಕೆ ಹೋಗಲು ಕಾರ್ಯಕ್ರಮ ಇದೆಯೇ ಎಂದರೆ ಅದಕ್ಕೇತಕ್ಕೆ ಇಷ್ಟೊಂದು ಗಲಾಟೆ? ನಾವು ಸಭಾನಾಯಕರನ್ನು ಕೇಳುತ್ತೇನೆ. ಈಗಲೇ ಮುಗಿಸೋಣ ಎಂದರೆ ಆಯಿತು. ಇಲ್ಲ ಊಟಕ್ಕೆ ಹೋಗಿ ಮತ್ತೆ ಬರೋಣ ಎಂದರೂ ಸರಿಯೇ. ಅವರೇನಾದರೂ ಮುಖ್ಯಮಂತ್ರಿಗಳು ಉತ್ತರ ಹೇಳಬಾರದೆಂದು ಹೇಳಿದ್ದಾರೆಯೇ? ಆಮೇಲೂ ಒಳ್ಳೆಯ ಉತ್ತರ ಸಿಗುತ್ತದೆ. ಈಗ ನಿಲ್ಲಿಸಿದರೆ ಆಮೇಲೆ ಮುಖ್ಯಮಂತ್ರಿಗಳು ಒಳ್ಳೆಯ ಉತ್ತರ ಹೇಳುವುದಿಲ್ಲವೇ? ಈಗ ಊಟ ಮುಗಿಸಿ ಬರೋಣ. ಸಭೆಯನ್ನು ಈಗ ಒಂದು ಗಂಟೆ ಕಾಲ ಮೂಂದೂಡಲಾಗಿದೆ.

(ಸಭೆಯು ಮಧ್ಯಾಹ್ನ 1.35ಕ್ಕೆ ಮುಂದೂಡಲ್ಪಟ್ಟು ಪುನಃ ಒಂದು ಗಂಟೆಯ ತರುವಾಯ ಸೇರುವುದಾಗಿ ನಿಶ್ಚಯಿಸಲಾಯಿತು)

(ಸಭೆಯು 3.06ಕ್ಕೆ ಪ್ರಾರಂಭ ಆಯಿತು, ಮಾನ್ಯ ಉಪಾಧ್ಯಕ್ಷರಾದ ಶ್ರೀ ಎಂ.ಎಸ್. ಪಾಟೀಲ್ ಅವರು ಅಧ್ಯಕ್ಷ ಪೀಠದಲ್ಲಿದ್ದರು)

ಶ್ರೀ ಹೆಚ್.ಡಿ. ದೇವೇಗೌಡ (ಮಾನ್ಯ ಮುಖ್ಯಮಂತ್ರಿಗಳು) : ಸನ್ಮಾನ್ಯ ಉಪಾಧ್ಯಕ್ಷರೇ, ಒಂದು ವಿವರಣೆಯನ್ನು ಕೊಡುವ ಹಂತದಲ್ಲಿ ಸಭೆಯು ಮುಂದೂಡಲ್ಪಟ್ಟಿತು. ಅದರಿಂದ ಕೊಡಲಾಗಲಿಲ್ಲ, ಎಲ್ಲಿ ಒಂದು ಕೋಟಿ 91 ಲಕ್ಷ ಡೀವಾಟರಿಂಗ್ ಕೊಟ್ಟಿದ್ದಾರೆಂಬ ಪ್ರಶ್ನೆ ಬಂತು. 16ನೆಯ ಕಿಲೋ ಮೀಟರ್‌ನಲ್ಲಿ 58 ಲಕ್ಷ ರೂಪಾಯಿ, 17ನೆಯ ಕಿಲೋ ಮೀಟರ್‌ನಲ್ಲಿ 72 ಲಕ್ಷ ರೂಪಾಯಿ, 18ನೆಯ ಕಿಲೋ ಮೀಟರ್‌ನಲ್ಲಿ 38 ಲಕ್ಷ ರೂಪಾಯಿ, 19ನೇ ಕಿಲೋ ಮೀಟರ್‌ನಲ್ಲಿ 13 ಲಕ್ಷ ರೂಪಾಯಿ, 20ನೆಯ ಕಿಲೋ ಮೀಟರ್‌ನಲ್ಲಿ 10 ಲಕ್ಷ ರೂಪಾಯಿ Y ಅಲೈನ್‌ಮೆಂಟಿನಲ್ಲಿ ಕೊಟ್ಟಿರತಕ್ಕದ್ದು. ಎಸ್.ವಿ. ಇಂಜನಿಯರಿಂಗ್ ಕನಸ್ಟ್ರಕ್ಷನ್ ಜೆಲ್ಲೂರ್, ವೆಲ್ಲೂರ್ ಇರಬೇಕು. "Lowest comparative of others. Hence it may be approved."

ಅಪ್ರೂವ್ಡ್ ಎಂದು ಬರೆದುಕೊಂಡಿದ್ದಾರೆ. ಕೊಟೇಷನ್ಸ್ ಅನ್ನು ಅದರಲ್ಲಿ ತೆಗೆದುಕೊಂಡಿದ್ದಾರೆ. ಡೀಸೆಲ್ ಇಂಜಿನ್ ಸಪ್ಲೈಗೆ. ಈ ಸದನದ ಗಮನಕ್ಕೆ ತರಬೇಕಾಗುತ್ತದೆ, ಹೇಗೆ ಒಬ್ಬ ಮನುಷ್ಯನಿಂದ ಮ್ಯಾನಿಪ್ಯುಲೇಟೀವ್ ಕೊಟೇಷನ್ ಎಂದು ಹೇಳಿ ಮೂರು ಕೊಟೇಷನ್ ಇದೆ, ಜಾಗ ಹೇಗೆ ಬಿಟ್ಟಿದ್ದಾರೆ, ರುಜು ಹೇಗೆ ಮಾಡಿದ್ದಾರೆ, ಯಾವ ಇಂಕಿನಲ್ಲಿ ರುಜು ಮಾಡಿದ್ದಾರೆ ಇದವನ್ನು ನೋಡಬಹುದು. ಎನ್‌ಕ್ವೈರಿ ಮಾಡೋಣ, ಆ ಹಂತಕ್ಕೆ ಆಮೇಲೆ ಬರುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ಯಾವ ಪೀರಿಯಡ್‌ನಲ್ಲಿ ಎಂದು ಹೇಳಿ.

ಶ್ರೀ ಎಚ್.ಡಿ. ದೇವೇಗೌಡ : ಹೇಳುತ್ತೇನೆ ಯಾವ ಪೀರಿಯಡ್ ಎಂದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ಇಷ್ಟು ಚುಚ್ಚಿ ಚುಚ್ಚಿ ಮಾತನಾಡಬೇಕಾದರೆ ಯಾವುದಾದರೂ ಒಂದು ಪೀರಿಯಡ್ ಇರಬೇಕಲ್ಲಾ! ನೋಡೋಣ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ನಿಮ್ಮದೇ ಸರ್ಕಾರ ಇರಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸರ್ಕಾರ ಎಂದರೆ ಕೆಲಸ ಮಾಡುವುದಕ್ಕೇ ಇರುವುದು. ತಪ್ಪು ಮಾಡಬಹುದು. ತಪ್ಪಿದಲ್ಲಿ ಒಪ್ಪಿಕೊಳ್ಳೋಣ, ಸರಿ ಇದ್ದಲ್ಲಿ ನೋಡೋಣ.

ಶ್ರೀ ಎಚ್.ಡಿ. ದೇವೇಗೌಡ : ಅನೇಕ ವಿಷಯಗಳು ಮುಖ್ಯಮಂತ್ರಿಗಳ ಗಮನಕ್ಕೆ ಬರುವುದಿಲ್ಲ. ನಾನು ಅದನ್ನೂ ಒಪ್ಪಿಕೊಳ್ಳುತ್ತೇನೆ. ಪ್ರತಿ ಒಂದು ವಿಚಾರವನ್ನೂ ಮುಖ್ಯಮಂತ್ರಿಗಳು ನೋಡಿದರೆ ಡೆಪ್ಯುಟಿ ಚೀಫ್ ಮಿನಿಸ್ಟರ್ ಏನು ಮಾಡಬೇಕು? ಇರಿಗೇಷನ್ ಮಿನಿಸ್ಟರ್ ಏನು ಮಾಡಬೇಕು? ಅನೇಕ ವಿಷಯ ಅವರ ಗಮನಕ್ಕೆ ಬಂದಿದೆ ಎಂತಲೂ ನಾನು ವಾದ ಮಾಡಲಿಕ್ಕೆ ಹೋಗುವವನಲ್ಲ. ಯಾವನೇ ಮುಖ್ಯಮಂತ್ರಿ ಆಗಿದ್ದರೂ ಸಹ It is practically impossible. ಎಲ್ಲವೂ ಅವರ ಗಮನಕ್ಕೆ ಬಂದಿದೆ ಎಂದು ನಾನು ಹೇಳುವುದಕ್ಕೆ ಸಿದ್ಧ ಇಲ್ಲ. ಏನು ನಡೆದಿದೆ ಎಂಬುದನ್ನು ನಾನು ಹೇಳುತ್ತಿದ್ದೇನೆ ಅಷ್ಟೇ. ಇದು ನಡೆದಿರುವುದು, ಪೇಮೆಂಟ್ ಆಗಿರುವುದು, ನಮ್ಮ ಸರ್ಕಾರದಲ್ಲಿ ಅಲ್ಲ, ಹಿಂದೆ ಒಬ್ಬ ಉಪ ಮುಖ್ಯಮಂತ್ರಿಗಳು ಇದ್ದ ಆ ಕಾಲದಲ್ಲಿ ಆಯಿತು.

ಸನ್ಮಾನ್ಯ ಉಪಾಧ್ಯಕ್ಷರೇ, ಹಿಂದೆ ನಾವೇ ಮಾಡಿದ್ದೇವೆ ಎಂದು ನಾನು ವಾದ ಮಾಡಲಿಕ್ಕೆ ಹೋಗುವುದಿಲ್ಲ. ಹಿಂದಿನಿಂದ ನಡೆದುಕೊಂಡು ಬಂದಿರತಕ್ಕದ್ದು. ಅದರಲ್ಲಿ ನಾವು ಕೆಲವು ಮಾರ್ಪಾಡು ಮಾಡಿರಬಹುದು. ಮೇಜರ್ ಇರಿಗೇಷನ್ ಕಂಟ್ರೋಲ್ ಬೋರ್ಡ್ ನನ್ನ ಕಾಲದಲ್ಲಿ ಬಂದಿದ್ದು ಅಲ್ಲ. 1960ರಲ್ಲಿ ತಂದಂತಹದು. That is given a go-by. ನೀವು 1994ನೇ ಕೊನೆಯ ಹಂತದಲ್ಲಿ ಒಂದು ಆರ್ಡರ್ ಮಾಡಿದ್ದೀರಿ. ಮೂರು ತಿಂಗಳು ಇತ್ತು, ಅದು ಅನುಷ್ಠಾನಕ್ಕೆ ಬರಲು ಆಗಲಿಲ್ಲ. ಕಾರಣ ಏನಾದರೂ ಇರಲಿ, ಯಾರು ಒಪ್ಪಿದರು ಎಂಬ ಬಗ್ಗೆ ವಿವರಕ್ಕೆ ನಾನು ಹೋಗುವುದಿಲ್ಲ. ಟೆಕ್ನಿಕಲ್ ಕಮಿಟೀಸ್ ಹೊರಗಡೆಯಿಂದ ನಾವು ಇಡುತ್ತಿದ್ದೆವು. ಮೊದಲಿನಿಂದ ನಡೆದುಕೊಂಡು ಬಂದಿದ್ದು. ನಾವೇನೂ ಹೊಸದಾಗಿ ಮಾಡಿದುದ್ದು ಅಲ್ಲ. ವಾಟರ್ ಪ್ಲಾನಿಂಗ್ ಮತ್ತೊಂದು ಪ್ರತಿಯೊಂದು ಹಂತದಲ್ಲಿ ನೋಡಲಿಕ್ಕೆ ಟೆಕ್ನಿಕಲ್ ಕಮಿಟೀಸ್ ಹಾಗೂ ಮೇಜರ್ ಇರಿಗೇಷನ್ ಕಂಟ್ರೋಲ್ ಬೋರ್ಡ್ ಇಟ್ಟುಕೊಂಡು ಬಂದಿದ್ದೆವು. All those things have given a go-by. Non-official members. ಮತ್ತೊಂದು ಟೆಕ್ನೀಷಿಯನ್ಸ್ ಎಲ್ಲಾ ತೆಗೆದು ಹಾಕಿದರು. ಇದೆಲ್ಲಾ ಹೇಗಾಗುತ್ತದೆ ಎನ್ನುವುದಕ್ಕೆ ಹೇಳುತ್ತೇನೆ. 1990ರಿಂದೀಚೆಗೆ ಈ ಭೂಮಿಗೆ ಎಲ್ಲವೂ ಹೇಗೆ ತಯಾರಾಯಿತೆಂದು ಹೇಳುತ್ತೇನೆ. ವಾಟರ್ ಪ್ಲಾನಿಂಗ್‌ನ್ನು ಟೆಕ್ನಿಕಲ್ ಕಮಿಟಿಯಲ್ಲಿ ಸಾಮಾನ್ಯವಾಗಿ ಸ್ಕ್ರೂಟಿನಿ ಮಾಡುತ್ತಿದ್ದರು. ನಾನು ಈ ಮಾತನ್ನು ಹೇಳುವಾಗ ಸದನದ ಎಲ್ಲಾ ಸದಸ್ಯರೂ ಒಪ್ಪಿಕೊಳ್ಳುತ್ತಾರೆಂದು ಭಾವಿಸುತ್ತೇನೆ. ಹಣವನ್ನು ಖರ್ಚು ಮಾಡುವಾಗ ಟೆಕ್ನಿಕಲಿ ಎಕನಾಮಿಕಲಿ, ಎರಡೂ ಫೀಸಿಬಿಲಿಟಿ ಇದ್ದಾಗ ಮಾತ್ರ ನಾವು ಒಂದು ಪ್ರಾಜೆಕ್ಟ್‌ಗೆ ಮಂಜೂರು ಮಾಡಬೇಕೆಂದು ನಮ್ಮದೇ ಆದ ನಿಯಮಗಳನ್ನು ರೂಪಿಸಿಕೊಂಡಿದ್ದೇವೆ. ವೇದಾ ರೀಸ್‌ನಲ್ಲಿ ವಾಣಿವಿಲಾಸ ಸಾಗರ 12-15 ವರ್ಷಗಳಿಗೊಂದು ಸಾರಿಯೂ ನೀರು ತುಂಬುವುದಿಲ್ಲ. ಅಂಥದರಲ್ಲ, ಆ ಸೀರಿಸ್‌ನಲ್ಲಿ ಎಂಟು ಏತ ನೀರಾವರಿ ಯೋಜನೆಗಳನ್ನು ಮಂಜೂರು ಮಾಡಿದ್ದಾರೆ. ಇದರ ಬಗೆಗಿರುವ ಮಾಹಿತಿಯನ್ನು ನಾನು ಇಟ್ಟುಕೊಂಡಿದ್ದೇನೆ. ಪಾಪ, ಲಕ್ಷ್ಮಯ್ಯನವರ ಕ್ಷೇತ್ರದಲ್ಲಿ ಒಂದೂವರೆ ಸಾವಿರದಷ್ಟು

ಒಕ್ಕಲಿಗರಿದ್ದಾರೆ. ಅವರು ಅಲ್ಲಿಂದ ಗೆದ್ದು ಬರುತ್ತಾರೆ, ಅವರು ಮೂರು ಸಲ ಗೆದ್ದು ಬಂದರು. ನಾನು ನೀರಾವರಿ ಮಂತ್ರಿಯಾಗಿದ್ದಾಗ ಬಹಳ ಪ್ರಯತ್ನ ಮಾಡಿದರು, ನನ್ನ ಮೇಲೆ ಬಹಳ ಒತ್ತಡ ತಂದರು. ನಾನು ಹೇಳಿದೆ : "There is a ban." ಸನ್ಮಾನ್ಯ ಸಿದ್ಧವನಹಳ್ಳಿ ನಿಜಲಿಂಗಪ್ಪನವರಿದ್ದಾಗ ಯಗಚಿಯಿಂದ ಅರಸೀಕೆರೆವರೆಗೆ ಆ ನೀರನ್ನು ತೆಗೆದುಕೊಂಡು ಬಂದು ಆ ಕಟಿಂಗ್‌ನಲ್ಲಿ ಅಂದರೆ, ವೇದಾ ಸೀರಿಸ್‌ವರೆಗೆ ನೀರನ್ನು ತೆಗೆದುಕೊಂಡು ಬಂದರು. ನೀವೇ ಮಾಡಿದದ್ದು.

I am not going to say everything was done to you. You have got a Dy. ChiefMinister,whowasanirrigationMinisterಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದಂಥ ಕಾಲದಲ್ಲಿ ಅವರು ಯಾರೋ ಒಬ್ಬರು ನೀರಾವರಿ ಮಂತ್ರಿಗಳನ್ನು ಇಟ್ಟುಕೊಂಡಿದ್ದರು. I am giving you the dates. ಬಾಣಪುರ ಸಮೀಪದಲ್ಲಿರುವ ಏತ ನೀರಾವರಿ ಹಂತದಲ್ಲಿದೆ, ಕಬ್ಬಳ್ಳಿ ಸಮೀಪದಲ್ಲಿರುವ ಏತ ನೀರಾವರಿ ಯೋಜನೆ, ಮಾಚೇನಹಳ್ಳಿ ಸಮೀಪದಲ್ಲಿ ಏತ ನೀರಾವರಿ ಯೋಜನೆ, ನಿಡಘಟ್ಟ ಸಮೀಪದ ಟಿ.ಪಿ. ಕಾವಲ್ (ಕಡೂರಿನ ಹತ್ತಿರ)ನಲ್ಲಿ ಏತ ನೀರಾವರಿ ಯೋಜನೆ ಇದೆ. ಯಾವ ಕಣಿವೆಯಲ್ಲಿ ನೀರು ಇಲ್ಲವೆಂದು ಬ್ಯಾನ್ ಆರ್ಡರ್ ಮಾಡಿದ್ದರೋ, ಆ ಕಣಿವೆಯಲ್ಲೇ ಇವೊತ್ತು ಏತ ನೀರಾವರಿ ಯೋಜನೆಗಳನ್ನು ಮಂಜೂರು ಮಾಡಿದ್ದಾರೆ. ಯಾವಾಗ ಟೆಕ್ನಿಕಲ್ ಕಮಿಟಿ ಮತ್ತು ಮೇಜರ್ ಇರಿಗೇಷನ್ ಕಂಟ್ರೋಲ್ ಬೋರ್ಡ್‌ನ್ನು ತೆಗೆದುಹಾಕಿದರೋ, ನಿಮ್ಮ ಉಪ ಮುಖ್ಯಮಂತ್ರಿಗಳು ಬರೆಯುತ್ತಾರೆ. "Withdraw that work even if the Chief Minister has given instructions."

ನಿರ್ಮಾಣ ನಿಗಮದ ಬಗ್ಗೆ ನೀವು ಹೇಳಿದಿರಿ. ಆದರೆ ಇವರು ಏನು ಹೇಳಿದರು, If the work is not entrusted to a particular gentleman, withdraw that Work back. How the administrative machinery has been mishandled!

ಟೆಕ್ನಿಕಲ್ ಕಮಿಟಿ ಇಲ್ಲವೇ? ಆ ಚೀಫ್ ಇಂಜಿನಿಯರ ಮತ್ತು ಅಲ್ಲೊಬ್ಬ ಸೆಕ್ರೆಟರಿ, ಎಂಟು ಏತ ನೀರಾವರಿ ಯೋಜನೆಗಳಿಗೆ ಮಂಜೂರಾತಿ ಮಾಡಿದ್ದಾರಲ್ಲಾ, when there is a total ban? ಹೇಗೆ ಅನಾಹುತಗಳಾಗುತ್ತದೆಂಬುದನ್ನು ನೋಡಬೇಕು. ಏಕೆಂದರೆ, ದುಡ್ಡನ್ನು ಒಂದು ಕಡೆ ಖರ್ಚು ಮಾಡಬೇಕು, ಮತ್ತೊಂದು ಕಡೆ ಯಾವ ಕೆಲಸ ಅಭಿವೃದ್ಧಿಯಾಗಬೇಕೋ ಅದಕ್ಕೆ ಖರ್ಚು ಮಾಡುವ ಹಾಗಿಲ್ಲ ಬದಲಾಗಿ ಅನುತ್ಪಾದಕ ಕೆಲಸಕ್ಕಾಗಿ ಖರ್ಚು ಮಾಡುತ್ತಾರೆ. ವಾಟರ್ ಪ್ಲಾನಿಂಗ್ ಇಲ್ಲವೆನ್ನುವುದರ ಬಗ್ಗೆ ಹೇಳುತ್ತೇನೆ. ನೀವೇ ವರದಿ ಮಾಡಿರುವುದು, ಇದರ ಬಗ್ಗೆ ಮುಂದೆ ಹೇಳುತ್ತೇನೆ. ಇದಕ್ಕೆ slip-shod ಮೆಥಡ್ ಎಂದು ಕರೆಯುತ್ತಿರೋ ಏನೋ, ನೀವೇ ಕರೆದುಕೊಳ್ಳಿ. ಯಗಚಿ ಯೋಜನೆಗೆ ನಾವು ಮಂಜೂರಾತಿ ಕೊಟ್ಟಿದ್ದುದು, ಇವೊತ್ತು ಚಿಕ್ಕಮಗಳೂರಿಗೆ ವಾಟರ್ ಸಪ್ಲೈ ಕರೆಸ್ಪಾಂಡಿಂಗ್ ಏರಿಯಾ ರಿಡಕ್ಷನ್ ಆಗಬೇಕಲ್ಲಾ, ಕುಡಿಯುವ ನೀರಿಗೆ ನೀವು ಆದ್ಯತೆ ಕೊಡುತ್ತೇವೆಂದು ಹೇಳಿದಿರಿ, ಆದರೆ, ಕರೆಸ್ಪಾಂಡಿಂಗ್ ರಿಡಕ್ಷನ್ ಬರಬೇಕಲ್ಲಾ, ಆದರೆ, ಮತ್ತಷ್ಟು ಹೆಚ್ಚು ಮಾಡುತ್ತಾ ಹೋಗುವುದು. ಯಾರು ಅರ್ಜಿ ಕೊಟ್ಟರೋ, ಅರ್ಜಿ ಕೊಟ್ಟಂತೆ ನೀರು ಹೋಗುವುದಿಲ್ಲ, ಯಾವ ಆಸೆಯಿಂದ ನೀರಾವರಿ ಇಲಾಖೆಗೆ ಒಬ್ಬ ಟೆಕ್ನಿಕಲ್ ಮ್ಯಾನ್ ಸೆಕ್ರೆಟರಿ ಇರಬೇಕೆಂದು ನಿರ್ಣಯ ಮಾಡಿದರೋ, ಆ ಇಲಾಖೆ ಎಷ್ಟು ಅಧೋಗತಿಗೆ ಹೋಯಿತು ಎನ್ನುವುದಕ್ಕೋಸ್ಕರ ಈ ಮಾತನ್ನು ವ್ಯಥೆಯಿಂದ ಹೇಳುತ್ತಿದ್ದೇನೆ.

I fought with all IAS officers. ಮಂಚನಬೆಲೆಯಿಂದ ಕುಡಿಯುವ ನೀರಿನ ಪೂರೈಕೆ ರಾಮನಗರಕ್ಕೆ, ಮತ್ತೊಂದು ಕಡೆಗೆ, ಮತ್ತು ಹೇಮಾವತಿಯಿಂದ ಎರಡು ಟಿಎಂಸಿ ನೀರು ಇದಕ್ಕೆ ತುಮಕೂರಿಗೆ ಬರುವ ನೀರನ್ನು ನಿಲ್ಲಿಸಲು ನಾನು ಹೊರಟಿದ್ದೇನಾ?

ಯಾರು ನಿಜವಾಗಿಯೂ ತನ್ನ ಕ್ಷೇತ್ರದ ಬಗ್ಗೆ ಕಾಳಜಿಯಿಟ್ಟುಕೊಂಡುರುತ್ತಾನೋ, ತನ್ನ ಕರ್ತವ್ಯ ನಿರ್ವಹಿಸುವುಗಾ ಹೀಗೆ ನಿರ್ವಹಿಸಬೇಕಾಗುತ್ತದೆಂಬುದರ ಬಗ್ಗೆ ಮುಂದೆ ಹೇಳುತ್ತೇನೆ. ನಾನು ಕುಣಿಗಲ್‌ಗೆ ಹೋದರೆ ಹುಚ್ಚಮಾಸ್ತಿಗೌಡರು ಕಪ್ಪು ಭಾವುಟ ಹಿಡಿದು ನಿಂತಿದ್ದರು. ಅವರು ಕಪ್ಪು ಭಾವುಟವನ್ನು ಇವೊತ್ತು ನನಗೆ ಹಿಡಿಯಲು ಹೊರಟಿದ್ದಾರೆ. ಬಸ್ಸಿನ ಮೇಲೆ ಬರೆಯಲು ಹೊರಟಿದ್ದಾರೆ. ನಾನು ನಾಳೆ ಬೆಳಿಗ್ಗೆ ತುಮಕೂರಿಗೆ ಹೋಗುತ್ತೇನೆ. ಶೆಡ್ಯೂಲ್ ರೇಟ್ ಹೇಗೆ ಪ್ರಿಪರೇಷನ್ ಡೀವಿಯೇಷನ್ ಮಾಡಿದರು ಎಂಬುದನ್ನು ಹೇಳಿದೆ. ಮೊದಲು ನಾಲ್ಕು ಕೆಟಗೆರಿ ತಂದರು, ನಂತರ ಏಳಕ್ಕೆ ಹೋದರು. ನೀವು ನಿನ್ನೆ ಮಾತನಾಡುತ್ತಾ, ಸಿದ್ಧಿಸಾಯಿಲ್ ಎಂದು ಪ್ರಸ್ತಾಪಿಸಿದಿರಿ, ಚನ್ನಬಸಪ್ಪನವರ ಹತ್ತಿರ ನಾವು-ನೀವು ಗರಡಿಯಲ್ಲಿ ತಯಾರಾಗಿದ್ದೇವೆಂದು ಹೇಳಿದಿರಿ, ಸರಿ. ನಾನು ಈ ಹೆಸರನ್ನು ಕೇಳಿಲ್ಲ. ಸಿದ್ಧಿಸಾಯಿಲ್ ಅದಕ್ಕೊಂದು ಕ್ಲಾಸಿಫಿಕೇಷನ್‌ಅವರು ಕ್ಲಾಸಿಫಿಕೇಷನ್ ಹೇಗೆ ಮಾಡುತ್ತಾರೆಂದರೆ, ಏಳು ಕೆಟಗೆರಿಗಳನ್ನು ಮಾಡಿದ್ದಾರೆ. ಇದು ಎಲ್ಲಿಯತನಕ ಹೋಗುತ್ತದೋ ಗೊತ್ತಿಲ್ಲ. ನಿಮ್ಮ ಬೆನ್ನ ಹಿಂದೆ ನಿಂತು ಯಾರೋ ಮಾಡಿದಾಗ ನಿಮಗೆ ಹೇಗೆ ಗೊತ್ತಾಗಬೇಕು? ಪ್ರತಿಯೊಂದನ್ನೂ ವಾಚ್ ಮಾಡುವುದಕ್ಕಾಗುವುದಿಲ್ಲ. ಅವೊತ್ತಿನ ರಾಜಕೀಯ ಪರಿಸ್ಥಿತಿ ಏನಿತ್ತು ಎಂದರೆ, ಆಗ ನಿಮ್ಮ ಪಕ್ಷದಲ್ಲಿ ಮಾತ್ರ ಜಗಳವಿರಲಿಲ್ಲ, ನಮ್ಮ ಪಕ್ಷದಲ್ಲೂ ಜಗಳ ಮಾಡಿಕೊಂಡಿದ್ದೆವು. ನೀವು ಮಾಡಿದಂತಹುದನ್ನು ಆಯವ್ಯಯದಿಂದ ತಿರುಚುವುದಕ್ಕೆ ಪ್ರಯತ್ನ ನಡೆದಿರಬಹುದು. I don't want to say that everything Mr. Veerappa Moily himself has done that ನಿಂದ ನಾನು ಹೇಳುವುದಕ್ಕೂ ಸಿದ್ಧನಿಲ್ಲ. ಆದರೆ, ಒಂದೊಂದಾಗಿ ಹೇಳುತ್ತಾ ಬರುತ್ತೇನೆ, ಪರ್ಚೇಸ್ ಸಿಸ್ಟಮ್ ಬಗ್ಗೆ ಹೇಳಿದ್ದೇನೆ. Measurement ಮಾಡಬೇಕಾದರೆ ಹೀಗೆ ಎಂದು ನಾನು ನಿರ್ದೇಶನ ಕೊಟ್ಟೆ. ಗೌಡರೇ, ಒಂದು ಸಿಲ್ಟ್ ತೆಗೆಯಬೇಕಾದರೆ ಪ್ರಿ ಮೆಷರ್‌ಮೆಂಟ್ ತೆಗೆದುಕೊಂಡು 'ಎಂ' ಬುಕ್‌ನಲ್ಲಿ ರೆಕಾರ್ಡ್ ಮಾಡಬೇಕು. ನಂತರ ಮೆಷರ್‌ಮೆಂಟ್ ತೆಗೆದು ಅದನ್ನು ಹೀಪ್ ಕಟ್ಟಿ, ಹೀಪ್ ಮೆಷರ್‌ಮೆಂಟ್ ತೆಗೆದುಕೊಂಡು, ಇದರಲ್ಲಿ ಯಾವುದು ಕಡಿಮೆಯಿದೆಯೋ ಅದನ್ನು ಕೊಡಬೇಕೆಂದು ಸರ್ಕಾರದ ಆದೇಶವಿದೆ. ಹತ್ತು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೆ ಒಂದೂವರೆ ಲಕ್ಷ ರೂಪಾಯಿಗಳ ಬಿಲ್! ಇಪ್ಪತ್ತು ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದರೆ ಎರಡೂವರೆ ಲಕ್ಷ, ಮೂರು ಲಕ್ಷ ರೂಪಾಯಿಗಳ ಬಿಲ್! ನೀರಾವರಿ ಇಲಾಖೆಯಲ್ಲಿ ನೀವು ಹೆಚ್ಚು ಹಣ ಖರ್ಚು ಮಾಡಿದ್ದೀರಿ, Compared to Mr. Bangarappa, you have spent more. ಅವರ ಅಂಕಿ-ಅಂಶ ಕೊಡುತ್ತೇನೆ. ಯಾರು ದೇವೇಗೌಡರ ಕಾಲದಲ್ಲಿ ಹತ್ತು ಲಕ್ಷ ರೂಪಾಯಿಗಳ ಬಿಲ್ಲಿಗೆ ತಿರುಗುತ್ತಿದ್ದರೋ, ಅವೊತ್ತು 'ನನಗೆ ಏಳು ಕೋಟಿ ರೂಪಾಯಿಗಳ ಬಿಲ್ ಬರಬೇಕು' ಎಂದು ಹೇಳುತ್ತಾನೆ ನನ್ನ ಹತ್ತಿರ ಆತ ಬಂದಿದ್ದಾಗ ನೀವು ಕಂಟ್ರಾಕ್ಟ್ ಅನ್ನು ಯಾವಾಗಿನಿಂದ ಶುರು ಮಾಡಿದಿರಿ' ಎಂದು ನಾನು ಕೇಳಿದೆ. ಆಗ ಆತ 'ಸರ್', ನಾನು 1981ರಲ್ಲೇ ಕಂಟ್ರಾಕ್ಟ್ ಶುರು ಮಾಡಿದೆ ಎಂದು ನಾನು ಆರು ವರ್ಷಗಳ ಕಾಲ ನೀರಾವರಿ ಮಂತ್ರಿಯಾಗಿದ್ದು ನಿಮಗೆ ಗೊತ್ತೇ?' ಎಂದು ಕೇಳಿದೆ. ಆಗ 'ಬಿಲ್ ಎಷ್ಟು ತೆಗೆದುಕೊಳ್ಳುತ್ತಿದ್ದಿರಿ?' ಎಂದರೆ 'ಐದು ಲಕ್ಷ, ಆರು ಲಕ್ಷ, ಎಂಟು ಲಕ್ಷ' ಎಂದರು, ಈಗ ಅವನು ಸರ್ಕಾರದ ಮೇಲೆಯೇ 7-8 ಕೋಟಿ ಬಿಡುತ್ತಾನೆ. ಹಿಂದೆ ಮೈಸೂರು ಮಹಾರಾಜರು ತಮ್ಮ ಕಾಲದಲ್ಲಿ ದೊಡ್ಡವರ ಕೆಲವರ ಮನೆಗಳಿಗೆ ಹೋಗಿ ಸಾಲ ತೆಗೆದುಕೊಂಡು ಬರುತ್ತಿದ್ದರು. ಇವರು ಆಧುನಿಕ ಮಹಾರಾಜರು ನಮ್ಮ ಮೇಲೆ 7-8 ಕೋಟಿ ರೂಪಾಯಿಗಳನ್ನು ಬಿಟ್ಟಿದ್ದಾರೆ. ಹೇಗೆ ರೆಕಾರ್ಡ್ ಆಗುತ್ತದೆ ಎನ್ನುವುದಕ್ಕೆ ಹೇಳುತ್ತೇನೆ. ಒಂದೇ ಒಂದು ಸೂಚನೆ ಕೊಟ್ಟೆ. ವೀರಪ್ಪ ಮೊಯಿಲಿಯವರೇ, ನೀವು ಅರ್ಥಮಂತ್ರಿಗಳಾಗಿದ್ದಾಗ ಬಹಳ ಬಿಗಿಯಾಗಿ ನಡೆಸಿದ್ದಿರಿ. 80 ಕೋಟಿ ರೂಪಾಯಿಗಳ ಎಲ್.ಓ.ಸಿ. ಬಿಡುಗಡೆಯಾಯಿತು.

ಏನು ಸೂಚನೆ ಕೊಟ್ಟಿನೆಂದರೆ, the Chief Engineers must be held responsible in case when they are going to make payment, if there is any wrong classification, if there is any excess measurement, if there is any bad quality of work, they will be held responsible. ಇಷ್ಟೇ ಹೇಳಿದೆ. 13 ಕೋಟಿ ರೂಪಾಯಿಗಳನ್ನು ವಾಪಸ್ ಕಳುಹಿಸುತ್ತಾರೆ.

ನಾವು ಬಿಲ್ ಪೇಮೆಂಟ್ ಮಾಡುವುದಿಲ್ಲವೆಂದು 13 ಕೋಟಿ ಹಣವನ್ನು ವಾಪಸ್ ಕಳುಹಿಸುತ್ತಾರೆ. 1994-95ನೇ ಮಾರ್ಚ್‌ನಲ್ಲಿ ನಾವು ಕೊಟ್ಟಂಥ ಹಣವನ್ನು ಬೇಡವೆಂದು ವಾಪಸ್ ಕಳುಹಿಸುತ್ತಾರೆ. ನಾವು ಖರ್ಚು ಮಾಡುವುದಿಲ್ಲ ಅದನ್ನು . ವಾಪಸ್ ತೆಗೆದುಕೊಳ್ಳಿ ಎಂದು. ಪ್ರತಿಯೊಂದಕ್ಕೂ ಸರ್ಕಾರದ ಆದೇಶಗಳಿವೆ, ಅವುಗಳನ್ನೆಲ್ಲಾ ಇಲ್ಲೇ ಇಟ್ಟುಕೊಂಡಿದ್ದೇನೆ. ಅವುಗಳನ್ನು ಓದಲು ಹೋಗುವುದಿಲ್ಲ. ಫ್ಲೈಯಿಂಗ್ ಸ್ಕ್ವಾಡ್‌ನ್ನು 1983ರಲ್ಲೇ ಜಾರಿಗೆ ತಂದೆವು. ತಾವು ಹೋದ ವರ್ಷ ನಾಲ್ಕು ರೆವಿನ್ಯೂ ಡಿವಿಜನ್‌ಗೆ ಒಂದೊಂದು ಇದನ್ನು ಮಾಡುತ್ತೇವೆಂದು ಹೇಳಿದಿರಿ. ಈಗಾಗಲೇ ಬೆಂಗಳೂರಿನಲ್ಲಿರುವುದರಲ್ಲಿ ಸಂಪೂರ್ಣವಾದ ಸಿಬ್ಬಂದಿಗಳಿಲ್ಲ. ಇನ್ನು ಮೈಸೂರು, ಗುಲ್ಬರ್ಗಾದಲ್ಲಿ ಮಾಡಿ ಅಲ್ಲಿಗೆ ಸಿಬ್ಬಂದಿಯನ್ನು ಹಾಕಿದರೆ ಯಾರು ಹೋಗುತ್ತಾರೆ. ನೀವು ಅದನ್ನು ಮಾಡುವ ಬಗ್ಗೆ ಪ್ರಯತ್ನ ಮಾಡಿರಬಹುದು. ಆದರೆ ಅಲ್ಲಿಗೆ ಯಾರೂ ಸಹ ಹೋಗಲಿಲ್ಲ. ಈ ವ್ಯವಸ್ಥೆ ಹೇಗೆ ಸಡಿಲವಾಯಿತು ಎನ್ನುವ ಬಗ್ಗೆ ಉದಾಹರಣೆಯನ್ನು ಕೊಡುತ್ತಿದ್ದೇನೆ.

ಇನ್ನು ಲೋಕಾಯುಕ್ತದ ಬಗ್ಗೆ ಹೇಳುವುದಾದರೆ, ಅಲ್ಲಿ ಒಬ್ಬರು ಮುಖ್ಯ ಇಂಜಿನಿಯರ್ ಇದ್ದರು. ಆ ಮುಖ್ಯ ಇಂಜಿನಿಯರ್ ಪೋಸ್ಟ್ ಎರಡು ಎರಡೂ ವರ್ಷಗಳಿಂದ ಡಾರ್‌ಮೆಂಟ್ ಆಗಿತ್ತು. ಎರಡು ಎಸ್.ಇ. ಪೋಸ್ಟ್ ಇತ್ತು. ಅದರಲ್ಲಿ ಒಂದನ್ನು ತೆಗೆದು ಹಾಕಿದರು. ಹಣವನ್ನು ಉಳಿಸಲು ಮಾಡಿದರೋ ಏನೋ ನನಗೆ ಗೊತ್ತಿಲ್ಲ. ಇನ್ನೊಂದು ಎಸ್.ಇ. ಹುದ್ದೆಯಲ್ಲಿ ಒಬ್ಬರು ಇದ್ದರು ಅವರು ನಿವೃತ್ತಿಯಾಗಿ ಮನೆಗೆ ಹೋದರು. ಅದನ್ನು ಸಹ ಭರ್ತಿ ಮಾಡಲಿಲ್ಲ. ಒಬ್ಬರು ಎಕ್ಸಿಕ್ಯೂಟೀವ್ ಇಂಜಿನಿಯರೇನೋ ಅಲ್ಲಿದ್ದಾರೆ. ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾರೆ ಇಡೀ ಹಿಂದೂಸ್ಥಾನದಲ್ಲಿ ಮೊದಲ ಬಾರಿಗೆ ಲೋಕಾಯುಕ್ತದ ವ್ಯವಸ್ಥೆ ಜಾರಿಗೆ ತಂದಿದ್ದೇವೆ, ಬ್ರಷ್ಟಾಚಾರವನ್ನು ಅವರು ಪತ್ತೆ ಮಾಡುತ್ತಾರೆಂದು ಹೇಳಿದ್ದರು. ಆದರೆ ಇವತ್ತು ಲೋಕಾಯುಕ್ತ ಇಂಥಹ ಪರಿಸ್ಥಿತಿಗೆ ಬಂದು ನಿಂತಿದೆ. ಇದರ ಬಗ್ಗೆ ಒಂದು ಅಮೆಂಡ್‌ಮೆಂಟ್ ತರುತ್ತಿದ್ದೇವೆ. ಇದರ ಬಗ್ಗೆ ತಾವುಗಳೆಲ್ಲರೂ ಹೇಳಿರುವ ವಿಚಾರವನ್ನು ಒಪ್ಪಿಕೊಳ್ಳುತ್ತೇನೆ. ಇದನ್ನು ಸದ್ಯಕ್ಕೆ ಮಾಡಿದ್ದೇವೆ, ತಾವು ಇನ್ನೂ ಏನಾದರೂ ಕಳುಹಿಸಿ ಕೊಡುವುದಿದ್ದರೆ ಕೊಡಿ. ಅದನ್ನು ಸಹ ಸೇರಿಸುತ್ತೇವೆ. ಅದಕ್ಕೆ ನನ್ನದೇನೂ ಅಭ್ಯಂತರವಿಲ್ಲ. ಹೇಗೆ ಪದ್ಧತಿ ಕೊಲ್ಯಾಪ್ಸ್ ಆಯಿತು ಎನ್ನುವುದಕ್ಕಾಗಿ ಇಷ್ಟನ್ನು ಹೇಳಿದೆ. ಹೇಳುತ್ತಾ ಹೋದರೆ ಪ್ರತಿಯೊಂದು ಸರ್ಕಾರದ ಆದೇಶದ ಬಗ್ಗೆ ಹೇಳಲು ಅರ್ಧ ಗಂಟೆ ಬೇಕಾಗುತ್ತದೆ. ನಾನು ಡಿಸೆಂಬರ್‌ನಲ್ಲಿ ನಿರ್ದೇಶನವನ್ನು ಕೊಟ್ಟಮೇಲೆ ಸಹ ಕೆಲಸವನ್ನು ಕೊಟ್ಟಿದ್ದಾರೆ. ಇದನ್ನು ಮಾನ್ಯ ಮಾಜಿ ನೀರಾವರಿ ಸಚಿವರು ಗಮನಿಸಬೇಕು. ಏಕೆಂದರೆ ಅವರು ಮೊದಲೇ ಲೆಕ್ಕಾಚಾರ ಮಾಡಿ ಅಲಾಟ್ ಮಾಡಿಕೊಂಡಿದ್ದರು.

ಮೆ ಮಾರ್ಕ್ ಕನಸ್ಟ್ರಕ್ಷನ್ 71 ಲಕ್ಷ ಮೆ ಕುನ್ನಿಮೋಹಿನ್ ದಾಜಿ 138 ಲಕ್ಷ; ಹಾಗೂ 54 ಲಕ್ಷ 50 ಸಾವಿರ ; ಮಿರ್ಸರ್ಸ್ ಸುರೇಶ್ 77 ಲಕ್ಷ 80 ಸಾವಿರ, ಮತ್ತೆ ಮಾರ್ಕ್ ಕನ್‌ಸ್ಟ್ರಕ್ಷನ್‌ಗೆ ಇನ್ನೊಂದು ರೀಚ್‌ನಲ್ಲಿ 45 ಲಕ್ಷ 58 ಸಾವಿರ, ಪ್ರಸನ್ನ ಕುಮಾರ್ 83 ಲಕ್ಷದ 50 ಸಾವಿರ, ರಾಘವರೆಡ್ಡಿ, ಸುಂದರರಾಮರೆಡ್ಡಿ 369 ಲಕ್ಷ; ಮಹಮದ್ ಕುನ್ನಿ 241 ಲಕ್ಷ, ಸಿ.ಎಂ.ಎಫ್ ಖದೀರ್ 201 ಲಕ್ಷ, ಎಲ್ಲದರ ಬಗ್ಗೆ ವಿಚಾರಣೆ ಮಾಡಿಸಲು ನನ್ನ ಕೈಯಿಂದ ಇನ್ನೂ ಸಹ ಸಾಧ್ಯವಾಗಿಲ್ಲ. ನಾನು

ಒಬ್ಬರು ಒಳ್ಳೆಯ ನೀರಾವರಿ ಕಾರ್ಯದರ್ಶಿಯವರನ್ನು ಮಾಡಲು ಎರಡೂವರೆ ತಿಂಗಳಿನಿಂದದ ಹುಡುಕಬೇಕಾಯಿತು. ನನಗೆ ಯಾರೂ ಸಹ ಶಿಫಾರಸ್ಸು ಮಾಡಲಿಲ್ಲ. ಯಾರನ್ನು ಮಾಡಬೇಕೆಂದು ನನ್ನ ತಲೆಗೆ ಹೊಳೆಯುತ್ತ ಇರಲಿಲ್ಲ, ಐಎಎಸ್ ಅಧಿಕಾರಿಗಳು ಏನು ಮಾಡುವುದು? ಏತಕ್ಕೆಂದರೆ ಹೋಲ್ ಮೆಷಿನರಿ ಆ ಮಟ್ಟಕ್ಕೆ ಬಂದಿದೆ. ಶರವೇಗದಲ್ಲಿ ಕೆಲಸ ಮಾಡಿದ್ದಾ ಇದು? ಕಾವೇರಿ ನೀರನ್ನು ಇದರಿಂದ ಉಳಿಸುತ್ತೀರಾ? ಹಣ ನಮ್ಮದು ನಿಮ್ಮದಲ್ಲ. ನಮ್ಮನ್ನು ನಂಬಿ ಇಲ್ಲಿಗೆ ಕಳುಹಿಸಿದ್ದಾರಲ್ಲಾ ಆ ಜನರದ್ದು ಈ ಹಣ. ಇದು ಆದಮೇಲೆ ನಮಗೆ ಕೆಲಸವನ್ನು ಪ್ರಾರಂಭ ಮಾಡಲಾಗಿದೆ ಈ ರೀಚಸ್‌ನಲ್ಲಿ ಎಂದು ಬರೆಯುತ್ತಾರೆ. ಅದನ್ನು ಪರಿಶೀಲನೆ ಮಾಡಲು ನಾನು ಕಳುಹಿಸಿದೆ, ಏನೇನೂ ಕೆಲಸ ಮಾಡಿಲ್ಲ. ಬೇಕಾದರೆ ನಾಳೆ ಮೊಯ್ಲಿರವರು, ಖರ್ಗೆಯವರು, ನಾನು ಎಲ್ಲರೂ ಒಟ್ಟಿಗೆ ಹೋಗಿ ಅದನ್ನು ನೋಡೋಣ. They have got the courage to send a report to the Government that the work has been started

ನಾನು ಅದನ್ನು ಕೌಂಟರ್‌ಚೆಕ್ ಮಾಡಬೇಕೆಂದು ಕಳುಹಿಸಿದೆ. ಆದರೆ ಒಂದು ರೂಪಾಯಿಯ ಕೆಲಸ ಸಹ ಪ್ರಾರಂಭ ಮಾಡಿರಲಿಲ್ಲ. ತಾವು ತುಮಕೂರಿಗೆ 40 ಸಾವಿರ ಎಕರೆಗೆ ನೀರನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆಂದು ಹೇಳಿದ್ದೀರಿ. ಅದಕ್ಕೆ ನಾನು ಬೇಡವೆಂದು ಹೇಳುತ್ತಿಲ್ಲ. ನಲವತ್ತು ಕೋಟಿ ರೂಪಾಯಿಗಳ ಟನಲ್ ಕೆಲಸವು ಇಡೀ ಏಷ್ಯಾದಲ್ಲಿ ಅಂಥಹ technical fault zone ಸಿಕ್ಕಿರತಕ್ಕ ಕೆಲಸವಿಲ್ಲ That Poor man has died in an accident. ಇವತ್ತು ತುಮಕೂರಿಗೆ ನೀರು ಬರುತ್ತದೆಂದು ಹೇಳಿದ್ದರೆ ಆ ಟನಲ್ ಕೆಲಸ ಮುಗಿದಿದ್ದರೆ ಬರುತ್ತಿತ್ತು. ನಮ್ಮ ಮಾಜಿ ಮುಖ್ಯಮಂತ್ರಿಗಳು ಹಾಸ ರಾಜಕೀಯವನ್ನು ಸ್ವಲ್ಪ ತಿಳಿದುಕೊಂಡಿದ್ದಾರೆ. ನಮ್ಮ ಜಿಲ್ಲೆಯಲ್ಲಿ ರಾಜಕೀಯ ಹೇಗೇಗೆ ನಡೆಯುತ್ತದೆ ಎಂಬುದನ್ನು ತಿಳಿದುಕೊಂಡಿದ್ದಾರೆ. ಯಾವ ಲಿಫ್ಟ್ ಇರಿಗೇಷನ್ ಬಗ್ಗೆ ಹೇಳುತ್ತಿದ್ದರಲ್ಲಾ ಅಲ್ಲಿಗೆ ಗುದ್ದಲಿ ಪೂಜೆಯನ್ನು ಮಾಡಲು ಹೋಗಿದ್ದರು. ಪಾಪ ಈ ವ್ಯಕ್ತಿ ಅಲ್ಲಿಗೆ ಏರ್ಪಾಡುಗಳನ್ನು ಮಾಡಲು ಹೋಗಿ ವಾಪಸ್ ಬರುವಾಗ ಅಪಘಾತಕ್ಕೆ ಒಳಾದ. He met with an accident. His property has been attached today.

ಕರ್ನಾಟಕ ಫೈನಾನ್ಸ್ ಕಾರ್ಪೊರೇಷನ್‌ನಲ್ಲಿ ಅವನಿಗೆ ಇರತಕ್ಕ ಮನೆಯನ್ನು ಅಟ್ಯಾಚ್ ಮಾಡಿದ್ದಾರೆ. ವೈ ಅಲೈನ್‌ಮೆಂಟ್‌ನಿಂದ ಏನು ಆ ಕೆರೆಯಲ್ಲಿ ನೀರನ್ನು ಶೇಖರಣೆ ಮಾಡಿ ಏನು ತುಮಕೂರಿಗೆ ನೀರನ್ನು ಕೊಡಬೇಕೆಂದು ಹೇಳುತ್ತೀರೋ ಅಲ್ಲಿಯವರೆಗೆ ಎಷ್ಟು distributory ಕೆಲಸವಾಗಿದೆ? ಆ ವ್ಯಾಲಿಯಲ್ಲಿ ಇವರು ಹೋಗಿ ನೀರನ್ನು ಬಿಟ್ಟರು, ಆಗ ಬಂತು ತೊಂದರೆ. ಆ 125 ಕಿ.ಮೀ. ಕೆಲಸವನ್ನು ಮುಗಿಸಿ ಮುಂದೆ ಬರುತ್ತೇವೆಂದು ನೀವು ಹೇಳಿದ್ದರೆ ನಾನು ಒಪ್ಪಿಕೊಳ್ಳುತ್ತಿದ್ದೆ. ಏಕೆಂದರೆ ಹಣವು ಸಿಗುವುದೇ ಇಲ್ಲಿ, ಇದು ಎಲ್ಲಿಯವರೆಗಗೆ ಹೋಯಿತು ಎಂದರೆ ರಾಜಕಾರಣಿಗಳು ಚೀಟಿಯನ್ನು ಕೊಡಬೇಕು ಕೆಲಸ ಪ್ರಾರಂಭವಾಗಬೇಕು, ಅಲ್ಲಿಯವರೆಗೆ ಹೋಯಿತು. ತಮ್ಮ ಮನಸ್ಸಿನ ಆಕಾಂಕ್ಷೆ ಏನಿದೆ. ವೈ ಅಲೈನ್‌ಮೆಂಟ್‌ನಿಂದ ತುಮಕೂರಿನವರೆಗೆ ನೀರನ್ನು ಕೊಡಬೇಕೆಂದು ಏನು ಇತ್ತು ಅದಕ್ಕೆ ಇವರು ಈ ಕ್ರಮವನ್ನು ತೆಗೆದುಕೊಂಡಿದ್ದರೆ I would have complimented you or your colleague. ಆ ಕೆಲಸವನ್ನು ನಾನು ಶುರುಮಾಡಿಸುತ್ತೇನೆ.

3.30 ಪಿ.ಎಂ.

ಆ ಕೆಲಸ ಶುರು ಮಾಡಿಸುತ್ತೇನೆ. ನಾನು ಏನು ಧರ್ಮಕ್ಕೆ ಮಾಡಿಸುತ್ತಿಲ್ಲ. ಜನ ಇಲ್ಲಿ ತಂದು ಕೂರಿಸಿರುವುದು ನಮ್ಮ ಕೆಲಸ ಮಾಡು ನಮ್ಮ ಚಾಕ್ರಿ ಮಾಡು

ಎಂದು ಕೂರಿಸಿದ್ದಾರೆ. ನಾವೇನೂ ಧರ್ಮಕ್ಕೆ ಮಾಡಬೇಕಾಗಿಲ್ಲ. ಮಾಡುವುದಕ್ಕೆ ಮುಂಚೆ ಸೆಟರ್ಲೈಟ್ ಮಾಡಬೇಕಾಗುತ್ತದೆ. ಅದು ಮಾಡದೇ ಮಾಡುವುದಕ್ಕೆ ಆಗುವುದಿಲ್ಲ. I cannot allow things to go on like this.

ಅಥವಾ ಮೂರು ತಿಂಗಳ ಒಳಗೆ ಈ ರಾಜ್ಯದಲ್ಲಿ ಏನು ನೀರಾವರಿಗೆ ಏನು ಅನಾಹುತ ಆಗಿದೆಯೋ ನನಗೆ ಯೋಗ್ಯತೆ ಇದ್ದರೆ ಈ ಮೂರು ತಿಂಗಳಲ್ಲಿ ಆಗಿರತಕ್ಕಂಥ ಏನು ಷಾರ್ಟ್ ಫೌಲ್ ಇದೆ ಪ್ರೋಗ್ರೆಸ್‌ನಲ್ಲಿ ಅದನ್ನು ತರದೆ ಹೋದರೆ ಈ ಸ್ಥಾನದಲ್ಲಿ ನಾನು ಕೂತುಕೊಳ್ಳುವುದಿಲ್ಲ. I know how to handle it. ಮಾಡಿ ತೋರಿಸುತ್ತೇನೆ ನಿಮಗೆ. ನನಗೆ ಅದಕ್ಕೆ ಏನೂ ಹೆದರಿಕೆ ಇಲ್ಲ ಇವತ್ತು. ಈ ಮೂರು ತಿಂಗಳಲ್ಲಿ ಏನೋ ಮುಳುಗಿ ಹೋಗಿ ಬಿಟ್ಟಿತು. ಪ್ರಪಂಚ ತಲೆ ಕೆಳಗೆ ಆಗಿಹೋಯಿತು. ಅದರಿಂದ ತುಮಕೂರು ಜನಕ್ಕೆ ನೀರು ಬರಲಿಲ್ಲ ಎನ್ನುವ ಮೆಟೀರಿಯಲ್ ಮಾತನ್ನು ಪ್ರಾರಂಭಿಸಿ ಬಿಟ್ಟರು. ಇನ್ನೂ ಸ್ಟೋರ್ಸ್ ಬಗ್ಗೆ ಚರ್ಚೆ ಮಾಡುವುದಕ್ಕೆ ನಾನು ಹೋಗುವುದಿಲ್ಲ. ಏಕೆಂದರೆ ಮೂರು ಕೇಸನ್ನು ಸಿಓಡಿ ಗೆಫರ್ ಮಾಡಿದ್ದೇನೆ. ಒಂದೊಂದು ಆನ್ ಸ್ಪಾಟ್‌ನಲ್ಲಿ 70 ಲಕ್ಷ, 80 ಲಕ್ಷ, ಒಂದು ಕೋಟಿ, ಒಂದೂವರೆ ಕೋಟಿ, ಎರಡುವರೆ ಕೋಟಿ ಪರ್ಚೇಸ್ ಮಾರ್ಚ್ 31ರಲ್ಲಿ ಮಾಡಿಕೊಂಡಿದ್ದಾರೆ. ಸ್ಟೇಟ್ ಅಕೌಂಟ್ಸ್ ಡಿಪಾರ್ಟ್‌ಮೆಂಟ್‌ನವರನ್ನು ಐದು ಜನರನ್ನು ತೆಗೆದುಕೊಂಡಿದ್ದೇನೆ. ಇದನ್ನೆಲ್ಲಾ ಕಳುಹಿಸಿಬೇಕಲ್ಲಾ. ಏಕೆಂದರೆ ಇವೆಲ್ಲಾ ಥ್ಯಾಂಕಲೆಸ್ ಜಾಬ್. ಸಿ.ಓ.ಡಿ.ಯವರನ್ನು ಬೇರೆ ಮೂರು ನಾಲ್ಕು ಜನರನ್ನು ಹಾಕಿದ್ದೇನೆ. ನಿಮಗೆ ಮೆಟೀರಿಯಲ್ಸ್ ತಂದು ಕೆಲವರು ಕುಕ್ಕುತ್ತಾರೆ. ಸತ್ಯಾಂಶಕ್ಕೆ ಇದು ಏನೋ ಸರಿಯೋ ಇಲ್ಲವೋ, ನಾಳೆ ಬೆಳಿಗ್ಗೆ ಹೋಗೋಣ ಪರೀಕ್ಷೆ ಮಾಡೋಣ. ನಾಲ್ಕು ಲಿಫ್ಟ್ ಇರಿಗೇಷನ್ ಸ್ಕೀಮ್ಸ್‌ನ್ನು ತೆಗೆದುಕೊಂಡಿದ್ದರೂ ಎಸ್ಟಿಮೇಟ್ ತೆಗೆದುಕೊಳ್ಳಲಿಲ್ಲ. ಎಸ್ಟಿಮೇಟ್ ಇನ್‌ಕಾರ್ಪೊರೇಟ್ ಮಾಡಿದರು. Lift irrigation scheme in Hemavathi project; This is page 31 of P.A.C. report. In January 1981 the then Chief Minister approved the proposal to take up the following 4 lift irrigation schemes. ಗುಂಡೂರಾಯರು ಸತ್ತು ಹೋಗಿದ್ದಾರೆ.

ಆಗ ನಾನು ಅವರು ತುಂಬಾ ಚೆನ್ನಾಗಿದ್ದೆವು. ಅದನ್ನು ಹೇಳಬೇಕಾಗುತ್ತದೆ. ನೀವು Ajjur Tunnel work ಅನ್ನು ಬದಲಾವಣೆ ಮಾಡಿ ಅಪ್ಪರ್ ಚಾನಲ್ ಮಾಡಬೇಕೆಂದು ತೀರ್ಮಾನ ಮಾಡಿದ ಮೇಲೆ ಹಳ್ಳಿ ಮೈಸೂರು ಹೋಬಳಿ ಯಾವಾಗ ಮಹರಾಜರ ಕಾಲದಿಂದ ಅನ್ನ ಹಂಚುತ್ತಿದ್ದರು ಎಂದು ನಾವು ಹೇಳುತ್ತಿದ್ದೇವೋ ಅಲ್ಲಿಗೆ ಲಿಫ್ಟ್ ಬರುವುದಿಲ್ಲ ಎಂದು ನನಗೆ ಒಂದು ರೆಪ್ರಸೆಂಟೇಷನ್ ಕೊಟ್ಟರು. The then Chief Minister approved the proposal to take the following four lift irrigation schemes: In Arakalagud, Channarayapatna Holenarasipura Taluka to irrigate drought prone areas. (1) Arakalagud lift irrigation scheme (2) Halli Mysore lift irrigation (3) Lift irrigation scheme at approach of Bagur Navile tunnel (4) L.I.C. Lift Irrigation scheme at the exit of Bagur navile Tunnel. The above four lift irrigation schemes were approved. In June 1982 the Chief Engineer Hemavathi project reported that the water of hemavathi river will not be available to meet the requirement of all these lift irrigation schemes. A technical committee for a Cauvery basin project also discussed this matter in September 1982 and May 1983. The Committee observed (in Annexure-IV details are available) that the Hemavathi project has a very big ayakut of

6.50 lakh acres to feed single crop. The actual requirement would be much more than the calculated available flow due to various reasons like wastage and violation of cropping pattern etc., The actual dificit was of a very high order. So every effort must be made to plan for augmentation of supplies by diverting Kumaradhara river. The technical Committee agreed to the proposal of the Chief Engineer for the retention of Halli Mysore Lift Irrigation scheme and deletion of all other schemes.

WATER PLANNING

Hemavathi Sub-Basin was again discussed on 30/5/1984 in the note placed before the Committee. The Chief Engineer worked out that the total utilisation of the plan under the Hemavathi basin was 68.046 T.M.C. where as yield availability at the dam site was only 61.5 T.M.C. on 50% dependability which would have to be augmented by diverting the Kumaradharar river. While considering this subject the Technical Committee observed in Annexure-VI that the yield upto Hemavathi dam was 60.6 TMC and not 61.5 T.M.C. assumed by the Chief Engineer. The Technical Committee agreed to recommend the inclusion of remaining lift irrigation schemees also as part of the comprehensive Hemavathi project. Government also accordingly directed the Chief Engineer to ascertain from the Chief Engineer, W.R.D.O further the hydralic aspect and to consider the same. While formulating the comprehensive revised project incorporating all the four lift irrigation schemes and to forward project report accordingly.

When the Committe discussed the matter they were informed that the original assessment of yield at the dam site viz., 61.5 TMC yield was not correct due to wrong calculation and that the correct figure was 66 TMC ft. They were further informed that the lift irrigation schemes have not been taken up, but proposed to be included in the revised estimate by deleting the provision for double crop in the initial reaches of the channel.

The Committee has surprised that the assessment of the yield at the dam site included the original project estimated now found to be incorrect and that this error was not noticed till May 1984 even though the matter was being discussed in the Technical Committee and the Chief Engineer since 1982. The Committee desired that the availability of water to meet all the demands and the project which was already santioned should first be carefully verified again before its scope is modified. If this is not done, therer is every likelihood of insufficiency of water for the achkut already contemplated in the approved project and the tail enders may suffer.

ಇಲ್ಲಿ ಬಸ್‌ನಲ್ಲಿ ಬರೆಸುವುದಕ್ಕೆ ಹೊರಟಿದ್ದಾರೆ. ಅವರ ಸ್ನೇಹಿತರು, ಈಗ ಹೊರಗಡೆ ಏನೇನು ನಡೆದಿದೆ ಹೇಳುತ್ತಾರೆ. ದೇವೇಗೌಡರನ್ನು ಮುಗಿಸುವುದು ಅಷ್ಟು ಸುಲಭವಾಗುವುದಿಲ್ಲ. ದೇವೇಗೌಡನನ್ನು ಮುಗಿಸಬೇಕಾದರೆ ಕಷ್ಟ. ನಾನು ದೈವದಲ್ಲಿ ನಂಬಿಕೆ ಇಟ್ಟಿದ್ದವನು. ಜನ ಮಹಾನುಭಾವರು ಅಲ್ಲಿ ಹೊರಗಡೆ ಇದ್ದಾರೆ. ನೀವು ಅವತ್ತಿನ ಪ್ರಾಮಾಣಿಕ ಅನಿಸಿಕೆ ಬರೆದಿರಿ. "There is likelihood of insufficiency of water for the achkut already contemplated in the approved project and the tailenders may suffer". This is the verdict given by the PAC in its report. ದೇವೇಗೌಡ ಹಾಸನ ಜಿಲ್ಲೆಗೆ ಮಾತ್ರ ಸೀಮಿತವಾಗಿ ಉಳಿಯುವುದಾಗಿದ್ದರೆ ಹಳ್ಳಿ ಮೈಸೂರು ಲಿಫ್ಟ್ ಇರಿಗೇಷನ್ ಸ್ಕೀಮ್‌ನ್ನು ಅವತ್ತೇ ಇನ್ನಾಗು ರೇಟ್ ಮಾಡುತ್ತಿದ್ದೆ. ದೇವೇಗೌಡ ಬರೀ ಹಾಸನ ಜಿಲ್ಲೆ ರಾಜಕಾರಣ ಮಾಡುವುದಾದರೆ, I would have started the Halli Mysore Lift Irrigation Scheme and nobody could have stopped me, But, I did not do that.

ಕಾರಣ ಇಷ್ಟೇ, ಕಾಂಪ್ರಹೆನ್ಸೀವ್ ಎಸ್ಟಿಮೇಟ್ ಬಗ್ಗೆ ನಾವು ಒಂದು ವೇಳೆ ಟ್ರಿಬ್ಯೂನಲ್ ಮುಂದೆ ಹೋಗುವುದಾದರೆ ನಮ್ಮ ಕ್ಲೈಮ್ ಏನು ಇಡಬೇಕು ಎಂದು ಹಾಕಿದೇನೇ ಹೊರತಾಗಿ I never started the work. ಕುಮಾರ ಧಾರಾ ಆಗುವುದಿಲ್ಲ ಎಂದು ಹೇಳಿ ಎರಡು ಕ್ರಾಪ್‌ಗೆ ಏನು ಇತ್ತು ಅದನ್ನು ಕಿತ್ತುಹಾಕಿ ಸಿಂಗಲ್ ಕ್ರಾಪ್ ಮಾಡಿದೆ ನಾನು. That is the report. ನಾನು ತುಮಕೂರಿಗೆ ಅನ್ಯಾಯ ಮಾಡುವುದಾಗಿದ್ದರೆ, ಮಂಡ್ಯಕ್ಕೆ ಅನ್ಯಾಯ ಮಾಡುವುದು ಆಗಿದ್ದರೆ I would not have done this. In turn, what has been done in your Government? He should be held responsible today.

ನಿಮ್ಮನ್ನು ತೆಗೆಯಬೇಕು ಎಂದು ರಾಜಕೀಯ ನಡೆಯುವಾಗ ಅದು ಅಷ್ಟಕ್ಕೇ ಉಳಿಯಲಿಲ್ಲ, ಮುದ್ದೇ ಹನುಮೇಗೌಡರ, ನಿನ್ನೆ ದಿವಸ ಭಾಷಣ ಮಾಡುತ್ತಿದ್ದಿರಿ, ನಾನು ಅಲ್ಲಿ ಕುಳಿತುಕೊಂಡು ಸ್ವಲ್ಪ ಕೇಳಿದೆ. ಯಾರೋ ಜನರ ಕರೆದುಕೊಂಡು ಸನ್ಮಾನ ಮಾಡಿಬಿಟ್ಟು ಅವನು ಯಾವನೋ ಒಂದು ಕೋಟಿ 91 ಲಕ್ಷ ಕೊಡಿಸಿದಿರಲ್ಲಾ, ಡೀವಾಟರಿಂಗ್‌ಗೆ ಸನ್ಮಾನ ಮುಖ್ಯಮಂತ್ರಿಗಳು ಮಾಡಿದಂಥ ಸತ್ಯ ವ್ಯವಹಾರಕ್ಕೆ ನಾನು ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ ಎಂದು ಹೇಳಿ ಕೊಡಿಸಿದಿರಲ್ಲಾ, ಕಪ್ಪು ಭಾವುಟ ಹಿಡಿಸಿಕೊಂಡೇ ಈಗ ಬಸ್‌ನಲ್ಲಿ ಬರೆಸಿಕೊಳ್ಳುತ್ತೀದ್ದೇನೆ. ಜನಗಳು ಮುಂದೆ ಹೋಗಿ ಹೇಳಬೇಕು ಮುದ್ದಹನುಮೇಗೌಡರೇ, ಕಾಂಗ್ರೆಸ್ ಆಮೇಲೆ, ಜನತಾ ದಳ ಆಮೇಲೆ. If you are really interested in your people, go and tell them. ನಾನು ಏನು ಮಾಡಿದ್ದೆ, ಇವತ್ತು ಏನಾಗಿದೆ ಎಂದು ಹೇಳಿ. ನಾಗೇಗೌಡರೇ, ಇಲ್ಲಿ ಅಲ್ಲ ಭಾಷಣ ಹೊಡೆಯುವುದು. Go to your District. 54 schemes have been approved.

ಮಾನ್ಯ ನಂಜೇಗೌಡರೇ, 54 ಸ್ಕೀಂಗಳಲ್ಲಿ, 4 ಸ್ಕೀಂಗಳಿಗೆ ಬರೆಯುತ್ತಾರೆ. ಇದು ಆಗುವುದಿಲ್ಲ ಎಂದು ಹೇಳಿ, 10 ಸಾವಿರ ಎಕ್ಸಾಮಿನ್ ಮಾಡಿ ಎಂದು. I have not taken up the work. With all precautions ಅದನ್ನು ಇನ್‌ಕ್ಲೂಡ್ ಮಾಡಬೇಕಾಗಿದ್ದರೆ ಒಂದು ಕ್ರಾಪ್‌ಗೆ ರೆಡ್ಯೂಸ್ ಮಾಡಿದರೆ ಅದನ್ನು ಏನು ಎಂದು ಕರೆಯೋಣ. ಅವರಿಗೆ ಗೊತ್ತಿದೆ. ಶ್ರೀರಾಮ ದೇವರ ಅಣೆಕಟ್ಟು ಲಿಫ್ಟ್ ಅಂಡ್ ರೈಟ ಬ್ಯಾಂಕ್ ಮತ್ತು ಮಂದರಕೆ ಲಿಫ್ಟ್ ಅಂಡ್ ರೈಟ್ ಬ್ಯಾಂಕ್ ಕೆನಾಲ್, ಒಂದು ಕ್ರಾಪ್‌ಗೆ ರೆಡ್ಯೂಸ್ ಮಾಡಿದೆ. ಆ ವಾಟರ್ ಸೇವ್‌ಮಾಡಿ ಕುಮಾರ ಧಾರಾ ಆಗುವುದಿಲ್ಲ, ಅದು ಅಷ್ಟು ಸುಲಭ. ನಾಳೆ ಇದನ್ನು ಹಾಕುವುದಾದರೂ ಎಚ್ಚರಿಕೆಯಿಂದ ಹಾಕಬೇಕಾಗುತ್ತದೆ. ಮುಂದೆ ಯಾವತ್ತೋ ಒಂದು ದಿನ ಕೆಲಸ ಮಾಡುವಂತಹ

ಸ್ಟೇಜ್ ಬಂದಾಗ ಬರೆಯುತ್ತಾರೆ, "ಈ ಕೆಲಸಗಳು ಜರೂರಾಗಿ ನಡೆಯಬೇಕಾಗಿದೆ" ಜರೂರಾಗಿ, ಕೆಲವೇ ಲಿಸ್ಟ್‌ಗಳು. ನೀವು ಅಲ್ಲ ಬರೆದಿರುವುದು. ಎಲ್ಲದ್ದಕ್ಕೂ ನಿಮಗೆ ಹೇಳುವುದಕ್ಕೆ ಹೋಗುವುದಿಲ್ಲ, ಏಕೆಂದರೆ ನಿನ್ನ ಸಭೆಯಲ್ಲಿ ಎತ್ತಿದ್ದಕ್ಕೆ ಎಲ್ಲಾ ತೆಗೆದುಕೊಂಡು ಬಂದೆ ಅಷ್ಟೇ. ಇಸಿಪಿಸಿ, ಮೈಸೂರು, "ಈ ಕೆಲಸಗಳು ಜರೂರಾಗಿ ನಡೆಯಬೇಕಾಗಿದೆ. ಏಕೆಂದರೆ ಟ್ರಿಬ್ಯೂನಲ್‌ನಿಂದ ನೀರು ಬಂದಿದೆಯಲ್ಲಾ ಅದು ಎಲ್ಲಾ ಹೊರಟು ಹೋಗಿದೆ." ಅದಕ್ಕೆ ಬರೆಯುತ್ತಾರೆ, ಆ ಕೆಲಸಗಳು ಎಂತಹವು? ಮಾಜಿ ಮಂತ್ರಿಗಳು ಶಾಸಕರು ಕೊಡುತ್ತಾರೆ, ಇಲ್ಲಿ ಡೆಪ್ಯೂಟಿ ಚೀಫ್ ಮಿನಿಸ್ಟರ್‌ರವರು ಬರೆಯುತ್ತಾರೆ. ಎಂತಹ ಕೆಲಸಗಳು ಅವು. ನೀವು ಏನೋ ಹೇಳುತ್ತಿದ್ದೀರಿ. ಇವೆಲ್ಲಾ ಅವರು ಬರೆದಿರುವುದು. ಇಲ್ಲಿಯೇ ಇದೆ. ಡೆಪ್ಯೂಟಿ ಚೀಫ್ ಮಿನಿಸ್ಟರ್ ಡೆಪ್ಯೂಟಿ ಚೀಫ್ ಮಿನಿಸ್ಟಾರ್.....

ಶ್ರೀ ಎ.ಟಿ. ರಾಮಸ್ವಾಮಿ : ನಾವು ಹೇಳಿದಾಗ ಮೊಯಿಲಿಯವರು ಕೇಳಿದ್ದರೆ ಅವರು ಎರಡನೇ ಸಲ ಚೀಫ್ ಮಿನಿಸ್ಟರ್ ಎಂದೆ. ನಮ್ಮ ಮಾತು ಕೇಳಲಿಲ್ಲ ಅವರು.

Sri H.D. Deve Gowda : Estimate for the formation of the road from B.H. Road to C.N.P. Road - 1,20,000 Estimate for the Construction of local works, Rs. 50,000/- Estimate for Road No. 2 Kodihalli Tank culvert, ಐದು ಲಕ್ಷ 55 ಸಾವಿರ ಒಂದು ಕಡೆಗೆ. ಒಂದು ಕಡೆ 25 ಸಾವಿರ, 25 ಸಾವಿರ, ಒಂದು ಲಕ್ಷದ 20 ಸಾವಿರ, 50 ಸಾವಿರ, 25 ಸಾವಿರ, 25 ಸಾವಿರ ರೂಪಾಯಿ, ನಾನು ಹೆಸರು ಎಲ್ಲಾ ಹಿಡಿದು ತೆಗೆದು ಹೇಳುವುದಕ್ಕೆ ಹೋಗುತ್ತಾ ಇಲ್ಲ. ಎರಡು ಲಕ್ಷ 20 ಸಾವಿರ, ಏಳು ಲಕ್ಷ 30 ಸಾವಿರ ಇವರದೇ ಈ ಕೆಲಸಗಳು ಜರೂರಾಗಿ ಆಗ ಬೇಕಾಗುತ್ತದೆ. ಏಕೆಂದರೆ ಅಲ್ಲಿ ನೀರು ಹರಿದು ಹೊರಟು ಹೋಗಿ ಬಿಡುತ್ತದೆ. ದೇವೇಗೌಡರು ಬಂದುಬಿಟ್ಟು ಅದನ್ನು ನಿಲ್ಲಿಸಿಬಿಡುತ್ತಾರೆ. ಅವರಿಗೆ ತಲೆಯಲ್ಲಿ ಏನು ಮೆದುಳು ಇಲ್ಲ. 1964ರಲ್ಲಿ ಈ ಸದನದಲ್ಲಿ ಈ ಭಾಗದ ಜನರಿಗೆ ನೀರು ಕೊಡಬೇಕು ಎಂದು ರೆಸಲ್ಯೂಷನ್ ಮೂವ್ ಮಾಡಿದ ನನಗೆ ದೇವರು ವಿವೇಕ ಕೊಡಲಿಲ್ಲ. ಕಾಚೇನಹಳ್ಳಿದು ನೀವು ರೆಫರ್ ಮಾಡಿದಿರಿ. ಏತ ನೀರಾವರಿ ಯೋಜನೆಯ ಸಮುಚ್ಛಯದ ಕಾಲುವೆಯ 43ನೇ ಏರಿಯ ನಿರ್ಮಾಣ ಲೈನಿಂಗ್ ಕೆಲಸದ ಅಂದಾಜು. ನಿರ್ಮಾಣ ಮತ್ತು ಲೈನಿಂಗ್ ಕೆಲಸದ ಅಂದಾಜು ಪಟ್ಟಿ 64 ಲಕ್ಷ ರೂಪಾಯಿಗಳಿಗೆ ತೆಗೆದುಕೊಳ್ಳುವುದು ಇನ್ನೂ ಎಲ್ಲಿ ಪಂಪ್ ಹೌಸ್ ಇಡಬೇಕು ಎಂಬುದು ಗೊತ್ತಿಲ್ಲ. ನಿಮ್ಮ ಡೆಲವರಿ ಲೈನ್ ಎಲ್ಲಿ ಇರಬೇಕು ಎಂಬುದು ಗೊತ್ತಿಲ್ಲ. ಜಾಕ್‌ವೆಲ್ ಎಲ್ಲಿ ಎಂಬುದು ಗೊತ್ತಿಲ್ಲ. "ಲೈನಿಂಗ್ ಜರೂರಾಗಿ ನಡೆಯಬೇಕು" ನ್ನುತ್ತಾರೆ. ಇದನ್ನೇ ನಾನು ಬೇಡ ಎಂದು ಹೇಳಿದ್ದು. What is my order says?

ನೀವು ಓದಿದ್ದದಲ್ಲಾ ನಿನ್ನೆ. ನೀವು ನಿನ್ನೆ ಓದಿದ್ದು ಇದನ್ನೆ. ತಿಮ್ಮಪ್ಪನವರೇ, ಇನ್ನು 120 ಕಿಲೋಮೀಟರ್‌ನಲ್ಲಿ ಮೇನ್ ಕೆನಾಲ್ ಅಗೆಯುತ್ತಿದ್ದಾಗ 114ನೇ ಕಿಲೋಮೀಟರ್ ಅಥವಾ 112 ಕಿಲೋಮೀಟರ್ ಯಾವುದೋ ಒಂದು ಡಿಸ್ಟ್ರಿಬ್ಯೂಟರಿ ಒಳಗೆ ಇವರ ಲೈನಿಂಗ್. ಅಲ್ಲ ಅವನ ಅಪ್ಪಣೆ ಬೇಕು. ನಾನು ಇಡೀ ಹೌಸನ್ನು ಕರೆದುಕೊಂಡು ಹೋಗುತ್ತೇನೆ. ಯಡಿಯೂರಪ್ಪನವರೇ ನೀವು ಬರುತ್ತೀರಾ, ಕರೆದುಕೊಂಡು ಹೋಗುತ್ತೇನೆ. We will go and inspect how the things have been done.

(ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಎರಡು ಬಸ್ ಮಾಡಿಕೊಂಡು ಹೋಗೋಣ. "ಜರೂರು ಕೆಲಸ", ಇದರ ಪರಿಣಾಮವಾಗಿ ಏನಾಗಿದೆ ಎಂದರೆ ದಯಮಾಡಿ ಖರ್ಗೆಯವರೆ ತಿಳಿದುಕೊಳ್ಳಿ. ಏಳು

ಕೋಟಿ ರೂಪಾಯಿ ಮೆಷನರಿಯನ್ನು ನಿಮಗೆ ಪಾಪ ದುಡ್ಡು ಕೊಡಬೇಕು. ನೀವು ಒದ್ದಾಡುತ್ತಿದ್ದಿರಿ ನಾನು ಸೇರ್ ಟ್ಯಾಕ್ಸ್ ಹುಡುಕಬೇಕು ಜಾಸ್ತಿ ಮಾಡಿದೆ ಎಕ್ಸೈಸ್ ಅದು ಮಣಿಯಲಿಲ್ಲ, ಈಗ ನೀವು ಭಾಷಣ ಮಾಡಿ, ನೀವು ಕೊಟ್ಟ ದುಡ್ಡು ಹೇಗೆ ಖರ್ಚಾಗಿದೆ ಎಂದು ಸ್ವಲ್ಪ ನೋಡೋಣ. ಜಾಕ್‌ವೆಲ್‌ಗಳ ಹೆಸರು ಇಲ್ಲ, ರೈಸಿಂಗ್ ಮೈನ್ ಪ್ರಶ್ನೆ ಇಲ್ಲ, ಟೆಕ್ನಿಕಲ್ ಕಮಿಟಿ ಕ್ಲಿಯರೆನ್ಸ್ ಇಲ್ಲ, ಏಳು ಕೋಟಿ ರೂಪಾಯಿಯ ಮೆಷಿನರಿ ಬಂದು ಬಿದ್ದಿದ್ದಾವೆ. ನಾಲ್ಕು ಲಿಫ್ಟ್ ಇರಿಗೇಷನ್‌ಗೆ 10 ಸಾರಿ ಯೋಚನೆ ಮಾಡಿ ಎಂದು ಹೇಳಿದಿರಿ in your regime alone.

54 ಲಿಫ್ಟ್ ಇರಿಗೇಷನ್ ಸ್ಕೀಮ್ಸ್ Is there any water planning, Sir? ಈ ಸದನದಲ್ಲಿ ನಿಮ್ಮ ಅಧ್ಯಕ್ಷತೆಯಲ್ಲಿ ಹಣ ವೋಟು ಮಾಡುತ್ತೇವೆ ನಾವು. ನನ್ನನ್ನು ಎಷ್ಟು ಬೇಕಾದರೂ ನಿಂದನೆ ಮಾಡಿ. ಬಸ್ ಮೇಲೆ ಬರೆಯಿರಿ. ಕೆಲವು ಪತ್ರಿಕೆಗಳು ನನ್ನನ್ನು ಹಾಡಿ ಹೊಗಳುತ್ತವೆ ನಾನು ಜಾತಿವಾದಿ ಎಂದು. ಕೆಲವರು ಯಾರೋ ಒಬ್ಬಿಬ್ಬರು ಇರಲಿ, ಬರೆಯಲಿ. ಅದನ್ನೆಲ್ಲಾ ನೋಡುತ್ತೇನೆ.

Is there is what is required? 7 Crores ಯಾವಾಗ ಡ್ರಾ ಮಾಡಿದ್ದುದು? 1994ರ ಮಾರ್ಚ್‌ನಲ್ಲಿ. ಕೆಲವು ವಿಷಯಗಳನ್ನು ಇಲ್ಲಿ ಹಿಡಿಯಬೇಕಾಗುತ್ತದೆ. ಏಕೆಂದರೆ ಇನ್ನೂ ಹೇಳುವುದು ಬಹಳ ಇತ್ತು, ನನ್ನ ಮನಸ್ಸಿನಲ್ಲಿ ಹೇಳುವುದು ಬಹಳ ಇದೆ. ಆ ಆರ್ಡಿನೆನ್ಸ್ ಈ ಸದನ ಅಪ್ರೂವ್ ಮಾಡಿತು. What are the works you have included? ಬಂಗಾರಪ್ಪನವರೇ ನೀವು ಹೇಳಿದಿರಿ, ಇದು ಓದಿಬಿಟ್ಟು 54 ಆಮೇಲೆ ಓದಿ. ಆಮೇಲೆ ಎರಡೂ ಓದಿ. ನಾನು ಮುಂದುವರೆಯುವುದಿಲ್ಲ, Because the matter is somewhere else ನಿಲ್ಲಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ತಾವು ಏನೋ ಹೇಳಿದ್ದೀರಲ್ಲಾ, ನೀವು ಹೊರಗಡೆ ಲೋಕಸಭಾ ಸದಸ್ಯರಾಗಿ ನ್ಯಾಯ ಮಂಡಲಿಯ ಬಗ್ಗೆ ಹೇಳಿ(ದ್ದೀ)ರಿ.

ಶ್ರೀ ಹೆಚ್.ಡಿ. ದೇವೇಗೌಡ : ಅದು ನನ್ನ ವೈಯುಕ್ತಿಕವಾದ ವಿಷಯಕ್ಕೂ ಇಲ್ಲಿ ಕುಳಿತು ಕೆಲಸ ಮಾಡುವಾಗ ಈ ಸದನದಲ್ಲಿ ಏನು ತೀರ್ಮಾನ ಮಾಡಿದರಲ್ಲಾ, ಈ ಸದನದಲ್ಲಿ ಆ ತೀರ್ಮಾನವನ್ನು It is an unanimous resolution passed in this House. ಆಮೇಲೆ ಅದರ ಬಗ್ಗೆ ಬೇರೆ ಮಾತನಾಡುತ್ತೇನೆ. ಇಲ್ಲಿ ಮಾತನಾಡಿದರಲ್ಲಾ, 28 ಕೆಲಸ ನೀವು ಏನು ಸೇರಿಸಿದ್ದೀರಿ, ಆರ್ಡಿನೆನ್ಸ್ ಅದನ್ನು ಪಾಸ್ ಮಾಡಿದಿರಿ. ಇದನ್ನು ಸಬ್‌ಮಿಟ್ ಮಾಡಿದ್ದಾರೆ ಅಲ್ಲಿ, ಇದಕ್ಕೆ ಏನು ಹೇಳುತ್ತೀರಿ ಈಗ? ನಾನು ನಿಲ್ಲಿಸುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ಆಮೇಲೆ ಮಾತನಾಡಿಕೊಳ್ಳೋಣ

ಶ್ರೀ ಹೆಚ್.ಡಿ. ದೇವೇಗೌಡ : ನಾನು ನಿಲ್ಲಿಸುತ್ತೇನೆ ಅಷ್ಟೇ, ಮುಂದಕ್ಕೆ ಹೋಗುವುದಿಲ್ಲ, I know the implications. ಒಂದು ಸ್ಟೇಜ್‌ನಲ್ಲಿ ಸನ್ಮಾನ್ಯ ವೀರಪ್ಪ ಮೊಯಿಲಿಯವರೇ ಈ ಇಲಾಖೆಯಲ್ಲಿ ನಡೆಯುವುದನ್ನು ಸುಧಾರಣೆ ಮಾಡಬೇಕು ಎಂಬ ಒಂದೇ ವ್ಯಾಮೋಹದಲ್ಲಿ ನಾನು ಮಾತನಾಡುತ್ತಿದ್ದೇನೆ. ಕಂಟ್ರಾಕ್ಟರುಗಳು ಆಫೀಸರ್ಸ್ ಜೊತೆ ಕನ್ನೈವ್ ಆದರೆ ಅವರನ್ನು ಕ್ರಿಮಿನಲ್ ಪ್ರಾಸಿಕ್ಯೂಟ್ ಮಾಡಬೇಕು ಎನ್ನುವ ಕ್ಲಾಸ್‌ನ್ನು ಇಂಟ್ರೊಡ್ಯೂಸ್ ಮಾಡಿದ್ದದು ಜನತಾ ದಳ ಸರ್ಕಾರದಲ್ಲಿ, ಕೆಲವರಿಗೆ ಮಣಿಯಬೇಕಾಗಿದ್ದರೆ ಆ ಕ್ಲಾಸ್‌ನ್ನು ಇಂಟ್ರೊಡ್ಯೂಸ್ ಮಾಡುತ್ತಿರಲಿಲ್ಲ.

Criminal proceedings against the Departmental officers & the contractors for the lapses :

The Govt also initiate Criminal proceedings against the concerned departmental officers who are directly responsible for the lapses and also

against the contractors who have colluded with the departmental officers in the lapses and fradulently received the amount not due to them legitimately. This system I have introduced.

ನೀವು ಯಾರೋ ಆಫೀಸರ್ ಅನ್ನು ವರ್ಗ ಮಾಡಿದ್ದೇವೆಂದು ಹೇಳಿದ್ದೀರಿ. ವರ್ಗ ಏಕೆ ಮಾಡುವುದು ಸಸ್ಪೆಂಡ್ ಮಾಡಿದ್ದೇವಲ್ಲಾ; ಅಷ್ಟೊಂದು ಚಿಲ್ಲರೆ ಕೆಲಸಕ್ಕೆ ನಾವು ಹೋಗಬೇಕಾಗಿಲ್ಲ, ನನ್ನ ತಮ್ಮನ್ನನ್ನು ಅರೆಸ್ಟ್ ಮಾಡಿದಂಥ ಸಬ್ ಇನ್‌ಸ್ಪೆಕ್ಟರ್ ಅವರನ್ನು ವರ್ಗ ಮಾಡಲಿಲ್ಲ, ಇದು ಯಾವ ದೊಡ್ಡ ವಿಷಯವೆಂದು ಅವನಿಗೆ ನಾನು ಫೋರ್ಸ್ ಮಾಡಬೇಕು? He has applied for leave and gone five days ealier ಕಾರಣವೆನೆಂದರೆ ಎಲ್.ಓ. ಪೇಮೆಂಟ್ ಮಾಡಿಸಿ ಕುತ್ತಿಗೆಯ ಮೇಲೆ ಕುಳಿತುಕೊಂಡು ಮಾಡಿಸುತ್ತಾರೆ ಎಂದು. ಪಾಪ ಅವನ ಹೆಸರು ಹೇಳಿದಿರಿ ಧೂಮಪ್ಪ ನಾರಾಯಣ ಎಂದು. ಅವನು ರಜಾ ಹಾಕಿ ಓಡಿಹೋದ. ನಾನು ಅವನನ್ನು ಟ್ರಾನ್ಸ್‌ಫರ್ ಮಾಡಲಿಲ್ಲ, ಇದೆಲ್ಲಾ ನನಗೆ ಗೊತ್ತು, ಇದು ಏನು ದೊಡ್ಡ ವಿಷಯ, ಏನು ನಡೆಯಿತು, ಏನಾಗುತ್ತಿದೆ. ಇದೆಲ್ಲವನ್ನೂ ನಿಮ್ಮ ಹತ್ತಿರ ಒಂದು ಸಲ ಹೇಳಿದ್ದೇನೆ. When once I assumed the office ನಾನು ಯಾವುದನ್ನಾದರೂ ಸ್ಪೆಷಿಫಿಕ್ಕಾಗಿ ತೆಗೆದುಕೊಳ್ಳುವುದಾದರೆ ನಾನು ಅದರಿಂದ ಸಣ್ಣವನಾಗುತ್ತೇನೆಂದು ನಾನು ನಿರ್ಣಯ ಮಾಡಲಿಲ್ಲ Suspension of Hemavathi Engineers for bad quality of work.

ಹೇಮಾವತಿ ಪ್ರಾಜೆಕ್ಟ್‌ನಲ್ಲಿ ಒಬ್ಬ ಇಂಜಿನಿಯರನ್ನು ದಿ:10-2-95ರಲ್ಲಿ ಸಸ್ಪೆಂಡ್ ಮಾಡಿದ್ದಾರೆ. 13-2-95ರಲ್ಲಿ ರೀ ಇನ್‌ಸ್ಟೇಟ್ ಮಾಡಿದ್ದಾರೆ. ಒಬ್ಬ ಆಫೀಸರ್ ಸಸ್ಪೆಂಡ್ ಆಗಿ ಮತ್ತೆ ಎರಡು ದಿನಗಳಲ್ಲಿ ರೀಇನ್‌ಸ್ಟೇಟ್ ಮಾಡುವುದಕ್ಕೆ ನಾನು ಬರುತ್ತೇನಾ? ಇದರ ಬಗ್ಗೆ ನಾನು ಎನ್‌ಕ್ವೈರಿ ಮಾಡಿಸುತ್ತೇನೆ. Officers colluding with the contractors ಎಂದು ಏನು ಹೇಳಿದ್ದನಲ್ಲಾ, ಇದು ಅದಕ್ಕೆ ಇನ್ನೊಂದು ಟ್ರೈಯಲ್‌ಕೇಸ್ ಈ ಕ್ಲಾಸ್ ಓದಿದನಲ್ಲಾ, ಅದರ ಪ್ರಕಾರ ಇದನ್ನು ಟ್ರೈಯಲ್ ಕೇಸಾಗಿ ಇಂಡ್ರೊಡ್ಯೂಸ್ ಮಾಡುತ್ತೇನೆ. ಇನ್ನೊಬ್ಬ ಆಫೀಸರ್ ಹೆಸರನ್ನು ಹೇಳಿದರು. ಅವರನ್ನು ದಿ|| 9-1-95ರಂದು ಸಸ್ಪೆಂಡ್ ಮಾಡಿದ್ದಾರೆ. ದಿ|| 13-2-95ರಂದು ಅವರಿಗೆ ನೋಟೀಸ್ ಬಂದಿದೆ. On 10.2.95 he was surprised and on 13.2.95 he was re-instated.

ಇನ್ನೊಬ್ಬ ಆಫೀಸರ್ ರಜೆ ಎಷ್ಟು ದಿವಸಗಳು ಹಾಕಿದ್ದಾನೆಂದರೆ ಏಪ್ರಿಲ್‌ನಲ್ಲಿ 230 ದಿವಸಗಳು, ಸೆಪ್ಟೆಂಬರ್ 15 ದಿವಸಗಳು, ಡಿಸೆಂಬರ್‌ನಲ್ಲಿ 24 ದಿವಸಗಳು, ಮಾರ್ಚ್‌ನಲ್ಲಿ 7 ದಿವಸಗಳು, ರಜೆ ಹಾಕಿದ್ದಾರೆ. ಅವರು ಎಷ್ಟೆಷ್ಟು ದಿವಸಗಳು ರಜೆಯನ್ನು ಹಾಕಿದ್ದಾರೆಂಬುದನ್ನು ಓದುತ್ತಿದ್ದೆ. ಇನ್ನೊಂದು ಡಿಸೆಂಬರ್‌ನಲ್ಲಿ 24 ದಿವಸಗಳು, ಮಾರ್ಚ್‌ನಲ್ಲಿ 7 ದಿವಸಗಳು, ಸೆಪ್ಟೆಂಬರ್‌ನಲ್ಲಿ 15 ದಿವಸಗಳು ಹಾಕಿದ್ದಾರೆ. ನಾನೇನೂ ಲೀವ್ ಫೋರ್ಸ್ ಮಾಡಿ ಕಳುಹಿಸಿಲ್ಲ. ನೀವು ಎರಡು ಸೆಟ್‌ಗಳನ್ನು ಹೇಳಿದ್ದೀರಿ. ತುಮಕೂರಿನಲ್ಲಿ 13-1-95ರಲ್ಲಿ ಸಸ್ಪೆಂಡ್ ಮಾಡಿದ್ದಾರೆ, ದಿ|| 3-2-95ರಲ್ಲಿ 3-2-95ರಲ್ಲಿ ರೀ ಇನ್‌ಸ್ಟೇಟ್ ಮಾಡಿದ್ದು, ಯಾರ ಅನುಮತಿಯ ಮೇಲೆ ಮಾಡಿದ್ದಾರೆ. ಇದೆಲ್ಲವನ್ನೂ ಎನ್‌ಕ್ವೈಯರಿ ಮಾಡಿಸುತ್ತೇವೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಒಂದು ಕಡೆಗೆ ಸಿಮೆಂಟ್ ತೆಗೆದುಕೊಳ್ಳುತ್ತಾರೆ. ಇನ್ನೊಂದು ಕಡೆ ಹೋಗುತ್ತದೆಂದು ಹೇಳಿದರು. ಅವರು ಹೆಸರು ಹೇಳಲಿಲ್ಲ ಯಾವ ಪ್ರಾಜೆಕ್ಟ್‌ನಿಂದ ಯಾವ ಪ್ರಾಜೆಕ್ಟ್‌ಗೆ ಎಂದು ನೀವಲ್ಲ ಹೇಳಿದ್ದು, ನಮ್ಮ ಪಾರ್ಟಿಯವರೇ, ಭಾಷಣದಲ್ಲಿ ನೀವು ಹಾಗೆಯೇ ಪಾಸಿಂಗ್ ರೆಫರೆನ್ಸ್ ಮಾಡಿದಿರಿ. ನನ್ನ ಮೇಲೆ ಏನೂ ಹೇಳಲಿಲ್ಲ.

1990ರಲ್ಲಿ ನಾನು ಸೋತು ಮನೆಗೆ ಹೋದ ಮೇಲೆ ಸಿಮೆಂಟ್ ತೀವ್ರ ಕೊರತೆಯಿಂದ ಕೃಷ್ಣ ಮೇಲ್ದಂಡೆ ಯೋಜನೆಯಷ್ಟು ಪ್ರಮಾಣದಲ್ಲಿ ಸಾಮಗ್ರಿಗಳನ್ನು ವರ್ಗಾಯಿಸಲಾಗಿದೆ. ಸಿಮೆಂಟನ್ನು ಆರು ತಿಂಗಳಿಗೂ ಹೆಚ್ಚು ಕಾಲ ದಾಸ್ತಾನು ಮಾಡಿದರೆ ಅದು ಕೆಡುವುದರಿಂದ ಬೇರೆ ಕಡೆಗೆ ಉಪಯೋಗಿಸುವುದಕ್ಕಾಗಿ ವರ್ಗಾಯಿಸಲಾಗಿದೆ. ಇದು ನಿಮ್ಮ ಸರ್ಕಾರ ಕೊಟ್ಟಂತಹ ಉತ್ತರ. ಏಕೆಂದರೆ ಒಂದು ವರ್ಷದಲ್ಲಿ ನಾವು ವರ್ಲ್ಡ್ ಬ್ಯಾಂಕಿನಿಂದ ತೆಗೆದುಕೊಂಡ ಹಣ ಖರ್ಚು ಆಗಿಲ್ಲವೆಂದು ಆ ವರ್ಷ ಸಿಮೆಂಟ್ ಇಟ್ಟಂಥ ಹಣ ತೆಗೆದುಕೊಳ್ಳುವುದಕ್ಕೆ ನಾನೇ ಅನುಮತಿಯನ್ನು ಕೊಟ್ಟಿದ್ದೆ. ಏಕೆಂದರೆ ಹಣ ಲ್ಯಾಪ್ಸ್ ಆಗಬಾರದು ಸ್ಟೀಲ್ ನಮಗೆ ದೂರು ಬರುತ್ತದೆಂದು ಅದರ ಉಪಯೋಗ ಆರು ತಿಂಗಳಲ್ಲಿ ಉಪಯೋಗ ಮಾಡಲಾಗದಿರುವುದರಿಂದ ಅದನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗಾಯಿಸಿ ಎಂದು ಇಲಾಖೆಯ ಅಧಿಕಾರಿಗಳಿಗೆ ಹೇಳಿದ್ದು. ಅದನ್ನು ಅಲ್ಲಿಂದ ತಂದು ಈ ಕೆಲಸವನ್ನು ನಿಲ್ಲಿಸಿ ಈ ಕೆಲಸ ಮಾಡಿ ಎಂದು ಹೇಳಿದ್ದು ಅಲ್ಲ. ನಿಮ್ಮ ಸರ್ಕಾರದ ಮಂತ್ರಿಗಳು ಈ ದೂರನ್ನು ಕೊಟ್ಟಿರುವುದು. ಇನ್ನು ಕೃಷ್ಣ ಮೇಲ್ದಂಡೆ ಬೇಸಿನ್ ಬಗ್ಗೆ ಹೇಳುತ್ತೇನೆ. ಏಕೆಂದರೆ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ನಾನು ತುಮಕೂರಿನ ವಿಷಯ ಬಿಟ್ಟು. ಮುಂದೆ ಹೋಗಲಿಲ್ಲವೆಂದು ಹೇಳುತ್ತಾರೆ ಎಂಬುದು ನನಗೆ ಗೊತ್ತು.

ಶ್ರೀ ವಾಟಾಳ್ ನಾಗರಾಜ್ : ನೀವು ಏಕೆ ಮುಂದಿನ ವಿಷಯಕ್ಕೆ ಹೋಗಲಿಲ್ಲವೆಂದು ನಮಗೆ ಅನಿಸಿತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಎಂ. ಖರ್ಗೆ : ತುಮಕೂರು ಮತ್ತು ಬೆಂಗಳೂರು ಮಧ್ಯೆ ಬಹಳ ಅಪಘಾತಗಳು ಆಗುತ್ತಿವೆ.

ಶ್ರೀ ಹೆಚ್.ಡಿ. ದೇವೇಗೌಡ : ಪೊಲಿಟಿಕಲ್ ಆಕ್ಸಿಡೆಂಟ್ಸ್ ಆಗುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು : ತುಮಕೂರಿಗೆ ಏನಾದರೂ ಒಂದು ಗತಿ ಕಾಣಿಸಿ ಮುಂದೆ ಹೋಗಿ.

ಶ್ರೀ ಹೆಚ್.ಡಿ. ದೇವೇಗೌಡ : ಆಫೀಸರ್ ವರ್ಗದ ಬಗ್ಗೆ ನನ್ನ ಹತ್ತಿರ ಚೀಟಿಗಳು ಇವೆ. ಒಬ್ಬ ಆಫೀಸರ್ ಒಂದೇ ಡಿವಿಷನ್‌ನಲ್ಲಿ ನಾಲ್ಕು ಸಾರಿ ಬದಲಾವಣೆಯಾಗುತ್ತಾನೆ. ಇದೆಲ್ಲವನ್ನೂ ಹೇಳುವಾಗ ನನಗೇನೂ ಸಂತೋಷವಾಗಲಿ ಆನಂದವೇನೂ ಇಲ್ಲ. ಇದು ಒಂದು ಸಲವಲ್ಲ ನಾಲ್ಕು ಸಲ ಈ ರೀತಿಯಾಗುತ್ತದೆ. ಕೃಷ್ಣ ಮೇಲ್ದಂಡೆಯ ಬೇಸಿನ್ ಬಗ್ಗೆ ಹೇಳುವಾಗ ಕಾವೇರಿಯ ಬಗ್ಗೆ ಒಂದು ಶಬ್ದವನ್ನು ಹೇಳಬೇಕಾಗುತ್ತದೆ. ಇದನ್ನು ಭಾಷಣದ ಕೊನೆಯಲ್ಲಿ ಹೇಳುತ್ತೇನೆ. ಇದರ ಬಗ್ಗೆ ಮಾನ್ಯ ನಂಜೇಗೌಡರು ಎಳೆ ಎಳೆಯಾಗಿ ಅದರ ಪೂರ್ಣ ಇತಿಹಾಸವನ್ನು ಬಿಚ್ಚಿಟ್ಟಿದ್ದಾರೆ. ಹಳೆಯ ದುರಂತಗಳು ಹೇಗೆ ನಡೆದುಕೊಂಡು ಬಂತು ಎಂಬುದನ್ನು ಹೇಳಿದ್ದಾರೆ. ಈಗ ನಾವು ಹಾಲಿ ಇರತಕ್ಕ ಯೋಜನೆಗಳಲ್ಲಿ 209.00 ಟಿಎಂಸಿ ಹಾಗೂ ongoing projectsನಲ್ಲಿ 280 ಟಿಎಂಸಿ ನೀರನ್ನು ನಾವು ಉಪಯೋಗಿಸಿದ್ದೇವೆ.

4.00 ಪಿ.ಎಂ.

ಈ ಆನ್‌ಗೋಯಿಂಗ್ ಪ್ರಾಜೆಕ್ಟ್‌ನ್ನು ಕಂಪ್ಲೀಟ್ ಮಾಡಿದರೆ 131.88, ಆ ಬಾಕಿ ಏನಿದೆ ಅದನ್ನು ನಾವು ಮುಗಿಸಲಿಕ್ಕೆ ಸಾಧ್ಯ ಇದೆ. ಅಲ್ಲಿಗೆ ಎಷ್ಟಾಗುತ್ತದೆಂದು ಹೇಳಿದರೆ 490.70 ಈಗ ಆಗಿರುವುದು, ಅದನ್ನು ಕಂಪ್ಲೀಟ್ ಮಾಡಿದರೆ ಸುಮಾರು 622 ಟಿಎಂಸಿ ಆಗುತ್ತದೆ, ಕಾರ್ಯಗತವಾಗುತ್ತಿರುವ ಪ್ರಾಜೆಕ್ಟ್‌ನ್ನು ಕಂಪ್ಲೀಟ್ ಮಾಡಿದರೆ ಎಂದು ಹೇಳಿದೆ. ಆನ್‌ಗೋಯಿಂಗ್ ಪ್ರಾಜೆಕ್ಟ್‌ನಲ್ಲಿ ನಾವು ವಾಟರ್ ಪ್ಲಾನ್ ಮಾಡಿಕೊಂಡಿರತಕ್ಕಂಥದ್ದು 413 ಟಿ.ಎಂ.ಸಿ. ಅದರಲ್ಲಿ ಯುಟಿಲೈಸ್ ಮಾಡಿರುವುದು

285 ಟಿ.ಎಂ.ಸಿ. ಹಳೆಯ ಎಲ್ಲಾ ಪ್ರಾಜೆಕ್ಟ್‌ಗಳು ಸೇರಿ 209. ಅಂದರೆ 490.70 ಇನ್ನು 131.88ನ್ನು ಆನ್‌ಗೋಯಿಸಿಂಗ್ ಪ್ರಾಜೆಕ್ಟ್‌ನಲ್ಲಿ ಯಾಸ ಮಾಡಿಕೊಳ್ಳಬಹುದು, ಹೊಸ ಪ್ರಾಜೆಕ್ಟ್‌ಗಳದ್ದು 105.52 ಟಿಎಂಸಿ ಇದೆ. ಅದು ಸೇರಿದರೆ 237.40 ಅಷ್ಟು ಟಿಎಂಸಿ ನೀರನ್ನು ನಾವು ಉಪಯೋಗ ಮಾಡಿಕೊಳ್ಳಲಿಕ್ಕೆ ಸಾಧ್ಯ. ಸ್ಕೀರ್ ಎನಲ್ಲಿ ಏನು ಮಾಡಿದ್ದಾರೆಂದರೆ, ಗೋದಾವರಿ ಡೈವರ್ಷನ್‌ನಿಂದ ಅಪ್ಪರ್ ತುಂಗಾಕ್ಕೆ ನೀರು ಏನು ಇಟ್ಟುಕೊಂಡಿದ್ದರು ಅದು ಸಾಕಾಗುವುದಿಲ್ಲ ಎಂದು ಹೇಳಿ 8-9ಟಿಎಂಸಿ ತೆಗೆದುಕೊಂಡಿದ್ದಾರೆ. "ಎ" ಅಂಡ್ "ಬಿ" ಸ್ಕೀಂ ಸೇರಿದರೆ 379. ಆಗುತ್ತದೆ. ಸನ್ಮಾನ್ಯ ಅಧ್ಯಕ್ಷರೇ, ಇದಕ್ಕೆ ಬೇಕಾದಂಥ ಹಣ, ಸೂಕ್ಷ್ಮವಾಗಷ್ಟೇ ಹೇಳುತ್ತೇನೆ. Allocation of water fresh irrigation in Godavari river diversion to Krishna Basin; ಅಪ್ಪರ್ ಭದ್ರಾಕ್ಕೆ 8, ಆಮೇಲೆ ಭೀಮಾ ಫ್ಲೋಗೆ 9, Hippargi ಫ್ಲೋಜ್ 2ಗೆ 4 ಹೀಗೆ ಒಟ್ಟು 23 ಟಿ.ಎಂ.ಸಿ. ಅದು ಗೋದಾವರಿ ಡೈವರ್ಷನ್‌ಗೆ ತೆಗೆದುಕೊಂಡಿದ್ದಾರೆ.

ಈಗ ಆನ್‌ಗೋಯಿಂಗ್‌ನ್ನು ನಾವು ಕಂಪ್ಲೀಟ್ ಮಾಡಬೇಕಾಗಿದ್ದರೆ ಸುಮಾರು 5992 ಕೋಟಿ ರೂಪಾಯಿ ಬೇಕು ಎಂದು ಹೇಳಿದ್ದಾರೆ, ಬಂಗಾರಪ್ಪನವರು ಸಭೆಗೆ ಬರಲಿಲ್ಲ ಎಂದು ಕಾಣುತ್ತದೆ, ಅವರು ಕೃಷ್ಣಾ ಜಲ ನಿಗಮ ಏಕೆ ಮಾಡಿದರು. ಕೃಷ್ಣಾ ವ್ಯಾಲಿ ಅಥಾರಿಟಿ ಏಕೆ ಮಾಡಲಿಲ್ಲ ಎಂದು ಪ್ರಶ್ನೆ ರೈಸ್ ಮಾಡಿದರು, ಇದಕ್ಕೆ ಮುಂಚೆಯೇ ನಾವು ಹಣವನ್ನು ಯಾವ ರೀತಿ ಇಲ್ಲಿಯವರೆಗೆ ಸ್ಪೆಂಡ್ ಮಾಡಿದ್ದೇವೆ ಎಂಬುದರ ಬಗ್ಗೆ ಒಂದನ್ನು ಸನ್ಮಾನ್ಯ ಮೊಯಿಲಿಯವರ ಕಾಲದ್ದು ಹೇಳುತ್ತೇನೆ. ಹಿಂದಿನದೆಲ್ಲವನ್ನೂ ಹೇಳುವುದಕ್ಕೆ ನಾನು ಹೋಗುವುದಿಲ್ಲ. 1993-94ರಲ್ಲಿ 711 ಕೋಟಿ ನೀವು ಇಟ್ಟಿದ್ದೀರಿ, ಖರ್ಚು ಮಾಡಿರತಕ್ಕಂಥದ್ದು 652 ಕೋಟಿ 42 ಲಕ್ಷ 1994-95ರಲ್ಲಿ 918 ಕೋಟಿ ಅದು ಬಜೆಟ್ ನಿಮ್ಮದ್ದೇ, ನಾವು ನಾಲ್ಕು ತಿಂಗಳು ಕೊನೆಗೆ ಬಂದಿದ್ದೇವೆ. 1994-95ರಲ್ಲಿ ಖರ್ಚಾಗಿರತಕ್ಕಂಥದ್ದು 776.12 ಕೋಟಿ ರೂ.ಗಳು. ಅದನ್ನು ನೀವು ಮತ್ತೆ ರಿವೈಸ್ ಮಾಡಿದಿರಿ.

ಶ್ರೀ ವೈ. ರಾಮಕೃಷ್ಣ : ಇದರಲ್ಲಿ ನೀವು ಬಂದಮೇಲೆ ಎಷ್ಟಾಯಿತು?

ಶ್ರೀ ಹೆಚ್.ಡಿ. ದೇವೇಗೌಡ : ಅದನ್ನೂ ಕೊಡುತ್ತೇನೆ, ನೀವು ಇದನ್ನು ಕೇಳುತ್ತೀರಿ ಎಂತಲೇ ನಾನು ನಿರೀಕ್ಷಣೆ ಮಾಡಿಕೊಂಡು ಬಂದಿದ್ದೇನೆ, L.O.C. Released Major and Medium Projects - Between December 1994 to March 1995 - 235.61 crores. 235 ಕೋಟಿ 61 ಲಕ್ಷ ಎಲ್‌ಓಸಿ ರಿಲೀಜ್ ಮಾಡಿದ್ದೇವೆ. ಒಟ್ಟು ಖರ್ಚಾಗಿರತಕ್ಕಂಥ ಹಣ 776.12 ಕೋಟಿ ರೂ.ಗಳು ಅದರಲ್ಲಿ 235.61 ಕೋಟಿ ರೂಪಾಯಿಗಳನ್ನು ನಾವು ರಿಲೀಜ್ ಮಾಡಿದ್ದೇವೆ, ಎಲ್ಲಾ ಟೆಂಡರ್ ವರ್ಕ್ಸ್‌ದ್ದು ಕ್ಲೈಂ ಸೆಟಲ್ ಮಾಡಿದ್ದೇವೆ. ಡಿಪಾರ್ಟ್‌ಮೆಂಟ್ ತೆಗೆದುಕೊಂಡಿರುವುದು ಇಲ್ಲಿಯವರೆಗೆ ಏನು ಹೇಳಿದನಲ್ಲಾ ಅವು ನಿಮ್ಮ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಮುಖಾಂತರ ಕೊಟ್ಟಿರುವುದು, ನಾನು ಕೊಟ್ಟಿದ್ದ ಹದಿಮೂರು ಕೋಟಿ ರೂ.ಗಳನ್ನು ವಾಪಸ್ಸು ಕಳುಹಿಸಿದರು ಎಂದು ನಾನು ಹೇಳಿದೆ. ಏಕೆಂದರೆ ಅವರಿಗೆ ಪೇಮೆಂಟ್ ಮಾಡುವುದಕ್ಕೆ ಭಯ, ಮತ್ತೆ ಅದೆಲ್ಲಾ ಚೀಫ್ ಇಂಜಿನಿಯರ್‌ಗಳು ಲೆಕ್ಕಾಚಾರ ಮಾಡುತ್ತಿದ್ದಾರೆ. ಅದರಿಂದ ನಾನು ಈ ವರ್ಷಕ್ಕೆ ನೀವು ಎಷ್ಟು ಹಣ ಇಟ್ಟಿದ್ದೀರಿ, ನೀವು ಏನು ಮಾಡಿದಿರಿ ನಿಮ್ಮ ಮನಸ್ಸಿನಲ್ಲಿ ಬರತಕ್ಕಂಥ ಅಪ್ರಿಹೆನ್‌ಷನ್ ಸರಿ, ಅದೇನೂ ತಪ್ಪು ಎಂದು ನಾನು ಹೇಳುವುದಿಲ್ಲ, Special provision for Major and Medium projects 1994-95 Rs 618 crores. ಅದರಲ್ಲಿ ಖರ್ಚಾಗಿರತಕ್ಕಂಥದ್ದು 526.12 ಕೋಟಿ. ನಾನು ಮೊದಲು ಹೇಳಿದ ಫಿಗರ್ಸ್ ಪ್ಲಾನ್ ಅಂಡ್ ನಾನ್‌ಪ್ಲಾನ್ ಎರಡೂ ಸೇರಿ. 1994-95ರಲ್ಲ 526 ಕೋಟಿ ಪ್ಲಾನ್‌ನಲ್ಲಿ ಖರ್ಚಾಗಿದೆ. ಹಿಂದಿನ ವರ್ಷದ ಲೆಕ್ಕ

ತೆಗೆದೆಯೆ 1995-96ಕ್ಕೆ ನಾವು ಇಟ್ಟಿರತಕ್ಕಂಥದ್ದು 767.50 ಕೋಟಿ ಎಂದು ಇಟ್ಟಿದ್ದೇವೆ. ನೀವೇನು ಬಡ್ಜೆಟ್ಟಿನಲ್ಲಿ ಹಿಂದಿನವರ್ಷ ಇಟ್ಟಿದ್ದಿರಿ, ಅದನ್ನೇ ಈ ಸಾರಿಯೂ ಇಡಬೇಕೆಂದೂ ನಮ್ಮ ಅಧಿಕಾರಿಗಳು ಸಲಹೆ ಕೊಟ್ಟಿದ್ದಾರೆ. ಇದರೊಳಗೆ ಬಡ್ಜೆಟ್ಟಿನಲ್ಲಿ 467 ಕೋಟಿ ರೂ.ಗಳು ಬಡ್ಜೆಟ್ಟಿನಲ್ಲಿ ಈ ಸದನದಲ್ಲಿ ಮಂಜೂರಾತಿ ಆಗಿದೆ. ಕೃಷ್ಣಾ ಜಲಭಾಗ್ಯ ನಿಗಮ ಇದೆಯಲ್ಲಾ ಅದರಿಂದ ನಾವೇನು ಎತ್ತುತ್ತೇವೆ ಎಂದು ಹೇಳಿದ್ದೇವೆ ಆ ಹಣ ಈ ಸದನದಲ್ಲಿ ಓಟಿಂಗ್ ಆಗಬೇಕಾದ್ದಿಲ್ಲ.

ಬಂಗಾರಪ್ಪನವರು ಬೆಳಿಗ್ಗೆ ಒಂದು ಇಷ್ಯೂ ರೈಸ್ ಮಾಡಿದರು, ನೀವು ಕೃಷ್ಣಾ ಮೇಲೆ ಅಥಾರಿಟಿ ಏಕೆ ಮಾಡಲಿಲ್ಲ, ಪ್ರೆಸಿಡೆಂಡ್‌ರವರು ಅನುಮತಿ ಕೊಟ್ಟಿದ್ದಾರೆಂದು ಅವರು ಎತ್ತಿದರು. ನಾನೇ ಕೂಡದು ಎಂದು ಹೇಳಿದೆ, ಕಾರಣ ಕೃಷ್ಣಾ ವ್ಯಾಲಿ ಅಥಾರಿಟಿಯನ್ನು ನಾನು ಜಾರಿಗೆ ಕೊಟ್ಟರೆ ಈ ಸದನದಲ್ಲಿ ಯಾವುದೇ ವಿಷಯ ಓಟಿಂಗ್ ಬರುವುದಿಲ್ಲ, ಈಗೇನು ಮುನ್ನೂರು ಕೋಟಿ ನಾವು ಕೃಷ್ಣಾ ಜಲ ನಿಗಮಕ್ಕೆ ಹೊರಗಡೆ ಲೋನ್ ರೈಸ್ ಮಾಡುತ್ತೇವೆ ಎಂದು ಹೇಳಿದ್ದೇವೆ ಅದಕ್ಕೆ ಸದನದಲ್ಲಿ ಓಟಿಂಗ ಬೇಕಾಗಿಲ್ಲ, ಇಡೀ ಕೃಷ್ಣಾ ಬೇಸನ್ನಿನ ಎಲ್ಲಾ ಯೋಜನೆಗಳನ್ನು ನಾನು ಕೃಷ್ಣಾ ವ್ಯಾಲಿ ಅಥಾರಿಟಿಗೆ ತಂದರೆ ಈ ಸದನಕ್ಕೆ ನೀವೇನು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸತಕ್ಕಂಥ ಅಧಿಕಾರ ಇದೆಯೋ ಅಥವಾ ಅಡಿಟ್ ರಿಪೋರ್ಟ್ ಪಿ.ಎ.ಸಿ. ಮುಂದೆ ಬರುತ್ತದೋ ಅದಕ್ಕೆ ಅವಕಾಶ ಆಗುವುದಿಲ್ಲ. The entire House will be in darkness. ಇದನ್ನು ನೀವು ಮಾಡಬಾರದು, ಕೇವಲ ಒಂದು ಯೋಜನೆಯನ್ನು ಮಾತ್ರ ನೀವು ಆ ಒಂದು ಕೃಷ್ಣಾ ಜಲ ನಿಗಮದ ವ್ಯಾಪ್ತಿಯಲ್ಲಿ ತನ್ನಿ, ಬಾಕಿ ಯೋಜನೆಗಳೆಲ್ಲಾ ವಿಧಾನಸಭೆಯಲ್ಲಿ ಓಟಿಂಗ್ ಆಗಬೇಕು, ಚರ್ಚೆ ಆಗಬೇಕು, ಸದನದಲ್ಲಿ ಅದು ಚರ್ಚೆಯಾಗದೆ ಓಟಿಂಗ್ ಆಗದೇ ಇದ್ದರೆ ಸರಿಹೋಗುವುದಿಲ್ಲ.

ಇದನ್ನು ನಾನೇ ಸ್ವತಃ ನಿರ್ಣಯ ಮಾಡಿದ್ದುದು, ಅದಿಲ್ಲದಿದ್ದರೆ ಈ ಸದನದಲ್ಲಿ ಚರ್ಚೆ ಆಗಬೇಕಾದ್ದಿಲ್ಲ, ಸದನದಲ್ಲಿ ಒಂದು ವಾರ್ಷಿಕ ವರದಿಯನ್ನು ಇಡುತ್ತಿದ್ದೆವು. ಸ್ವಾಮಿ ಮುನ್ನೂರು ಕೋಟಿ ಎಂದು ಇಟ್ಟುಕೊಂಡಿದ್ದಾರೆ, ನಮ್ಮ ಆಫೀಸರೆಲ್ಲಾ ಮುನ್ನೂರು ಕೋಟಿ ನಾವು ರೈಸ್ ಮಾಡುತ್ತೇವೆಂದು ಹೇಳಿ, ಅಂದರೆ ಅದು ಅಲ್ಲಿಗೆ 767 ಕೋಟಿ ಬಡ್ಜೆಟರಿ ಸಪೋರ್ಟ್ 467 ಕೋಟಿ ಇವತ್ತು ಕೃಷ್ಣಾ ಭಾಗ್ಯ ಜಲ ನಿಗಮದಿಂದ ಮುನ್ನೂರು ಕೋಟಿ ಹೀಗೆ ಒಟ್ಟು 767 ಕೋಟಿ ನಾವು ಖರ್ಚು ಮಾಡಬೇಕು ಎನ್ನತಥದ್ದು ಈ ಸರ್ಕಾರ ನಿರ್ಣಯ ಮಾಡಿರತಕ್ಕದ್ದು. ಆದರೆ ನಾನು ಕೃಷ್ಣಾ ಜಲ ನಿಗಮದಿಂದ ಮೊದಲೆ ನಿರ್ಣಯ ಮಾಡಿದ್ದು 800 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಬೇಕು ಎಂದು ಈ ವರ್ಷ ರೈಸ್ ಮಾಡಿದ್ದು, ಅದರಲ್ಲಿ ಎರಡು ಫೇಸ್‌ನಲ್ಲಿ ನಾವು ರೈಸ್ ಮಾಡಬೇಕೆಂದು ಮಾಡಿದ್ದೇವೆ, ಅಧಿಕಾರಿಗಳು ಹೇಳಿದರು ಒಂದೇ ಸಾರಿ ನೀವು 800 ಕೋಟಿ ರೈಸ್ ಮಾಡಿದರೆ ಬಡ್ಡಿ ಬರುತ್ತದೆ, ಒಂದೇ ಸಾರಿ ಖರ್ಚು ಮಾಡುವುದಕ್ಕೆ ಆಗುವುದಿಲ್ಲ, ಎರಡು ಫೇಸಿನಲ್ಲಿ ಮಾಡೋಣ, ಮೊದಲ ಆರು ತಿಂಗಳಿನಲ್ಲಿ 400 ಕೋಟಿ ರೂಪಾಯಿಗಳನ್ನು ಮತ್ತು ನಂತರದ ಆರು ತಿಂಗಳಿನಲ್ಲಿ 400 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ.

ಸ್ವಾಮಿ ನಾನು ಆ ಭಾಗ, ಈ ಭಾಗ ಎಂದು ಮಾತನಾಡುವುದಿಲ್ಲ. ಅದರ ಅವಶ್ಯಕತೆ ನನಗೆ ಇಲ್ಲ, ನಾನು ನಿಮ್ಮನ್ನು ಕೈ ಮುಗಿದು ಪ್ರಾರ್ಥನೆ ಮಾಡುತ್ತೇನೆ. ನೀವೂ ನಮ್ಮ ಹಾಗೆ ರಾಜಕೀಯದಲ್ಲಿ ಸಾಕಷ್ಟು ಹೋರಾಟ ನಡೆಸಿ ಈ ಸ್ಥಾನಕ್ಕೆ ಬಂದಿದ್ದೀರಿ. ಆ ಮಾತನ್ನು ಇಲ್ಲಿಗೇ ನಿಲ್ಲಿಸೋಣ. ಮುಂದುವರೆಸುವುದು ಬೇಡ. ಸೆಕೆಂಡ್ ಫೇಸ್ ಆಫ್ ದಿ ಫಸ್ಟ್ ಸ್ಟೇಜ್‌ಗೆ ವರ್ಲ್ಡ್ ಬ್ಯಾಂಕ್‌ನಿಂದ ಅಪ್ರೂವಲ್

ಕೊಡುವುದಿಲ್ಲ ಎಂದು ಶ್ರೀಮಾನ್ ಶಂಕರಾನಂದರವರು ನನಗೆ ಫೋನ್‌ನಲ್ಲಿ ತಿಳಿಸಿದರು. They have raised further objections. You are not going to get that sum. ಎಂದು ಹೇಳಿದರು. It is on record. Now Chikkanna is dead. I went to Washington without asking the State Government. ನನಗೆ ಹಠ ಇತ್ತು. ನನ್ನ ಜೀವನದಲ್ಲಿ ನಾನು ಯಾವಾಗಲೂ ಹೋರಾಟ ಮಾಡಿದರೆ, ಹಾಗೆ ಮಾಡುವುದು. ಇವರಿಗಾರಿಗೂ ನಾನು ಕೇಳಲಿಲ್ಲ. ನಮ್ಮ ಆಗಿನ ರಾಜಕೀಯ ವಾತಾವರಣ ಹಾಗಿತ್ತು. ಹೇಗೆ ಮೊಯ್ಲಿಯವರು ಒಂದಿಷ್ಟು ಭಿನ್ನಮತೀಯರ ಜೊತೆ ಹೋರಾಟ ನಡೆಸಿದರಲ್ಲಾ ಆ ರೀತಿಯ ವಾತಾವರಣ ನಮ್ಮಲ್ಲೂ ಇತ್ತು.

ಶ್ರೀ ಹೆಚ್.ಎನ್. ನಂಜೇಗೌಡ : ಈಗೀಲೂ ಇದೆಯಾ ಆ ವಾತಾವರಣ?

ಶ್ರೀ ಹೆಚ್.ಡಿ. ದೇವೇಗೌಡ : ನೀವು ಆ ಬಗ್ಗೆ ವರಿ ಮಾಡಬೇಡಿ. I went to Washington and I asked Mr. Datar to stay there back. I went there. What are the objections they have raised? ಅಲ್ಲೇ ಕುಳಿತು ಕರ್ನಾಟಕದ ನೀರಾವರಿ ಮಂತ್ರಿಯಾಗಿ I gave all the government concurrence. I talked to my Chief Minister, Mr. Bommai ಬೊಮ್ಮಾಯಿಯವರು ಮುಖ್ಯಮಂತ್ರಿ ಆಗಿದ್ದಾಗ ನಾನು ಅವರ ಜೊತೆ ಮಾತನಾಡಿ, ಪರಿಸ್ಥಿತಿ ಹೀಗಿದೆ, ಇಂತಹ ಅಬ್ಜೆಕ್ಷನ್ ರೈಸ್ ಮಾಡಿದ್ದಾರೆ ಎಂದು ಹೇಳಿದೆ. ಮತ್ತು ಇನ್ನೊಂದು ಸಾರಿ ಅಪ್‌ರೈಸಲ್ ಕಮಿಟಿಯ ಮುಂದೆ ಬಂದು ಇದೆಲ್ಲಾ ಆದರೆ ಇನ್ನೂ ಆರು ತಿಂಗಳು ಹೋಗುತ್ತದೆ. ನೀವು ದಯಮಾಡಿ ಒಪ್ಪಿಗೆ ಕೊಡಬೇಕೆಂದು ನಾನು ಅವರಿಗೆ ಫೋನ್‌ನಲ್ಲಿ ತಿಳಿಸಿ, I got it cleared before I resigned.

ಈ ಸರ್ಕಾರದಿಂದ ನಾನು ಟಿ.ಎ. ಮತ್ತು ಡಿ.ಎ. ತೆಗೆದುಕೊಳ್ಳಲಿಲ್ಲ. ಅವತ್ತಿನ ದಿವಸ ಸನ್ನಿವೇಶ ಹಾಗಿತ್ತು, ಆದ್ದರಿಂದ ತೆಗೆದುಕೊಳ್ಳಲಿಲ್ಲ. ತೆಗೆದುಕೊಳ್ಳಬಾರದು ಎಂದು ನಾನು ವಾದ ಮಾಡುವುದಿಲ್ಲ. ಆದರೆ ಅವತ್ತಿನ ದಿವಸ ಅಂತಹ ಸನ್ನಿವೇಶ ಇದ್ದುದ್ದರಿಂದ ತೆಗೆದುಕೊಳ್ಳಲಿಲ್ಲ. ಇದನ್ನು ಮಾಡಿ ಹೋಗಬೇಕೆಂಬ ಛಾಲೆಂಜ್ ಅವತ್ತಿತ್ತು ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನೀವು ಹಿರಿಯರು ಇದ್ದೀರಿ ಇದೆಲ್ಲಾ ಬೇಡ. ನಾವೆಲ್ಲಾ ಒಟ್ಟಿಗೇ ಆ ಕೆಲಸ ಮಾಡೋಣ. ಈಗಲೇ ಈ ಬಗ್ಗೆ 40 ವರ್ಷ ಆಗುತ್ತಾ ಬಂತು. ಇವತ್ತು ಕಾವೇರಿ ಬೇಸಿನ್ ಹಣೆಬರಹದ ಬಗ್ಗೆ ನಾನು ಮಾತನಾಡಲಿಕ್ಕೆ ಹೋಗುವುದಿಲ್ಲ. ಇದು ಏನಾಗುತ್ತದೆ ಎಂಬುದರ ಬಗ್ಗೆ ನನ್ನದೇ ಆದಂತಹ ಕೆಲವು ಕಲ್ಪನೆಗಳಿವೆ. ಅದಕ್ಕೆ ಇನ್‌ಕ್ಯಾಮರಾ ಮೀಟಿಂಗ್ ಅನ್ನು ಕರೆಯಬೇಕೆಂದು ನಾನು ಹೇಳಿದೆ. ಮೀಟಿಂಗ್ ಕರೆಯಲು ಸ್ಪೀಕರ್‌ಗೆ ರಿಕ್ವೆಸ್ಟ್ ಮಾಡಿದೆ. ದುರದೃಷ್ಟವಶಾತ್ ಅವತ್ತು ಏನೋ ತೊಂದರೆಯಾಯಿತು, ಮೀಟಿಂಗ್ ಆಗಲಿಲ್ಲ. ಅದರ ಬಗ್ಗೆ ನಾವೆಲ್ಲಾ ಕುಳಿತು ಚರ್ಚೆ ಮಾಡೋಣ. ಈ ಸಾರಿ ನಾವು 800 ಕೋಟಿ ರೂಪಾಯಿಗಳನ್ನು ರೈಸ್ ಮಾಡಬೇಕೆಂಬುದು ನನ್ನ ಆಸೆ. ಅದಷ್ಟೇ ಅಲ್ಲ, ವಿಶ್ವಬ್ಯಾಂಕಿನಿಂದ 200 ಕೋಟಿ ರೂಪಾಯಿಗಳು ಏನು ಬರುತ್ತದೆ. ಅದನ್ನೂ ಸೇರಿಸಿ ಒಟ್ಟು 1000 ಕೋಟಿ ರೂಪಾಯಿಗಳನ್ನು ಬರೀ ಯು.ಕೆ.ಪಿ. ಮೇಲೆಯೇ ಖರ್ಚು ಮಾಡಬೇಕೆಂಬುದು ನನ್ನ ಮನಸ್ಸಿನಲ್ಲಿದೆ, ಆ ಬಗ್ಗೆ ದೃಢ ಸಂಕಲ್ಪ ಮಾಡಿಕೊಂಡಿದ್ದೇನೆ. ಅದನ್ನು ಈಡೇರಿಸಲು ನಿಮ್ಮೆಲ್ಲರ ಸಹಕಾರದಿಂದ ಪ್ರಯತ್ನ ಮಾಡುತ್ತೇನೆ. ಅದರಲ್ಲಿ ನಾನೇನೂ ಖಂಡಿತವಾಗಿ ಹಿಂದೆ ಹೋಗುವುದಿಲ್ಲ. ಈ ಪ್ರಾಜೆಕ್ಟ್‌ಗೆ 1000 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಲ್ಲಾ, ನಾವೇಕೆ ಮಾಡಬೇಕು ಎನ್ನುವ ಸಣ್ಣತನದಿಂದ ನಾವು ಯೋಚನೆ ಮಾಡಬೇಕಾಗಿಲ್ಲ. ಅದನ್ನು ನಾನು ಮಾಡೇ ಮಾಡುತ್ತೇನೆ. ಇದರ ಡೇಟ್ ಆಫ್ ಅಗ್ರಿಮೆಂಟ್ ಮಾನ್ಯ ನಂಜೇಗೌಡರಿಗೆ ತಿಳಿಸುವುದಾದರೆ, ಅದು

ಆಗಿದ್ದು 16.6.89ರಲ್ಲಿ ನಾನು ಅಲ್ಲಿಗೆ ಹೋಗಿ ಕ್ಲಿಯರೆನ್ಸ್ ಮಾಡಿಕೊಂಡು ಬಂದ ಬಗ್ಗೆ ಈಗಾಗಲೇ ಹೇಳಿದ್ದೇನೆ. ಈ ಬಗ್ಗೆ ನಾನು ಇನ್ನಷ್ಟು ಹೇಳಿದರೆ ಪ್ರವರ ಜಾಸ್ತಿಯಾಗುತ್ತದೆ. ಅದಕ್ಕೇ ಬಹಳ ವಿಷಯ ಹೇಳದೇ ಹಾಗೆ ಇಟ್ಟುಕೊಂಡಿದ್ದೇನೆ.

ಚುನಾವಣೆಯಲ್ಲಿ ಸೋತು ಮನೆಯಲ್ಲಿ ಕುಳಿತಿದ್ದರೂ ನಾನು ಬಿಡಲಿಲ್ಲ. ಈ ಬಗ್ಗೆ ನನಗೆ ಒಂದು ರೀತಿ ದುಶ್ಚಟ. ಈ ಬಗ್ಗೆ ಎಲ್ಲಾ ಕಾಗದ ಪತ್ರಗಳನ್ನೂ ಹಾಗೆಯೇ ಇಟ್ಟುಕೊಂಡಿದ್ದೇನೆ. ಕಾವೇರಿ ಬೇಸಿನ್ ಟ್ರಿಬ್ಯೂನಲ್ ಟ್ರಿಬ್ಯುನಲ್ ಆಗುವುದಕ್ಕೆ ಮುಂಚೆ 3-4 ಕರೆಸ್ಪಾಂಡೆನ್ಸ್ ಮಾಡಿದ್ದೇನೆ. ನೀವು ಯಾರ‍್ಯಾರ ಹೆಸರು ಹೇಳಿದ್ದೀರೋ ಅವರ ಜೊತೆಗೆಲ್ಲಾ ಕರೆಸ್ಪಾಂಡೆನ್ಸ್ ಮಾಡಿದ್ದೇನೆ. ವಾಟಾಳ್ ನಾಗರಾಜ್‌ರವರು ಹೇಳಿದಂತೆ ವೀರೇಂದ್ರ ಪಾಟೀಲರ ಜೊತೆ ಕರೆಸ್ಪಾಂಡೆನ್ಸ್ ಮಾಡಿದ್ದೇನೆ. ಕೇಂದ್ರದಲ್ಲಿ ಇರತಕ್ಕಂತಹ ಮಂತ್ರಿಗಳ ಜೊತೆಗೆ ಕರೆಸ್ಪಾಂಡೆನ್ಸ್ ಮಾಡಿದ್ದೇನೆ. ಯಾವ ಪಾರ್ಟಿ ಅಧಿಕಾರದಲ್ಲಿದ್ದರೆ ನನಗೇನಾಗಬೇಕು? ಮಾನ್ಯ ವಿ.ಪಿ. ಸಿಂಗ್‌ರವರು ಇರಬಹುದು. ರಾಮಕೃಷ್ಣ ಹೆಗ್ಗಡೆಯವರು ಇರಬಹುದು, ಬೊಮ್ಮಾಯಿಯವರು ಇರಬಹುದು ಗುರುಪಾದ ಸ್ವಾಮಿಯವರು ಇರಬಹುದು, ಜಾರ್ಜ್ ಫರ್ನಾಂಡಿಸ್ ಅವರು ಇರಬಹುದು. ಯಾರ‍್ಯಾರು ಅವತ್ತು ಅಧಿಕಾರದಲ್ಲಿದ್ದರೋ, ಅವರೆಲ್ಲರಿಗೂ ನಾನು ಪತ್ರ ಬರೆದಿದ್ದೇನೆ.

ನಾನು ಚುನಾವಣೆಯಲ್ಲಿ ಸೋತ ಮೇಲೆ ಮೊದಲನೇ ಬಾರಿಗೆ ವಿಧಾನಸೌಧಕ್ಕೆ ಬಂದಿದ್ದು, ಮಾನ್ಯ ವೀರೇಂದ್ರ ಪಾಟೀಲರ ಜೊತೆಗೆ ಈ ಸಂಬಂಧವಾಗಿ ಮಾತನಾಡುವುದಕ್ಕೆ ಅಲ್ಲಿ ಬೆಳೆ ಒಣಗಿ ನೀರು ಬಿಡಬೇಕೆಂದು ಬಂದಾಗ, ಆ ನೀರಾವರಿ ಮಂತ್ರಿ ಕುಮಾರ ಕೃಪಾದಲ್ಲಿ ಕುಳಿತಿದ್ದು ವಾಪಸ್ಸು ಹೋದ. ಸ್ಟಾರ್ಟ್ ಆಗಿದ್ದೇ ಇಲ್ಲಿಂದ. ಮಾನ್ಯ ದೇವರಾಜ್ ಅರಸ್‌ರವರು ಅದಕ್ಕೆ ಅವಕಾಶ ಕೊಡಲಿಲ್ಲ, ಮಾನ್ಯ ಗುಂಡಾರಾವ್‌ರವರೂ ಅದಕ್ಕೆ ಅವಕಾಶ ಕೊಡಲಿಲ್ಲ. ಅಲ್ಲಿ ನೀರಾವರಿ ಮಂತ್ರಿ ಒಂದು 5 ಟಿ.ಎಂ.ಸಿ. ನೀರು ಬೇಕೆಂದು ಬಂದರಲ್ಲಾ, ಇಲ್ಲಿ ಕುಮಾರ ಕೃಪಾದಲ್ಲಿ ಅವರನ್ನು ಯಾರೂ ರಿಸೀವ್ ಮಾಡುವವರು ಇಲ್ಲದೇ ಅವರು ವಾಪಸ್ಸು ಹೋದರು. ಶುರು ಆದದ್ದೇ ಅಲ್ಲಿ, ಅದೊಂದು ದುರಂತ, ಅದನ್ನೆಲ್ಲಾ ನಾನು ನಿಮಗೆ ವಿವರಿಸಲಿಕ್ಕೆ ಹೋಗುವುದಿಲ್ಲ. ಅದಾದ ಮೇಲೆ ನಾನು ವೀರೇಂದ್ರ ಪಾಟೀಲರಿಗೆ ಒಂದು ಪತ್ರ ಬರೆದೆ. ಕಾವೇರಿ ಬೇಸಿನ್‌ದು ಮುಗಿಯಿತು. ಕೃಷ್ಣಾಕ್ಕಾದರೂ ನೀವು ಸ್ವಲ್ಪ ಶ್ರದ್ಧೆ ವಹಿಸಿ ಎಂದು ನಾನು ಅವರಿಗೆ ಹೇಳಿದೆ. ನಾನು ಚುನಾವಣೆಯಲ್ಲಿ ಸೋತು ಮನೆಯಲ್ಲಿ ಕುಳಿತುಕೊಂಡಾಗ ಶ್ಯಾನುಭೋಗರಿಗೆ ಏನೋ ಕೆಲಸ ಇಲ್ಲದಿದ್ದರೂ, ಬರೆಯುವ ಕೆಲಸವಾದರೂ ಇರುತ್ತದಲ್ಲಾ, ಹಾಗೆ ಕೆಲಸ ಮಾಡುತ್ತಿದ್ದೆ.

ಶ್ರೀ ವಾಟಾಳ್ ನಾಗರಾಜ್ : ಬರೀ ಶ್ಯಾನುಭೋಗರಿಗೇ ಅಲ್ಲ, ಗೌಡರುಗಳಿಗೂ ಕೆಲಸ ಇರುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ : ಅದನ್ನು ಅಷ್ಟಕ್ಕೇ ನಾನು ಬಿಡಲಿಲ್ಲ. ಆಮೇಲೆ ನಾನು ಪಾರ್ಲಿಮೆಂಟ್ ಮೆಂಬರ್ ಆದೆ. ಇದನ್ನು ಸೆಂಟ್ರಲ್ ಪ್ರಾಜೆಕ್ಟ್ ಆಗಿ ತೆಗೆದುಕೊಳ್ಳಬೇಕೆಂದು ಹೇಳಿ, ಈ ವಿಷಯದ ಬಗ್ಗೆ ಪಾರ್ಲಿಮೆಂಟ್‌ನಲ್ಲಿ ಮೂವ್ ಮಾಡಿ ಪ್ರಧಾನ ಮಂತ್ರಿಗಳಿಗೆ ಒಂದು ಪತ್ರ ಬರೆದೆ. ಈ ಬಗ್ಗೆ ಸದನದಲ್ಲಿ ಈಗಾಗಲೇ ಒಂದು ನಿರ್ಣಯ ಆಗಿದೆ. ಅದನ್ನೇ ಕೋಟ್ ಮಾಡಿ. ಇದನ್ನು ಸೆಂಟ್ರಲ್ ಪ್ರಾಜೆಕ್ಟ್ ಆಗಿ ತೆಗೆದುಕೊಳ್ಳಬೇಕೆಂದು ಹೇಳಿ ನಾನು ಪಾರ್ಲಿಮೆಂಟ್ ಮೆಂಬರ್ ಆದಮೇಲೆ ಪ್ರಧಾನ ಮಂತ್ರಿಗಳಿಗೆ ಮೊದಲನೇ ಒತ್ತಡ ತಂದೆ. ಅದಷ್ಟೇ ಅಲ್ಲ, 'I appropriate your concern for the timely completion of the project.'

ಅಪ್ಪರ್ ಕೃಷ್ಣಾದ್ದು, 'As per the present policy, the State Government is required to finance irrigation projects from their plan resources.' ಎಂದು

ಹೇಳಿಕೊಂಡು ಬಂದು, ... 'National importance be provided with the special central assistance... ನಾನು ಹೇಳಿದಂಥಾದ್ದು. UKP is one of them. '... However this proposal has not been approved by the Planning Commission for inclusion in the 8th Plan. The Ministry is still purusing the matter with the Planning Commission....'.

ಅದನ್ನು ನೀವು ಸೆಂಟ್ರಲ್ ಪ್ರಾಜೆಕ್ಟ್ ಆಗಿ ತೆಗೆದುಕೊಳ್ಳಬೇಕೆಂದು ಹೇಳಿದ್ದಕ್ಕೆ This is the reply given by Mr. Shukla. 'The Ministry is still purusing the matter with the Planning Commission.' ನನಗೆ ಅದರಲ್ಲಿ ಆಸಕ್ತಿ ಇಲ್ಲದಿದ್ದರೆ ನಾನು ಇದನ್ನು ಮಾಡಬೇಕಾಗಿರಲಿಲ್ಲ, ಅಷ್ಟೇ ಅಲ್ಲ, ಹೂಗ್ಲಿ ನದಿಗೆ ಕಟ್ಟಲಾಗುತ್ತಿರುವ ಬ್ರಿಡ್ಜ್‌ಗೆ ಕೇಂದ್ರ ಸರ್ಕಾರದವರು ಹಣ ಕೊಡುತ್ತಾರೆ ಎಂದು ತಿಳಿದು ಬಂತು. 'We have through new media learnt the fact that the Government of India has sanctioned Rs. 388 crores to fund New Hoogli Bridge Ë 80% of this amount is loan to the State Government 20% is grant.'

ಅದೇ ರೀತಿ ಯು.ಕೆ.ಪಿ.ಗೆ ನೀವು ಹಣ ಕೊಡಬೇಕೆಂದು ಹೇಳಿ, ಈ ವಿಚಾರವನ್ನೇ ಕೋಟ್ ಮಾಡಿ ನಾನು ಪ್ರಧಾನ ಮಂತ್ರಿಗಳಿಗೆ ಪತ್ರ ಬರೆದೆ. ನಾನು ಇದನ್ನು ಅಷ್ಟಕ್ಕೇ ಬಿಡಲಿಲ್ಲ. 'Government of India's continued to sustain as unconcern to the welfare and interest of the farmers of Karnataka is bound to have its impact in politics of future and so, the people of Karnataka can no longer be taken for granted.'

ನೀವು ಹೂಗ್ಲಿ ನದಿಗೆ ಕಟ್ಟಲಾಗುವ ಬ್ರಿಡ್ಜ್‌ಗೆ 388 ಕೋಟಿ ರೂಪಾಯಿಗಳನ್ನು ಕೊಡುತ್ತೀರಿ. ಆದರೆ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ಗೆ ಹಣ ಕೇಳಿದರೆ ಏಕೆ ಕೊಡುವುದಿಲ್ಲ? ಅದನ್ನು ಸೆಂಟ್ರಲ್ ಪ್ರಾಜೆಕ್ಟ್‌ನಲ್ಲಿ ಸೇರಿಸಿ ಹಣ ಬಿಡುಗಡೆ ಮಾಡಿ ಎಂದರೆ ಮಾಡುತ್ತಿಲ್ಲ. ದಯಮಾಡಿ ನೀವು ಅದನ್ನು ಪರಿಗಣಿಸಬೇಕು ಎಂದು ನಾನು ಅವರನ್ನು ಕೋರಿದೆ. ಆಗ ಪ್ರಧಾನ ಮಂತ್ರಿಗಳು ನನಗೆ ನೀಡಿದ ಉತ್ತರವನ್ನೂ ಕೂಡ ಇಲ್ಲಿಟ್ಟುಕೊಂಡಿದ್ದೇನೆ. ನಾನು ನಡೆಸಿದ ಪತ್ರ ವ್ಯವಹಾರದ ದಾಖಲೆಗಳನ್ನೆಲ್ಲಾ ಹಾಗೆ ಇಟ್ಟುಕೊಂಡಿದ್ದೇನೆ. ಇದು ನನಗೆ ಸಂಬಂಧಪಟ್ಟಿಲ್ಲದಿದ್ದರೆ, ನಾನು ಆ ಕೆಲಸವನ್ನು ಮಾಡಬೇಕಾಗಿರಲಿಲ್ಲ. 524 ಮೀಟರ್‌ಗೆ ಯು.ಕೆ.ಪಿ.ನ 15 ಮೀಟರ್ ಗೇಟ್ ಇಟ್ಟುಕೊಳ್ಳಬೇಕೆಂಬುದರ ಬಗ್ಗೆ ನಿನ್ನೆ ನೀವು ಹೇಳಿದ್ದೀರಿ. ಆ ಬಗ್ಗೆ ದಿನಾಂಕ 23.7.94ಕ್ಕೇ ನಾನೇ ನಿಮಗೆ ಒಂದು ಪತ್ರವನ್ನು ಬರೆದಿದ್ದೇನೆ. "ಬಚಾವತ್ ತೀರ್ಪಿನ ಅಡಿಯಲ್ಲಿ ಕೃಷ್ಣಾ ಮೇಲ್ದಂಡೆ ಯೋಜನೆಗೆ 173 ಟಿ.ಎಂ.ಸಿ. ನೀರಿನ ಪ್ರಮಾಣವನ್ನು ನಿಗದಿಪಡಿಸಿರುವುದು ಸರಿಯಷ್ಟೇ. 119 ಟಿ.ಎಂ.ಸಿ. ನೀರನ್ನು ಬಳಸಿಕೊಳ್ಳುವ ಮೊದಲ ಘಟ್ಟದ ಯೋಜನೆಯು 19669ರಿಂದ ಕಾರ್ಯರೂಪಗೊಳ್ಳುತ್ತಿದ್ದು, ಇದುವರೆವಿಗೂ ಸುಮಾರು 40 ಟಿ.ಎಂ.ಸಿ. ನೀರನ್ನು ಮಾತ್ರ ಬಳಸಿಕೊಳ್ಳಲಾಗಿದೆ. ಈ ಯೋಜನೆಯ ಪ್ರಗತಿಯನ್ನು ವೀಕ್ಷಿಸಿದರೆ ಎರಡು ಸಾವಿರ ಇಸವಿಯ ವೇಳೆಗೆ ಮೊದಲ ಘಟ್ಟವನ್ನು ಪೂರ್ಣಗೊಳಿಸಲು ಸಹ ಆಶಕ್ತಿ ಒಂದು ಕಂಡು ಬರುತ್ತಿದೆ. ಎರಡನೇ ಘಟ್ಟದ ಯೋಜನೆ ವರದಿಗೆ ಕೇಂದ್ರ ಸರ್ಕಾರ ತನ್ನ ಟೀಕೆ ಟಿಪ್ಪಣಿ ತಿಳಿಸಿ ಆರು ತಿಂಗಳಾದರೂ ಅದಕ್ಕೆ ಉತ್ತರವಾಗಿ ಅನುಸರಣಾ ವರದಿಯನ್ನು ಇದುವರೆವಿಗೂ ಕಳುಹಿಸಿರುವುದಿಲ್ಲ. ಪ್ರತಿಯೊಂದು ಮಟ್ಟದಲ್ಲೂ ಆಮೆಯ ವೇಗದಲ್ಲಿ ಪರಿಶೀಲನೆ ನಡೆಯುತ್ತಾ, ನಿರ್ಧಾರಗಳನ್ನು ತೆಗೆದುಕೊಳ್ಳಲು ಆ ರೀತಿ ವಿಳಂಬಿಸುತ್ತಾ ಹೋದಲ್ಲಿ ಯೋಜನಾ ವರದಿ ಕೇಂದ್ರ ಸರ್ಕಾರಕ್ಕೆ ಕಳುಹಿಸುವುದು ಯಾವಾಗ ಮತ್ತು ಅದಕ್ಕೆ ಅಂಗೀಕಾರ ದೊರೆಯುವುದು ಯಾವಾಗ? ಎಂಬುದು ಆ ಪತ್ರದಲ್ಲಿದೆ.

ಈ 524ಕ್ಕೆ ನಮ್ಮ ಕಾಲದಲ್ಲಿಯೇ ಏನು ನಿರ್ಣಯ ತೆಗೆದುಕೊಂಡಿತ್ತು ಎಂ'ರೆ ಪ್ರತಿಯೊಂದು ಎಫ್.ಆರ್.ಐ.ಎಫ್ 112 ಮೀಟರ್ಸ್‌ಗೆ ಮೂರು ಗೇಟ್ ಇಡತಕ್ಕದ್ದಕ್ಕೆ ಫರ್ಸ್ಟ್ ಸ್ಟೇಜ್‌ನಲ್ಲಿ contruction of full 524 height ಅದು ಅಷ್ಟೇ ಅಲ್ಲ ಎಂಬೆಡೆಡ್ ಪಾರ್ಟ್ನು ಇನ್‌ಸರ್ಟ್ ಮಾಡುವುದಕ್ಕೆ ಅವತ್ತೇ ನಾವು ಕ್ಲೀಯರೆನ್ಸ್ ತೆಗೆದುಕೊಂಡಿದ್ದೇವೆ. ಚಿಕ್ಕಣ್ಣನವರು ತೀರಿ ಹೋಗಿದ್ದಾರೆ. Clearance, We have taken that Except gate, ಗೇಟ್ ಮಾತ್ರ ನೀವು ಮೂರು ಮೀಟರ್ಸ್ ಇಟ್ಟುಕೊಳ್ಳಿ 119 ಟಿಎಂಸಿ ನೀರಿಗೆ ಮಾತ್ರ ಎಂದು. All other issues are cleared during my own regime. ಡೇಟ್ಸ್ ಇದೆ ಇಲ್ಲಿ, ಇದನ್ನು 524ಕ್ಕೆ ಏರಿಸಿದರೆ ಎಷ್ಟು ವಾಟರ್ ಇಂಪೌಂಡ್ ಮಾಡುತ್ತೇವೆ? 227 ಟಿಎಂಸಿ ನೀರನ್ನು ನಾವು ಸ್ಟೋರ್ ಮಾಡುತ್ತೇವೆ ನಾನು ನೀರಿನ ಹಕ್ಕನ್ನು ಬಿಟ್ಟುಕೊಡುವುದಿಲ್ಲ ಎಂದು ಹೇಳುವಾಗ ಇದನ್ನು ಹೇಳಲಿಕ್ಕೆ ನನಗೆ ಏನೂ ಭಯವಿಲ್ಲ, ಇವೊತ್ತು ನಾವು ಎಷ್ಟು ಯೂಸ್ ಮಾಡುತ್ತಿದ್ದೇವೆಯೋ ಅದಕ್ಕೆ ಸ್ಟೋರೇಜ್ 350 ಟಿಎಂಸಿ ಸಾಕು. ಇದು ಒಂದು ಗೇಟನ್ನು ಇನ್‌ಸರ್ಟ್ ಮಾಡಿ ಹದಿನೈದು ಮೀಟರಿನ ಗೇಟ್ ಹಾಕಿದರೆ ನಾವು 227 ಟಿಎಂಸಿ ನೀರನ್ನು ಸ್ಟೋರ್ ಮಾಡುತ್ತೇವೆ. 228 ಪ್ಲಸ್ 350 ಒಟ್ಟು 577 ಟಿಎಂಸಿ ನೀರನ್ನು ಸ್ಟೋರ್ ಮಾಡುತ್ತೇವೆ, to utilise 729 TMC of water.

ನಮ್ಮದು ಏನು ಸ್ಕೀಮ್ 'ಎ' ಇದೆ We require only 535 or 540 TMC for storage. ಅವರು ಯಾರು ನನ್ನನ್ನು ಕೇಳುವುದಕ್ಕೆ? ನಾನು ಎಲ್ಲಿ ನೀರು ಹಿಡಿಯುತ್ತೇನೆ, ಎಷ್ಟು ನೀರು ಹಿಡಿಯುತ್ತೇನೆ, ಏತಕ್ಕೆ ಉಪಯೋಗ ಮಾಡುತ್ತೇನೆ, ಯಾವ ಡ್ಯಾಮ್‌ನಲ್ಲಿ ಹಿಡಿಯುತ್ತೇನೆ ನನ್ನ 729 ಟಿಎಂಸಿ ನೀರನ್ನು ನಾವು ಏನು ಮಾಡುತ್ತೇವೆ ಎಂದು ಕೇಳುವುದಕ್ಕೆ ಅವರು ಯಾರು? It is my concern. Sir, I will assure this House that whatever may be the financial implications, whether we get clearance from the Government of India or not, I will see that this 15 Metre gate is going to be erected and 227 TMC of water will be stored at any cost and I will not allow an inch of water to go to Andhra. I will give this assurance and I am going to keep up this assurance. Otherwise, it is a contempt of the House. I know how to act.

ಇದೊಂದು ವಿಷಯದಲ್ಲಿ ಮಾತ್ರ ನಾನು ಯಾವತ್ತೂ ರಾಜಿ ಆಗುವುದಕ್ಕೆ ತಯಾರಿಲ್ಲ, ಡಿಟೇಲಾಗಿ ನಾನು ನಿಮಗೆ ಬರೆದ ಪತ್ರದಲ್ಲಿ ಬರೆದಿದ್ದೇನೆ. ಇದನ್ನು ಕ್ಯಾಬಿನೇಟ್‌ನಲ್ಲಿ ನಾನು ತರಿಸಿ ನೋಡಿದ್ದೇನೆ. ನಾನು ನಿಮಗೆ ಲೆಟರ್ ಬರೆದಿರುವುದು 23- 7. ನಾವು ತೀರ್ಮಾನ ತೆಗೆದುಕೊಂಡಾಗ ನಿಮ್ಮ ಉಪ ಮುಖ್ಯಮಂತ್ರಿಗಳು ಆಗಸ್ಟ್ 17ರಂದು ಪತ್ರ ಬರೆದಿದ್ದಾರೆ. 'Construction of Almatti Dam to its ultimate level of 524.56'.

ಡೆಪ್ಯೂಟಿ ಚೀಫ್ ಮಿನಿಸ್ಟರ್. It is decided in the cabinet on 4.8.94. My letter was on 23.7.94. ನಾವು ತಾಯಿ ಮಕ್ಕಳು ಇದ್ದಹಾಗೆ ಇದ್ದೇವೆ. ನಾಳೆ ನೀವು ಕೂಡ ಖರ್ಗೆಯವರೇ ಇಲ್ಲಿ ಬಂದು ಕೂಡಬಹುದು ಆ ವಿಷಯ ಬೇಡ ಈಗ ನಾರೆಲ್ಲರೂ ಒಟ್ಟಾಗಿ ಸೇರೋಣ, ಕೆಲಸ ಮಾಡೋಣ, ನಾವು ಯಾವುದೇ ಸಂದರ್ಭದಲ್ಲಿ ಯಾವಾಗಲಾದರೂ ಹಿಂದೆ ಬಿದ್ದರೆ ನೀವು ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುವುದಕ್ಕೆ ನಿಮಗೆ ಅಧಿಕಾರ ಇದೆ. There is no question of ignoring that area on the parochial outlook. ನನ್ನ 729 ಟಿಎಂಸಿ ನೀರಿನಲ್ಲಿ 570 ಟಿಎಂಸಿ ನೀರನ್ನು ಸ್ಟೋರ್ ಮಾಡುವುದಕ್ಕೆ ಯಾರನ್ನು ಯಾಕೆ ಕೇಳಬೇಕು? ನಾನು

ಆಲಮಟ್ಟಿಯಲ್ಲಿ ಯೂಸ್ ಮಾಡಿಕೊಳ್ಳುತ್ತೇನೆಯೋ, ರಾಯಚೂರಿಗೆ ತೆಗೆದುಕೊಂಡು ಹೋಗುತ್ತೇನೆಯೋ ಅಥವಾ ಇನ್ನೆಲ್ಲೋ ತೆಗೆದುಕೊಂಡು ಹೋಗುತ್ತೇನೆಯೋ ಅದು ನನಗೆ ಬಿಟ್ಟಿದ್ದು. ರಾಯಚೂರಿನದ್ದು ನಿಮ್ಮ 729ನಲ್ಲಿದೆಯೇ? Is it in Scheme A? Because you have taken a decision, because of circumstances, ಜನಗಳದ್ದು ಒತ್ತಡ ಬಂದು ಅದಕ್ಕೆ ತೆಗೆದುಕೊಂಡಿದ್ದೀರಿ. I addition to storing 729 TMC of water, at the same time distributory system should also proceed.

ಅದಕ್ಕೆ ಒಂಭತ್ತು ಸಾವಿರ ಕೋಟಿ ಎಂಟು ಸಾವಿರ ಕೋಟಿ ರೂಪಾಯಿಯೇ ಇವೊತ್ತು ಏನು ಲೆಕ್ಕ ಇಡುತ್ತೇವೆಯೋ ಅದನ್ನು ನಾನು ಹಚ್ಚಿಕೊಳ್ಳುವುದಿಲ್ಲ. ಏಕೆಂದರೆ ಎಸ್ಕಲೇಷನ್ ಹಾಗೆಯೇ ಹೋಗುತ್ತಿದೆ. ಅದಕ್ಕೆ ನಾನಾ ಕಾರಣಗಳು ಇವೆ. ಈ ನೀರು ಇವೊತ್ತು ಆಂಧ್ರಕ್ಕೆ ಏನು ಹೋಗುತ್ತಿದೆ ಎರಡು ಸಾವಿರ ಮೇಲೆ ಎನ್ನುವಂಥ ವಾದ ಇದೆ. The second portion is utilisation. ಸ್ಟೋರೇಜ್, ನಮಗೆ ಹಕ್ಕಿದೆ. ನಾವು ಚಲಾಯಿಸುತ್ತೇವೆ. ನಾವು ನಿರ್ದಾಕ್ಷಿಣ್ಯವಾಗಿ ನೀರನ್ನು ಹಿಡಿಯುತ್ತೇವೆ. ಆದರೆ ಯುಟಿಲೈಸೇಷನ್ ಪಾರ್ಟ್ ಬಂದಾಗ ನಾವು ಅದನ್ನು ಹೇಗೆ ಯೂಸ್ ಮಾಡಬೇಕು, ಡಿಸ್ಟ್ರಿಬ್ಯೂಟರಿ ಸಿಸ್ಟಂ ಮತ್ತೊಂದು ಎಲ್ಲಾ ಬರುತ್ತದೆ. How much I am able to spend every year?, ಸಾವಿರ ಕೋಟಿ ವರ್ಷಕ್ಕೆ ಇಟ್ಟರೂ ಅದನ್ನು ಖರ್ಚು ಮಾಡಲು ಮೆಷಿನರಿ ಗೇರ್ ಅಪ್ ಮಾಡಬೇಕಾಗುತ್ತದೆ. ಇದಕ್ಕೆ ಸಾಕಷ್ಟು ಅಧಿಕಾರಿಗಳನ್ನು ನಾವು ವಿಫ್ ಅಪ್ ಮಾಡಬೇಕಾಗುತ್ತದೆ. ಅಷ್ಟು ಸುಲಭ ಇಲ್ಲ. ಒಂದು ಸಾವಿರ ಕೋಟಿ ಸಾಲ ತೆಗೆದುಕೊಂಡರೂ, 130-140 ಕೋಟಿ ರೂಪಾಯಿ ಬಡ್ಡಿ ಬರುತ್ತದೆ. ಅಷ್ಟು ಸುಲಭ ಇಲ್ಲ. ಮನಸ್ಸಿಗೆ ಬಂದ ಹಾಗೆ ಖರ್ಚು ಮಾಡಬೇಕೆಂದರೆ ಮಾಡಬಹುದು. ಆದರೆ ಒಂದು ಮಾತ್ರ ಅಷ್ಯೂರೆನ್ಸ್ ಕೊಡುತ್ತೇನೆ, ಸನ್ಮಾನ್ಯ ಅಧ್ಯಕ್ಷರೇ, ಯಾವುದೇ ಕಾರಣದಿಂದ ಈ ಒಂದು ಹಂತದಲ್ಲಿ ಇದನ್ನು ನಾನು ಬಿಟ್ಟು ಕೊಡಲಿಕ್ಕೆ ಸಿದ್ಧನಿಲ್ಲ ಎನ್ನತಕ್ಕಂಥದ್ದನ್ನು ನಾನು ಸೂಕ್ಷ್ಮವಾಗಿ ತಿಳಿಸಲು ಅಪೇಕ್ಷೆ ಪಡುತ್ತೇನೆ. ಇನ್ನು ಸ್ಕೀಮ್ "ಬಿ" ಬಗ್ಗೆ ತಾವು ಹೇಳಿದ್ದೀರಿ. Unless Scheme "B" is published by the Govt. of India or through an enactment in the Parliament, ನಾವೇನು ಮಾಡಲು ಆಗುತ್ತದೆ? ಇದು ಕನ್ನಡಿ ಒಳಗಿನ ಗಂಟು ಇದ್ದ ಹಾಗೆ, ನೀವೂ ಓದಿದ್ದೀರಿ, ನಾವೂ ಓದಿದ್ದೇವೆ. Unless it is published by the Govt. of India through a gazette or by an enactment in the Parliament.

Sri H.N. Nagegowda :. or by natural agreement.

ಶ್ರೀ ಹೆಚ್.ಡಿ. ದೇವೇಗೌಡ : ಮ್ಯೂಚವಲ್ ಅಗ್ರಿಮೆಂಟ್‌ಗೆ ಈ ದೇಶದಲ್ಲಿ ಪರಿಸ್ಥಿತಿ ಇದ್ದಿದ್ದರೆ ಇದು ಏತಕ್ಕೆ ಬರುತ್ತಿತ್ತು? ಪ್ರಯತ್ನ ಮಾಡೋಣ. ವೀರೇಂದ್ರ ಪಾಟೀಲರು ಪ್ರಯತ್ನ ಮಾಡಿದ್ದರು, ತಿರುಪತಿಯಲ್ಲಿ ನೀವು ಮಾಡಿದ್ದೀರಿ, ನಾವು ಮಾಡೋಣ ಆದರೆ ಒಂದು ಮಾತನ್ನು ಮಾತ್ರ ನಿಮಗೆ ಹೇಳುತ್ತೇನೆ. Unless 3 States agree ಕೇಂದ್ರ ಸರ್ಕಾರ ಎಷ್ಟರ ಮಟ್ಟಿಗೆ ನಡೆದುಕೊಳ್ಳುತ್ತದೆ ಎಂಬ ಬಗ್ಗೆ ಈಗ ಚರ್ಚೆ ಮಾಡುವುದು ಬೇಡ. ಪ್ರಯತ್ನ ಮಾಡೋಣ. ನಾನು ರಾಜಕಾರಣ ಮಾಡಲಿಕ್ಕೆ ಇಲ್ಲಿ ತಯಾರಿಲ್ಲ, ಸನ್ಮಾನ್ಯ ಮಾಜಿ ಮುಖ್ಯಮಂತ್ರಿಗಳಾದ ಶ್ರೀ ವೀರಪ್ಪ ಮೊಯಿಲಿಯವರು ಹಾಗೂ ಮತ್ತೊಬ್ಬ ಮಾಜಿ ಮುಖ್ಯಮಂತ್ರಿಗಳಾದ ಬಂಗಾರಪ್ಪನವರೂ ಕೂಡ ಹೇಳಿದರು ಮುಳವಾಡ ಲಿಫ್ಟ್ ಇರಿಗೇಷನ್ ಬಗ್ಗೆ. ನಾವು ದುಡ್ಡು ಇಟ್ಟಿದ್ದೇವೆ ನೀವು ಮಾಡಿದಿರಿ ಎಂದು ಕೇಳಿದರು. ಮುಳವಾಡ ಲಿಫ್ಟ್ ಇರಿಗೇಷನ್ ಫರ್ಸ್ಟ್ ಸ್ಟೇಜ್‌ನಲ್ಲಿಯೇ ಬ್ಯಾಕ್ ವಾಟರ್ ಹೋಗಿ ನಿಲ್ಲುತ್ತದೆ ಎಂಬ ಕಾರಣದಿಂದ ನಾನೇ ಕ್ಲಿಯರ್ ಮಾಡಿದ್ದು. I have examined every aspect of the problem. ಹೆಡ್

ವರ್ಕ್ಸ್ ಮುಳುಗಿ ಹೋಗುತ್ತವೆ. ಅದಕ್ಕಾಗಿ ಹೆಡ್ ವರ್ಕ್ಸ್‌ಗಾಗಿ, 42 ಅಥವಾ 38 ಕೋಟಿ ರೂಪಾಯಿಗಳನ್ನು ಇಟ್ಟಿದ್ದೆವು. ನನಗೆ ಈಗ ಚೆನ್ನಾಗಿ ನೆನಪಿಲ್ಲ, I made a provision.

ಮತ್ತೆ ಈಗೇನಾಗಿದೆ ಎಂದು ಚೆಕಪ್ ಮಾಡಿದ್ದೇನೆ. ನೀವು ಬಂದ ಮೇಲೆ 132.88 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದೀರಿ. 94-95ರಲ್ಲಿ ಒಟ್ಟು 225 ಲಕ್ಷ ಇಟ್ಟಿದ್ದೀರಿ, ಅದರಲ್ಲಿ 125.88 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದೀರಿ. ನೀವು ಇಟ್ಟಿರತಕ್ಕಂಥ ನೀರು 8.25 ಟಿಎಂಸಿ ಔಟ್ ಆಫ್ 729 ಟಿಎಂಸಿ ಅದರೊಳಗೆ 173 ಯುಕೆಪಿಗೆ ನಾವು ಇಟ್ಟಿದ್ದೇವೆ. ಇನ್‌ಕ್ಲೂಡಿಂಗ್ ಸೆಕೆಂಡ್ ಸ್ಟೇಜ್. ಇದರಲ್ಲಿ ಇರತಕ್ಕಂಥದು 8 ಟಿಎಂಸಿ ಅಂದರೆ 80 ಸಾವಿರ ಎಕರೆ. ಈಗ ನಾವು ಮೂರು ಲಕ್ಷ ನಾಲ್ಕು ಲಕ್ಷ ಎಂದು ಲೆಕ್ಕ ಇಟ್ಟಿದ್ದೇವೆ. ಸ್ಕೀಮ್ ಬಿ ಯನ್ನು ತೆಗೆದುಕೊಂಡು, ಸ್ಕೀಮ್ 'ಬಿ' ಏನು ಇದೆ ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಇರತಕ್ಕ ಪರಿಸ್ಥಿತಿಯನ್ನು ಸೂಕ್ಷ್ಮವಾಗಿ ಹೇಳಿದೆ. ಅಲ್ಲಿಂದ ಮುಂದಕ್ಕೆ ನಾನು ಹೇಳುವುದಿಲ್ಲ, ಇನ್ನು ಬೇಬಿ ಕೆನಾಲ್‌ನ್ನು ನೀವೇ ಸ್ಯಾಂಕ್ಷನ್ ಮಾಡಿದ್ದಿರಿ. ಮತ್ತೆ ಒತ್ತಡ ಬಂತು ಮೈನ್ ಕೆನಾಲ್‌ನ್ನೇ ತೆಗೆದುಕೊಳ್ಳಬೇಕೆಂದು, ಇವೊತ್ತು ಪುನಃ ಅದನ್ನೇ ತೆಗೆದುಕೊಳ್ಳಬೇಕೆಂದು ನೀವು ಅಧಿಕಾರ ಬಿಡುವುದಕ್ಕೆ ಮುಂಚೆ ನಿರ್ಣಯ ಮಾಡಿದಿರಿ. ಅದು ಆ ಹಂತದಲ್ಲಿದೆ.

ಶ್ರೀ ಹೆಚ್.ಎನ್. ನಂಜೇಗೌಡ : ಪ್ಲಾನ್ ಮಾಡುತ್ತೇವೆ ನಾವು, ಫೌಂಡೇಷನ್ ಇರಬಹುದು, ಒಂದು ಡ್ಯಾಮ್ ಇರಬಹುದು, ರಿಸರ್ವಾಯರ್ ಇರಬಹುದು, ಇದನ್ನು ಮಾಡಬೇಕಾದರೆ ನೀವು ಸ್ಕೀಮ್ 'ಬಿ' ಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಮಾಡಬೇಕು. ಏಕೆಂದರೆ ನಾಳೆ ಒಂದು ವೇಳೆ ಸ್ಕೀಮ್ 'ಬಿ' ಗೆ ಸ್ಯಾಂಕ್ಷನ್ ಸಿಕ್ಕಿದ ಮೇಲೆ ಫೌಂಡೇಷನ್ ಬದಲಾಯಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : ಸ್ಕೀಮ್ 'ಎ'ನಲ್ಲಿ ಪ್ರಾಜೆಕ್ಟನ್ನು ನಾವು ಏನು ಮಾಡಿದ್ದೇವೆ ಎಂದರೆ ಯು.ಕೆ.ಪಿ. ದಿಂದ ಎಷ್ಟು ಘಟಪ್ರಭದಿಂದ ಎಷ್ಟು ಮಲಪ್ರಭದಿಂದ ಎಷ್ಟು, ಅದೆಲ್ಲಾ ಪ್ರತಿಯೊಂದು ಬೇರೆ ಬೇರೆ ಇದೆ. ಆ ಒಂದು ಟೆಕ್ನಿಕಲ್ ಪ್ರಾಬ್ಲಮ್ ಬರುವುದಿಲ್ಲ.

4.30 ಪಿ.ಎಂ.

ಎಕ್ಸೆಪ್ಟ್ ಮುಳವಾಡ ಲಿಫ್ಟ್ ಇರಿಗೇಷನ್ ಈಗ ಅಲ್ಲಿ ಹೆಡ್‌ವರ್ಕ್ಸ್‌ಗೆ ಮಾತ್ರ ನಾವು ಪ್ರಾವಿಷನ್ ಮಾಡಿಕೊಂಡಿದ್ದೇವೆ. ಆದರೆ ನೀರು ಇರುವುದು 8 ಟಿ.ಎಂ.ಸಿ. ಸ್ಕೀಮ್ 'ಬಿ'ನಲ್ಲಿ ಸಿಕ್ಕಿದರೆ ಮಾತ್ರ ನಾವು ಮೂರು ಲಕ್ಷ ಎಕರೆಗೆ ನೀರಾವರಿ ಮಾಡುವುದಕ್ಕೆ ಸಾಧ್ಯ. ಇನ್ನು ಆರ್. ಅಂಡ್ ಆರ್ ಬಗ್ಗೆ ತಾವು ಹೇಳಿದಿರಿ. ನಾವು ಇದಕ್ಕೆ ಕ್ಲಿಯರೆನ್ಸ್ ಕೊಟ್ಟಿಲ್ಲ. ಈ ವಿಚಾರ ಕ್ಯಾಬಿನೆಟ್ ಮುಂದೆ ಇದೆ, ಇದರ ಬಗ್ಗೆ ಈಗಲೇ ಹೇಳುವುದಕ್ಕೆ ಬರುವುದಿಲ್ಲ. ಈಗ ಪುನಃ ಇವರು ಎಲ್ಲಿಗೆ ಹೋಗಿದ್ದಾರೆ ಎಂದು ಹೇಳಿದರೆ ಮದುವೆ ಆಗಿರುವ ಹೆಣ್ಣುಮಕ್ಕಳಿಗೂ ಒಂದೊಂದು ಪಾಲು ಕೊಡಬೇಕೆಂದು ಹೇಳುತ್ತಾರೆ. ಮೆಜಾರಿಟಿಗೆ ಬಂದಿರತಕ್ಕ ಗಂಡು ಮಕ್ಕಳಿಗೂ ಕೊಡಬೇಕು. ಒಂದು ಕುಟುಂಬದಲ್ಲಿ ಒಬ್ಬ ಯಜಮಾನನಿಗೆ ಜಮೀನು ಇರುತ್ತದೆ. ಆಮೇಲೆ ಮೆಜಾರಿಟಿಗೆ ಬಂದ ಮಕ್ಕಳಿಗೆ ಎರಡು ಜನರನ್ನು ಸೇರಿಸಬೇಕು ಎಂದು ಹೇಳಿದರು. ಈಗ ಮದುವೆಯಾಗಿರುವ ಹೆಣ್ಣುಮಕ್ಕಳಿಗೆ ಒಂದೊಂದು ಯುನಿಟ್ ಎಂದು ಕೊಡಬೇಕು. ಈ ರಾಜ್ಯದಲ್ಲಿ ಎಷ್ಟು ನೀರಾವರಿ ಯೋಜನೆಗಳು ನಡೆಯುತ್ತಿದೆ, ನಾವು ಎಷ್ಟು ಪರಿಹಾರ ಕೊಡುತ್ತಿದ್ದೇವೆ ಎಂಬ ವಿಚಾರ ನನಗೆ ಚೆನ್ನಾಗಿ ಗೊತ್ತಿದೆ. ಇದರ ಪರಿಣಾಮ ಎಲ್ಲಿಗೆ ಹೋಗಿ ನಿಲ್ಲಬಹುದು ಎಂಬುದನ್ನು ನಾವು ಯೋಚನೆ

ಮಾಡಬೇಕು. ಇದರ ಬಗ್ಗೆ ಕ್ಯಾಬಿನೆಟ್‌ನಲ್ಲಿ ಸ್ವಲ್ಪಮಟ್ಟಿಗೆ ಡಿಸ್‌ಕಸ್ ಮಾಡಬೇಕು. ಇನ್ನು ನಿಮ್ಮ ಜಿಲ್ಲೆಗೆ ಸಂಬಂಧಪಟ್ಟ 'ವಾರಾಹಿ' ಎಲ್ಲಿಗೆ ಬಂತು. ಈಗ ನಮಗೆ ಸಾರ್ವಜನಿಕರಿಂದಲೇ ಸಾಲ ಸಿಕ್ಕುವುದಾದರೆ ವರ್ಲ್ಡ್ ಬ್ಯಾಂಕ್‌ನವರ ಏನು ಕಂಡೀಷನ್ಸ್ ಇದೆ ಅವುಗಳನ್ನು ಏತಕ್ಕೆ ಒಪ್ಪಿಕೊಳ್ಳಬೇಕೆಂಬ ಬಗ್ಗೆ ಕೂಡ ನಾವು ಯೋಚನೆ ಮಾಡಬೇಕಾಗುತ್ತದೆ. ಇದನ್ನು ಈ ಸದನದಲ್ಲಿ ಹೇಳಿದ್ದೇನೆ.

1987ರಲ್ಲಿ ಬಾಳೇಕುಂದ್ರಿಯವರು ಕೊಟ್ಟಂಥ ಸಲಹೆ ಬೇರೇನೂ ಅಲ್ಲ, ವರ್ಲ್ಡ್ ಬ್ಯಾಂಕ್ ಗೈಡ್‌ಲೈನ್ಸ್ ಮತ್ತು ವರ್ಲ್ಡ್ ಬ್ಯಾಂಕ್ ಟೆಕ್ನಿಕಲ್ ನಾರ್ಮ್ಸ್‌ನ್ನು ನಾವು ಕೈಬಿಟ್ಟರೆ ನಮ್ಮದೇ ಆದಂಥ ಟೆಕ್ನಿಕಲ್ ನಾರ್ಮ್ಸ್ ಮತ್ತು ಟೆಕ್ನಿಕಲ್ ಗೈಡ್‌ಲೈನ್ಸ್‌ನಲ್ಲಿ ನಾವು ಮಾಡುವುದಾದರೆ 30% of the cost of the project can be reduced to minimum - ಒಂದು ಕಡೆ ಹೇಮಾವತಿಯಲ್ಲಿ ಮುಳುಗಿಲ್ಲವೇ, ಹಾರಂಗಿಯಲ್ಲಿ ಮುಳುಗಿಲ್ಲವೇ, ಹೀಗೆ ಘಟಪ್ರಭಾ ಮತ್ತು ಮಲಪ್ರಭಾದಲ್ಲಿ ಮುಳುಗಿಲ್ಲವೇ? ಇಲ್ಲಿ 60 ಸಾವಿರ ರೂ.ಗಳಿಗೆ ಸಾಲಕ್ಕೆ ಅರ್ಜಿ ಹಾಕಿದ್ದಾರೆ ಎಂದು ಹೇಳಿದಿರಿ. ನೀವು ಹೇಳಿದಿರಿ ಹೇಮಾವತಿಯಿಂದ ಕಳೆದುಕೊಂಡವರಿಗೆ ಏನೂ ಕೊಡಲಿಲ್ಲ, ಕೇವಲ 800, 300, 400 ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೀರಿ ಎಂದು ಹೇಳಿದಿರಿ, ಈಗ ಮೆಜಾರಿಟಿಗೆ ಬಂದಿರತಕ್ಕ ಮಕ್ಕಳಿಗೆ ಮತ್ತು ಮದುವೆಯಾಗಿರುವ ಹೆಣ್ಣುಮಕ್ಕಳಿಗೂ ಒಂದೊಂದು ಪಾಲು ಕೊಡಬೇಕು. ಕೆಲವರು ಭೂಮಿಯನ್ನು ವಿಭಜನೆ ಮಾಡಿಕೊಂಡಿದ್ದಾರೆ. ಇದನ್ನು ಇಂಜಿವಿಜಲ್ ಹೋಲ್ಡಿಂಗ್‌ನಲ್ಲಿ ತೋರಿಸುತ್ತೇವೆ ಎಂದು ವಿಭಜನೆ ಮಾಡಿಕೊಂಡಿರುತ್ತಾರೆ. ಇದರಿಂದ ಕಾಸ್ಟ್ ಆಫ್ ದಿ ಪ್ರಾಜೆಕ್ಟ್ ಒಂದು ಕಡೆ ಏರುತ್ತಿದೆ ಮತ್ತೊಂದು ಕಡೆ ನಾವು ಆರ್ ಅಂಡ್ ಆರ್‌ಗೆ ಇವೊತ್ತು 1000 ಕೋಟಿ ಕೊಡುವುದಕ್ಕೆ ಹೋಗುವುದಾದರೆ are we really going to do justice. ಎನ್ನುವುದನ್ನು ನಾವು ಕಾಮ್ ಆಗಿ ಕುಳಿತು ಯೋಚನೆ ಮಾಡೋಣ. ಇದರ ಬಗ್ಗೆ ಬೆಳಿಗ್ಗೆ ಒಂದು ದೂರು ಬಂತು ನಾನು ಸಭೆ ಕರೆಯಲಿಲ್ಲ ಎಂದು, ಈ ಸಭೆಯನ್ನು ನಾನು ಕರೆಯುತ್ತೇನೆ. ಇದರ ಬಗ್ಗೆ ಒಮ್ಮೆ ಎಲ್ಲರೂ ಕುಳಿತು ಚರ್ಚೆ ಮಾಡೋಣ, ನೀವು ಏನು ಹೇಳುತ್ತಿರೋ ಅದಕ್ಕೆ ನಾನು ಒಪ್ಪಿಕೊಳ್ಳುತ್ತೇನೆ, ಇದಕ್ಕೆ ನನ್ನ ತಕರಾರು ಏನೂ ಇಲ್ಲ, ಏಕೆಂದರೆ ಇರತಥ ಸಾಧಕ ಭಾದಕವನ್ನು ನಿಮ್ಮ ಮುಂದೆ ಹಂಚಿಕೊಳ್ಳೋಣ. ತಾವು ಬ್ಯಾಲೆನ್ಸಿಂಗ್ ರಿಸರ್‌ವಾಯರ್ ಬಗ್ಗೆ ಹೇಳಿದಿರಿ, ತುಂಗಾಭದ್ರಾ ಬ್ಯಾಲೆನ್ಸಿಂಗ್ ರಿಸರ್‌ವಾಯರ್ ಬಗ್ಗೆ ಸನ್ಮಾನ್ಯ ವೀರಪ್ಪ ಮೊಯಿಲಿಯವರು ಪ್ರಸ್ತಾಪ ಮಾಡಿದ್ದಾರೆ. 1992-93ರಲ್ಲಿ ಗ್ರಾಂಟ್ ಕೊಟ್ಟಿದ್ದು 200 ಲಕ್ಷ ಆದರೆ ಖರ್ಚಾಗಿದ್ದು 120 ಲಕ್ಷ. 1993-94ರಲ್ಲಿ ಅಂದರೆ ಆಗ ಬಂಗಾರಪ್ಪನವರು ಮುಖ್ಯಮಂತ್ರಿಯಾಗಿದ್ದರು ಎಂದು ಕಾಣುತ್ತದೆ, ಆಗ 30 ಲಕ್ಷ ರೂ.ಗಳು ಗ್ರಾಂಟ್ ಕೊಟ್ಟಿದ್ದು ಆದರೆ ಖರ್ಚಾಗಿದ್ದು ಕೂಡ 30 ಲಕ್ಷ ರೂ.ಗಳು. 1994-95ರಲ್ಲಿ ನೀವು 285 ಲಕ್ಷ ರೂ.ಗಳನ್ನು ಗ್ರಾಂಟ್ ಕೊಟ್ಟಿದ್ದೀರಿ. ಆದರೆ ಖರ್ಚಾಗಿರುವುದು 772 ಲಕ್ಷ ರೂ.ಗಳು. ಏಕೆಂದರೆ ಇಲ್ಲೆಲ್ಲಾ ಗಿರಾಕಿಗಳು ಬೇಡ ಎಂದು ದುಡ್ಡನ್ನು ಕಳುಹಿಸಿಬಿಟ್ಟರಲ್ಲಾ, ಯಾವಾಗ ನಾವು ಕಂಡೀಷನ್ ಹಾಕಿದೆವು ಆಗ 13 ಕೋಟಿ ಸರೆಂಡರ್ ಮಾಡಿದರು ಎಂದು ಆಗಲೇ ಹೇಳಿದ್ದೇನೆ. ಇದು ಬ್ಯಾಲೆಸ್ಸ್ ವರ್ಕ್ ಆಗಿದೆ. shall I release that money ಎಂದು ಕೇಳಿದರು.

ಆಗ ಮಾಡಿ ಎಂದು ನಾವು ಹೇಳಿದೆವು ಏಕೆಂದರೆ ಯಾವುದಾದರೂ ಒಂದು ಕಡೆ ಕೆಲಸ ಮುಗಿಯಲಿ ಎನ್ನುವ ದೃಷ್ಟಿಯಿಂದ ಹೇಳಿದೆವು. ನೀವು ಬಡ್ಜೆಟ್‌ನಲ್ಲಿ ಇಟ್ಟಿರತಕ್ಕಂಥದ್ದು 287 ಕೋಟಿ ರೂ.ಗಳು ಆದರೆ ಖರ್ಚಾಗಿರತಕ್ಕಂಥದ್ದು 770 ಕೋಟಿ ರೂ.ಗಳು. ಮುಂದಿನ ವರ್ಷಕ್ಕೆ ನೀವು ಹೇಳಿರತಕ್ಕಂಥದ್ದು ಸರಿಯಾಗಿದೆ. ಇದಕ್ಕೆ 2 ಕೋಟಿ ಪ್ರಾವಿಷನ್ ಮಾಡಿದ್ದೇವೆ, ಆದರೆ ಆ ಪ್ರಾವಿಷನ್ 2 ಕೋಟಿಗೆ ನಿಲ್ಲಿಸಬೇಕು

ಎಂದೇನೂ ಇಲ್ಲ, ಏಕೆಂದರೆ ಈಗ 287 ಕೋಟಿ ರೂಪಾಯಿ ಇದ್ದದ್ದು 770 ಕೋಟಿ ರೂ.ಗಳು ಖರ್ಚು ಆಯಿತು. ನಿಮ್ಮ ಆಸೆ ಏನಿದೆಯೋ ಅದನ್ನು ಮಾಡೋಣ, ನೀವು ಯಾವ ವೇಗದಲ್ಲಿ ನಾನು ಹೋಗಬೇಕು ಎಂದುದ ಹೇಳುತ್ತಿರೋ ಆ ವೇಗದಲ್ಲಿಯೇ ಹೋಗುತ್ತೇನೆ. ಈಗ ಮುದಾಯಿ ಯೋಜನೆಗೆ ಸಂಬಂಧಪಟ್ಟ ಹಾಗೆ 4 ಟಿ.ಎಂ.ಸಿ. ಗೆ ಪ್ರಾಜೆಕ್ಟ್ ರಿಪೋರ್ಟ್ ಕೇಂದ್ರ ಸರ್ಕಾರಕ್ಕೆ ಹೋಗಿದೆ. ಅದಕ್ಕೆ ಇನ್ನೂ ಕ್ಲಿಯರನ್ಸ್ ಬಂದಿಲ್ಲ.

ನೀವು ತೆಲುಗು ಗಂಗಾ ಬಗ್ಗೆ ಪ್ರಸ್ತಾಪ ಮಾಡಿದಿರಿ, ಈ ವಿಷಯದಲ್ಲಿ ಸವಿಸ್ತಾರವಾಗಿ ಚರ್ಚೆ ಆಗಿದೆ. ನಾನೇ ಉತ್ತರ ಕೊಟ್ಟಿದ್ದೇನೆ. ಇದರ ಬಗ್ಗೆ ಮರು ಉತ್ತರ ಕೊಡಬೇಕಾದ ಅವಶ್ಯಕತೆಯಿಲ್ಲ, ಆದರೆ ಏನು ಇದರೊಳಗೆ ಕುಡಿಯುವ ನೀರಿಗೋಸ್ಕರ 15 ಟಿ.ಎಂ.ಸಿ. ನೀರು ಕೊಡಬೇಕೆಂದು ಇತ್ತೋ ಆ ಸನ್ನಿವೇಶದಲ್ಲಿ ಎಲ್ಲಾ ಷರತ್ತುಗಳನ್ನೂ ಹಾಕಿದ್ದಾರೆ. The line canal between Shrishailam and Somashailam from the point of view of off take to be agreed upon between Andhra Pradesh and Tamil Nadu shall not utilise the water for irrigation,..

ಆ ಕಂಡೀಷನ್‌ನಲ್ಲಿಯೇ ಇದೆ. This agreement is subject to formal ratification by the respective States. The Central Government will make arrangement to inspect the system during the operational stages and ensure that the withdrawal of water into this water supply system but somashailiam does not exceed 15 TMC of water, ಆದರೆ ದುರಾದೃಷ್ಟ ಏನಾಗಿದೆ ಎಂದರೆ ಆಂಧ್ರಪ್ರದೇಶ ಸರ್ಕಾರದವರು 1977ರಲ್ಲೇ ಒಂದು ಆರ್ಡರ್ ತೆಗೆದರು. The agreement is subject to formal ratification by the respective States ಎಂದು ಇದೆಯಲ್ಲಾ, ಅದನ್ನು ಡಿಲೀಟ್ ಮಾಡಿಕೊಂಡರು. The Government of Andhra Pradesh - Supply of drinking water supply to Tamil Nadu Agreement to conclude on 28.10.1977 - ratifying - reg., from the Government of India D.O. No. - so and so dated 14.11.1977 - quietly they have removed that clause.

ಇಷ್ಟು ಕಳುಹಿಸಿದರು. ಅವರು ಅಪ್ರೂವ್ ಮಾಡಿ ಕಳುಹಿಸದ್ದಾರೆ. ಆದುದರಿಂದ ಅದರ ಮೇಲೆ ನಮ್ಮ ಪ್ರೊಟೆಸ್ಟ್ ಇದೆ.

"I am directed to invite the attention to your reference dated .... The Government of Andhra Pradesh have ratified the agreement concluded on 28th October, 1977 at Delhi among the States of Andhra Pradesh, Karnataka, Tamil Nadu and Maharashtra regarding conveying 15 TMC of Krishna water to water supply to Madras city subject specifically to the conditions and the terms of agreement are confined only to conveying 15 TMC of water to Madras city with

restrictions as to user of applicable only betwen the agreed off-tke point of lined canal of Somashallam kand that they cannot in an7 way affect the rights of Andhrapradesh to utilise the water of Krishna water

ಇದನ್ನು ಸ್ವಲ್ಪ ತಿಳಿದುಕೊಳ್ಳಬೇಕು, ಏಕೆಂದರೆ ಈ ಪ್ಯಾರಾದಲ್ಲೇ ಸರ್‌ಪ್ಲಸ್ ವಿಚಾರ ಬರುವುದು for purpose of irrigatiion and other consumptive use in

any area and in any manner in conformity with the decision of the Krishna water Tribunal.

Sre. Veerappa Moily: What is the Government of India do than?

ಶ್ರೀ ಹೆಚ್.ಡಿ. ದೇವೆಗೌಡ:- ಈ ಲೆಟರ್ ಗೌವರ್ನಮೆಂಟ್ ಅಫ್ ಇಂಡಿಯಾದ್ದು, ನಾನು ನಿಮಗೆ ಹೇಳಿದೆನಲ್ಲಾ, ಗೋಪಾಲಕೃಷ್ಣ, ಎಸ್.ಇ. ಇರಿಗೇಷನ್ ಡಿಪಾರ್ಟ್‌ಮೆಂಟ್, ಇವರು ಗೌವರ್ನಮೆಂಟ ಅ ಇಂಡಿಯಾಕ್ಕೆ ಕಳುಹಿಸಿಕೊಟ್ಟರು. ಆದರೆ ದುರಾದೃಷ್ಟ ಅವರು ಅದರ ಬಗ್ಗೆ ನೀವು ಹೇಳಿದ ಹಾಗೆ ಲವು ತೋರಲಿಲ್ಲ. Sri. M.Veerappa Moily If is not Past of the Bachawat award.

Sri. H.D. Deve Gowda:Ë I agree. the Government of India has to superivise, scrutiny everything is there.

Sri. HN. Nanjegowda; we hjave also ratified.

ಶ್ರೀ ಹೆಚ್. ಡಿ. ದೇವೆಗೌಡ- ನೀವು ಮಾಡಿಲ್ಲ, ನಾವು ಅಬ್ಜೆಷನ್ ತೆಗೆದಿದ್ದೇವೆ ಎಂದು ಹೇಳಿದೆ.

SRI H.N.Nanjegowda: Copy of that letter of Government of injdia must have been sent to Karnataka also. What was our reaction .? We should have gone back of promise kto give 5 TMC of water to conclude their agreedment. What action kthis Government has taken ? I am not worriod who was there Ë It was the duty of the Government of the day to protest and defy from signing and putting the seal of approval for such an agreement.

ಮತ್ತೆ ಅವರು 5 ಟಿ.ಎಂ.ಸಿ. ಎಂಬ ನೆಪದಲ್ಲಿ ಮಾರುವುದಕ್ಕೆ ನಾರು ಎತಕ್ಕೆ 5 ಟಿ.ಎಂ.ಸಿ. ನೀರನ್ನು ಕೊಡಬೇಕಾಗಿತ್ತು? Under the aegis of Government of India that these were agreed which was to be ratiified..

5 ಟಿ.ಎಂ.ಸಿ. ನೀರು ಕೊಡುವುದಕ್ಕೂ ಆಗ ಬೇಕಲ್ಲಾ.

ಶ್ರೀ ಹೆಚ್.ಡಿ. ದೇವೆಗೌಡ : ಅಂದರೆ 333 ಟಿ.ಎಂ.ಸ್ ಹೆಚ್ಚುವರಿ ನೀರು ಎಂದ ಕಾಣುತ್ತದೆ. ಈಗ ಅದನ್ನು ಅದರ ವ್ಯಾಪ್ತಿಯಲ್ಲಿ ನಾವು ವ್ಯಾಖ್ಯಾನ ಮಾಡಿ, 160ಅಥವಾ ಶೇಕಡ 50ರಷ್ಟು ನಮಗೆ ಬರಬೇಕಾಗುತ್ತದೆ. ನಮಗೆ ಬರಬೇಕಾಗಿರತಕ್ಕಂತದ್ದರ ಬಗ್ಗೆ ವ್ಯಾಖ್ಯಾನ ಮಾಡಿ, ನಾವು ಸೇರಿದಂತೆ ಮುಂದೆ ಮೂರು ರಾಜ್ಯಗಳ ನಡುವೆ ಹೋರಾಟ ನಡೆದು, ಮತ್ತೊಂದು ಟ್ರಿಬ್ಯುನಲ್ ರಚನೆ, ಅಥವಾ ಒಪ್ಪ ದದ ಮೂಖೇನ ನೀವು ಇದನ್ನು ಬಗೆಹರಿಸುಕೊಳ್ಳುವ ಸನ್ನಿವೇಶ ಬಂದು, ಅದಾಗತಕ್ಕಂತಹ ಕಾಲದಲ್ಲಿ ಎನೇನು ಆಗುತ್ತದೆಂದು ನೋಡೋಣ, The Karnataka Government had made a strong protest on this issue time and again... ಯೂವಗಲ್‌ರವರು ಮಲಪ್ರಭದ ಪೂರ್ಣಗೊಳ್ಳಲು ಎಷ್ಟು ದಿನಗಳಾಗುತ್ತದೆಂದು ಕೇಳಿದ್ದಾರೆ. ಈ ವರ್ಷ ಈ ಯೋಜನೆಗೆ 35 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ, ಇನ್ 180 ಕೋಟಿ ರೂಪಾಯಿಗಳು ಬೇಕಾಗುತ್ತದೆಂದು ನಮ್ಮ ಅಧಿಕಾರಿಗಳು ವರದಿಯನ್ನು ಕೊಟ್ಟಿದ್ದಾರೆ. ಸನ್ಮಾನ್ಯ ಅಧ್ಯಕ್ಷರೆ, ಇನ್ನು ಜುರಾಲ ಪ್ರಾಜೆಕ್ಟ್ ಬಗ್ಗೆ 1978 ರಲ್ಲಿ ಶ್ರೀ. ಡಿ. ದೇವರಾಜ ಅರಸುರವರ ಕಾಲದಲ್ಲಿ ಒಪ್ಪಂದವಾಗಿದೆ. ನಮ್ಮದ್ದು, 559 ಎಕರೆ 26 ಗುಂಟೆ ಜಮೀನು ಮುಳುಗಡೆಯಾಗುತ್ತದೆ, ರಸ್ತೆ ಮುಳುಗದೆಯಾಗುತ್ತದೆ, ಹಾಗೂ ಎರಡು ಸೇತುವೆಗಳು ಮುಳುಗಡೆಯಾಗುತ್ತವೆ. ಇದನ್ನೆಲ್ಲಾ ನಾರು ಆಂದ್ರ ಪ್ರದೇಶ

ಸರ್ಕಾರಕ್ಕೆ ತಿಳಿಸಿದ್ದೇವೆ. ಅವರು 35 ಲಕ್ಷ ರೂಪಾಯಿಗಳನ್ನು ರೀಂಬರ್ಸ್ ಮಾಡಿದ್ದಾರೆ. ಮೊನ್ನೆ ಆಂಧ್ರಪ್ರದೇಶದಿಂದ ಅಧಿಕಾರಿಗಳ ತಂಡ ಇಲ್ಲಿಗೆ ಬಂದಿತ್ತು ಅಧಿಕಾರಿಗಳ ಮಟ್ಟದಲ್ಲಿ ಚರ್ಚೆಯಾಯಿತು. ಪರರ್‌ನಲ್ಲಿ ಶೇಕಡ 50ರಷ್ಟು. ಇಬ್ಬರೂ ಹಂಚಿಕೊಳ್ಳಬೇಕೆಂದು ತೀರ್ಮಾನವಾಗಿದೆ, ಕಾಸ್ಟಬಗ್ಗೆ ಅಂತಿಮ ತೀರ್ಮಾನವಾಗಬೇಕು, ಅದು ಮುಖ್ಯಮಂತ್ರಿಗಳ ಮಟ್ಟದಲ್ಲಿ ಆಗಬೇಕು. ಇದಾದ ಮೇಲೆ ನಾನು ಆಂಧ್ರ ಪ್ರದೇಶಕ್ಕೆ ಹೋಗುತ್ತೇನೆ ಚರ್ಚೆ ಮಾಡಿ ಪವಹ್‌ನಲ್ಲಿ ಶೇಕಡ 50 ರಲ್ಲಿ what is the cost we have to meet far asd power component is concerned initially I have agreed for power 50% -50% share..

ಅವರು ಅಧಿಕಾರಿಗಳ ಮಟ್ಟದ ಚರ್ಚೆಯಲ್ಲಿ ಪವರನ್ನು ಅರ್ಧಅರ್ಧ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳಿದ್ದಾರೆ. Joint surveyy to be conducted by the Officers of the two states. the extent of submersion in Karnataka has been assessed as 559.26. Andrapradesh has so far paid Rs. 45. lakhs.

ಒಪ್ಪಂದ ಏನೇನಾಗಿದೆ ಎನ್ನತಕ್ಕಂಥದ್ದೆಲ್ಲಾ, ವಿವರವಾಗಿ ಇದರಲ್ಲಿದೆ. ನಾವು ಇನ್ನೇನೂ ಮಾಡುವುದಕ್ಕಾಗುವುದಿಲ್ಲ, ಮಹದಾಯಿ ಬಗ್ಗೆ ನೀವು ಹೇಳಿದಿರಿ, ಗೋವಾ ಸರ್ಕಾರದವರು ಒಪ್ಪಿಗೆ ಕೊಡುವುದಕ್ಕಾಗುವುದಿಲ್ಲವೆಂದು ಅಬ್ಜಕ್ಷನ್ ರೈಸ್ ಮಾಡಿದ್ದಾರೆ. ಕಾರಣ ಅಲ್ಲಿ ಸಾಕಷ್ಟು ಪರಿಸರದ ತೊಂದರೆಯಿದೆ ಇದು ಈ ಹಂತದಲ್ಲಿದೆ ಸನ್ಮಾನ್ಯ ಅಧ್ಯಕ್ಷರೆ, ಇನ್ನು ಕೊನೆಯದಾಗಿ ತುಂಗಭದ್ರಾ ನದಿಯ ನೀರನ್ನು ನೀವು ಬಿಟಿದ್ದೇವೆಂದು ಹೇಳಿದ್ದಾರೆ. ವಿವರಣೆಯನ್ನು ಹಿಂದೆ ಒಂದು ಸಲ ಹೇಳಿದ್ದೇನೆ, ಮತ್ತೆ ಇನ್ನೊಂದು ಸಲ ಹೇಳುತ್ತೇನೆ. ಕಾರ್ಯಪಾಲಕ ಅಭಿಯಂತಕರರು ನಂ. 3 ಕಾಲುವೆ ವಿಭಾಗ , ಸಿಂಧನೂರು, ಹಿಂಗಾರು ಹಂಗಾಮಿ ನಿಗಧಿಸುವ ಅವಧಿ ಇದರ ಬಗ್ಗೆ ಕನ್ನಡ ಪ್ರಭ, ಪ್ರಜಾವಾಣಿ, ಸಂಯುಕ್ತ ಕರ್ನಾಟಕ ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಹಿಂಗಾರು ಹಂಗಾಮಿ ಭತ್ತವನ್ನು ಬೆಳೆಯುವುದನ್ನು ಸಂಪೂರ್ಣವಾಗಿ ನಿಲ್ಲಿಸಿ ಎಂದು ನೀರಾವರಿ ಅಧಿಕಾರಿಗಳು ತಿಳಿಸಿದ್ದಾರೆ, ಇದನ್ನೆಲ್ಲಾ ನೋಟಿಕೇಷನ್ ಮಾಡಿದ್ದಾರೆ. ಆದಾದ ಮೇಲೆ ನೀರನ್ನು ಎಷ್ಟು ದಿನ ಕೊಡಬೇಕೆಂದು ಹೇಳಿದ್ದಾರೆ. ಬಲದಂಡೆ ಕೆಳಮಟ್ಟದ ಕಾಲುವೆಗೆ 15-3-95ರಲ್ಲಿ ಬಲದಂಡೆ ಮೇಲಟ್ಟದ ಕಾಲುವೆ 31-12-94ರಾಯ ಬಸವಣ್ಣ ಕಾಲುವೆ 10-4-95, ಎಡದಂಡೆ ಮುಖ್ಯ ಕಾಲುವೆ 8-4-95, ಈ ರೀತಿ ನೋಟಿಫಿಕೇಷನ್ ಮಾಡಿದ್ದಾರೆ, ಕನ್ಸಲ್ಟೆಟಿವ್ ಕಮಿಟಿಯಲ್ಲಿ ತೀರ್ಮಾನವಾಗಿದೆ, ಆದಾದ ಮೇಲೆ ಈಗ ನನ್ನ ಹತ್ತಿರವೇ ಬಂದು ಏನಾದರೂ ಮಾಡಿ ಎಂಟು ದಿವಸ ನೀರನ್ನು ಬಿಡಿಸಿ ಎಂದು ಕೇಳಿದರು. 31-3-95ರವರೆಗೆ, 15-3-95ರ ನೋಟಿಪಿಕೇಷನ್‌ಗೆ ಬದಲಾಗಿ ಬಲದಂಡೆ ಕೆಳಮಟ್ಟದ ಕಾಲುವೆಯಿಂದ ನಿಗದಿಯಾದ ಪ್ರಮಾಣಕ್ಕಿಂತ ಇನ್ನು ಹೆಚ್ಚು 15 ದಿವಸಗಳ ಕಾಲ ಹೆಚ್ಚಿನ ನೀರನು ಹರಿಸಲಾಗಿದೆ. ಬಲದಂಡೆ ಮೇಲಟ್ಟದ ಕಾಲುವೆ, 31-12-94 ರಿಂದ ಅಷ್ಟೇ ಅಲ್ಲ ಮತ್ತೆ ಇನ್ನು 5 ದಿನಗಳವರೆಗೆ ನೀರನ್ನು ಮುಂದವರೆಸಿದ್ದಾರೆ. 31-1294 ರಿಂದ 31-12-94ರ ಜೊತೆಗೆ ಕಣ್ 5Ë6 ದಿವಸಗಳ ಕಾಲ ನೀರನ್ನು ಬಿಟ್ಟಿದ್ದಾರೆ ರಾಯಬಸವಣ್ಣ ಕಾಲುವೆಗೆ ಕ10-4-95 ರವರೆಗೆ ನೀರನ್ನು ಬಿಡುವುದಷ್ಟೇ ಅಲ್ಲ ಈಗಲೂ ನೀರನ್ನು ಒದಗಿಸುತ್ತಿದ್ದೇವೆ. ಎಡದಂಡೆ ಮುಖ್ಯ ಕಾಲುವೆ 8-4-95ರವರೆಗೆ ಆದರಿಂದೀಚೆಗೆ ಪುನಃ ನಾವು ಕಬ್ಬಿನ್ನು ಬೆಳೆಯುವುದಕ್ಕೆ ಎನು ಸ್ವಲ್ಪ ನೀರನ್ನು ಇಟ್ಟು ಕೊಂಡಿದ್ದೇವೊ ಅದನ್ನು ಕೂಡ ಬಿಡುಗಡೆ ಮಾಡಿ, ಮಳೆ ಬರಬಹುದು ಎನ್ನುವ ಒಂದು ನಿರೀಕ್ಷೆಯನ್ನಿಟ್ಟುಕೊಂಡು, ಧೈರ್ಯ ತೆಗೆದುಕೊಂಡು ನೀರನ್ನು ಬಿಡುಗಡೆ ಮಾಡಿದ ಮೇಲೆ ನಾವೇನೂ ಗೇಟನ್ನು ಮುಚ್ಚಿಲ್ಲ, 3000 ಚಿಲ್ಲರೆ ಕೊಸೆಕ್ಸ್ ನೀರು ಮೊದಲನೆ ದಿನ ಹೋಗಿದೆ. ಅಲ್ಲಿ ನೀರಿನ ಮಟ್ಟ ದಿನೇ ದಿನೇ ಕಡಿಮೆಯಾಗುತ್ತಿದೆ. ಇವತ್ತು 1000-1200 ಕ್ಯೂಸೆಕ್ಸ್ ನೀರು ಹೋಗುತ್ತಿದೆ.

ಇಲ್ಲಿ ಎನು ನೋಟಿಫಿಕೇಷನ್ ಆಗಿದೆ ಅದರ ವಿವರಣೆಯನ್ನು ನಾನು ಇಲ್ಲಿ ಹೇಳುತ್ತಿದ್ದೇನೆ. ನಾನು ಬೇಕಾದರೆ ನಿಮ್ಮ ಮುಂದೆ ಪತ್ರ ಓದುತ್ತೇನೆ. 0.2 ಟಿ.ಎಂ.ಸಿ. ನೀರನ್ನು ಕೇಂದ್ರ ಸರ್ಕಾರದ ಆಗರವಾಲದ ಸೂಚನೆಯ ಮೇರೆಗೆ ಅರ್ಬಿಟ್ರರಿಯಾಗಿ ಗೇಟನ್ನು ತೆರೆದಾಗ ನಮ್ಮ ಅಧಿಕಾರಿಗಳು ಹೋಗಿ, ನಮ್ಮ ಜನ ಹೋಗಿ ಗಲಾಟೆ ಮಾಡಿ. ನಿಲ್ಲಿಸಿ, ಪೋಲಿಸ್ ಅಧಿಕಾರಿಗಳು ಹೋಗಿ ಗೇಟನ್ನು ಮುಚ್ಚಿಸುದ್ದಾರೆ, ಈಗ ಕೇಂದ್ರದ ಮಂತ್ರಿಗಳಾದ ಶ್ರೀ ರಂಗಯ್ಯನಾಯ್ಡುರವರು ಎನಿದ್ದಾರೆ ಅವರು ನೀವು ಈ ರೀತಿ ಮಾಡಬೇಡಿ, ನೀವು ಅವರಿಗೂ ಕೂಡ ಸ್ವಲ್ಪ ಸಹಾಯ ಮಾಡಬೇಕೆಂದು ಪತ್ರ ಬರೆದಿದ್ದಾರೆ, ಪ್ರಧಾನಮಂತ್ರಿಗಳು ಪತ್ರ ಬರಯುಲಿಲ್ಲ ಕೇಂದ್ರದ ನೀರಾವರಿ ಮಂತ್ರಿಗಳು ಪತ್ರ ಬರೆದಿದ್ದಾರೆ, ಕೇಂದ್ರ ನೀರಾವರಿ ಇಲಾಖೆಯ ಕಾರ್ಯದರ್ಶಿಗಳು ಅವರು ಮೊದಲು ನೀರನ್ನು ಉಪಯೋಗಿಸಿಕೊಂಡಿಲ್ಲ, ನೀವು ಈಗ ನೀರನ್ನು ಬಿಟ್ಟು ಸಹಕರಿಸಿ ಎಂದು ಪತ್ರ ಬರೆದಿದ್ದಾರೆ ಆದರೆ ನೀವಿ ನೀರಿಲ್ಲವೆಂದು ತಿಳಿಸಿದ್ದೆವು. 0.2 ಟಿ.ಎಂ.ಸಿ ನೀರನ್ನು ಗೇಟ್ ತೆರದದ್ದರಿಂದ ಹೋಯಿತು, ಇದಕ್ಕೆ ಪೋಲಿಸರ ರಕ್ಷಣೆಯನ್ನೆಲ್ಲಾ ಕೊಡಬೇಕೆಂದು ನಮಗೆ ಪತ್ರ ಬರೆದಿದ್ದರು, ನಾವು ಕಾನೂನು ಮತ್ತು ಸುವ್ಯವಸ್ಥೆ ಸಮಸ್ಯೆ ಇದೆ- ಎನು ಮಾಡುವುದಕ್ಕಾಗುವುದಿಲ್ಲವೆಂದು ನೀವು ಕೂಡ ಪತ್ರ ಬರೆದಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರೇನು ಕಾಲುವೆಯನ್ನು ದುರಸ್ತಿ ಮಾಡುತ್ತಿದ್ದರು, ಆ ಕಾಲದಲ್ಲಿ ಅವರಿಗೆ ಕೊಡಬೇಕಾದಂಥ ನೀರನ್ನು ಕೊಟ್ಟಿಲ್ಲವೆಂದು ತಿಳಿದು ಕೊಂಡು ತಾವು 2 ಟಿ. ಎಂ.ಸಿ. ನೀರನ್ನು ನಂತರ ಬಿಟ್ಟರೆಲ್ಲಾ ಆ ನೀರನ್ನು ಇವರಿಗೆ ಕೊಟ್ಟಿದ್ದರೆ ಉಪಯುಕ್ತವಾಗುತ್ತಿತ್ತು ಎನ್ನತಕ್ಕದ್ದೇ ಇವತ್ತು ಅವರ ವಾದವಾಗಿದೆ ನೀವು ಎನುಹೇಳಿದ್ದೀರೆಂದರೆ, ಅದನ್ನು ಕೊಟ್ಟಿದ್ದೆವೆಂದು ಹೇಳುತ್ತಿದ್ದಿರು.

ಶ್ರೀ. ಹೆಚ್.ಡಿ. ದೇವೆಗೌಡ : ರಿವರ್ಸ್‌ಲೂಸ್‌ನಲ್ಲಿ ಹೊಗತಕ್ಕಂಥ ನೀರೆನಿದೆ ಅದನ್ನು ಕಡಿಮೆ ಮಾಡಿ ರಿವರ್ಸ್‌ಲೂಸ್‌ನಲ್ಲಿ ಹೋಗತಕ್ಕ ನೀರನ್ನು ನಿಲ್ಲಿಸಿ ಇದರಲ್ಲಿ ಡ್ರಾಯಲ್ಸ್‌ಮಾಡಿ ಕೊಂಡಿದ್ದಾರೆ ಅಲ್ಲಿ ನಾವು ನಮ್ಮ ನೀರನ್ನೆಲ್ಲಾ ಅವರಿಗೆ ಬಿಟ್ಟುಕೊಟ್ಟಿದ್ದೇವೆನ್ನುವ ಪ್ರಶ್ನೆಯಿಲ್ಲ, ಆ ದಿನ ಅದರ ವಿವರಣೆಗಳನ್ನೆಲ್ಲಾ ಒದಿದ್ದೇನೆ.

ಶ್ರೀ. ಎಂ. ಮಲ್ಲಿಕಾರ್ಜುನ ಖರ್ಗೆ : 2 ಟಿ.ಎಂ.ಸಿ ಹೆಚ್ಚುವರಿ ನೀರನ್ನು ಬಿಡಲಿಲ್ಲವೇ?

ಶ್ರೀ. ಹೆಚ್ಚೆ . ಡಿ. ದೇವೆಗೌಡ ;ರಿವರ್ಸ್ಲೂಸೆನಲ್ಲಿ ಹೋಗುತಿರತಕ್ಕಂಥ ನೀರನ್ನು ನಿಲ್ಲಿಸಿದ್ದೇವೆ. ಒಂದು ದಿವಸವಲ್ಲ, ಯಾವತ್ತು ಅವರಿಗೂ ನಮಗೂ ಮಾತುಕತೆಯಾಯಿತೋ ಅವತ್ತಿನಿಂದ ನಾವು ರಿವರ್ಸ್‌ಲೂಸನ್ನು ಕಂಪ್ಲೀಟ್ ಮಾಡಿ ಕೊಂಡು ಇವತ್ತು ಕರ್ನಾಲ್ ಹತ್ತಿರ ಅವರಿಗೆ ರಿವರ್ಸ್‌ಲೂಸ್‌ನಿಂದ ಹೋಗತಕ್ಕಂಥ ನೀರು ಒನು ಡೈವರ್ಷನ್ ಆಗುತ್ತದೆ ಅದನ್ನು ನಾವು ಕಡಿಮೆ ಮಾಡಿ ,ನಮ್ಮ ಬೆಳೆಗೆ ಅಪಾಯವಾಗಬಾರದೆಂದು, ದಿನಾಂಕ :8-4-94 ರವರೆಗೆ ಎಲ್ಲಾ ಕೊಟ್ಟಿರತಕ್ಕಂಥ ಷರತ್ತಿಗೆ ಯಾವುದೇ ಕಾರಣದಿಂದ ಅಪಾಯವಾಗಬಾರದೆಂದು ಕರ್ನಾಟಕ ಎಲ್ಲಾ ಮುನ್ನೆಚ್ಚರಿಕೆ ವಹಿಸಿಕೊಂಡಿದೆ. ಇತ್ತೀಚೆಗೆ 5 ದಿನ ನೀರನ್ನು ಬಿಟ್ಟಿದ್ದೇವೆ ಮತ್ತೆ ನಾನು ಇದಕ್ಕಿಂತ ಹೆಚ್ಚಿಗೆ ವಿವರಣೆಯನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ.

ಇವತ್ತು ಸದನದ ಎಲ್ಲಾ ಹಿರಿಯ ಮುಖಂಡರೂ ಕೂಡ ಬಹಳ ಪ್ರಮುಖವಾಗಿ ಕೃಷ್ಣಾ ಮತ್ತು ಕಾವೇರಿಗೆ ಸಂಬಂಧಪಟ್ಟ ನೀರಾವರಿಯ ಬಗ್ಗೆ ಬಹಳ ಸುದೀರ್ಘವಾಗಿ ಚರ್ಚೆಮಾಡಿ ಅವರು ಕೊಟ್ಟಿರುವ ಉಪಯಯುಕ್ತ ಸಲಹೆ ಇರಬಹುದು ಸರ್ಕಾರದ ತಪ್ಪು ನೆಪ್ಪಿಗಳನ್ನು ಹೇಳಿರಬಹುದಾದ ಅವೆಲ್ಲಾವನ್ನೂ ನೀನು ಸ್ವಾಗತಮಾಡಿ ಈ ರಾಜ್ಯದಲ್ಲಿ ಕಾವೇರಿ ಮತ್ತು ಕೃಷ್ಣಾನದಿಯ ನಮ್ಮ ಪಾಲಿನ ನೀರನ್ನು ಉಳಿಸಿಕೊಳ್ಳುವುದಕ್ಕೆ

ನಿಮ್ಮೆಲ್ಲರ ಸಹಕಾರದಿಂದ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತೇನೆಂದು ಹೇಳಿ ಈ ಹಂತದಲ್ಲಿ ಟ್ರಿಬ್ಯುನಲ್‌ನ್ನು ಮಾತ್ರ ಯಾವುದೇ ಕಾರಣದಿಂದಲೂ ಬಹಿಷ್ಕಾರ ಮಾಡುವುದಕ್ಕೆ ಸಾಧ್ಯಾವಾಗುವುದಿಲ್ಲ. ಈಗ ಇದರ ಬಗ್ಗೆ ಮೆರಿಟ್ಸ್ ಮಾಡುವ ಕೆಲಸವನ್ನು ಹಿಂದಿನ ಸರ್ಕಾರಗಳೆಲ್ಲಾ ವ್ಯವಸ್ಥೆ ಮಾಡಿಕೊಂಡು ಬಂದಿದ್ದಾರೆ, ಆದರಿಂದ ಈ ಹಂತದಲ್ಲಿ ನಾವು ಮತ್ತೆ ಹಿಂಗ ಹೋಗುವುದು ಸರಿಯಲ್ಲವೆಂದು ಹೇಳಬಯಸುತ್ತೇನೆ..

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಾಕ್ಷರೆ ಬಹಿಷ್ಕಾರವನ್ನುಮಾಡುವುದಿಲ್ಲ ಎಂಬ ಅಭಿಪ್ರಾಯವನ್ನು ಮಾನ್ಯ ಮುಖ್ಯ ಮಂತ್ರಿಗಳು ವ್ಯಕ್ತಮಾಡುತ್ತಿದ್ದಾರೆ.

ಶ್ರೀ ಹೆಚ್ಚ್.ಡಿ. ದೇವೇಗೌಡ : ನಾನು ಮೊದಲ ಮುಗಿಸಿಬಿಡುತ್ತೇನೆ ಅನಂತರ ತಾವು ಹೇಳುವಿರಂತೆ. ನಾನು ಓಡಿಹೋಗುವುದಿಲ್ಲ. ತಮಗೂ ನಾನು ಅವಕಾಶವನ್ನು ಕೊಡುತ್ತೇನೆ. ನಾನು ಇಷ್ಟುಮಾತ್ರ ಹೇಳಲಿಕ್ಕೆ ಇಚ್ಚೆಪಡುತ್ತೇನೆ. ಮಾನ್ಯ ನಂಜೇಗೌಡರು ಹಾಗೂ ಇತರೇ ಮಾನ್ಯ ಸದಸ್ಯರು ಹೇಳಿದಂತೆ ನೆಗೋಸಿಯೇಷನ್‌ಮುಖಾಂತರ ಇದನ್ನು ಇತ್ಯರ್ಥಮಾಡಿಕೊಳ್ಳತಕ್ಕದ್ದು ಸೂಕ್ತವೆನ್ನತಕ್ಕ ಮಾತನ್ನು ನಾನು ಇವತ್ತೂ ಕೂಡ ಹೇಳಲಿಕ್ಕೆ ಬಯಸುತ್ತೇನೆ. ಏಕೆಂದರೆ ಎಲ್ಲಾ ವಿಚಾರಗಳೂ ಕೋರ್ಟಿನ ಮೂಲಕವೇ ಪಂಚಾಯಿತಿಯ ಮೂಲಕವೇ ತೀರ್ಮಾನ ಮಾಡಿಕೊಳ್ಳಬೇಕೆಂದು ಹೋದರೆ ಅದಕ್ಕೆ ಸಾಕಷ್ಟು ಕಾಲಹರಣ ಆಗುತ್ತದೇಂಬುದು ನಮ್ಮ ಕರ್ನಾಟಕದ ನಿಲುವು ಆದರಿಂದ ಇಂಥ ಪ್ರಮುಖವಾದ ವಿಷಯಗಳನ್ನು ನೆಗೋಸಿಯೇಶನ್ ಮುಖಾಂತರ ಸಟಲ್ ಮಾಡಿಕೊಳ್ಳುವುದಕ್ಕೆ ನಾವು ಸಿದ್ಧವಾಗಿದ್ದೇವೆ ಇದಕ್ಕೆ ಪಕ್ಕದ ರಾಜ್ಯಗಳು ಸಹಕಾರವನ್ನು ಕೊಟ್ಟರೆ ಬಹಳ ಒಳ್ಳೆಯದು ಇಲ್ಲವೇ ಹೋದರೆ ಇವತ್ತು ನಮ್ಮ ಈ ಸದನದಲ್ಲಿ ಏನು ನಿಲುವನ್ನು ತೆಗೆದುಕೊಂಡಿದ್ದೇವೆ ಇದನ್ನು ಮುಂದುವರೆಸುತ್ತೇವೆ ಎನ್ನತಕ್ಕ ಮಾತನ್ನು ತಿಳಿಸಿ ತಮಗೆ ವಂದಿಸಿ ನನ್ನ ಮಾತನ್ನುಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ ನ್ಯಾಯ ಮಂಡಲಿಗೆ ಬಹಿಷ್ಕಾರವನ್ನು ಹಾಕಬೇಕೆಂಬುದು ನಮ್ಮೆಲ್ಲರ ಒತ್ತಾಯ. ಈ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರನ್ನು ಅನೇಕಸಾರಿ ಒತ್ತಾಯ ಮಾಡಿದ್ದೂ ಆಯಿತು, ಹಿಂದಿನ ಸರ್ಕಾರವನ್ನೂ ಇದೇ ರೀತಿ ಒತ್ತಾಯ ಮಾಡಿ ನ್ಯಾಯಮಂಡಲಿಯನ್ನು ಬಹುಷ್ಕಾರ ಹಾಕಬೇಕು ಎಂದು ಹೇಳಿದ್ದೇವೆ ಏಕೆಂದರೆ ಈ ನ್ಯಾಯ ಮಂಡಲಿಯಿಂದ ನಮಗೆ ಖಂಡಿತವಾಗಿ ನ್ಯಾಯ ಸಿಕ್ಕುವುದಿಲ್ಲವೆಂಬುದು ನಮ್ಮ ಸ್ಪಷ್ಟ ನಿಲುವು. ಮಾನ್ಯ ಮುಖ್ಯ ಮಂತ್ರಿಗಳು ಈ ಮಾತನ್ನು ಈ ಸಭೆಯಲ್ಲಿ ಹೇಳುತ್ತಿಲ್ಲ, ಆದರೆ ಸಭೆಯನ್ನು ಬಿಟ್ಟು ಹೊರಗಡೆ ಮತ್ತು ಲೋಕಸಭಾ ಸದಸ್ಯರಾಗಿದ್ದಾರೆ ಅವರು ಅನೇಕ ಕಡೆ ಸ್ಪಷ್ಟಪಡಿಸುತ್ತಾ ಈ ನ್ಯಾಯ ಮಂಡಲಿಯಿಂದ ನಮಗೆ ನ್ಯಾಯ ದೊರಕುವುದಿಲ್ಲವೆಂದು ಹೇಳಿದ್ದಾರೆ ಆದ್ದರಿಂದ ಇವತ್ತು ನಾವು ಈ ನ್ಯಾಯ ಮಂಡಲಿಗೆ ಬಹಿಷ್ಕಾರವನ್ನು ಹಾಕುತ್ತೇವೆಂದು ಅವರ ಬಾಯಿಂಗ ಬರುತ್ತದೆಂದು ನಾನು ತಿಳಿದುಕೊಂಡಿದ್ದೆ ಆದರೆ ಅವರು ಬಹಿಷ್ಕಾರವನ್ನು ಹಾಕದೇ ಇರುವುದರಿಂದ ನಾನು ಬಹಳ ನೋವಿನಿಂದ ಹೇಳುತ್ತಿದ್ದೇನೆ ಮಾನ್ಯ ಮುಖ್ಯ ಮಂತ್ರಿಗಳ ನಿಲುವು ಸರಿಯಲ್ಲ, ಈ ಸರ್ಕಾರದ ನಿಲುವು ಸರಿಯಿತ್ತವೆಂದು ಹೇಳಿ ಈ ಸಭೆಯಿಂದ ನಾನ ಸಬ್ಯಾತ್ಯಾಗ ಮಾಡುತ್ತಿದ್ದೇನೆ ನ್ಯಾಯ ಮಂಡಲಿಗೆ ನಮ್ಮಸರ್ಕಾರ ಬಹಿಷ್ಕಾರವನ್ನು ಹಾಕಲೇಬೇಕೆಂಬುದು ನನ್ನ ಅತ್ಯಂತ ಅಚಲವಾದಂಥ ನಿರ್ಧಾರ ಮತ್ತು ಅಚಲವಾದಂಥ ನಿರ್ದಾರ.

ಕೆಲವು ಮಾನ್ಯ ಸದಸ್ಯರು : ಹೋಗಿ, ಹೋಗಿ..

ಶ್ರೀ ವಾಟಾಳ್ ನಾಗರಾಜ್ ಹೋಗಿ, ಹೋಗಿ ಎಂದರೆ ಏನು ಅರ್ಥ ಇದೇನು ದನಗಳ ದೊಡ್ಡಿಯೇ? ಒಂದು ನೀತಿ, ನಾಗರೀಕತೆಯನ್ನು ತಿಳಿದುಕೊಂಡು ಶಾಸಕರಾಗಿ

ಈ ಸಭೆಯಲ್ಲಿ ಯಾವ ರೀತಿ ನಡೆದುಕೊಳ್ಳಬೇಕೆಂದು ಇವರಿಗೆ ಯೋಗ್ಯತೆ ಇಲ್ಲ. ಇವರು ಏನು ಮಾತನಾಡುತ್ತಿದ್ದಾರೆ?

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು.)

ಶ್ರೀ ಹೆಚ್.ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೆ, ಸರ್ಕಾರದ ವತಿಯಿಂದ ಎರಡುಮೂರು ವಿಚಾರಗಳ ಬಗ್ಗೆ ಖಚಿತವಾದ ಅಭಿಪ್ರಾಯಗಳನ್ನು ನಾನು ನಿರೀಕ್ಷೆ ಮಾಡುತ್ತೇನೆ. ಮೊದಲನೆಯದು ಎಂದರೆ, ಭೀಮಾ ಫ್ಲೋಸ್, ಭೀಮಾ ಲಿಫ್ಟ್ ಇರಿಗೇಷನ್ ಸ್ಕೀಂ ಮತ್ತು ಅಪ್ಪರ್ ಭದ್ರಾಗಳ ಗತಿ ಏನು? ನೀವು ಇವುಗಳನ್ನು ಪ್ರಾರಂಭ ಮಾಡಿದ್ದೀರಾ? ಮಾಡಿಲ್ಲದಿದ್ದರೆ ಯಾವಾಗ ಪ್ರಾರಂಭ ಮಾಡುತ್ತೀರಿ? ಖಚಿತವಾದ ಉತ್ತರ ಬೇಕು.

ಎರಡನೆಯದಾಗಿ, ಕೃಷ್ಣಾ ಜಲ ನಿಗಮದ ಮೂಲಕ ಈ ವರ್ಷ 800 ಕೋಟಿ ರೂ.ಗಳನ್ನು ಸಂಗ್ರಹಿಸಿಕೊಳ್ಳುತ್ತೇವೆಂದು ಹೇಳುತ್ತಿದ್ದೀರಿ. ಇದು ಈ ವರ್ಷಕ್ಕೆ ಆಗುತ್ತದೆ. ಮುಂದಿನ ವರ್ಷ ಏನು ಮಾಡುತ್ತೀರಿ? ಮತ್ತೆ ಮುಂದಿನ ವರ್ಷವೂ ಈ ನಿಗಮದಿಂದಲೇ 800 ಕೋಟಿ ರೂ.ಗಳನ್ನು ಸಂಗ್ರಹ ಮಾಡುತ್ತೀರಾ? ಹೇಗೆ ಮಾಡುತ್ತೀರೆಂಬುದನ್ನು ಹೇಳಬೇಕು. ನಾನು ಮಾತನಾಡುವ ಸಂದರ್ಭದಲ್ಲಿ ಪೆನಸುಲರ್ ಸ್ಕೀಂ ಬಗ್ಗೆ ಹೆಚ್ಚು ಮಾತನಾಡುವುದಕ್ಕೆ ಆಗಲಿಲ್ಲ. ಆದರೆ ಈಗ ಡಿಫಿಸಿಟ್ ಬೇಸಿನ್ಸ್ ಬೇರೆ ಇದೆ. ಡಿಫಿಸಿಟ್ ಸ್ಟೇಟ್ಸ್ ಬೇರೆ. ನಾವು ಕೃಷ್ಣಾ ಡಿಫಿಸಿಟ್ ಬೇಸಿನ ಎಂದು ಅಂದುಕೊಂಡರೂ ಕೂಡ ಅವರು ತೃಪ್ತಿಯಾಗಿದ್ದಾರೆ. ಏಕೆಂದರೆ ಆಂಧ್ರದವರಿಗೆ ಹೆಚ್ಚಿಗೆ ನೀರು ಸಿಕ್ಕಿಬಿಟ್ಟಿದೆ. ಈಗ ನಮ್ಮ ಕರ್ನಾಟಕ ಡಿಫಿಸಿಟ್‌ಸ್ಟೇಟ್ ಆಗಿದೆ. ಅದೇ ರೀತಿ ತಮಿಳ್ನಾಡೂ ಕೂಡ ಡಿಫಿಸಿಟ್‌ಸ್ಟೇಟ್ ಆಗಿದೆ. ಪೆನಿಸುಲರ್ ಸ್ಕೀಂ ಎಂದರೆ ಮಹಾನದಿ ಮತ್ತು ಗೋದಾವರಿ ನದಿಯ ನೀರನ್ನು ಉಪಯೋಗಿಸುವ ಬಗ್ಗೆ ಕೇಂದ್ರ ಸರ್ಕಾರದವರು ಅನೇಕ ಸಾರಿ ರಾಜ್ಯ ಸರ್ಕಾರಗಳಿಗೆ ಪತ್ರಗಳನ್ನು ಬರೆದು ಇದರ ಬಗ್ಗೆ ಒಂದು ಖಚಿತ ನಿಲುವು. ಆದ್ದರಿಂದ ಈ 3 ವಿಚಾರಗಳ ಬಗ್ಗೆ ಸ್ಪಷ್ಟ ಉತ್ತರ ಕೊಟ್ಟರೆ ಒಳ್ಳೆಯದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ, ನಾನು 3 ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡಿದ್ದೆ. ಅವುಗಳ ಪೈಕಿ ಒಂದಕ್ಕೂ ಖಚಿತವಾದ ಉತ್ತರ ಸಿಕ್ಕಲಿಲ್ಲ. ಮೊದಲನೆಯದು ಅಪ್ಪರ್ ಭದ್ರಾ ಪ್ರಾಜೆಕ್ಟ್‌ನಿಂದ ತುಮಕೂರು, ಕೋಲಾರ ಮತ್ತು ಚಿತ್ರದುರ್ಗಗಳಿಗೆ ನೀರು ಬರತಕ್ಕ ವಿಚಾರ. ಸಣ್ಣ ನೀರಾವರಿ ವಿಚಾರದ ಬಗ್ಗೆ ಅಂದರೆ ಅವುಗಳ ಅಭಿವೃದ್ಧಿ ಬಗ್ಗೆ, ಕೆರೆಗಳಲ್ಲಿ ಹೂಳು ತೆಗೆಯುವ ಬಗ್ಗೆ ಯಾವುದೇ ರೀತಿಯ ಸ್ಪಷ್ಟ ಉತ್ತರ ಬರಲಿಲ್ಲ. ಇನ್ನು ನಾನು ಪ್ರತ್ಯೇಕವಾಗಿ ಒಂದು ಮನವಿ ಮಾಡಿದ್ದೆ. ಕಾವೇರಿಯಿಂದ ನಮ್ಮ ಕೋಲಾರ ಜಿಲ್ಲೆಗೆ ಕುಡಿಯುವ ನೀರಿನ ವ್ಯವಸ್ಥೆ ಆಗಬೇಕೆಂಬುದರ ಬಗ್ಗೆ ಈ 3 ವಿಷಯಗಳ ಬಗ್ಗೆ ಖಚಿತವಾದ ಉತ್ತರವನ್ನು ಮಾನ್ಯ ಮುಖ್ಯ ಮಂತ್ರಿಗಳು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ಅಪ್ಪರ್ ಭದ್ರಾ ಬಗ್ಗೆ ಏನಾದರೂ ಕೇಳುವುದಾದರೆ ಕೇಳಿ, ಅದು ಒಂದೇ ಸಾರಿ ಮುಗಿದುಹೋಗಲಿ. ಮಾನ್ಯ ಮೊಯ್ಲಿಯವರು, ಖರ್ಗೆಯವರೂ ಕೇವಲ ಕಾವೇರಿ, ಕೃಷ್ಣ ಇವುಗಳ ಬಗ್ಗೆಯೇ ಇರುತ್ತೀರಿ. ಕೋಲಾರದ ವಿಚಾರ ನಿಮಗೆ ಸಂಬಂಧವೇ ಇಲ್ಲವೇ? ಕೇವಲ ಶ್ರೀರಾಮರೆಡ್ಡಿಯವರು ಒಬ್ಬರೇ ಕೇಳಬೇಕಾಗಿದೆ. ಬೇರೆಯವರು ಯಾರೂ ಕೇಳುವುದಿಲ್ಲ, ನಾನೂ ಕೂಡ ಕೇಳುವುದಕ್ಕಾಗುವುದಿಲ್ಲ, ನೀವೂ ಕೇಳುವುದಿಲ್ಲ, ಹೀಗಾದರೆ ನಮ್ಮ ಜಿಲ್ಲೆಯ ಗತಿ ಏನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದರ ಬಗ್ಗೆ ಹೇಳುತ್ತೇನೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರಲ್ಲಾ, ಮಾನ್ಯ ನಂಜೇಗೌಡರು ಕೇಳಿದಂತೆ ನಮ್ಮ ಕೃಷ್ಣಾ ಬೇಸಿನ್ ಕೆಲಸ ಪೂರ್ತಿಯಾಗಬೇಕಾದರೆ ಸುಮಾರು 6 ಸಾವಿರ ಕೋಟಿ ರೂ. ಬೇಕಾಗುತ್ತದೆ. ಈಗಾಗಲೇ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಈ ವರ್ಷ 800 ಕೋಟಿ ರೂ.ಗಳ ವ್ಯವಸ್ಥೆಯನ್ನು ನಾನು ಮಾಡುತ್ತೇನೆ, ಬಜೆಟ್‌ನಲ್ಲಿ 200 ಕೋಟಿ ರೂ. ಇದೆ, ಎಲ್ಲಾ ಸೇರಿ ಒಟ್ಟು 1000 ಕೋಟಿ ರೂ.ಗಳನ್ನು ಖರ್ಚು ಮಾಡತಕ್ಕ ವ್ಯವಸ್ಥೆ ಮಾಡುತ್ತೇನೆಂದು ಸ್ಪಷ್ಟವಾಗಿ ಹೇಳಿದ್ದೀರಿ. ಆದರೆ ಇದರ ಬಗ್ಗೆ ಕಾರ್ಯಕ್ರಮಗಳು ಆಗಬೇಕಲ್ಲಾ. ಏಕೆಂದರೆ ಈ ವರ್ಷ ಆದಮೇಲೆ ಮತ್ತೆ ಮುಂದಿನ ವರ್ಷಕ್ಕೆ ಏನು ವ್ಯವಸ್ಥೆ ಮಾಡುತ್ತೀರಿ? ನೀವು ಮುಂದಿನ 5 ವರ್ಷಗಳಿಗೆ ಸಂಬಂಧಪಟ್ಟಂತೆ ಒಂದು ಪ್ರೋಗ್ರಾಂನ್ನು ಇಟ್ಟುಕೊಂಡು ತಾವು ಹೇಳಿದರೆ ನಮಗೆ ಸ್ಪಷ್ಟವಾಗುತ್ತದೆ. ಏಕೆಂದರೆ ಇನ್ನೂ ಕೆಲವು ಟೇಕ್ ಆಫ್ ಆಗಿಲ್ಲ. ಉದಾಹರಣೆಗೆ ಹೇಳುವುದಾದರೆ, ಭೀಮಾ ಫ್ಲೋ, ಭೀಮಾ ಲಿಫ್ಟ್; ಹಿಪ್ಪರಗಿ ಇನ್ನೂ ಮುಂತಾದ ಸ್ಕೀಂಗಳು ಇನ್ನೂ ಟೇಕ್ ಆಫೇ ಆಗಿಲ್ಲ. ಅವು ಇನ್ನೂ ಪ್ರಾರಂಭದಲ್ಲೇ ಇವೆ. ಆದ್ದರಿಂದ ಇದರ ಬಗ್ಗೆ ತಾವು ಸ್ಪಷ್ಟವಾಗಿ ಹೇಳಿಕೆಯನ್ನು ಕೊಟ್ಟು ಮುಂದೆ ಯಾವ ರೀತಿಯಲ್ಲಿ ಇದನ್ನು ಪೂರ್ಣ ಮಾಡುತ್ತೀರಿ?

ಇನ್ನೊಂದು ವಿಚಾರ ಎಂದರೆ, ಮೈನರ್ ಇರಿಗೇಷನ್ ಬಗ್ಗೆ ಹೇಳುವುದಾದರೆ, ಇದರ ಬಗ್ಗೆ ತಮ್ಮ ಉತ್ತರದಲ್ಲಿ ಏನೇನೂ ಬರಲಿಲ್ಲ. ನೀವು ಮೇಜರ್ ಮತ್ತು ಮೀಡಿಯಂ ಇರಿಗೇಷನ್ ಬಗ್ಗೆ ಹೆಚ್ಚು ಗಮನಹರಿಸಿದ್ದರಿಂದಾಗಿ ಈ ಕಡೆ ಏನು ವ್ಯವಸ್ಥೆ ಮಾಡುತ್ತೀರೆಂಬುದನ್ನು ಸ್ಪಷ್ಟವಾಗಿ ಹೇಳಲಿಲ್ಲ. ದಯವಿಟ್ಟು ಇದರ ಬಗ್ಗೆ ಕೂಡ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

+ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದ ಪ್ರಕಾರ ನಾನು ಎತ್ತಿದಂಥ ವಿಚಾರಗಳಿಗೆ ವಿಚಾರಗಳಿಗೆ ಸಮರ್ಪಕವಾದ ಉತ್ತರವನ್ನು ಕೊಡಲಿಲ್ಲವೆಂದು ನಾನು ಹೇಳಬೇಕಾದ ಪ್ರಮೇಯ ಏನೂ ಇಲ್ಲ. ಏಕೆಂದರೆ ಸುಮಾರು ಎರಡು ಮುಕ್ಕಾಲು ಗಂಟೆಯ ಭಾಷಣದಲ್ಲಿ ಸುಮಾರು ಎರಡೂ ಕಾಲು ಗಂಟೆಕಾಲ ನಾನು ಪ್ರಸ್ತಾಪ ಮಾಡಿದಂಥ ವಿಚಾರಗಳ ಬಗ್ಗೆಯೇ ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಇದರಲ್ಲಿ ಮೊದಲನೆಯದಾಗಿ ಹೇಳುವುದಾದರೆ, ಅಪ್ಪರ್ ಭದ್ರಾ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೇನೆ. ಅಂದರೆ ನಾವು ತಿಳಿದುಕೊಂಡಂತೆ ತಾಂತ್ರಿಕವಾಗಿ ಅಪ್ಪರ್ ಭದ್ರಾ ಎಂದು ಯಾವ ಪ್ರಸ್ತಾವನೆ ಮುಂದೆ ಬಂದಿದೆ ಆ ಸ್ವರೂಪದಲ್ಲಿ ಮಾಡುವುದಕ್ಕಾಗುವುದಿಲ್ಲವೆಂದು ತಿಳಿದುಕೊಂಡ ಮೇಲೆ ಆ ಬಗ್ಗೆ ಒಂದೆರಡು ಪ್ರಾಜೆಕ್ಟ್‌ಗಳನ್ನು ನಾವು ಸಿದ್ಧಪಡಿಸಿದ್ದೇವೆ. ನಮ್ಮ ಉದ್ದೇಶ ಏನಿತ್ತು ಎಂದರೆ, ನಮ್ಮ ಧೀಮಂತ ನಾಯಕರಾದ ಮಾನ್ಯ ನಿಜಲಿಂಗಪ್ಪನವರ ಜೊತೆ ನಾವು ಮಾತನಾಡಿದ್ದೆವು. ಚುನಾವಣೆ ಘೋಷಣೆ ಇದ್ದಿದ್ದರೆ ಈ ಎರಡೂ ಪ್ರಾಜೆಕ್‌ಗಳಿಗೆ ಶಂಕುಸ್ಥಾಪನೆಯನ್ನು ಮಾಡಬೇಕೆಂಬ ಉದ್ದೇಶ ನಮಗಿತ್ತು.

5.00 ಪಿ.ಎಂ.

ಬಗ್ಗೆ ನಾವು ಎರಡು ಯೋಜನೆಗಳಿಗೆ ಶಂಕು ಸ್ಥಾಪನೆ ಮಾಡಬೇಕು ಎನ್ನುವುದು ನಮ್ಮ ಉದ್ದೇಶವಾಗಿತ್ತು. ಇದರ ಬಗ್ಗೆ ಆಯವ್ಯಯದಲ್ಲಿ ಏನೂ ಪ್ರಸ್ತಾಪ ಕಾಣಲಿಲ್ಲ, ಆದ್ದರಿಂದ ನಾನು ಇವತ್ತು ಈ ವಿಚಾರವನ್ನು ಎತ್ತುತ್ತಿದ್ದೇನೆ. ತಾವು ಭದ್ರಾ ಮೇಲ್ದಂಡೆಯನ್ನು ಯಾವ ಸ್ವರೂಪದ ಯೋಜನೆಯನ್ನಾಗಿ ಮಾಡಬೇಕು ಎಂದು ಹೇಳಿದ್ದೀರಿ, ಅದು ತಾಂತ್ರಿಕವಾಗಿ ಆಗುವುದಿಲ್ಲ ಎಂದು ನಾವು ಕಂಡುಕೊಂಡಂಥ ವಿಚಾರ. ಭದ್ರಾ ಮೇಲ್ದಂಡೆಗೆ ಪರ್ಯಾಯವಾದಂಥ 2 ಯೋಜನೆಗಳನ್ನು ನಾವು ಏನು ಸಿದ್ಧಪಡಿಸಿದ್ದೇವೆ. ಅವುಗಳನ್ನು ಈ ವರ್ಷವೇ ಅನುಷ್ಠಾನ ಮಾಡತಕ್ಕಂಥ ಪ್ರಯತ್ನ

ಮಾಡುತ್ತೀರಾ ಎಂಬುದನ್ನು ಹೇಳಬೇಕು. ಇನ್ನು ಎರಡನೆಯ ವಿಚಾರವೆಂದರೆ, ತಾವು ನಾರಾಯಣಪುರ ರೈಟ್ ಬ್ಯಾಂಕ್ ಕೆನಾಲ್ ಬಗ್ಗೆ ಪ್ರಸ್ತಾಪ ಮಾಡಿ ಅದನ್ನು ಅಲ್ಲೇ ಕೈ ಬಿಟ್ಟಿರಿ. ಏಕೆಂದರೆ ಇದರ ಬಗ್ಗೆ ನಮ್ಮ ಸರ್ಕಾರ ಇರುವಾಗ ಸನ್ಮಾನ್ಯ ರಾಮಕೃಷ್ಣ ಹೆಗಡೆಯವರು ತಾವು ರಾಯಚೂರಿಗೆ ಹೋಗಿ ಒಂದು ದೊಡ್ಡ ಚಳುವಳಿಯನ್ನೇ ಮಾಡಿದ್ದೀರಿ ಎಂಬುದು ನನ್ನ ನೆನಪು. ತಾವು ಮಾಡದಿದ್ದರೂ ತಮ್ಮ ನಾಯಕರು ಮಾಡಿದ್ದಾರೆ. ನೀವೂ ಬಂದಿದ್ದ ನೆನಪು ನನಗೆ. ತಾವು ಅಲ್ಲದಿದ್ದರೆ ತಮ್ಮ ಉಳಿದ ನಾಯಕರು ಮಾಡಿದ್ದಾರೆ. ಅದಕ್ಕೆ ಪೂರಕವಾಗಿ ಇದೊಂದು ತಮ್ಮ ಕಮಿಟ್‌ಮೆಂಟ್ ಎಂದು ನಾನು ತಿಳಿದುಕೊಂಡಿದ್ದೇನೆ. ಆ ಬಗ್ಗೆ ಕೂಡ ತಾವು ಪ್ರಸ್ತಾಪ ಮಾಡಿದ್ದೀರಿ ಮತ್ತು ಅದನ್ನು ಅಲ್ಲೇ ಬಿಟ್ಟುಬಿಟ್ಟಿರಿ. ಅದನ್ನು ಈ ವರ್ಷವೇ ಅನುಷ್ಠಾನ ಮಾಡಲಿಕ್ಕೆ ತಾವು ಏನು ಕಾರ್ಯಕ್ರಮ ರೂಪಿಸಿದ್ದೀರಿ ಎನ್ನುವುದು ಎರಡನೆಯದು. ಮೂರನೆಯದು, ಇಲ್ಲಿ ನೀರಾವರಿಯ ಬಗ್ಗೆ ಚರ್ಚೆ ಮಾಡುವಾಗ ನಾವು ಪ್ರಮುಖವಾಗಿ ತಮ್ಮಿಂದ ನಿರೀಕ್ಷೆ ಮಾಡಿದ್ದು ಏನೆಂದರೆ ತಮ್ಮ ಬಜೆಟ್ಟಿನಲ್ಲಿ ಹೇಳಿರುವಂತೆ 2,000 ಇಸವಿಯೊಳಗೆ ಕೃಷ್ಣಾ ಕಣಿವೆ ಯೋಜನೆಗಳನ್ನು ಯಾವ ಸ್ವರೂಪದಲ್ಲಿ ಅನುಷ್ಠಾನ ಮಾಡುತ್ತೀರಿ ಮತ್ತು ಕಾವೇರಿ ಜಲಾನಯನ ಕಣಿವೆ ಯೋಜನೆಗಳನ್ನು ಯಾವ ರೀತಿ ಅನುಷ್ಠಾನ ಮಾಡುತ್ತೀರಿ? ಇದಕ್ಕೆಂದೇ ನಾವು ಹಿಂದೆ ಒಂದು ಮಾಸ್ಟರ್ ಪ್ಲಾನನ್ನು ತಯಾರು ಮಾಡಿದ್ದೇವೆ. ಆ ಮಾಸ್ಟರ್ ಪ್ಲಾನಿನಲ್ಲಿ ತಾವು ಬದಲಾವಣೆ ಮಾಡಿದ್ದೀರಾ ಅಥವಾ ಅದೇ ಮಾಸ್ಟರ್ ಪ್ಲಾನನ್ನು ತಾವು ಇವತ್ತು ಅನುಷ್ಠಾನ ಮಾಡುತ್ತೀರಾ ಎನ್ನುವುದು. ಏಕೆಂದರೆ ಇದು ನೀತಿಗೆ ಸಂಬಂಧಪಟ್ಟಿದ್ದು. ಏಕೆಂದರೆ ಇಷ್ಟು ಸುದೀರ್ಘವಾದ ಚರ್ಚೆಗಳು ಆದಾಗ, ತಾವು ಇದರ ಬಗ್ಗೆ ಉತ್ತರ ಕೊಟ್ಟಾಗ ಇದರ ಬಗ್ಗೆ ತಮ್ಮದು ನೀರಾವರಿ ನೀತಿ ಏನಿದೆ ಅದನ್ನು ಜನತೆಯ ಮುಂದೆ, ಈ ಸದನದ ಮುಂದೆ ಇಡುತ್ತೀರಿ ಎಂದು ಹೇಳಿ ನಾವು ತಮ್ಮಿಂದ ಮುಖ್ಯವಾಗಿ ನಿರೀಕ್ಷೆ ಮಾಡಿದ್ದೆವು. ತಾವು ಮಾತನಾಡಿದಂಥ ವಿಚಾರಗಳನ್ನು ನೋಡಿದಾಗ ಒಂದು ರೀತಿ ಪರಿಪಕ್ವರಾದಂಥ ನೀರಾವರಿ ಯೋಜನೆಗಳ ಪ್ರಜ್ಞೆ ತಮಗೆ ಇದೆ. ಏಕೆಂದರೆ ಇದಕ್ಕೆ ನಿಮಗೆ ವರ್ಷಗಟ್ಟಲೆ ಬೇಕಾಗುವುದಿಲ್ಲ. ಇವತ್ತು ನೀವು ಒಂದು ದಿವಸ ಕುಳಿತುಕೊಂಡರೆ ಅದರ ಬಗ್ಗೆ ಸ್ಪಷ್ಟವಾದಂಥ ನೀತಿಯನ್ನು ಹಾಕಿಕೊಂಡು ಜನತೆಯ ಮುಂದಿಡತಕ್ಕಂಥ ಶಕ್ತಿ ತಮಗೆ ಇದೆ ಎಂದು ನಮ್ಮ ಒಂದು ವಿಶ್ವಾಸ. ಆದರೆ ಅದು ಬರಲಿಲ್ಲ. ಅದು ಈಗ ಬರಬೇಕಾಗಿತ್ತು. ಇವತ್ತು ನಾವು ಏನು ನಿರೀಕ್ಷೆ ಮಾಡುತ್ತೇವೆ, ಜನತೆ ಏನು ನಿರೀಕ್ಷೆ ಮಾಡುತ್ತಾರೆ. ತಾವು ಏನು ಮಾಡಿದ್ದೀರಿ ಎಂದರೆ ಅಲ್ಲಿ ಒಂದು ಡೀವಾಟರಿಂಗ್‌ಗೆ ಹೋಯಿತು, ಪೀಸ್‌ವರ್ಕ್ ಆಯಿತು ಎಂದು ಪೀಸ್ ಪೀಸ್ ಮಾಡಿ ಮಾತನಾಡಿ, ಇನ್‌ಸ್ಟಾಲ್‌ಮೆಂಟ್‌ನಲ್ಲಿ ಮಾತನಾಡಿ ನಾವು ಏನೊಂದು ವ್ಯಾಪಾಕವಾದಂಥ, ಸಮಗ್ರವಾದಂಥ ನೀರಾವರಿ ನೀತಿಯನ್ನು ನಿರೀಕ್ಷೆ ಮಾಡಿದ್ದೆವು, ಆ ಎಳೆ ನಮಗೆ ಸಿಕ್ಕದೇ ಹೋಯಿತು. ಬಹುಶಃ ಅದನ್ನು ಕ್ಲಾರಿಫಿಕೇಷನ್ಸ್‌ನಲ್ಲಿ ಹೇಳುವುದಕ್ಕಾಗುವುದಿಲ್ಲ. ನನಗೂ ಆ ಲಿಮಿಟೇಷನ್ಸ್ ಗೊತ್ತಿದೆ. ಕಡಿಮೆ ಪಕ್ಷ ತಾವು ಇದನ್ನು ಇವತ್ತು ಅಲ್ಲದಿದ್ದರೂ ಕೂಡ ಇನ್ನೊಮ್ಮೆ ಸದನ ಸೇರಿದಾಗ ಸ್ಪಷ್ಟವಾದಂಥ ಒಂದು ಸ್ವರೂಪವನ್ನು ಕೊಡಬೇಕು ಎಂದು ಹೇಳಲಿಕ್ಕೆ ಅಪೇಕ್ಷೆ ಪಡುತ್ತೇನೆ. ಇನ್ನು, ತಾವು ಕೆಲವು ಆಪಾದನೆಗಳನ್ನು ಮಾಡಿದ್ದೀರಿ. ನಮ್ಮ ಸರ್ಕಾರದ ಮೇಲೆ ಮಾಡಿದ್ದೀರಿ. ಮುಖ್ಯ ಮಂತ್ರಿಯಾಗಿ ನಾನು ಜವಾಬ್ದಾರಿ ತೆಗೆದುಕೊಳ್ಳುತ್ತೇನೆ. ಅದಕ್ಕೆ ಉತ್ತರ ಕೊಡಿ. ಆದರೆ ಏನಾಗುತ್ತದೆ ಎಂದರೆ ನೀವು ಈ ವಿಚಾರಗಳನ್ನು ಆಪಾದನೆ ಮಾಡಿದ ಕಾರಣ ಕಾವೇರಿ ಕಣಿವೆ ಯೋಜನೆ ಮತ್ತು ಕೃಷ್ಣಾ ಕಣಿವೆ ಯೋಜನೆಯ ವಸ್ತುಸ್ಥಿತಿ ಬಗ್ಗೆ ಒಂದು ಸ್ಪಷ್ಟವಾದಂಥ, ಸಮಗ್ರವಾದಂಥ ವರದಿಯನ್ನು ನಮಗೆ ಕೊಡಬೇಕು. ನಿಮ್ಮ ಸರ್ಕಾರ ಇರುವಾಗ ಏನಾಯಿತು, ನಮ್ಮ ಸರ್ಕಾರ ಇರುವಾಗ ಏನಾಯಿತು ಎಂದು. ಏಕೆಂದರೆ ಭೌತಿಕವಾದಂಥ ಪ್ರಗತಿ ಅದಕ್ಕೆ ಸಮನ್ವಯವಾದಂಥ ಆರ್ಥಿಕವಾದಂಥ ಪ್ರಗತಿಯ ಸ್ಥೂಲ ಚಿತ್ರ ನಮ್ಮ ಮುಂದೆ ಇಡಬೇಕು. ಏಕೆಂದರೆ ಹಿಂದಿನ ಸರ್ಕಾರ ಹಣ ಎಲ್ಲೆಲ್ಲೋ ಖರ್ಚು ಮಾಡಿತು ಎಂಬ ಒಂದು ಅಭಿಪ್ರಾಯ

ಜನತೆಗೆ ಬರಬಾರದು, ಏಕೆಂದರೆ ಒಂದು ಕೋಟಿ, ಎರಡು ಕೋಟಿ, ಮೂರು ಕೋಟಿ ಎಂದು ಹೇಳಿದ್ದೀರಲ್ಲಾ, ಐದು ವರ್ಷದಲ್ಲಿ ತಾವು ಸುಮಾರು 1692 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅಷ್ಟು ಖರ್ಚು ಮಾಡಿದ್ದೂ ನೀರು ಪಾಲಾಗುತ್ತದೆ. ಇವತ್ತು ಕಾರಣ ತಾವು ಈ ಒಂದು ಚಿತ್ರ ಜನತೆಗೆ ಕೊಟ್ಟಿರುವುದರಿಂದ. ಏಕೆಂದರೆ ನೀವು 19834 ರಿಂದ 1988-89ರವರೆಗೆ 6 ವರ್ಷಗಳಲ್ಲಿ 1.064 ಕೋಟಿ ರೂಪಾಯಿ ಖರ್ಚು ಮಾಡಿದ್ದರೆ, ನಾವು 5 ವರ್ಷಗಳಲ್ಲಿ 1.691.31 ಕೋಟಿ ರೂಪಾಯಿಗಳನ್ನು 11ನೇ ಡಿಸೆಂಬರ್‌ವರೆಗೆ ಖರ್ಚು ಮಾಡಿದ್ದೇವೆ. ಆಮೇಲಿನದು ಲೆಕ್ಕಕ್ಕೆ ನಾವು ತೆಗೆದುಕೊಳ್ಳಲಿಲ್ಲ, ಏಕೆಂದರೆ 1993-94ರಲ್ಲಿ ನಾವು ಸುಮಾರು 718 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಅದೇ ಪ್ರಕಾರ ಈ ವರ್ಷ ಕೂಡ. ಅನಂತರ ನೀವು ಕೃಷ್ಣಾ ಮೇಲ್ದಂಡೆ ಯೋಜನೆಗೆ 6 ವರ್ಷಗಳಲ್ಲಿ ಮಾಡಿದಂಥ ಖರ್ಚು 279 ಕೋಟಿ ರೂಪಾಯಿ ಆದರೆ 4 ವರ್ಷಗಳಲ್ಲಿ ನಾವು ಮಾಡಿದಂಥ ಖರ್ಚು ಸುಮಾರು 355 ಕೋಟಿ ರೂಪಾಯಿ. ಪುನಃ 1993-94ರಲ್ಲಿ 240 ಕೋಟಿ ರೂಪಾಯಿ ಮತ್ತು 1994-95ರಲ್ಲಿ 366 ಕೋಟಿ ರೂಪಾಯಿ ಎಂದು ಹೇಳಿಕೆ ಕೊಟ್ಟಿದ್ದೀರಿ. ಅದು ಸ್ವಲ್ಪ ಕಡಿಮೆಯಾಗಿರಬಹುದು. ಆದರೆ ಇಷ್ಟು ಖರ್ಚು ಮಾಡಿದ್ದು ಅರ್ಥಕವಾದಂಥ ಗುರಿ. ಆದರೆ ತಮಗೆ ಗೊತ್ತಿರಬಹುದು, ನಾನು ಮುಖ್ಯಮಂತ್ರಿಯಾಗಿ ಅಧಿಕಾರ ತೆಗೆದುಕೊಂಡ ಮೇಲೆ ಅಥವಾ 15-12-92ರಲ್ಲಿ ಕಾವೇರಿ ಕಣಿವೆ ಮತ್ತು ಕೃಷ್ಣಾ ಕಣಿವೆ ಎರಡೂ ಸೇರಿ 2, 24, 419 ಹೆಕ್ಟೇರ್ ಜಮೀನಿಗೆ ನಾವು ನೀರಾವರಿ ಕೊಟ್ಟಿದ್ದೇವೆ. ಬಹುಶಃ ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಇಷ್ಟು ಕಡಿಮೆ ಸಮಯದಲ್ಲಿ ಇದು ದಾಖಲೆ ಎಂದು ನಾನು ಹೇಳುವುದಿಲ್ಲ, ಅದು ಜನತೆಗೆ ಬಿಟ್ಟಿದ್ದುದು. ಆದರೆ ಇಷ್ಟು ಕಡಿಮೆ ಸಮಯದಲ್ಲಿ ಅಂದರೆ ಸಾಧಾರಣ ಎರಡು ವರ್ಷದಲ್ಲಿ 2,24,419 ಹೆಕ್ಟೇರ್ ಜಮೀನಿಗೆ ನೀರು ಕೊಟ್ಟಂಥ ಇತಿಹಾಸವಿಲ್ಲ ಎಂದು ಹೇಳಿದರೆ ಅದು ಅತಿಶಯೋಕ್ತಿ ಆಗಲಿಕ್ಕಿಲ್ಲ. It is a potential we have created within a period of 2 years.

ಶ್ರೀ ಹೆಚ್.ಎನ್. ನಂಜೇಗೌಡ : ನಾಳೆ ರೆಡಿ ಇರುತ್ತದೆ. Let us not be misquided ತೂಬು ಹಾಕಿರುವುದಿಲ್ಲ. ಯಾವುದೋ ಒಂದೆರಡು ತೂಬುಗಳನ್ನು ಹಾಕಿಬಿಟ್ಟು ನೀರು ಕೊಟ್ಟರೆ ಅದು ಸಾಧನೆ ಎಂದು ಆಗುತ್ತದೆಯೇ? You cannot say that you have created irrigation potential. It is a continuous process.

Sri M. Veerappa Moily : Who said that it is not a continuous process? I never said that we have done everything from A to Z.

ಎ-ಯಿಂದ ಝಡ್‌ವರೆಗೆ ನಾವೇ ಮಾಡಿದ್ದೇವೆ ಎಂದು ಯಾರೂ ಹೇಳುವುದಕ್ಕಾಗುವುದಿಲ್ಲ. Nobody is that foolish to say that. I am not telling. During this region so much of irrigation potential is created. ಇವತ್ತು ವರದಿ ಇದೆ. ಅದೇ ತರಹ ಎಫ್.ಐ.ಸಿ. ಪೊಟೆನಿಯಲ್ ನಾವು ಕ್ರಿಯೇಟ್ ಮಾಡಿದಂಥ ಹೆಕ್ಟೇರುಗಳು, 1992-93ರಲ್ಲಿ 21.073 ಹೆಕ್ಟೇರು, 1993-94ರಲ್ಲಿ 42,735 ಹೆಕ್ಟೇರು ಆದರೆ 1994-95ರಲ್ಲಿ 48,027 ಹೆಕ್ಟೇರುಗಳು. ಇದು ಇನ್ನೂ ಹೆಚ್ಚಾಗುತ್ತದೆ. ತಮಗೆ ಗೊತ್ತಿದೆ ವೈ ಅಲೈನ್‌ಮೆಂಟ್ ಇದನ್ನು ಓಪನ್ ಆಫ್ ಮಾಡುವಂಥಾದ್ದು ಅಥವಾ ಕಡಬಗಟ್ಟೆ ಟನಲ್ ಓಪನ್ ಮಾಡತಕ್ಕಂಥಾದ್ದು ಬೆಳಗಾಂ ಕಡೆಯಲ್ಲಿ; ಬಾಗೂರು ನವಿಲೆ ಅಥವಾ ಕಬ್ಬನಗೆರೆ ಟನಲ್ ಓಪನ್ ಮಾಡತಕ್ಕಂಥಾದ್ದು, ಇಂಥ ಯಾವುದೇ ರೀತಿಯಲ್ಲಿ ತಾಂತ್ರಿಕವಾಗಿ, ಆರ್ಥಿಕವಾಗಿ, ಭೌತಿಕವಾಗಿ ಸುಮಾರು 18 - 20 ವರ್ಷಗಳಿಂದ ನಿಂತು ಹೋದಂಥ ಆ ಸಮಸ್ಯೆಗಳನ್ನು ಇವತ್ತು ಸುಳಿಯಿಂದ ಬಿಡಿಸಿರುವುದು ಅದೂ ಕೂಡ ಒಂದು ರೀತಿಯ ಸಾಧನೆಯಾಗುತ್ತದೆಯೇ ಹೊರತು ಅನ್ಯಥಾ ಆಗುವುದಿಲ್ಲ. ಆದ್ದರಿಂದ ತಾವು

ಪೀಸ್ ವರ್ಕ್ ಬಗ್ಗೆ ಏನು ಕೆಲವು ವಿಚಾರಗಳನ್ನು ಹೇಳಿದ್ದೀರಿ ಅದು ನಿಯಮಗಳಿಗೆ ವಿರುದ್ಧವಾಗಿಲ್ಲ. ಇದರ ಬಗ್ಗೆ ನೀವು ತನಿಖೆ ಮಾಡಿ. We are not going to shield anybody. ಏಕೆಂದರೆ ಅದರಲ್ಲಿ ತಾವು ಒಂದು ಪತ್ರವನ್ನು ಓದಿ ಹೇಳಿದಿರಿ. ನಾನು ಯಾವುದೇ ಕಾಂಟ್ರಾಕ್ಟುದಾರರಿಗೆ, ಇಂಥಹ ಕಾಂಟ್ರಾಕ್ಟರಿಗೆ ಕೊಡಿ, ಇಂಥಹ ಕಾಂಟ್ರಾಕ್ಟರಿಗೆ ಕೊಡಬೇಡಿ ಎಂದು ಒಂದು ದಿವಸ ಕೂಡ ನಾನು ಯಾವ ಇಂಜಿನಿಯರಿಗೂ ಹೇಳಿಲ್ಲ. ತಾವು ಬೇಕಾದರೆ ಖಾಸಗಿಯಾಗಿ ವಿಚಾರಿಸಿ. ನಿಮ್ಮ ಇಸಿಪಿಸಿ ಅವರಿಗೆ ಅಥವಾ ಮುಖ್ಯ ಇಂಜಿನಿಯರ್‌ರವರಿಗೆ, ಯಾವುದೇ ಒಂದು ಘಳಿಗೆಯಲ್ಲೂ ನಾನು ಅವರನ್ನು ಮನೆಗೆ ಕರೆಯಲಿಲ್ಲ ಅಥವಾ ಯಾವುದೇ ಕಛೇರಿಗೆ ಎಕ್ಸ್‌ಕ್ಲೂಸೀವಾಗಿ ಕರೆದು ಇಂಥಹ ಕಾಂಟ್ರಾಕ್ಟರ್‌ಗೆ ಕೊಡಿ, ಇಂಥಹ ಕಾಂಟ್ರಾಕ್ಟರ್‌ಗೆ ಬಿಡಿ ಎಂದು ಒಂದು ದಿವಸವೂ ಕೂಡ ಹೇಳಿಲ್ಲ. ತಾವು ದೇವರ ಮೇಲೆ ನಂಬಿಕೆ ಇಟ್ಟಹಾಗೆ ಅದೇ ರೀತಿ ನಾನೂ ಕೂಡ ದೇವರ ಮೇಲೆ ನಂಬಿಕೆ ಇರುವವನು, ಆ ರೀತಿ ಒಂದು ದಿವಸವೂ ತನಿಖೆ ಮಾಡುವುದಕ್ಕೆ ಯಾವ ಅಡ್ಡಿಯೂ ಇಲ್ಲ. ಆದರೆ ಕೆಲವೇ ಪ್ರಸಂಗಗಳನ್ನು ತಾವು ಎತ್ತಿ ಹಿಡಿದಿದ್ದೀರಿ. ಏಕೆಂದರೆ ನಮ್ಮ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದಂತೆ, ಯಾರಿಗಾದರೂ ಎಂದು ಪ್ರಗತಿಯ ವೇಗ ಹೆಚ್ಚಾದಾಗ, ಹೌದು. ನಮಗೆ ಆತುರ ಇತ್ತು, ತವಕ ಇತ್ತು. like a democles sword ಏಕೆಂದರೆ ಇವತ್ತು ಕಾವೇರಿ ಪ್ರಶ್ನೆ ಮತ್ತು ಕೃಷ್ಣಾ ಪ್ರಶ್ನೆ ಇರುವಾಗ ಇದನ್ನು ಬಗೆಹರಿಸಿದರೆ ಸಾಕು ಎಂಬ ಪರಿಸ್ಥಿತಿ ಇತ್ತು.

ತಮಗೆ ಗೊತ್ತಿರುವ ಹಾಗೆ ಆರ್ಬಿಟ್ರೇಷನ್, claims of the contractors ಮತ್ತು ಜಮೀನು ಸ್ವಾಧೀನ ಮಾಡತಕ್ಕಂತಹ ಈ ಒದ್ದಾಟದಲ್ಲಿ ಸುಮಾರು 10 ವರ್ಷಗಳ ಕಾಲ ಯಾವುದೇ ಕೆಲಸಗಳಾಗಿಲ್ಲ. ಇವೆಲ್ಲಾ ಪಾಳು ಬಿದ್ದಿತ್ತು. ಹಾಳು ಹಂಪೆಯಾಗಿ ಅನೇಕ ಕಡೆ ನಮ್ಮ ಪ್ರಾಜೆಕ್ಟ್‌ಗಳು, ಇಲ್ಲಿ ಕೃಷ್ಣ ಕಣಿವೆಯಲ್ಲಿ ಅಥವಾ ಕಾವೇರಿ ಕಣಿವೆಯಲ್ಲಿ ಕೂಡ ಇವತ್ತು ನಿಂತು ಹೋದಂತಹ ಕೆಲಸಗಳಿಗೆ ಇವತ್ತು ಜೀವವನ್ನು ಕೊಟ್ಟು ಅವರಿಗೆ ಪೋಷಕವಾಗಿ ಆರ್ಥಿಕ ಶಕ್ತಿಯನ್ನು ಕೊಡುವಂಥ ಕೆಲಸವನ್ನು ನಾವು ಮಾಡಿದ್ದೇವೆ. ನಾನೇ ಸ್ವತಃ ಇನ್ಸ್‌ಪೆಕ್ಟ್ ಮಾಡಿದ್ದೆ. ತಮ್ಮನ್ನು ಕರೆದಿದ್ದೆ, ತಾವು ಬರುತ್ತೇನೆಂದು ಹೇಳಿದ್ದಿರಿ, ಆ ಪರ್ಟಿಕ್ಯುಲರ್ ಡೇ ಬರಲಿಕ್ಕೆ ಆಗುವುದಿಲ್ಲ ಎಂದು ಹೇಳಿದಾಗ ತಮ್ಮ ಅನುಕೂಲತೆಗೆ ಇನ್ನೊಂದು ಡೇಟ್ ಕೊಟ್ಟೆ. ಹಾಗಾದರೂ ಸಹಿತ ತಮಗೆ ಏನೋ ಕೆಲಸಗಳಿದ್ದು ಬರಲಿಕ್ಕೆ ಆಗಲಿಲ್ಲ. ನಾನು ಇನ್ಸ್‌ಪೆಕ್ಟ್ ಮಾಡಿದ ಮೇಲೆ ಏನು ಹೇಳಿದೆ ತಿಂಗಳಿಗೆ ಎಷ್ಟು ನೀವು ಆರ್ಥಿಕವಾಗಿ ಹಣ ಖರ್ಚು ಮಾಡಲಿಕ್ಕೆ ಸಾಧ್ಯವಿದೆ ಎಷ್ಟು ಭೌತಿಕವಾದಂತಹ ಪ್ರಗತಿಯನ್ನು ಅದಕ್ಕೆ ಏನು ಸಪ್ಪೋರ್ಟ್ ಬೇಕು. I will give the full support ಎಂದು ಆದ್ದರಿಂದ ಆ ಪ್ರಕಾರ ಹಣ ಬಿಡುಗಡೆ ಮಾಡಿಕೊಂಡು ಇದನ್ನು ನಾವು ಮಾಡಿದ್ದೇವೆ. ಹೇಮಾವತಿ ತುಮಕೂರು ಬ್ರಾಂಚ್ ಇರಬಹುದು, ಯಾಕೆಂದರೆ ಯಾರೋ ಹೇಳಿದರು ತುಮಕೂರು ಬ್ರಾಂಚ್‌ನಲ್ಲಿ ಬರೀ 10 ಕೋಟಿ ರೂಪಾಯಿ ಕೂಡ ಕೊಡಲಿಕ್ಕೆ ಆಗಲಿಲ್ಲ ಎಂದು ಹೇಳಿ. ಸುಮಾರು 60-65 ಕೋಟಿ ರೂಪಾಯಿ ನಮ್ಮ ಕಾಲದಲ್ಲಿ ನಾವು ಬಿಡುಗಡೆ ಮಾಡಿದ್ದೇವೆ. ಮೊನ್ನೆ ಈ ವರ್ಷ ಆದ್ದರಿಂದ ಇಂತಹದ್ದು ಇವತ್ತು ತಾವು ಕೆಲವೇ ಅಂಶಗಳನ್ನು ಎತ್ತಿ ಹಿಡಿದು ಇವತ್ತು ಇಡೀ ಒಂದು ಸಂಪೂರ್ಣ ಅವ್ಯವಸ್ಥೆ ಆಗಿದೆ ಎಂದು ಹೇಳಿ ಏನು ಹೇಳಿದ್ದೀರಿ, ಅದು ಸಾಧುವಾದಂತಹ, ಖಂಡಿತವಾದಂತಹ ಮಾತಲ್ಲ. ಅಭಿವೃದ್ಧಿ, ಪ್ರಗತಿ ಬಹುಶಃ ಅದ್ಭುತವಾದಂತಹ ರೀತಿಯಲ್ಲಿ, ದಾಖಲೆಯ ರೀತಿಯಲ್ಲಿ ಖಂಡಿತವಾಗಿಯೂ ಕೂಡ ಎರಡೂ ಕಡೆಯಲ್ಲೂ ಆಗಿದೆ. ಎತ್ತಿ ತೋರಿಸಬಹುದು. ಬಹಳ ಕಷ್ಟವಿಲ್ಲ. ಏಕೆಂದರೆ ತಾವು ಏನು ಹಣ ನಾವು ಖರ್ಚು ಮಾಡಿದ್ದೇವೆ ಆ ಹಣವೆಲ್ಲಾ ಗಟಾರದಲ್ಲಿ ಹೋಯಿತು ಎಂದು ಒಂದು ಸಾರಾಸಗಟಾದಂತಹ ರಿಮಾರ್ಕ್ಸ್ ಮಾಡತಕ್ಕಂತಹ ಒಂದು, ಆ ಧ್ವನಿ ತಮ್ಮ ವಿಚಾರವಲ್ಲಿ ಏನು ಎದ್ದಿದೆ ಅದಕ್ಕೆ ನಾವು ಖಂಡಿತವಾಗಿಯೂ ಕೂಡ ಒಪ್ಪಲಿಕ್ಕೆ

ಸಾಧ್ಯವಾಗುವುದಿಲ್ಲ, ಇನ್ನು ಹೈಡ್ರಾಲಜಿ ಬಗ್ಗೆ ಹೇಳಿದಿರಿ; Of course, on hydrology, I had my own reservations.

ತಾವು ಹೈಡ್ರಾಲಜಿ ಬದಲಾವಣೆ ಮಾಡಿದ್ದಕ್ಕೆ ನಾನು ಆಕ್ಷೇಪಣೆ ಎತ್ತಿದ್ದೇನೆ. ಸಹಜವಾದಂತಹ ಅಕೌಂಟ್ಸ್ ಸಮಿತಿಯ ಅಧ್ಯಕ್ಷನಾಗಿದ್ದಾಗ ನಾನು ಆಕ್ಷೇಪಣೆ ಎತ್ತಿದ್ದೇನೆ. ಸಹಜವಾದಂತಹ ಆಕ್ಷೇಪಣೆ. ಆಮೇಲೆ ಕೂಡ ನಾನು ಮುಖ್ಯಮಂತ್ರಿ ಆಗಿದ್ದಾಗ, ಅದಕ್ಕೆ ಮೊದಲು ಮಂತ್ರಿ ಆಗಿದ್ದಾಗ ಇದು ಬಂದಾಗ ಲಿಫ್ಟ್ ಇರಿಗೇಷನ್ I have objected ಏಕೆಂದರೆ ಇದು ಸರಿಯಾದ ಒಂದು ವಾಟರ್ ಪ್ಲಾನ್ ಇಲ್ಲದೆ ಇದನ್ನು ಮಾಡಬಾರದು ಎಂದು ಹೇಳಿ. ಅದನ್ನು ತಾವು ಪುನರ್ ವಿಮರ್ಷೆ ಮಾಡಿ ಎಲ್ಲೆಲ್ಲಿ ಅದು ಸಾಧುವಾಗುತ್ತದೆ. ಎಲ್ಲಿ ಇಲ್ಲ ಎನ್ನುವಂಥದ್ದು ಅದು ತಮಗೆ ಮಾಡಲಿಕ್ಕೆ ಸಾಧ್ಯ ಇದೆ. ಅದನ್ನು ಖಂಡಿತವಾಗಿಯೂ ತಾವು ಮಾಡಬಹುದು. ಅದಕ್ಕೇ ನಾನು ಹೇಳಿದ್ದುದುದ ಏನು ಭೌತಿಕವಾದಂತಹ ಸಾಧನೆಯಾಗಿದೆ ಆರ್ಥಿಕವಾದಂತಹ ಸಾಧನೆ ಆಗಿದೆ, ಅದನ್ನು ದಯಮಾಡಿ ವರದಿ ಕೊಡಿ. ಆ ವರದಿ ಕೊಟ್ಟರೆ ನಮಗೆಲ್ಲಾ ಸ್ಪಷ್ಟವಾದಂತಹ ಚಿತ್ರ ಬರುತ್ತದೆ. ತಾವು ಬರೀ ಅಲ್ಲಲ್ಲಾ ಇರತಕ್ಕಂತಹ ಲೋಪದೋಷಗಳನ್ನು ಮಾತ್ರ ಎತ್ತಿ ತೋರಿಸಿದರೆ ಸಮಗ್ರವಾದ ಚಿತ್ರಣ ಬರುವುದಿಲ್ಲ, that will be taken as more of a distortion than anything else.

ಎಲ್ಲಾದರೂ ಇಲ್ಲೀಗಾಲಿಟೀಸ್ ಆಗಿದ್ದರೆ, ಅಕ್ರಮ ಆಗಿದ್ದರೆ ದಯಮಾಡಿ ಅದಕ್ಕೆ ಯಾವ ರೀತಿಯಲ್ಲಿ ತಾವು ತನಿಖೆ ಮಾಡುತ್ತೀರೋ ಆ ರೀತಿಯಲ್ಲಿ ತನಿಖೆ ತಾವು ಮಾಡುವುದಕ್ಕೆ ಯಾವ ಅಡ್ಡಿ ಆತಂಕ ಕೂಡ ಖಂಡಿತವಾಗಿಯೂ ಇಲ್ಲ. ಆದ್ದರಿಂದ ಸಾರಾಸಗಟಾಗಿ ವೈಟ್ ವಾಷ್ ಆಗತಕ್ಕಂತಹ ಒಂದು ಕೆಲಸ ಮಾತ್ರ ತಾವು ಸನ್ಮಾನ್ಯ ಮುಖ್ಯಮಂತ್ರಿಯಾಗಿ ಮಾಡಬಾರದು. ಏಕೆಂದರೆ ತಾವು ಅನುಭವಸ್ಥರು. ನೀರಾವರಿ ಬಗ್ಗೆ ತಾವು ತಿಳಿದವರು. ತಾವು ಹೇಳಿದಿರಿ ಅಲ್ಲಿ ಬೆಳಗಾಂನ ಕಂಟ್ರಾಕ್ಟರ್ಸ್ ಅಸೋಸಿಯೇಷನ್ ಒಂದು ಮನವಿಯನ್ನು ತಾವು ಓದಿ ಹೇಳಿ, ಆ ಲಾಬಿಗಳು ಪಿ.ಡಬ್ಲ್ಯೂಡಿ ಲಾಬಿ ಅದು ಯಾವ ಲಾಬಿ, ಎಲ್ಲಿ ಇತ್ತೋ ಅದು ನಮಗಂತೂ ಆ ಲಾಬಿ ಕಾಣಲಿಕ್ಕೆ ಸಿಗಲಿಲ್ಲ. ಆ ಲಾಬಿ ಈಗ ನೀವು ಹುಡುಕಿದ್ದೀರಿ ಎಂದು ಹೇಳಿ ಏನೋ ಒಂದು ಗೆಲುವಿನ ರೀತಿಯಲ್ಲಿ ತಾವು ಏನು ಮಾತನಾಡಿದಿರಿ, ಆ ಲಾಬಿಯನ್ನು ಬಗ್ಗು ಬಡಿಯಲಿಕ್ಕೆ ಏನು ಬೇಕೋ ಅದಕ್ಕೆ ತಮಗೆ ನಮ್ಮ ಶಾಸನಾತ್ಮಕ ಬೆಂಬಲ ಕೊಡುವುದು ಇದ್ದರೆ ಅದಕ್ಕೆ ನಾವು ಬೆಂಬಲ ಕೂಡ ಈ ಕಡೆಯಿಂದ ಖಂಡಿತವಾಗಿ ಕೊಡಲಿಕ್ಕೆ ಸಿದ್ಧರಿದ್ದೇವೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೃಷ್ಣ (ಕೃಷ್ಣರಾಜಪೇಟೆ) : ಮಾನ್ಯ ಅಧ್ಯಕ್ಷರೇ, ಮಾಜಿ ಮುಖ್ಯಮಂತ್ರಿಗಳಾದಂತಹ ಮಾನ್ಯ ಮೊಯಿಲಿಯವರು ಭೌತಿಕ ಗುರಿ ಬಗ್ಗೆ ಮಾತನಾಡಿದರು. ನಮ್ಮ ಕ್ಷೇತ್ರದಲ್ಲಿ ಹೇಮಾವತಿ ಎಡದಂಡೆ ಹರಿಯುತ್ತದೆ ಸ್ವಾಮಿ. 46 ಸಾವಿರ ಎಕರೆ ನೀರನ್ನು ಉಣಿಸಿದ್ದೇವೆ ನೀರನ್ನು ಕೊಟ್ಟಿದ್ದೇವೆ ಎಂದು ನೀರಾವರಿ ಇಲಾಖೆಯವರು ನೋಟಿಫೈ ಮಾಡಿದ್ದಾರೆ. ಆದರೆ ನಿಜವಾಗಿಯೂ ಅಚ್ಚುಕಟ್ಟಾಗಿರತಕ್ಕಂಥಾದ್ದು 7-8 ಸಾವಿರ ಎಕರೆ. ಇದರ ಬಗ್ಗೆ ನಾನು ಪತ್ರಿಕೆಯವರನ್ನು ಕರೆದುಕೊಂಡು ಹೋಗಿ ತೋರಿಸಿದೆ. ಪತ್ರಿಕೆಯವರು ಅಗ್ರ ಲೇಖನಗಳನ್ನು ಬರೆದರು. ಮಾನ್ಯ ಮೊಯಿಲಿಯವರು ಮುಖ್ಯಮಂತ್ರಿಗಳು ಆಗಿದ್ದಾಗ ಅವರಿಗೆ ವಿವರವಾದ ಒಂದು ಪತ್ರವನ್ನು ನಾನು ಬರೆದೆ. ಅದರಲ್ಲಿ ಏನು ಹೇಳಿದ್ದೇನೆ ಅಂದರೆ ಭೌತಿಕ ಗುರಿಯನ್ನು ನೀವು ಮುಟ್ಟಿಲ್ಲ. ನಿಜವಾಗಿ ನೀವು ಎಷ್ಟೋ ಎಕರೆ ಆಗಿದೆ ಎಂದು ಹೇಳುತ್ತೀರಿ. ಅದರಲ್ಲಿ ಕಾಲು ಭಾಗ ಸಹ ಆಗಿರುವುದಿಲ್ಲ. ಅದಕ್ಕೋಸ್ಕರ ತಂತ್ರಜ್ಞರ ಒಂದು ಸಮಿತಿ ಮಾಡಿ ಯಾವ ಯಾವ ಯೋಜನೆಗಳಲ್ಲಿ ಈ ತರಹ ಭೌತಿಕ ಗುರಿ ಮುಟ್ಟಿಲ್ಲ ಎನ್ನುವುದನ್ನು ಸಹ ತಾವು ವಿಚಾರಣೆ ಮಾಡಿಸಬೇಕು, ಇಲ್ಲದೆ ಇದ್ದರೆ ಈ ನೀರಾವರಿ ಹೆಸರಿನಲ್ಲಿ

ಬಡ ಬೋರೇಗೌಡನ ಸಾವಿರಾರು ಕೋಟಿ ರೂಪಾಯಿ, ಒಂದು ಕೋಟಿ ಅಲ್ಲ 2 ಕೋಟಿ ಅಲ್ಲ, ಸಾವಿರಾರು ಕೋಟಿ ರೂಪಾಯಿ ದುರುಪಯೋಗ ಆಗುತ್ತದೆ ಎಂದು ಹೇಳಿದ್ದೇನೆ. ಈಗ 25 ಜನಕ್ಕೆ 25 ಪರ್ಸೆಂಟ್ ಗೆ ನೀರಾವರಿ ಆಗುತ್ತದಾದರೆ ಏನು ಸ್ವಾಮಿ ಪ್ರಯೋಜನ? ಅದಕ್ಕೋಸ್ಕರ ಭೌತಿಕ ಗುರಿ ಬಗ್ಗೆ ಏನು ಮಾನ್ಯ ಮೊಯಿಲಿಯವರು ಹೇಳುತ್ತಾ ಇದ್ದಾರೆ, ಅದರಲ್ಲಿ ಸತ್ಯಾಂಶ ಇಲ್ಲ. ನಾನು ಮಾನ್ಯ ಸಭಾನಾಯಕರನ್ನು ಮನವಿ ಮಾಡಿಕೊಳ್ಳುವುದು ಏನೆಂದರೆ ಇದರ ಬಗ್ಗೆ ಒಂದು ಸಮಿತಿ ಮಾಡಿಸಬೇಕು. ಯಾವ ಯಾವ ಯೋಜನೆಗಳಲ್ಲಿ ಭೌತಿಕ ಗುರಿ ಮುಟ್ಟಿದ್ದೇವೆ ಎನ್ನುವುದರ ಬಗ್ಗೆ ಸಮಿತಿಯನ್ನು ಮಾಡಿಸಿದರೆ ನಿಜವಾಗಿಯೂ ಸಹ ನಮ್ಮ ರೈತರಿಗೆ ಅನುಕೂಲವಾಗುತ್ತದೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸನ್ಮಾನ್ಯ ಸದಸ್ಯರು ಏನು ಸಮಿತಿಯಲ್ಲಿ ಹೇಳಿದ್ದಾರೆ ಆ ಸಮಿತಿ ಮಾಡುವುದಕ್ಕೆ ನಮ್ಮ ಸುಸ್ವಾಗತ. ಏಕೆಂದರೆ ಸತ್ಯವಾದಂತಹ ಚಿತ್ರಣ ಮುಂದೆ ಬರಬೇಕು ಎಂದು ಹೇಳಿಯೇ ನಮ್ಮ ಸದಿಚ್ಛೆ. ತಮಗೆ ಗೊತ್ತಿದೆ ಗಂಗನಕಟ್ಟೆ, ನೊಣವಿನಕೆರೆ, ಮಲ್ಲಾಗಟ್ಟ, ತುರುವೇಕೆರೆ, ಮಾರನಹಳ್ಳಿ ಪ್ರಾಯೋಗಿಕವಾಗಿ ಸುಮಾರು 50 ಸಾವಿರ ಎಕರೆ ಜಮೀನಿಗೆ ನೀರು ಕೊಡುವಷ್ಟು ನೀರನ್ನು ಆ ಕೆರೆಗೆ ನಾವು ಬಿಟ್ಟಿದ್ದೇವೆ. ಮಾರ್ಚಿ 1995ಕ್ಕೆ ಇದೇ ತರಹ ಕೆಲಸ ಆಗುತ್ತಿದ್ದರೆ ಇನ್ನೊಂದು 50 ಸಾವಿರ ಎಕರೆ ಸುಮಾರು 80 ಸಾವಿರ ಎಕರೆ ಜಮೀನಿಗೆ ನೀರು ಕೊಡಲಿಕ್ಕೆ ಏನು ಪೊಟೆನ್ಶಿಯಲ್ ನಾವು ಕ್ರಿಯೇಟ್ ಮಾಡಿದ್ದೇವೆ ಅದು ಸತ್ಯಾಂಶ ಇದೆ. ಅದರ ಬಗ್ಗೆ ತಾವು ಬೇಕಾದರೆ ತನಿಖೆ ಮಾಡುವುದಿದ್ದರೆ ಮಾಡಿ, ಏನಾದರೂ ಮಾಡಿ. ಆದ್ದರಿಂದ ಈ ಕೆಲವು ವಿಚಾರಗಳನ್ನು ನಾನು ಕೊಟ್ಟಿದ್ದೇನೆ. ಆದರೆ ಇವತ್ತು ಇದನ್ನು ಒಂದು ರೀತಿಯಲ್ಲಿ ಜೇನುಗೂಡಿಗೆ ಕೈಹಾಕಿ ಎಲ್ಲಾ ಜೇನು ನೊಣಗಳನ್ನು ಹಾರಲಿಕ್ಕೆ ಬಿಟ್ಟು ಅದರಲ್ಲಿ ಸಂತೋಷಪಡತಕ್ಕಂತಹ ಒಂದು ಕೆಲಸವನ್ನು ಮಾನ್ಯ ಮುಖ್ಯಮಂತ್ರಿಗಳು ಮಾಡಬಾರದು ಎಂದು ಹೇಳಿ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಈಗ ಎತ್ತಿರತಕ್ಕಂತಹ ಎಲ್ಲಾ ವಿಚಾರಗಳಿಗೆ ಸ್ಪಷ್ಟೀಕರಣ ಕೊಡಲಿ; ಆ ಮೇಲೆ ಉಳಿದವರಿಗೆ ಅವಕಾಶ ಕೊಡುತ್ತೇನೆ.

ಶ್ರೀ ಹೆಚ್.ಎನ್. ನಂಜೇಗೌಡ : ಸಮಸ್ಯೆ ಏನಾಗುತ್ತದೆ ಅಂದರೆ ಮುಖ್ಯಮಂತ್ರಿಗಳು ಉತ್ತರ ಕೊಟ್ಟರು. ನಾವು ಕೆಲವು ಗಹನವಾದಂತಹ ವಿಚಾರಗಳನ್ನು ಎತ್ತಿದ್ದೆವು. ನಾನು ಹೇಳತಕ್ಕಂಥಾದ್ದು ಇವತ್ತು ಉತ್ತರ ಕೊಟ್ಟಿದ್ದರಲ್ಲಿ ತುಮ'ೂರು ವರ್ಕ್ಸ್ ಅದೆಲ್ಲಾ ಕಂಟ್ರಾಕ್ಟ್ ಡೀಟೈಲ್ಸ್‌ಗೆ ಆಗಿಹೋಯಿತು ಟೈಮ್, ನಾವು ನಿನ್ನೆ ಕೇಳಿಕೊಂಡಿದ್ದೆವು. What are your priorities; ಪಾಪ್ಯುಲಿಸ್ಟ್ ಪ್ರೋಗ್ರಾಂನ್ನು ಕೈಬಿಡುತ್ತೀರಾ? How you are going to mobilise; I have suggested for a resource mobilisation committee. ಇದು ಈಗ 1967-68ರಲ್ಲಿ ಆದಾಗ they grilled all the ministries, ನೀವು ಎಷ್ಟು ಸೇವ್ ಮಾಡುತ್ತೀರಿ ಎಂದು ಎಲ್ಲಾ ಕೇಳಿದರು. ಆ ಕಮಿಟಿಯಲ್ಲಿ ನೀವು ಇದ್ದಿರಿ ಎಂದು ಕಾಣುತ್ತದೆ ನಾನು ಬರಲಿಲ್ಲ. ಏಕೆಂದರೆ ಚನ್ನಬಸಪ್ಪನವರು ಇದ್ದರು. ಸಿದ್ದವೀರಪ್ಪನವರು ಇದ್ದರು. ಈ ದೊಡ್ಡ ಇಷ್ಯೂಸ್ ಇವತ್ತು ಏನೂ ಟಚ್ ಮಾಡಲಿಲ್ಲ. ನನಗೆ ನಿರಾಶೆಯಾಗಿದೆ ನಿಮ್ಮ ಚರ್ಚೆಯಿಂದ. ಆದರೂ ನಾವು ಸುಮ್ಮನೆ ಇದ್ದೇವೆ. ಇದು ತುಮಕೂರಿಗೆ ಸೀಮಿತ ಆಗಿಬಿಡ್ತು. ಅದೇ ಬಂದದ್ದು ನಮಗೆ ತಾಪತ್ರಯ. ಏಕೆಂದರೆ ಅದರ ವಿಚಾರ ಮಾಡುವುದಾದರೆ ಅಧ್ಯಕ್ಷರೆ ನಾವು ಹೇಳುತ್ತೇನೆ ರಾಂಗ್ ಕ್ಲಾಸಿಫಿಕೇಷನ್ ಎಲ್ಲೆಲ್ಲಿ ಕೊಟ್ಟಿದ್ದಾರೆ ಎಂಬ ಬಗ್ಗೆ ಎರಡು ದಿನ ಭಾಷಣ ಮಾಡಬಲ್ಲೆ ನಾನು. ಎರಡು ದಿನ ಮಾಡಿ ಬಹುಶಃ ಎಷ್ಟು ವೇಸ್ಟ್ ಆಗಿದೆ ಎಂಬುದನ್ನೂ ಹೇಳಬಲ್ಲೆ ಅಸೆಸ್ ಮಾಡಿ. ಅದು ಬೇಡ ಎಂದು ಹೇಳಿ ಸುಮ್ಮನೆ

ಇದ್ದೇನೆ. ದಯಮಾಡಿ ನಾವು ಈ ಕೇಳಿರತಕ್ಕಂಥದ್ದು ಪ್ರಾಮುಖ್ಯವಾಗಿ ಅಪ್ಪರ್ ಭದ್ರ, ಆಮೇಲೆ ಭೀಮ ಫ್ಲೋ, ಭೀಮ ಲಿಫ್ಟ್, ಆ ಭದ್ರ ಒಡೆದು ಹೋದರೆ ಕಟ್ಟಿಸುವುದಕ್ಕೆ ಎಷ್ಟು ವರ್ಷ ಆಗಬೇಕು? Something is wrong with our technical system. ಇಂತಹವನ್ನು ದಯವಿಟ್ಟು ಹೇಳಬೇಕು ಎನ್ನತಕ್ಕಂತಹದು. ಎಲ್ಲವನ್ನು ಕೇಳುವುದಕ್ಕೆ ಹೋದರೆ ಏನು ಆಗುತ್ತದೆ, ಪ್ರಮುಖವಾದ ವಿಚಾರ ಮರೆತು ಇವತ್ತು ಈ ತುಮಕೂರು ಹಿಡಿದುಕೊಂಡರಲ್ಲಾ ಹಾಗೆ ಹಿಡಿದುಕೊಂಡು ಬಿಟ್ಟರೆ ನೀವು ಇನ್ನೊಂದನ್ನು, ನಮ್ಮವೆಲ್ಲಾ ಮರೆತುಹೋಗುತ್ತದೆ. ಅದಕ್ಕೆ ಅವರು ಕೇಳಲಿ. ಅವರುಗಳು ಕೇಳಿದ್ದಕ್ಕೂ ಹೇಳಿ. ಇವು ಆಗಿ ಬಿಡಲಿ.

ಶ್ರೀ ಬಿ. ಸೋಮಶೇಖರ್ : ಒಂದು ಪ್ರಮುಖವಾದ ವಿಚಾರದ ಬಗ್ಗೆ ಉತ್ತರವನ್ನು ನಿರೀಕ್ಷಣೆ ಮಾಡಿದ್ದೆವು. ಆದರೆ ಮರೆತಿದ್ದಾರೆ ಎಂದು ಕಾಣಿಸುತ್ತದೆ.

ಅಧ್ಯಕ್ಷರು : ನಿನ್ನೆ ಭಾಷಣ ಮಾಡಿದವರ ಪೈಕಿ ಪ್ರಮುಖವಾಗಿ ಕೆಲವು ವಿಚಾರಗಳನ್ನು ಪ್ರಸ್ತಾಪ ಮಾಡಿದರು ಎಂದು....

ಶ್ರೀ ಬಿ. ಸೋಮಶೇಖರ : ಒಂದೇ ಒಂದು.....

ಅಧ್ಯಕ್ಷರು : ನಾನು ಹೇಳಿದ್ದನ್ನು ಕೇಳಿದರೆ ನಿಮಗೆ ಅರ್ಥ ಆಗುತ್ತದೆ. ಸನ್ಮಾನ್ಯ ವೀರಪ್ಪ ಮೊಯಿಲಿಯವರು ಮತ್ತು ನಂಜೇಗೌಡರು ಏನು ಪ್ರಸ್ತಾಪ ಮಾಡಿದ್ದಾರೆ ಅದಕ್ಕೆ ಮೊದಲು ಸ್ಪಷ್ಟೀಕರಣ ಕೊಟ್ಟು ಬಿಡಲಿ. ತಾವು ಒಬ್ಬರೇ ಅಲ್ಲ ಇನ್ನೂ ಬಹಳ ಜನ ನಿನ್ನೆ ಭಾಷಣ ಮಾಡಿರತಕ್ಕಂಥಾವರು ಆ ಕಡೆ ಈ ಕಡೆಯಲ್ಲಿ ಸ್ಪಷ್ಟೀಕರಣ ಕೇಳುವವರು ಇದ್ದಾರೆ. ಆ ಎರಡು ವಿಷಯಗಳಿಗೆ ಸ್ಪಷ್ಟೀಕರಣ ಕೊಟ್ಟ ಮೇಲೆ ತಮಗೆಲ್ಲರಿಗೂ ಅವಕಾಶ ಕೊಡುತ್ತೇನೆ ಎಂದು ಹೇಳುತ್ತಾ ಇದ್ದೇನೆ. ತಮಗೆ ಅವಕಾಶ ಕೊಡುತ್ತೇನೆ ನಾನು. ಅವರಿಗೆ ಮೊದಲು ಉತ್ತರ ಕೊಟ್ಟುಬಿಡಲಿ.

ಶ್ರೀ ಹೆಚ್.ಡಿ. ದೇವೇಗೌಡ : ಅಪ್ಪರ್ ಭದ್ರ ಸನ್ಮಾನ್ಯ ನಂಜೇಗೌಡರು ವಿಷಯ ಎತ್ತಿದ್ದಾರೆ, ನಾನು ಮೊಯಿಲಿಯವರ ಬಗ್ಗೆ ಡಿಸ್ಟ್ ಟಾರ್ಟೆಡ್ ವರ್ಷನ್ ಕೊಡಬೇಕು ಎಂದು ಅಲ್ಲ. ಭದ್ರಾಕ್ಕೆ ಯಾವಾಗ ಎಸ್ಟಿಮೇಟ್ ಆಗಿದೆ? ಎಲ್ಲಿ ಎಸ್ಟಿಮೇಟ್ ಆಗಿದೆ? ಯಾರೋ ಒಬ್ಬರು ಒಂದು ಟೋಪೋ ಷೀಟ್ ನಲ್ಲಿ ನಕ್ಷೆ ಹಿಡಿದುಕೊಂಡು ಗುರುತು ಮಾಡಿಬಿಟ್ಟರೆ, ಕಾಂಟೂರ್ ಬಂಡ್ ತರಹ; ನಾನು ಸ್ವಲ್ಪ ಇಂಜಿನೀಯರಿಂಗ್ ಓದಿದವನೇ; ತರಿಸಿದ್ದೆ ಅದನ್ನು. It is proposed to utilise 18 TMC in Upper Bhadra out of 23 TMC whicl would be available in Karnataka when Godavari diversion takes place. Two alternative proposals have been examined and Toposheet...

ಇನ್ನು ಯಾರೂ ಸರ್ವೆ ಮಾಡಿಲ್ಲ, ಏನಿಲ್ಲ, ಎಂತಿಲ್ಲ. ಇವರು ಗುದ್ದಲಿ ಪೂಜೆ ಮಾಡಿ ಬಿಡುತ್ತಿದ್ದೆ ಎಂದು ಹೇಳಿದರು. ನಿಮ್ಮ ಅಫೀಸರ್ಸ್ ಇದ್ದಾರೆ. ನಾನು ಇನ್ನೂ ಬದಲಾವಣೆ ಮಾಡಲಿಲ್ಲ. ಟೋಪೋ ಷೀಟ್‌ನಲ್ಲಿ ಯಾರೋ... ಅದಕ್ಕೆ ನಾನು ಬಳಸುವುದಕ್ಕೆ ಹೋಗಲಿಲ್ಲ. ಟೋಪೋ ಷೀಟ್‌ನಲ್ಲಿ ಕುಳಿತುಕೊಂಡು ಕಾಂಟೂರ್ ನಲ್ಲಿ ಮಾರ್ಕ್ ಮಾಡುತ್ತಾನೆ. 80 ಕಿ.ಮೀ. ಡೆಡ್ ಲೈನ್ ಕೆನಾಲ್ ಹೋಗುತ್ತದೆಂದು ಹೇಳಿದ್ದಾರೆ. ಇದರಿಂದ ಎಷ್ಟು ಫಾರೆಸ್ಟ್ ಲ್ಯಾಂಡ್, ಕಾಫಿ ಲ್ಯಾಂಡ್ ಮುಳುಗಡೆಯಾಗುತ್ತದೆ, ಅದರ ಬಗ್ಗೆ ಸಾಧಕ - ಭಾದಕ ಏನು ಎನ್ನುವುದರ ಬಗ್ಗೆ ಡೀಟೈಲ್ಡ್ ಇನ್ವೆಸ್ಟಿಗೇಷನ್ ಮಾಡಿದ್ದಾರೆ. 350 ಕೋಟಿಗೋ ಅಥವಾ 360 ಕೋಟಿಗೋ ಎಸ್ಟಿಮೇಟ್‌ನ್ನು ತಯಾರು ಮಾಡಿ ತುಮಕೂರು ಜಿಲ್ಲೆಯ ಕೆಲವು ಭಾಗ ಚಿತ್ರದುರ್ಗ ಜಿಲ್ಲೆಯ ಕೆಲವು ಭಾಗಕ್ಕೆ ಪ್ರಯತ್ನ ಮಾಡಬೇಕೆಂದು ಟ್ರೈ ಮಾಡಿದ್ದಾರೆ. ಆದರೆ ಆ ಫಾರೆಸ್ಟ್ ಮುಳುಗಡೆಯಾಗುತ್ತದೆಂಬ ಒಂದೇ ಕಾರಣದಿಂದ ಅದರ ಬಗ್ಗೆ ದೊಡ್ಡ ವಿವಾದ ಎದ್ದು ಆ ಕೆಲಸವನ್ನು

ಪ್ರಾರಂಭ ಮಾಡಲಿಕ್ಕಾಗಲಿಲ್ಲ, ಇವತ್ತು ಇವರು ಹೇಳತಕ್ಕಂತಹದ್ದು ಏನು? Lifting water from Bhadra fore shore of feed Vanivilasa Sagar utilising 3 T.M.C., This proposal is estimated for Rs. 225 crores for irrigating 35,000 acres. 3 ಟಿ.ಎಂ.ಸಿ. 225 ಕೋಟಿ, 35 ಸಾವಿರ ಎಕರೆ ಟೋಪೋಷೀಟ್‌ದ್ದು ಒಂದು. ಇದನ್ನು ಎಸ್ಟಿಮೇಟ್ ಎಂದು ಕರೆಯುತ್ತೀರೋ ಏನು ಕರೆಯುತ್ತೀರೋ ಆಮೇಲೆ ಹೇಳೋಣ ಇನ್ನೊಂದು Lifting water from Santhisagar to feed 50,000 acres in Holalere, alternatively. The Utilisation proposed is 5 T.M.C., The estimated cost proposed is Rs. 350 crores.

50 ಸಾವಿರ ಎಕರೆಗೆ 350 ಕೋಟಿ ಎಸ್ಟಿಮೇಟ್. ಇದು ಒಂದು ಟೋಪೋ ಷೀಟ್ ನಲ್ಲಿ ಗುರುತು ಮಾಡಿ ಯಾರೋ ಕೊಟ್ಟಿದ್ದಾರೆ. ಅವರನ್ನು ಕರೆಸಿದೆ; ನಾನು ಎಲ್ಲಿಯಪ್ಪ ತನ್ನಿ ಆ ಎಸ್ಟಿಮೇಟ್ ನೋಡೋಣ. ಏಕೆಂದರೆ ಶುರುವೇ ಮಾಡಿಬಿಡೋಣ ಎಂದು ಹೇಳಿದಿರಿ ಎಂದು ಕೇಳಿದೆ. ಯಾವುದಾದರೊಂದು ಕೆಲಸವನ್ನು ಶುರು ಮಾಡಬೇಕಾಗಿದ್ದರೆ, ಅಷ್ಟೊಂದು ಸುಲಭವಾಗಿದ್ದರೆ ಈ ದೇಶದಲ್ಲಿ, ಈ ಸರ್ವೆ ಏಕೆ ಮಾಡಬೇಕು? ಫೀಲ್ಡ್ ಸರ್ವೆ ಏಕೆ ಮಾಡಬೇಕು? ಅದಕ್ಕೆ ಒಂದು ಎಸ್ಟಿಮೇಟ್ ಎಂದು ಏಕೆ ತಯಾರು ಮಾಡಬೇಕು? ಫೈನಾನ್ಷಿಯಲ್ ಫೀಸಬಲಿಟಿ, ಇದೆಯೇ? ಇಲ್ಲವೇ? ಅದಕ್ಕೆ ಸರ್ಕಾರದಲ್ಲಿ ಆಡಳಿತ ಮಂಜೂರಾತಿ ಕೊಡುವುದು, ಏನಾದರೂ ನನಗಂತೂ ಅರ್ಥ ಆಗಲಿಲ್ಲ. ರಾಜಕೀಯವನ್ನು ಬೆಳೆಸುವುದಕ್ಕೆ ಬಹಳ ದೊಡ್ಡ ವಿಷಯ-ಬೇಕಾಗಿಲ್ಲ. ಜೇನುಗೂಡಿಗೆ ಕೈಹಾಕುವುದು ಅಂದರೆ ಏನು?

ಶ್ರೀ ಹೆಚ್.ಎನ್. ನಂಜೇಗೌಡ : ಮುಂದೆ ಏನು?

ಶ್ರೀ ಹೆಚ್.ಡಿ. ದೇವೇಗೌಡ : ಮುಂದೆ ಇದನ್ನು ರೀಟೈಲ್ಡ್ ಸರ್ವೆ ಮಾಡಿಸುತ್ತೇನೆ. I cannot spell out.

Sri H.N. Nanje Gowda : What is the course of action?

Sri H.D. Devegowda : The Course of action is, again, the Government will ask them to make a detailed survey.

ಅದರ ಬಗ್ಗೆ ಏನು ಅಲ್‌ಟರ್‌ನೇಟಿವ್ ಎಲ್ಲಾ ಪ್ರಪೋಸಲ್ಸ್‌ನ್ನೂ ಯೋಚನೆ ಮಾಡಿ, ಇವತ್ತು ಯಾವುದು ಬೆಸ್ಟ್ ಫೀಸಬಲ್ಲೋ ಎನ್ನತಕ್ಕಂತಹದ್ದು, ಎಕನಾಮಿಕಲಿ ಮತ್ತು ಟೆಕ್ನಿಕಲಿ ಏನು ಹೇಳುತ್ತಾರೆ ಅದರ ಮೇಲೆ ನಾನು ನಿರ್ಣಯ ಮಾಡಬೇಕಾಗುತ್ತದೆ.

ಆಮೇಲೆ 2 ಲಕ್ಷ ಎಕರೆಗೆ ನೀರು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಚಟ್ಟಂಗೆರೆ ಟನಲ್.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಆ ಸರ್ವೆ ಮಾಡಿದ್ದೀರಲ್ಲಾ, ಅದರೊಳಗೆ ಕೋಲಾರ ಜಿಲ್ಲೆ ಸೇರಿದೆಯೋ ಇಲ್ಲವೋ? ಅದನ್ನಾದರೂ ಒಂದು ಗ್ಯಾರಂಟಿ ಹೇಳಬೇಕಲ್ಲಾ.

ಶ್ರೀ ಹೆಚ್.ಡಿ. ದೇವೇಗೌಡ : ನಿಮ್ಮದೂ ಬರುತ್ತೇನೆ. ಕುಡಿಯುವ ನೀರಿಗೆ ಮೈನರ್ ಇರಿಗೇಷನ್ ಬಗ್ಗೆ ಹೇಳಿದ್ದೀರಿ ಬರುತ್ತೇನೆ.

ಅಧ್ಯಕ್ಷರು : ನಿಮಗೆ ಏಕೆ ಅವರ ಚಪಲ. ಕೋಲಾರಜಿಲ್ಲೆಗೆ ಬರುವೋದಿಲ್ಲ; ಹೋಗಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : 2 ತಾಲ್ಲೂಕಿನ ಲೆಕ್ಕ ಹಿಡಿದು ಒಂದು ಟೋಪ್ಪೋ ಷೀಟಿನ ಎಸ್ಟಿಮೇಟ್ ಮಾಡಿದ್ದಾರೆ. ಒಂದು ಹೊಳಲ್ಕೆರೆ, 50 ಸಾವಿರ ಎಕರೆ, ಹೊಳಲ್ಕೆರೆ ಚಳ್ಳಕೆರೆ ಎರಡೂ ಸೇರಿ. ಇನ್ನೊಂದು, ಹಿರಿಯೂರು ತಾಲ್ಲೂಕು ಬೇರೆ; ಅಲ್‌ಟರ್‌ನೇಟಿವ್. ಇದರ ಜೊತೆಗೆ ಶ್ರೀಮಾನ್ ಮೊಯಿಲಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ದುಡ್ಡು ಖರ್ಚು ಮಾಡಿದ್ದು, ನೀವು ಸ್ವಲ್ಪ ಹೆಚ್ಚು ಖರ್ಚು ಮಾಡಿದ್ದೀರಿ ಎಂಬುದು ನಿಮ್ಮ ಭಾವನೆ. ಎಷ್ಟು ಹಣ ಹೇಗೆ ಹೋಗಿದೆ ಎನ್ನುವುದರ ಬಗ್ಗೆ ತನಿಖೆ ಮಾಡಿ ಹೇಳುವಷ್ಟು ಸ್ಥೈರ್ಯ ನನಗೆ ಇಲ್ಲ ಇವತ್ತು. ಒಂದು ಐಟಂ ಟಾರ್‌ನಲ್ಲಿ ಮೂರೂವರೆ ಕೋಟಿ ಹೋಗಿದೆ ಎಂಬ ಒಂದು ವರದಿಯನ್ನು ಈ ಸದನದಲ್ಲಿ ಇಟ್ಟೆ ನಾನು. ಇಡೀ ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ 4 ವರ್ಷಗಳಲ್ಲಿ ಏನಾಗಿದೆ ಎಂದು ಹೇಳುವುದಾದರೆ, ಅದರ ಬಗ್ಗೆ ಧೈರ್ಯ ತುಂಬುವುದಕ್ಕೆ ಸಾಧ್ಯ ಇಲ್ಲ, ಅವರು ಒಂದು ಮಾತನ್ನು ಹೇಳಿದರು. ಕ್ಲಾಸಿಫಿಕೇಷನ್ 7 ಟೈಪು ಕೊಟ್ಟಿರತಕ್ಕಂಥದ್ದನ್ನು ತೆಗೆಯುವುದಾದರೆ, ನೀವು 2 ಲಕ್ಷ ಎಕರೆ ಬಗ್ಗೆ ಮಾತನಾಡುತ್ತೀರಿ? ಬಾಗೂರು ನವಿಲೆ ಟನಲ್ ನೀವು ಮಾಡಿದಿರಿ? ಯಾವಾಗ ನೀರು ಹೊರಗಡೆ ಬಂತು? ಎಷ್ಟು ದಿವಸಕ್ಕೆ ಬಂತು? Shall I give the dates? Date-wise I am prepared to give details ಚಟ್ಟಂಗೆರೆ ಟನಲ್ ಮುಗಿದಿದ್ದು ಯಾವಾಗ? ಅದರಲ್ಲಿ ಎಕ್ಸೆಸ್ ಪೇಮೆಂಟ್ ಆಯಿತು ಎಂದು ಹೇಳಿ ನಾನೆ ಲೋಕಾಯುಕ್ತಕ್ಕೆ ಆರ್ಡರ್ ಮಾಡಿದ್ದೆ before I resigned.

ಈವಾಗ 7 ಕೆರೆ ತುಂಬಿಬಿಟ್ಟರಂತೆ. ತುಂಬಿದರೆ ಅಷ್ಟೇ ಮಾಡಿದರೆ ಮುಗಿದುಹೋಗಿಬಿಡುವುದು. ಮುಗಿದು ಹೋಯಿತಲ್ಲಾ ಕೆಲಸ. ನೀರು ಬಿಟ್ಟಿದ್ದೀರೋ, ಆ ವ್ಯಾಲಿನಲ್ಲಿ ಹರಿದು ಬಂತು. ಅವರು ಹೇಳಿದರಲ್ಲಾ 6 ಕೆರೆಗಳನ್ನು; ಯಾವುದು ಟನಲ್‌ನಿಂದ ಈಚೆಗೆ "ವೈ" ಅಲೈನ್‌ಮೆಂಟ್ ಅಪ್ರೂವ್ ಮಾಡಿದ್ದು ಯಾವಾಗ? ಡೇಟ್ಸ್‌ನ್ನೆಲ್ಲಾ ಕೊಡುತ್ತೇನೆ ಸಭೆಗೆ. ಆ 7 ಕೆರೆಗೆ ತುಂಬಿಬಿಟ್ಟರಂತೆ, 50 ಸಾವಿರ ಎಕರೆ ಆಗಿಬಿಡ್ತಂತೆ. ಸತ್ಯವನ್ನು ಯಾರೂ ಮರೆಯುವುದಕ್ಕಾಗುವುದಿಲ್ಲ, ಅದರ ಬಗ್ಗೆ ಡೀಟೈಲ್ಸ್‌ನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ, ಏಕೆಂದರೆ ಪೊಟೆನ್ಷಿಯಲ್ ಅದು ಡ್ರೊಯ್ಯೋ ವೆಟ್ಟೋ ಅದೆಲ್ಲಾ ಚರ್ಚೆ ಈಗ ಬೇಡ. ನಾನು ಬೇಕಾದರೆ ನಿಮ್ಮ ಅಧ್ಯಕ್ಷತೆಯೊಳಗೆ ಇನ್-ಕ್ಯಾಮಾರ ಮೀಟಿಂಗ್ ಮಾಡುತ್ತೇನೆ ಎಂದು ಹೇಳಿದ್ದೇನೆ. I am prepared to give further details as to how things have happended. ಅದರಿಂದ ಕೆಲವು ವಿಷಯ ಹಿಡಿಯಬೇಕಾಯಿತು. ಹಿಡಿದಿದ್ದೇನೆ. ಇದರಿಂದ ಇಷ್ಟೇ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ. ಒಂದು ಮಾತನ್ನು ನೀವು ಹೇಳಿದ್ದೀರಿ. ಕೆನಾಲ್ ಎಲ್ಲಾ ಮುಗಿದುಕೊಂಡು ಬಂದಿರುತ್ತದೆ, ಯಾವುದೋ ಒಂದು ತೂಬು ಆಗಿರುವುದಿಲ್ಲ, ಅದನ್ನು ನಾನು ಮಾಡಿಬಿಟ್ಟೆ ಎಂದು ಹೇಳಿ ಅದಕ್ಕೆ ಕ್ರಿಯೇಟ್ ಆಯಿತು ಎಂದು ಹೇಳಿದರೆ, ಅದರ ಪೊಟೆನ್ಷಿಯಲ್ ನಾನು ಮಾಡಿದೆ ಎಂದು ಹೇಳಿದರೆ, ಹಿಂದೆ ಡ್ಯಾಮ್ ಕಟ್ಟಿದವನು, ಅಲ್ಲಿಯವರೆಗೆ ನಾಲೆ ತೆಗೆದುಕೊಂಡು ಬಂದಿರುವವನು, ಅವನ ಗತಿ ಏನಾಗಬೇಕು?

ಶ್ರೀ ಹೆಚ್. ಶಿವಪ್ಪ : ಇವರು ಪೊಟೆನ್ಷಿಯಲ್ ಕ್ರಿಯೇಟ್ ಮಾಡಿದ್ದೇವೆ ಎಂದು ಹೇಳಿದ್ದಾರೆ. ಭದ್ರಾ ಒಡೆದು ಹೋಗಿತ್ತು. ಭದ್ರಾ ಬಲದಂಡೆ. ಅದನ್ನು ರಿಪೇರಿ ಮಾಡುವುದಕ್ಕಾಗಲಿಲ್ಲ, ಪೊಟೆನ್ಷಿಯಲ್ ಹೇಗೆ ಕ್ರಿಯೇಟ್ ಮಾಡಿದ ಹಾಗೆ ಆಗುತ್ತದೆ?

ಶ್ರೀ ಕಾಗೋಡು ತಿಮ್ಮಪ್ಪ : ಮಾಡಿಲ್ಲವೇ?

Sri H. Shivappa : For the last two years what physical progress has been achieved is known to you well, will it bring credit to your Government? It

should have been completed by this time. It is still suffering. We are losing thouands of crorers.

ಶ್ರೀ ಹೆಚ್. ಶಿವಪ್ಪ : ಎಲ್ಲಿ ಕೊಟ್ಟಿದ್ದೀರಿ? that should been achieved. Where is the physical achievement? What is the difference between the physical and economic achievement?

ಶ್ರೀ ಕಾಗೋಡು ತಿಮ್ಮಪ್ಪ : ಕೆನಾಲ್ ಒಡೆದು ಹೋಯಿತಲ್ಲಾ, ಆವಾಗ ಡೈವರ್ಟ್ ಮಾಡಿ ನೀರು ಕೊಟ್ಟಿಲ್ಲವೇ?

ಶ್ರೀ ಹೆಚ್. ಶಿವಪ್ಪ : ಡೀವಿಯೇಷನ್ ಮಾಡಿದ್ದಲ್ಲ. You should have completed it. 20 ಅಡಿ ನೀರನ್ನು ನಾವು ಬಳಸುವ ಹಾಗೆಯೇ ಇಲ್ಲ. ಅಷ್ಟು ನಮಗೆ ತೊಂದರೆಯಾಗಿದೆ.

ಅಧ್ಯಕ್ಷರು : ಆಯಿತು. ಅದಕ್ಕೆ ಅವರೆಲ್ಲಾ ಮಾಡಲಿಲ್ಲ ಎಂದು ಹೇಳಿ ನೀವು ಬಿಟ್ಟು ಬಿಟ್ಟರಲ್ಲಾ ಅವರನ್ನು;

Sri H. Shivappa : They claim credit for having created potential for 2 lakh aeres. It is an irony. How can they claim? 2 ಲಕ್ಷ ಎಕರೆ ಮಾಡಿದ್ದೇವೆ ಅಂತ ಹೇಳುತ್ತಿದ್ದೀರಲ್ಲಾ, ಇದ್ದದ್ದನ್ನೇ ರಿಪೇರಿ ಮಾಡುವುದಕ್ಕಾಗಲಿಲ್ಲ. ಇಲ್ಲಿಯವರೆಗೂ.

(ಗೊಂದಲ)

ಶ್ರೀ ಜೆ.ಹೆಚ್. ಪಟೇಲ್ : ಆ ಪ್ರದೇಶದಲ್ಲಿ ಬಲದಂಡೆ ಒಡೆದಾಗ ಅವಸರದಿಂದ ಮೇಲ್ದಡೆ ಭಾಗದಿಂದ ಒಂದು ಸ್ಯಾಡಲ್ ಎಂದು ಇರುತ್ತದೆಯಲ್ಲಾ, ಆ ಸ್ಯಾಡಲ್ ಮೂಲಕ ನೀರು ಕೊಟ್ಟಿದ್ದುದು ಅದೇ ಜಮೀನಿಗೆ. ಹೊಸ ಜಮೀನಿಗೆ ಅಲ್ಲ. ಮತ್ತೆ ಪೊಟೆನ್ಶಿಯಲ್ ಅಂದರೆ ಏನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾರು ಹೇಳಿದರು, ಆ ರೀತಿ? ಅವರು ಹೇಳಿದ್ದು ಬೇರೆ. ನೀವು ಕೇಳುವುದು ಬೇರೆ. ಅದೇ ನೀವು ತಪ್ಪು ತಿಳಿದುಕೊಂಡಿರುವುದು.

ಶ್ರೀ ಜೆ.ಎಚ್. ಪಟೇಲ್ : ಅವರದ್ದು ಏನು ಏರಿಯಾ ಇದೆ. ಬಲದಂಡೆ ನೀರು ಬರುತ್ತದೆ, ಅದೇ ಏರಿಯಾ ನನ್ನದು.

ಶ್ರೀ ಎಂ. ವೀರಪ್ಪ ಮೊಯಿಲಿ : ಆ ಪೊಟೆನ್ಶಿಯಲ್ ಲೆಕ್ಕ ಹಾಕಿ ನಾವು ಹೇಳಿದ್ದೇ ಇಲ್ಲ. ಅದು ಎಗ್ಸಿಸ್ಟಿಂಗ್ ಅಚ್ಚುಕಟ್ಟು; ಅದನ್ನು ಯಾರೂ ಅಲ್ಲ ಎಂದು ಹೇಳಿದ್ದುದು? ಅದನ್ನು ಹೇಳಲಿಲ್ಲ.

ಅಧ್ಯಕ್ಷರು : ಅವರು ಜನರಲ್ಲಾಗಿ ರಿಮಾರ್ಕ್ ಪಾಸ್ ಮಾಡಿದರು. ನಮ್ಮಲ್ಲಿ ರಿಪೇರಿನೇ ಮಾಡಿಲ್ಲ, ಹೊಸ ಪೊಟೆನ್ಶಿಯಲ್ ಏನು ಮಾಡುತ್ತೀರಿ ಎಂದು ಹೇಳಿ.

5 ಪಿ.ಎಂ.

ಶ್ರೀ ಎಚ್.ಡಿ. ದೇವೇಗೌಡ : ಮಾನ್ಯ ನಂಜೇಗೌಡರು ಭೀಮಾಫ್ಲೋ ಬಗ್ಗೆ ಹೇಳಿದ್ದಾರೆ. ಏನು ಭೂಮಾಫ್ಲೋಗೆ ಇಟ್ಟುಕೊಂಡಿದ್ದಂಥ ನೀರನ್ನು ಅಪ್ಪರ್ ತುಂದಾ ಮಾಡುವಾಗ ಅಲ್ಲಿದ್ದಂಥಾದ್ದು ಸುಮಾರು 12 ಟಿ.ಎಂ.ಸಿ. ಅದಕ್ಕೆ 26 ಟಿ.ಎಂ.ಸಿ ತೋರಿಸಿ ಮಾರುವರೆ ಲಕ್ಷ ತೋರಿಸಿದ್ದಾರೆ ವಾಟರ್ ಪ್ಲಾನಿಂಗ್ ಹೇಗೆ ಬರುತ್ತದೆ ಎಂಬುದು ನಮಗೂ ಗೊತ್ತಾಗುತ್ತದೆ. ನಿಮಗೂ ಗೊತ್ತಾಗುತ್ತದೆ. ಭೀಮಾಫ್ಲೋಗೆ ಇದ್ದಂಥ ನೀರಿನ 9 ಟಿ.ಎಂ.ಸಿ ಯನ್ನು ಇವರು ಲೆಕ್ಕಕ್ಕೆ ತೆಗೆದುಕೊಂಡಿದ್ದಾರೆ. ಭೀಮಾ

ಲಿಫ್ಟ್‌ದ್ದು ಇವತ್ತು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಟ್ಟಿದ್ದೇವೆ. ಅದು ಅಬ್ಜರ್ವೇಷನ್ ಆಗಿ ಮತ್ತೆ ವಾಪಸ್ಸು ಬಂದಿದೆ. ಅದರ ಬಗ್ಗೆ ರಿಪ್ಲೈ ತಯಾರು ಮಾಡಿ ಕಳುಹಿಸಿಕೊಡುತ್ತೇವೆ. ಇದಿಷ್ಟು ಭೀಮಾಫ್ಲೋ, ಲಿಫ್ಟ ಇರಿಗೇಷನ್‌ಗೆ ಸಂಬಂಧ ಪಟ್ಟಿದ್ದು. ಅಮೇಲೆ ಷನಿಸ್ಕುಲರ್ ರೀವರದ್ದು ಹೇಳಿದಿರಿ. ಇದು ಮಹಾನದಿಯಿಂದ ನೀರನ್ನು ತೆಗೆದುಕೊಂಡುಬರತಕ್ಕಂಥ ವಿಷಯ : Subject to Correction. ಅದಕ್ಕೆ ಎಲ್ಲಾ ರಾಜ್ಯ ಗಳು ಒಪ್ಪಬೇಕು. ಅದಕ್ಕೆ ಒಂದು ಸ್ಕೀಮನ್ನು ತಯಾರು ಮಾಡಿದ್ದಾರೆ ಮತ್ತು ಅದರ ಬಗ್ಗೆ ಪಾರ್ಲಮೆಂಟ್‌ನಲ್ಲಿ ಚರ್ಚೆಯಾಯಿತು. ಅದರಲ್ಲಿ ನಮಗೂ ಒಂದು ಭಾಗ ಬರತಕ್ಕಂಥ ಒಂದು ಅಭಿಪ್ರಾಯ ಇದೆ. ಇದಕ್ಕೆ ಸಂಬಂಧಪಟ್ಟ ರಾಜ್ಯಗಳು ಇನ್ನೂ ಒಪ್ಪಿಗೆ ಕೊಟ್ಟಿಲ್ಲವೆಂದು ಸೆಂಟ್ರಲ್ ವಾಟರ್ ರಿಸೋರ್ಸಸ್ ಮಂತ್ರಿಗಳು ಪಾರ್ಲಿಮೆಂಟಿನಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಇಲ್ಲಿ ಬಹಳ ಅನ್ಯಾಯರಾಗಿದೆ, ಇದನ್ನು ತಡೆಗಟ್ಟಬೇಕೆಂದು ಹೇಳಿದರು. ನಾನು ನಿನ್ನ ಅಪಾದನೆ ಮಾಡಬೇಕೆಂದು ಮಾಡಿದ್ದಲ್ಲ. ಅವರು ಎಲ್ಲಾ ರೈಸ್ ಮಾಡಿದಮೇಲೆ ನಾನು ಮಾಡಿದ್ದು. ಇಲ್ಲದಿದ್ದರೆ ನನಗೆ ಇದರ ಬಗ್ಗೆ ಏನೂ ಅನಂದ ಇಲ್ಲ. ಈಗ ಅವರು ಹೊಳೆನರಸಿಪುರ ಲಿಫ್ಟ್ ಇರಿಗೇಷನ್ ಅವನ್ಯಾರೋ ಅಧಿಕಾರಿಯನ್ನು ಮನೆಗೆ ಕಳುಹಿಸಿದಿರಿ ಸಸ್ಪೆಂಡ್ ಮಾಡಿದಿರಿ ಎಂದು ಅವರೇ ಹೇಳಿದ್ದಾರೆ. ನಾನು ಹೇಳುವುದಕ್ಕೆ ಹೋಗಿಲ್ಲ. ತುಮಕೂರಿನದ್ದು ನಿಲ್ಲಿಸಿದಿರಿ ಮೇಲೆ ನಿಮ್ಮನ್ನು ಉಗಿದು ಬರೆದಿದ್ದಾರೆ ಎಂದು ಮಾತ್ರ ಹೇಳಿಲಿಲ್ಲ. ಬಾಕಿ ಎಲ್ಲವನ್ನು ಹೇಳಿದರು. ಅವರು ಹೇಳಿದ್ದರಿಂದ ನಾನು ಉತ್ತರವನ್ನು ಹೇಳಬೇಕಾಯಿತು. ನಿಮ್ಮ ಡೆಪ್ಯುಟಿ ಚೀಫ್ ಮಿನಿಸ್ಟರ್ ಅವರು ಬರೆದಿರುವುದನ್ನೇ ಕೊಡುತ್ತೇನೆ. ವಿಷಯದಲ್ಲಿ ಸಂಪೂರ್ಣವಾಗಿ ತನಿಖೆ ಮಾಡಿಸಿ ಎಂದು ಅವರೇ ಹೇಳಿದ್ದಾರೆ I am giong to get the wholke thing examined by a top-most COD officer;

ಟಾಪ್‌ಮೋಸ್ಟ್ ಸಿ.ಓ.ಡಿ. ಅಫೀಸರ್‌ನ್ನು ಹಾಕುತ್ತೇನೆ,ಒಬ್ಬ ಅಡಿಷನಲ್ ಡಿಜಿಪಿ ಅವರನ್ನು ಹಾಕುತ್ತೇನೆ. ಅಷ್ಟೇ ಅಲ್ಲ, ಒಬ್ಬ ನೀನಿಯರ್ ಪೋಸ್ಟ್ ಟೆಕ್ನಿಕಲ್ ಅಫೀಸರ್‌ನ್ನು ಅವರಿಗೆ ಕೊಡುತ್ತೇನೆ. ಪೂರ್ತಿಯಾಗಿ ಈ ವಿಷಯವನ್ನು ತನಿಖೆ ಮಾಡಿಸುತ್ತೇನೆ ಇದರಲ್ಲಿ ಹಿಂದೆಮುಂದೆ ನೋಡುವ ಪ್ರಶ್ನೆ ಇಲ್ಲ. ಇದಕ್ಕೆ ಒಂದು ಅಂತಿಮ ಇತಿಶ್ರೀಯನ್ನು ಹಾಡಲೇಬೇಕಾಗುತ್ತದೆ. ಜನರ ದುಡ್ಡನ್ನು ಹೇಗೆ ಲಪಟಾಯಿಸಿದ್ದಾರೆ ಎಂಬ ಬಗ್ಗೆ ನಾನು ಈ ವಿಷಯವಾಗಿ ಸಂಪೂರ್ಣ ತನಿಖೆ ಮಾಡಿಸಿ ಈ ಸಭೆಯಮುಂದೆ ಮತ್ತೆ ಬರುತ್ತೇನೆ. ಇದರ ಬಗ್ಗೆ ಯಾವ ದಾಕ್ಷಿಣ್ಯವೂ ಇಲ್ಲ. ಇಷ್ಟು ಹೇಳಿ ಇನ್ನು ನಾನು ಫೈನಲ್ ಇರಿಗೇಷನ್ ಬಗ್ಗೆ ಚರ್ಚೆ ಮಾಡಿಲ್ಲವೆಂದು ನನ್ನ ಸ್ನೇಹಿತರಾದ ಕೋಲಾರದ ಶ್ರೀರಾಮರೆಡ್ಡಿ ಯಾವರು ವಾದ ಮಾಡುತ್ತಿದ್ದರು. ಹಣದ ಬಗ್ಗೆ ಈ ವರ್ಷಕ್ಕೆ ತರುತ್ತಿದ್ದೀರಿ, ಮುಂದಿನವರ್ಷಕ್ಕೆ ಎನು ಮಾಡುತ್ತೀರಿ ಎಂದು ಕೇಳಿದ್ದೀರಿ. ಮುಂದಿನವರ್ಷಕ್ಕೆ ಈಗಲೇ ತೆರಿಗೆ ಹಾಕುತ್ತೇನೆ ಎಂದು ಹೇಳಲ್ಲೇ? ನಾನು ಹೇಳಿದ್ದೇನೆ, ಎರಡು ಸಾವಿರ ಇಸವಿ ಒಳಗೆ ಕೃಷ್ಣಾ ಬೇಸಿನ್‌ನಲ್ಲಿ ನಮ್ಮ ನೀರು ಎನಿದೆ, 729 ಟಿ.ಎಂ.ಸಿ ನೀರಲ್ಲಿ 550 ಟಿಎಂಸಿ ನೀರನ್ನು ಸ್ಟೋರೇಜ್ ಮಾಡಿಕೊಳ್ಳುವ ಬಗ್ಗೆ ನಮ್ಮ ನೀರನ್ನು ಹಿಡಿದಿಟ್ಟುಕೊಳ್ಳುರ ಬಗ್ಗೆ ನಾನು ಸದನದಲ್ಲಿ 2000 ಇಸವಿ ಯೊಳಗೆ ಈ ಕೆಲಸವನ್ನು ಮಾಡುತ್ತೇನೆ ಎಂದು ಹೇಳಿದ್ದೇನೆ. ಈ ವರ್ಷ ಇದಕ್ಕಾಗಿ ಒಂದು ಸಾವಿರ ಕೋಟಿ ಖರ್ಚು ಮಾಡುತ್ತೇನೆ ಎಂದು ಹೇಳಿದ್ದೇನೆ. ಮುಂದಿನವರ್ಷಕ್ಕೆ ನಾನು ಎನು ಮಾಡುತ್ತೇನೆ ಎಂದು ಈಗಲೇ ಹೇಗೆ ಹೇಳಿಲಿ? ಕಾಫಿತೋಟ ಮಾಡುತ್ತೇನೆ ಎಂದು ಹೇಳಲ್ಲಾ? ಈಗ ಎನೂ ಹೇಳವುದಕ್ಕೆ ಆಗುವುದಿಲ್ಲ. ನಾನೂ 35 ವರ್ಷ ರಾಜಕೀಯದಲ್ಲಿ ಕೆಲಸ ಮಾಡಿಕೊಂಡುಬಂದಿದ್ದೇನೆ. ಮುಂದಿನವರ್ಷಕ್ಕೆ ನೀವು ಇದ್ದರೆ ಯಾವ್ಯಾವ ಸಲಹೆಗಳನ್ನು ಕೊಡುತ್ತೀರೋ ಕೊಡಿ. ಹಣ ಹೇಗೆ ಉಳಿಸಬೇಕು, ಎನೇನು ಮಾಡಬೇಕೆಂಬ ಬಗ್ಗೆ ನಮಗೂ ಸಹ ಸ್ವಲ್ಪ ಪರಿಶ್ರಮ, ಪರಿಜ್ಞಾನ ಎರಡೂ ಇದೆ. ಆ ಕೆಲಸವನ್ನು ನಾನು ಮಾಡುತ್ತೇನೆ ಎಂದು

ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ನನಗೆ ನೀತಿಯಿಲ್ಲವೆಂದು ಮಾನ್ಯ ವೀರಪ್ಪಮೊಯಿಲಿ ಯವರು ಹೇಳುತ್ತಾರೆ. ಏನು ನೀತಿ ಇರಬೇಕು? ಮಾನ್ಯ ನಂಜೇಗೌಡರು ಹೇಳಿದ್ದಾರೆ ನ್ಯಾಷನಲ್ ವಾಟರ್ ಪಾಲಿಸಿ ಇಲ್ಲ ಎಂದು ನಾನು ಕರ್ನಾಟಕಕ್ಕೆ ಒಂದು ಪಾಲಿಸಿಯನ್ನು ತರಲೇ? ನಮ್ಮ ನೀತಿ ಕರ್ನಾಟಕ ನೀರಾವರಿ ಇಲಾಖೆಯ, ಲೋಕೋಪಯೋಗಿ ಇಲಾಖೆಯ ನೀತಿ ಕನ್‌ಸ್ಟ್ರಕ್ಷನ್ ಕಾರ್ಪೋರೇಷನ್‌ಗೆ 220ಕೋಟಿರೂ ಕೆಲಸ ಕೊಡುವಂಥ ಆ ನೀತಿ ಅಲ್ಲ, ನಮ್ಮ ನೀತಿ ಡಿಪಾರ್ಟಮೆಂಟ್‌ನ ಕೆಲಸದ ಹೆಸರಿನಲ್ಲಿ 235 ರಿಂದ 240 ಕೋಟಿ ರೂಪಾಯಿ ಕೆಲಸ ಕೊಟ್ಟು ಕೇರಳದವರಿಗೋ, ಆಂಧ್ರದವರಿಗೇ ಕರೆಯಿಸಿ ಅವರನ್ನು ದೊಡ್ಡ ಮನುಷ್ಯರನ್ನಾಗಿ ಮಾಡತಕ್ಕಂಥ ನೀತಿ ಇಲ್ಲ. ಯಾರೋ ಕುನ್ನಿ ಅಂತೆ 396 ಲಕ್ಷ ರೂಪಾಯಿಗಳು. ಖಾದಿರ್ ಅಂತೆ ಯಾರು ಅವನುಯ ಬಡಬೋರೇಗೌಡ ಕೊಡತಕ್ಕಂಥ ಹಣ ಏನಿದೆ. ಅದನ್ನು ಸರಿಯಾದ ರೀತಿಯಲ್ಲಿ ಖರ್ಚು ಮಾಡತಕ್ಕಂಥಾದ್ದು ಈ ಸರ್ಕಾರದ ನೀತಿ. ಇದಕ್ಕೆ ಯಾವ ದಾಕ್ಷಿಣ್ಯವೂ ಇಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದರಲ್ಲಿ ಯಾವುದೇ ದೊಡ್ಡಸ್ತಿಕೆ ಇಲ್ಲ. ಅದ್ದರಿಂದ ಇದು ಯಾರೇ ಇರಲಿ ನಾನು ಎನ್‌ಕ್ವೈರಿಗೆ ಆರ್ಡರ್ ಮಾಡುತ್ತೇನೆ. I wii appoint an Additional D.G.B. specially for this and in additional to that one Chif Engineer will assist him.

Technically. ಕ್ಲಾಸಿಫಿಕೇಷನ್, ಮತ್ತೊಂದು ಏನೇನು ಹೇಗೆ ಹೇಗೆ ಅನ್ಯಾಯ ನಡೆಸಿದ್ದಾರೆ, ಅದನ್ನು ಸಂಪೂರ್ಣವಾಗಿ ತನಿಖೆ ಮಾಡುವುದಕ್ಕೆ ಮತ್ತು ಕ್ರಮ ತೆಗೆದುಕೊಳ್ಳುವುದಕ್ಕೆ ನಾನು ಈ ಸಭೆಗೆ ಅಶ್ವಾಸನೆಯನ್ನು ಕೊಡುತ್ತೇನೊ. ಇದರ ಬಗ್ಗೆ ದಾಕ್ಷಿಣ್ಯ ಇಲ್ಲ, ಇದಕ್ಕಿಂತ ನನ್ನ ನೀತಿ ಎನೂ ಇಲ್ಲ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡರಪುರ): ಮಾನ್ಯ ಸಭಾಧ್ಯಕ್ಷರೇ,ಮಾನ್ಯ ಮುಖ್ಯಮಂತ್ರಿಗಳು ಮೈನರ್ ಇರಿಗೇಷನ್ ಬಗ್ಗೆ ಮಾತನಾಡಿದರು. ಅವರೇ ಲಿಫ್ಟ್ ಇರಿಗೇಷನ್ ಕಾರ್ಪೋರೇಷನ್ ಅನ್ನು ಕಾನ್ಸಿಟ್ಯೂಟ್ ಮಾಡಿದವರು. ಇದನ್ನು ಮಾನ್ಯ ಮುಖ್ಯಮಂತ್ರಿಗಳೇ ಮಾಡಿದ್ದು. ಸುಮಾರು ಕೃಷ್ಣಾ ಹಾಗೂ ಕಾವೇರಿ ವಿಭಾಗದಲ್ಲ 1987ನೇ ಇಸವಿಯಿಂದ 1995ನೇ ಇಸವಿವರೆಗೆ ಲಿಫ್ಟ್ ಇರಿಗೇಷನ್‌ನಲ್ಲಿ ಯಾವ್ಯಾವುದನ್ನು ಮಾಡಿ ಕೊನೆಗೆ ಏನೂ ಪ್ರಯೋಜನ ಆಗದೆ ಸುಮಾರು 6-7 ಕೋಟಿ ರೂಪಾಯಿ ಹಣ ವೆಚ್ಚಮಾಡಿ ಅದನ್ನು ಪುನಃ ಮೈನರ್ ಇರಿಗೇಷನ್ ಮರ್ಜ್ ಮಾಡಿದ್ದಾರೆ ತಾವು ಇದರ ಬಗ್ಗೆ ದಯವಿಟ್ಟು ಲಿಫ್ಟ್ ಇರಿಗೇಷನ್ ಅನ್ನು ಸಮಿಕ್ಷೆ ಮಾಡಿ ಯಾವ್ಯಾವ ಪ್ರಾಜೆಕ್ಟೆ ರೆಡಿಯಾಗಿತ್ತು ಎನ್ನುವ ಬಗ್ಗೆ ಮುಖ್ಯಮಂತ್ರಿಗಳು ಒಂದು ಮಾತನ್ನೂ ಹೇಳಿಲ್ಲ. ಏಕೆಂದರೆ ಅವರೇ ಲಿಫ್ಟ್ ಇರಿಗೇಷನ್ ಕಾರ್ಪೋರೇಷನ್ ಅನ್ನು ಕಾನ್ಸಿಟ್ಯೂಟ್ ಮಾಡಿದ್ದುದು, ಲಿಫ್ಟ್ ಇರಿಗೇಷನ್ ಮೂಲಕ ಜಮಿನು ಮುಳುಗಡೆಯಾಗುವುದಿಲ್ಲ. ಇದು ಬಹಳ ಮುಖ್ಯವಾಗಿ ಬೇಕಾಗಿರತಕ್ಕಂಥದ್ದು ವಿದ್ಯುಚ್ಛಕ್ತಿ ದೊಡ್ಡ ಅಣೆಕಟ್ಟು ಕಟ್ಟಿದರೆ 4ಲಕ್ಷ ಎಕರೆ ಮುಳುಗಡೆಯಾದರೆ, ನಾಲ್ಕು ಲಕ್ಷ ಎಕರೆಗೆ ನೀರಾವರಿಯಾಗುತ್ತದೆ, ಆದರೆ ಇದು ಒಂದು ಎಕರೆಯೂ ಮುಳುಗಡೆಯಾಗತಕ್ಕಂಥ ಒಂದು ಅತ್ಯುತ್ತಮ ಯೋಜನೆ. ಇದು ಯಾವ ಹಂತದಲ್ಲಿದೆ. ಯಾವ ಮಟ್ಟಕ್ಕೆ ಮುಟ್ಟಿದರೆ ಎಂದು ತಿಳಿಸಬೇಕು. ನಾನು ಭಾಷಣ ಮಾಡುವಾಗ ಹೇಳಿದ್ದೆ. ದಯಮಾಡಿ ಇದರ ಬಗ್ಗೆ ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಆರ್. ಯಾವಗಲ್ (ನವಲಗುಂದ): ಮಾನ್ಯ ಅಧ್ಯಕ್ಷರೇ,ನಾನು ಎರಡು ವಿಷಯಗಳ ಬಗ್ಗೆ ಕೇಳಿದ್ದೆ. ಮಲಪ್ರಭಾ ಯೋಜನೆಗೆ ಹೋದವರ್ಷ 38.94 ಕೋಟಿ ಬಜೆಟ್ ಅಲೋಕೇಷನ್ ಇತ್ತು. ಆದರೆ ಖರ್ಚಾದದ್ದು 28 ಕೋಟಿ ಮಾತ್ರ. ಇದರಲ್ಲಿ ಸುಮಾರು 10 ಕೋಟಿ ಮಾತ್ರ ಒರಿಜಿನಲ್ (ಕೆಲಸದಮೇಲೆ ಖರ್ಚಾದದ್ದು. ಉಳಿದದ್ದು ಹಣ ಎಸ್ಟಾಬ್ಲಿಷ್‌ಮೆಂಟ್‌ಗೆ ಖರ್ಚಾಗಿದೆ. ಈ ವರ್ಷ ಹಣ ಸಂದಾಯವಾಗದೆ ಕೆಲಸ

ಪ್ರೋಗ್ರೆಸ್ ಆಗದಿರುವುದರಿಂದ ಹೆಚ್ಚು ಹಣ ಇಡುವ ಬಗ್ಗೆ ಪರಿಶೀಲನೆ ಮಾಡುತ್ತೀರಾ ಮತ್ತು ಒಟ್ಟು 80 ಕೋಟಿ ಏನಿದೆ ಅದನ್ನು ಏನು ಕೃಷ್ಣಾ ಜಲನಿಗಮದಿಂದ ಪಡೆಯುತ್ತಿದ್ದೀರಿ, ಆದರಿಂದ ಏನಾದರೂ ಎರಡು ವರ್ಷಗಳ ಕಾಲದಲ್ಲಿ ಇದನ್ನು ಮುಗಿಸುತ್ತೀರಾ ಎಂದು ತಮ್ಮನ್ನು ಕೇಳಬಯಸುತ್ತೇನೆ, ಇನ್ನು ಮಹದಾಯಿ ಯೋಜನೆ ಬಗ್ಗೆ ನಾನು ಪ್ರಸ್ತಾಪ ಮಾಡಿದ್ದೆ ಇದು 9 ಟಿ.ಎಂ.ಸಿ. ನೀರನ್ನು ಕೊಡುವ ಯೋಜನೆ. ಇದು ಬಹಳ ಅತಿಮುಖ್ಯವಾದ ಹಂತದಲ್ಲಿದೆ. ಇದು ಮುಗಿದಿಲ್ಲ. ಈ ಸಲವಾದರೂ ಇದನ್ನು ಕೈಗೆತ್ತಿಕೊಳ್ಳುತ್ತೀರಾಯ ನೀವು ಯಾವ ರೀತಿ ಖಾಸಗಿ ಬಂಡವಾಳವನ್ನು ಕೈಗಾರಿಕಾ ಭಾಗದಲ್ಲಿ ಹುಡುಕುವುದಕ್ಕೆ ಆಕರ್ಷಣೆ ಮಾಡುತ್ತಿದ್ದೀರಿ. ಅದೇ ರೀತಿ ನೀರಾವರಿ ಬಗ್ಗೆಯೂ ಕೂಡ ಹುಡುಕುವುದಕ್ಕೆ ಸಾಧ್ಯ ಇದೆಯೆ? ನೀರಾವರಿ ಇಲಾಖೆಯನ್ನು ಪ್ರತ್ಯೇಕ ಮಾಡುವುದಕ್ಕೆ ಸಾಧ್ಯಾವಿದೆಯೇ ಎಂದು ತಮ್ಮನ್ನು ನಾನು ಕೇಳುತ್ತೇನೆ.

ಶ್ರೀ ಬಸವನಗೌಡ ಪಾಟೀಲ್: ಮಾನ್ಯ ಮುಖ್ಯಮಂತ್ರಿಗಳು ಬಹಳ ಪ್ರಾಮುಖ್ಯವಾದ ಮುಳವಾಡ ಏತ ನೀರಾವರಿ ಯೋಜನೆ ಬಗ್ಗೆ ಹೇಳಲಿಲ್ಲ, ಇದು ಸುಮಾರು ಮೂರು ತಾಲ್ಲೂಕುಗಳಿಗೆ ಉಪಯುಕ್ತವಾದ ದೊಡ್ಡ ಯೋಜನೆ. ಸುಮಾರು ಮೂರೂವರೆ ಲಕ್ಷ ಎಕರೆ ಪ್ರದೇಶಕ್ಕೆ ಈ ಯೋಜನೆಯಿಂದ ಉಪಯೋಗವಾಗುತ್ತದೆ. ಈ ಯೋಜನೆ ಬಗ್ಗೆ ಸರ್ಕಾರ ಇಟ್ಟು ಕೊಂಡಿರುವ ನಿರ್ಧಿಷ್ಟವಾದ ಗುರಿಯನ್ನು ಮತ್ತು ಇನ್ನು ಐದು ವರ್ಷಗಳಲ್ಲಿ ಇದನ್ನು ಮುಗಿಸುತ್ತೀರೋ ಎಂದು ಹೇಳಬೇಕಾಗಿದೆ. ಇಲ್ಲವೇ ಹೋದರೆ ಇದು ಬರೀ ಅಶ್ವಾಸನೆಯಾಗಿಯೇ ಉಳಿಯುತ್ತದೆ. ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ನಿರ್ಧಿಷ್ಟವಾಗಿ ಉತ್ತರ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಗದೀಶ ತಿಮ್ಮನಗೌಡ ಪಾಟೀಲ್ (ಬೀಳಗಿ): ಮಾನ್. ಅಧ್ಯಕ್ಷರೇ,ಕೃಷ್ಣಾ ಯೋಜನೆಯಲ್ಲಿ ಸುಮಾರು 40-50 ಹಳ್ಳಿಗಳು ಮುಳುಗಡೆಯಾಗುತ್ತವೆ. ಇಗರಲ್ಲಿ ಮುಳುಗಡೆ ಯಾಗುವ ಜನರಿಗೆ ಸಮಂಜಸವಾದ, ವೈಜ್ಞಾನಿಕವಾದ ರೀತಿಬಲ್ಲಿ ಪರಿಹಾರಧನ ಸಿಗಬೇಕು. ಇದೇ ಜೂನ್ 95ರಲ್ಲಿ ಕನಿಷ್ಠ 28-30 ಹಳ್ಳಿಗಳಿಗೆ ಪುನರ್‌ವಸತಿಯೋಜನೆಯನ್ನು ಮಾಡಬೇಕಾಗಿದೆ. ಇದರ ಬಗ್ಗೆ ಸರ್ಕಾರ ಸ್ಪಷ್ಟವಾಗಿ ಹೇಳಬೇಕು. ಸರ್ಕಾರದ ನಿಲುವನ್ನು ತಿಳಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್: ಸನ್ಮಾನ್ಯ ಅದ್ಯಕ್ಷರೇ ಕಾವೇರಿ ಮತ್ತು ತೆಲುಗು ಗಂಗಾ ವಿಚಾರದಲ್ಲಿ ಮುಖ್ಯಮಂತ್ರಿಗಳು. ಹಿಂದೆ ಸಂಧಾನದ ಮುಖಾಂತರ ಬಗೆಹರಿಸುತ್ತೇವೆಂಬ ವಿಚಾರವನ್ನು ಹೇಳಿದ್ದರು. ಅದು ತೆಲುಗುಗಂಗಾ ಇರಲಿ ಅಥವಾ ಕಾವೇರಿ ಇರಲಿ. ಸಂಧಾನದ ಮುಖಾಂತರ ಬಗೆಹರಿಸಬೇಕೆಂದು ಮುಖ್ಯಮಂತ್ರಿಗಳಲ್ಲಿ ಕೇಳುವುದಕ್ಕೆ ಬಯಸುತ್ತೇನೆ. ಎರಡನೆಯದಾಗಿ ಅಪ್ಪರ್ ಕೃಷ್ಣಾ ಪ್ರಾಜೆಕ್ಟ್‌ನಲ್ಲಿ ಸುಮಾರು 400 ಇಂಜಿನಿಯರುಗಳನ್ನು ನೇಮಕಾತಿ ಮಾಡಿಕೊಂಡು. ಅವರು ತೊಂದರೆ ಅನುಭವಿಸುತ್ತಿದ್ದಾರೆ. ಮತ್ತು ಕೋರ್ಟಿಗೆ ಹೋಗಿದ್ದಾರೆ. ಇದರ ಬಗ್ಗೆ ಮುಖ್ಯ ಮಂತ್ರಿಗಳು ಗಮನಹರಿಸಿ, ಅವರಿಗೆ ಸಂಪೂರ್ಣವಾದ ಅದ್ಯತೆಯನ್ನು ಕೊಟ್ಟು, ಈ 400 ಜನ ಇಂಜಿನಿಯರ್‌ಗಳಿಗೆ ನೇಮಕಾತಿ ಮಾಡಿಕೊಂಡು ಸರ್ಕಾರ ಅವರ ಬಗ್ಗೆ ಅನುಕೂಲತೆಯ ಕ್ರಮ ತೆಗೆದುಕೊಳ್ಳಬೇಕೆಂದು ಮುಖ್ಯ ಮಂತ್ರಿಯವರ ಗಮನಕ್ಕೆ ತರುತ್ತಿದ್ದೇನೆ. ನನ್ನ ಮತ ಕ್ಷೇತ್ರವಾದ ಬಸವಕಲ್ಯಾಣಕ್ಕೆ ಸಂಬಂಧಪಟ್ಟಂತೆ,. ಮುಲ್ಲಾಮಾರಿ ಯೋಜನೆ ಮುಕ್ತಾಯದ ಹಂತದಲ್ಲಿದೆ. ಇನ್ನು ಒಂದು ಕೋಟಿ ರು. ಬಿ ಬೇಕಾಗುತ್ತದೆ. ಇನ್ನು ಸಾಕಷ್ಟು ಸಣ್ಣ ಪುಟ್ಟ ಕೆಲಸಗಳು ಆಗಬೇಕಾಗಿದೆ, ತಾವು ಒಂದು ಕೋಟಿ ರೂಪಾಯಿಗಳನ್ನು ಈ ವರ್ಷ ಬಜೆಟ್‌ನಲ್ಲಿ ಇಟ್ಟಿಲ್ಲ, ಕೇವಲ 30 ಲಕ್ಷ ರೂಪಾಯಿಗಳನ್ನು ಮಾತ್ರ ಇಟ್ಟಿದ್ದೀರಿ. ಆದ್ದರಿಂದ, ಇದಕ್ಕೆ ಒಂದು ಕೋಟಿ

ರೂಪಾಯಿಗಳನ್ನು ಇಡಬೇಕೆಂದು ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ. ಚುರುಕಿ ನಾಲಾ ನೀರಾವರಿ ಯೋಜನೆ ಮತ್ತು ಕಾರಂಜಾ

ಪ್ರಾಜೆಕ್ಟ್‌ಗೆ ಸಾಕಷ್ಟು ಹಣವನ್ನು ಕೊಟ್ಟಿಲ್ಲ. ಚುರುಕಿ ನಾಲಾ ಯೋಜನೆಗೆ 5 ಕೋಟಿ ಮಾತ್ರ ಇಟ್ಟಿದ್ದೀರಿ ಮತ್ತು ಕಾರಂಜಾಗೆ 17 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇದು ಸಾಕಾಗುತ್ತಾ ಇಲ್ಲ. ಚುರುಕಿ ನಾಲಾ ಯೋಜನೆಗೆ 7 ಕೋಟಿ ಮತ್ತು ಕಾರಂಜಾ ಪ್ರಜೆಕ್ಟ್‌ಗೆ ಸುಮಾರು 30 ಕೋಟಿ ರೂಪಾಯಿಗಳನ್ನಾದರೂ ಕೊಡ ಬೇಕೆಂದು ನಾನು ಕೇಳಿಕೊಳ್ಳುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಸ್ಪಷ್ಟೀಕರಣ ಕೇಳಿ ಎಂದು ಹೇಳಿದರೆ. ನೀರು ಭಾಷಣವನ್ನೇ ಮಾಡುತ್ತಿದ್ದೀರಿ.

ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ : ನೀರಾವರಿ ಭವನದ ಸಲುವಾಗಿ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತಿದ್ದೇನೆ. ಇದು ಕರ್ನಾಟಕ ರಾಜ್ಯದಲ್ಲಿ ಇಂಜಿನಿಯರುಗಳ ತವರು ಮನೆ. ಆದ್ದರಿಂದ ನೀರಾವರಿ ಭವನ ಮಾಡಬೇಕೆಂದು ನಾನು ಮುಖ್ಯಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ನೇಮಕಾತಿ ಮಾಡತಕ್ಕ ಸಂದರ್ಭದಲ್ಲಿ ಒಳ್ಳೆಯ ಇಂಜಿನಿಯರುಗಳನ್ನು ಮತ್ತು ಅಧಿಕಾರಗಳನ್ನು ಹಾಕಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಹೇಳುವಾಗ ಸ್ವಲ್ಪ ತಾಳ್ಮೆ ಕಳೆದುಕೊಂಡು ಹೇಳಿದರು. ಅದು ಏಕೋ ನನಗೆ ಗೊತ್ತಾಗಲಿಲ್ಲ. ನಾವು ನಾಲ್ಕುವರೆ ತಾಸು ಅವರ ಭಾಷಣವನ್ನು ಬಹಳ ತಾಳ್ಮೆಯಿಂದ ಕೇಳಿದ್ದೇವೆ.

ಅವರು ಮಾತನಾಡಿದ ಧಾಟಿ ನೋಡಿದರೆ, ನನಗೆ ಈಗ ಅನಿಸುತ್ತಿದೆ. ಏನೋ ಇವರು ಸುಮ್ಮನೆ ಕುಳಿತಿದ್ದಾರೆ ಮತ್ತು ನನಗೆ ತಲೆ ಇಲ್ಲ. ನಾನು ತೋಟ ಮಾಡುತ್ತೇನೆ ಎಂದು ಹೇಳಿದರು. ನಾವು ಅವರಿಗೆ ಕೇಳಿದ್ದದು ಏನೆಂದರೆ, ನೀವು ಆರು ಸಾವಿರ ಕೋಟಿ ರೂಪಾಯಿಗಳನ್ನು ಎರಡು ಸಾವಿರ ಇಸವಿಯೊಳಗೆ ಖರ್ಚುಮಾಡಬೇಕಾಗುತ್ತದೆ. ಈ ಹಣವನ್ನು ಹೇಗೆ ಸಂಗ್ರಹಣೆ ಮಾಡಿತ್ತೀರಿ ಎಂದು ಈ ವರ್ಷ ಒಂದುನೂರು ಕೋಟಿ ಮಾಡುತ್ತೇವೆಂದು ಹೇಳುತ್ತಿದ್ದೀರಿ, ಎಂಟುನೂರು ಕೋಟಿ ರೂಪಾಯಿಗಳನ್ನು ಬಾಂಡ್ ಮುಖಾಂತರ ಕಲೆಕ್ಟ್ ಮಾಡುತ್ತೇವೆ, ಎರಡು ನೂರು ಕೋಟಿ ರೂಪಾಯಿಗಳನ್ನು ಈ ರೀತಿಯಿಂದ ಮಾಡುತ್ತೇವೆ, ಹೇಳಿದರು. ಮುಂದಿನ ವರ್ಷ ಯಾವರೀತಿಯಾದ ಸ್ಕೀಮ್ ಇಟ್ಟು ಕೊಂಡಿದ್ದೀರಿ, ಎಂಬುದು ನಮ್ಮ ಮುಖ್ಯ ಉದ್ದೇಶ. ಆದರೆ ಅವರು ಇದನ್ನು ಬಿಟ್ಟು, ಏನು ಮಾಡಿದರು? ಈ ವರ್ಷ ನಾನು ಇಟ್ಟಿದ್ದೇನೆ. ಮುಂದಿನ ವರ್ಷ ಏನು ಮಾಡುತ್ತೇನೆಯೋ ನನಗೆ ಅಷ್ಟು ತಲೆ ಇಲ್ಲ. ನಾವು ತೋಟ ಮಾರುತ್ತೇವೆ. ಈ ರೀತಿಯಲ್ಲಿ ಹೇಳಿವುದರ ಅರ್ಥ ನನಗೆ ಅರ್ಥವಾಗಲಿಲ್ಲ. ಎರಡನೆಯದು. ತುಮಕೂರಿನಲ್ಲಿ ಪೀಸ್ ವರ್ಕಮೇಲೆ ಏನೇನು ಕೊಟ್ಟಿದ್ದಾರೆ ಮತ್ತು ಯಾವ ಯಾವ ಕೆಲಸದ ಬಗ್ಗೆ ಎಂಬುದನ್ನು ಬಹಳ ವಿವರವಾಗಿ ಹೇಳಿದರು. ನಾವು ಕೇಳಿಕೊಂಡೇ ಕುಳಿತಿದ್ದೆವು. ಆದರೆ. ಕೊನೆಗೆ ನಿಮ್ಮ ಜಲನೀತಿ ಅಥವಾ ಮುಂದಿನ ನೀರಿನ ಬಗ್ಗೆ ಯಾವನೀತಿ ಅಡಾಪ್ಟ್ ಮಾಡುತ್ತೀರಿ ಎಂಬ ಬಗ್ಗೆ ಮತ್ತು ಈ 5 ವರ್ಷದಲ್ಲಿ ತಮ್ಮ ನೀತಿ ಏನು ಎಂದು ಶ್ರೀಮಾನ್‌ನಂಜೇಗೌಡರು ಮತ್ತು ಮಾನ್ಯ ಮೊಯ್ಲಿಯವರು ಕೇಳಿದರು. ಅದಕ್ಕೆ ಅವರು ಉತ್ತರ ಹೇಳಿದರು. ನಮ್ಮ ನೀತಿ, ಖಾದ್ರಿಯನ್ನು ತೆಗೆಯುವುದು. ಇಸ್ಮಾಯಿಲ್ ತೆಗೆಯುವುದು ಮತ್ತೆ ಯಾರ್ಯಾರೋ 4-5ಜನ ಕಂಟ್ರಾಕ್ಟರುಗಳ ಹೆಸರುಗಳನ್ನು ಹೇಳಿದರು ನಾವು ಇದನ್ನು ಕೇಳಲಿಲ್ಲ. ನಿಮ್ಮ ಜಲನೀತಿ ಬಗ್ಗೆ ಸ್ಪಷ್ಟವಾಗಿ ಹೇಳಿ ಮತ್ತು 5 ವರ್ಷದಲ್ಲಿ ನಿಮ್ಮ ಕಾರ್ಯಕ್ರಮ ಏನು ಎಂಬುದನ್ನು ನಮ್ಮ ಮುಂದೆ ಇಡುತ್ತೀರಾ ಎಂಬುದನ್ನು ಕೇಳಿದರೆ, ಅವರು ಸಿಟ್ಟಿಗೆ ಬಂದು ಕಂಟ್ರಾಕ್ಟರ್ಸ ಅಥವಾ ಯಾವುದೋ

ಸಿಟ್ಟು ತಂದು, ಎಲ್ಲೆಲ್ಲೋ ಹೋರಟು ಹೋದಿರಿ ನೀರು ವಿಚಾರಣೆ ಮಾಡಿ, ಯಾರು ಬೇಡ ಎಂದು ಹೇಳುತ್ತಾರೆ. ಯಾರು ಯಾರು ಲೂಟಿ ಮಾಡಿದ್ದಾರೆಯೋ ಅವರನ್ನು ಗಲ್ಲಿಗೇರಿಸಿ. ಆದರೆ ನಮ್ಮ ಕಳಕಳಿ ಏನೆಂದರೆ ನಿಂತುಹೋದ ಕೆಲಸಗಳೇನಿವೆ. ಆ ಕೆಲಸಗಳನ್ನು ಪ್ರಾರಂಭ ಮಾಡಬೇಕೆಂಬ ದೃಷ್ಟಿಯಿಂದ ಈ ಚರ್ಚೆಯನ್ನು ಪ್ರಾರಂಭ ಮಾಡಿದೆವು. ಆದರೆ ಇಲ್ಲಿ ನಾವು ಚರ್ಚೆ ಮಾಡದೇ ಇದ್ದರೂ ಕೂಡ ಯಾರು ಯಾರೋ ತಪ್ಪು ಮಾಡಿದ್ದಾರೆಂದು ಹೇಳಿದರು. ತಪ್ಪು ಮಾಡಿದವರಿಗೆ ಶಿಕ್ಷೆ ಕೊಡುವುದಕ್ಕೆ ಎಲ್ಲಿ ಸಂಶಯ ಬರುತ್ತದೆ,. ಯಾವ ಫೈಲುಗಳ ಬಗ್ಗೆ ಎಂಬುದನ್ನು ನೋಡಲು ರೆಕಾರ್ಡ್ ತರಿಸಿಕೊಳ್ಳಿ ಸಂಬಂಧಪಟ್ಟ ಫೈಲ್ ತರಿಸಿಕೊಳ್ಳಿ, ಶಿಕ್ಷೆ ಕೊಡಿ ಆದರೆ, ನಾವು ಇಲ್ಲಿ ಕೇಳತಕ್ಕಂತಾದ್ದು, ಡೆವಲಪ್‌ಮೆಂಟ್ ವರ್ಕ್ಸ್ ನಿಂತುಹೋಗಿವೆ, ಅದನ್ನು ಏತಕ್ಕೆ ಪ್ರಾರಂಭ ಮಾಡುತ್ತಾ ಇಲ್ಲ ಎಂಬುದಾಗಿದೆ ಅದು ತುಮಕೂರು ಇರಬಹುದು. ಗುಲ್ಬರ್ಗಾ ಕಡೆ ಇರಬಹುದು ಅಥವಾ ಭೀಮಾ ಯೋಜನೆ ಇರಬಹುದು ಅಥವಾ ಇದಕ್ಕೆ ಸಂಬಂಧಪಟ್ಟಂಥ ಅನೇಕ ಕೆಲಸಗಳು ಇರಬಹುದು.ಇದಕ್ಕೆ ಸಮಜಾಯಿಷಿ ಉತ್ತರ ಕೊಡುತ್ತಾರೆಂದು ನಾವುತಿಳಿದುಕೊಂಡಿದ್ದರೆ, ಅವರು ಸಿಟ್ಟಿಗೆ ಬಂದು ನಾವು ಮಾಡಿದ್ದೇ ಸರಿ, ನಮ್ಮ ನೀತಿಯೇ ಇದು, ಈ ಧಾಟಿಯಲ್ಲಿ ಮಾತನಾಡಿದರೆ, ಖಂಡಿತವಾಗಿಯೂ ಇದು ಸರಿಯಲ್ಲ, ಮತ್ತು ನೀತಿಯೇ ಇದು, ಈ ಧಾಟಿಯಲ್ಲಿ ಮಾತನಾಡಿದರೆ, ಖಂಡಿತವಾಗಿಯೂ ಇದು ಸರಿಯಲ್ಲ, ಮತ್ತು ನಾವು ಪದೆಪದೇ ತುಂಗಭದ್ರಾ ವಿಷಯ ಕೇಳುತ್ತಿದ್ದೇವೆ. ನೀವು ಹೇಳಿದ್ದು ಅವರಿಗೆ ಅರ್ಥವಾಗುವುದಿಲ್ಲ, ಬಹುಶಃ lack of my Expression or languege ಅವರಿಗೂ ಅರ್ಥವಾಗಬೇಕು ಏಕೆಂದರೆ ನಾನು ಯಾವ ಭಾಷೆಯಲ್ಲಿ ಹೇಳುತ್ತಿದ್ದೇನೆ, 78 ಟಿ.ಎಂ.ಸಿ. ನೀರು ತುಂಗಭದ್ರಾ ಎಡದಂಡೆ ಕಾಲುವೆಗೆ, ರಾಯಚೂರಿಗೆ ಅಲಾಟ್ ಆಗಿತ್ತು ಅದರಲ್ಲಿ 70 ಟಿ.ಎಂ.ಸಿ. ನೀರು ನೀರು ಕೊಟ್ಟಿದ್ದೀರಿ ಉಳಿದ 8 ಟಿ.ಎಂ.ಸಿ. ನೀರಿನಲ್ಲಿ ಕನಿಷ್ಟ ಪಕ್ಷ 3-4 ಟಿ.ಎಂ.ಸಿ. ನೀರು ಕೊಟ್ಟರೂ ಅವರ ಲಕ್ಷಾಂತರ ಎಕರೆಯಲ್ಲಿರತಕ್ಕ ಬೆಳೆ ಉಳಿಯುತ್ತದೆ ಎನ್ನತಕ್ಕಂಥ ಅನೇಕ ವಿಷಯಗಳನ್ನು ಹೇಳಿದರೂ ಕೂಡ ಅದರ ಬಗ್ಗೆ ಅವರು ಒಂದೇ ಮಾತು ಹೇಳಿದರು. ನಾವು ನೀರು ಕೊಡುವುದಕ್ಕಾಗುವುದಿಲ್ಲ, ಅವರಿಗೆ ಏನು ಬೆಡಬೇಕಾಗಿತ್ತೋ ಅದನ್ನು ಬಿಟ್ಟಿದ್ದೇವೆ. ಇವರು ಪ್ರೊಸೀಡಿಂಗ್ಸ್‌ನಲ್ಲಿ ಒಪ್ಪಿಕೊಂಡಿದ್ದಾರೆ, ಡೇಟ್‌ವೈಸ್ ಅವರಿಗೆ ಏನು ನೀರು ಕೊಡಬೇಕಾಗಿತ್ತೋ ಅದನ್ನು ಕೊಟ್ಟಿದ್ದೇವೆಂದು ಹೇಳಿದರು ಇದರ ಬಗ್ಗೆಯೂ ಕೂಡ ಏನೂ ಹೇಳಿಲಿಲ್ಲ, ಆ ಮೇಲೆ ಕ್ರಾಪ್ ಪರಿಹಾರ ಕೊಡುತ್ತೀರಾ ಎಂದು ಕೇಳಿದ್ದೆವು. ಅದಕ್ಕೂ ಕೂಡ ಏನೂ ಹೇಳಲಿಲ್ಲ. ಮತ್ತು ಸೆಟಲ್‌ಮೆಂಟ್ ಬಗ್ಗೆ ಆರ್.ಆರ್. ಸ್ಕೀಮ್ಸ್ ಬಗ್ಗೆ ಕೂಡ ಸಮಾದಾನಕರ ಉತ್ತರವನ್ನು ಕೊಟ್ಟಿಲ್ಲ. ಇವೆಲ್ಲವನ್ನೂನೋಡಿದರೆ, ಮುಖ್ಯಮಂತ್ರಿಗಳು ಇದಕ್ಕೆ ಉತ್ತರ ಕೊಡುವುದಕ್ಕೆ ತಯಾರಿಲ್ಲ. ಅವರು, ತಮ್ಮದೇ ಧಾಟಿಯಲ್ಲಿ ಒತ್ತಾಯ ಮಾಡಬೇಕೆಂದು, ಒತ್ತಡ ತರಬೇಕೆಂದು ಮಾಡುತ್ತಿದ್ದಾರೋ ಏನೋ ಗೊತ್ತಿಲ್ಲ. ನಾನು ಏನು ಹೇಳುತ್ತಿದ್ದೇನೆಂದರೆ. ಇದು ಸ್ಪಷ್ಟವಾಗಿ ರಾಜಕೀಯ ಉತ್ತರವಾಗಿದೆ ಎನ್ನುವ ಮಾತನ್ನು ಅನಿವಾರ್ಯವಾಗಿ ಹೇಳಬೇಕಾಗಿದೆ. ಅವರಿಗೆ ಕಳಕಳ ಇಲ್ಲವೆಂದು ಹೇಳುವುದಿಲ್ಲ. ಆದರೆ, ಇಚ್ಛಾಶಕ್ತಿಯನ್ನು ಅವರು ಏಕೆ ತೋರಿಸುತ್ತಾ ಇಲ್ಲವೋ ನನಗೆ ಗೊತ್ತಾಗುತ್ತಾ ಇಲ್ಲ. ಅವರ ಉತ್ತರ ಕೊಡುತ್ತಾ ಇಲ್ಲ, ಹಣ ಸಂಗ್ರಹಣೆ ಬಗ್ಗೆ ಮತ್ತು 5 ವರ್ಷದಲ್ಲಿ ನೀರಾವರಿ ಕಾರ್ಯಾಕ್ರಮದ ಬಗ್ಗೆ ಯಾವ ನೀತಿಯನ್ನು ಅಡಾಪ್ಟ್ ಮಾಡಿಕೊಳ್ಳುತ್ತೇವೆಂದು ಹೇಳಲಿಲ್ಲ. ಸುಮಾರು 8 ತಾಸು ಚರ್ಚೆಯಾದ ಮೇಲೂ ಕೂಡ ನೀಮ್ಮ ನೀತಿ ಹೇರಗೆ ಬರದಿದ್ದರೆ, ಖಂಡಿತವಾಗಿಯೂ ಕೂಡನಿಮ್ಮಲ್ಲಿ ಯಾರ ನೀತಿ ಕೂಡ ಕಣಿಲ್ಲ ಎಂಬ ಮಾತನ್ನು ಹೇಳಿ, ನಾವು ಸಬಾತ್ಯಗ ಮಾಡುತ್ತೇವೆ.

(ಕಾಂಗ್ರೆಸ್(ಐ) ಸದಸ್ಯರು ಸಭಾತ್ಯಾಗ ಮಾಡಿದರು).

ಶ್ರೀ ಹೆಚ್.ಡಿ. ದೇವೇಗೌಡ (ಮುಖ್ಯ ಮಂತ್ರಿಯವರು) ; ಸನ್ಮಾನ್ಯ ಅಧ್ಯಕ್ಷರೇ, ಅವರು ಹೊರಗೆ ಹೋಗುವುದಕ್ಕೆ ಮುಂಚೆಯೇ ಹೇಳಬೇಕಾಗುತ್ತದೆ, ಹೋದ ಮೇಲೆ ಹೇಳಿದರೆ ಪ್ರಯೋಜನವಿಲ್ಲ, ಏಕೆಂದರೆ, ಅವರೂ ಮಂತ್ರಿಗಳಾಗಿ, ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದವರು 5 ವರ್ಷದಲ್ಲಿ ಹಣವನ್ನು ಹೇಗೆ ಕೂಡಿಸಕೊಳ್ಳುತ್ತೀರಿ, ತೆರಿಗೆ ಹೇಗೆ ಹಾಕುತ್ತೀರಿ. ಮುಂದಿನ ವರ್ಷಕ್ಕೆ ಎಷ್ಟು ಹಣ ಇಟ್ಟಿದ್ದೀರಿ ಯಾವ ಯಾವ ರೂಪದಲಿಲ ತೆರಿಗೆ ಹಾಕುತ್ತೀರಿ. ಸಂಪನ್ಮೂಲವನ್ನು ಹೇಗೆ ರೂಢಿಸುತ್ತೀರು ಎನ್ನುವುದನ್ನು ಬಹುಶಃ 5ವರ್ಷದ ಅಡ್ವಾನ್ಸ್ ಬಜೆಟ್ ಬಗ್ಗೆ ಚರ್ಚೆ ಮಾಡತಕ್ಕ ಮೆದುಳು, ಬುದ್ಧಿ ಮಾಜಿ ಮುಖ್ಯಮಂತ್ರಿಗಳಿಗೆ ಮಾಜಿ ಕಂದಾಯ ಮಂತ್ರಿಗಳಿಗೆ ಇರುವಷ್ಟು ನನಗೆ ಇಲ್ಲ, ಆ ಬುದ್ಧಿಯೂ ಇಲ್ಲಿ, ಆ ಮೆದುಳೂ ಇಲ್ಲ. ಆಮೇಲೆ ರಾಜ್ಯಕ್ಕೆ ಒಂದು ಜಲನೀತಿ, ದೇಶಕ್ಕೆ ಒಂದು ಜಲನೀತಿ ಎಂದರೆ, ಮಾಜಿ ನೀರಾವರಿ ಮಂತ್ರಿಗಳೇ ಹೇಳಬೇಕು. ಈ ಜಲನೀತಿ ನನಗೆ ಗೊತ್ತಾಗುವುದಿಲ್ಲ. ಏಕೆಂದರೆ, ನಾನು ಸರಿಯಾಗಿ ಓದಲಿಲ್ಲ. ನಾನು ಏನು ಹೇಳಿದ್ದೇನೆಂದರೆ, ಜನರು ಕೊಟ್ಟ ಹಮವನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡುವುದೇ ಈ ಸರ್ಕಾರದ ನೀತಿ. ನಾವು 760 ಕೋಟಿ ರೂಪಾಯಿ ಖರ್ಚುಮಾಡಿದ್ದೇವೆಂದು ಹೇಳಿ, ಬರೀ ಒಂದು ಐಟಂನಲ್ಲೇ 7 ಕೋಟಿರೂಪಾಯಿ ಮಿಷನರಿ ಅಲ್ಲಿ ಬಂದ್ದದೆ. ಕಮಿಷನ್ ಸಿಕ್ಕುತ್ತದೆಯಲ್ಲಾ ಅದಕ್ಕಾಗಿ. ನೀವು ಇದನ್ನು ಸ್ವಲ್ಪ ಯೋಚನೆ ಮಾಡಬೇಕಾಗಿದೆ. ಒಂದು ಸತ್ಯವಾದ ಮಾತು ಹೇಳಿದರು, ಹೇಮಾವತಿ ಕಟ್ಟಿ ಮುಗಿಸಿದಿರಿ ನಂತರ ನಾನು ಬಂದತಕ್ಷಣ ಎಲ್ಲಾ ನೀರು ನಾನೇ ಬಿಟ್ಟು ಬಿಟ್ಟೆ ಟೋಪೋಷೀಟ್‌ನದ್ದು ಒಂದು ಎಸ್ಟಿಮೇಂಟಾ ಎಂದು ಹೇಳಿದರೆ, ಅಗುತ್ತದೆಯೇ? ಪೊಟೆನ್‌ಷಿಯಲ್ ಕ್ರಿಯೇಟ್ ಮಾಡಿದರೆ ಆಗುತ್ತದೆಯೇಯ ಪೊಟೆನ್‌ಷಿಯಲ್ ಕ್ರಿಯೇಟ್ ಮಾಡಿದರೆ ಆಗುತ್ತದೆಯೇ? ನರಸಿಂಹರಾಯರು ಬಂದರು ಅವರಿಗೆ ಒಂದು ಪೇಟ್ ಇಟ್ಟು ಬಿಟ್ಟರು. ನಾಳೆಬೆಳಿಗ್ಗೆ ಗುದ್ದಲಿ ಪೂಜೆ ಮಾಡಿಬಿಟ್ಟುತ್ತೇನೆ ಅಂದರೆ ಇದು ಹುಡುಗಾಟಿಕೆಯೋ ಅಥವಾ ಇದು ಮಕ್ಕಳ ಆಟವೇ?

I Cannot hunderstand Sir. As a seasoned Politicial and a former chief Minister of Karnatala Could it be possisle to a kept the To Sheet Estimate be lay the foundation stone and stant the work of upper Bhadra ಸಿದ್ದವನಹಳ್ಳಿ ನಿಜಲಿಂಗಪ್ಪನವರು ವಯಸ್ಸಾದವರು ಇವೆಲ್ಲಾ, ಈ ಮಾತು , ಆ ಭಾಷೆ ನಮಗಬ ಬರುತ್ತದೆ. ನಾನು ಸಾಹಿತಿ ಅಲ್ಲದಿದ್ದರೂ ಆ ಭಾಷೆಯನ್ ಅರ್ಥಮಾಡಿಕೊಳ್ಳೂಬಲ್ಲೆ ಇಷ್ಟು ಹೇಳುವುದಕ್ಕೆ ಇಚ್ಚೆಪಡುತ್ತೇನೆ. ಈ ರಾಜ್ಯದ ಜನತೆಗೆ ನೀರಾವರಿ ಬಗ್ಗೆ ನನ್ನಿಂದ ಅನ್ಯಾಯ ವಾಗುವುದಾದರೆ, ನಾನು ಈ ಸ್ಥಾನದಲ್ಲಿ 5 ನಿಮಿಷ ಕೂಡ ಇರುವುದಿಲ್ಲ. ನನ್ನ ಜೀವನದುದ್ದಕ್ಕೂ ಹೋರಾಟವೇ ನೀರಾವರಿ ನಾವು ಮಾಡಿದಿರಿ ಸನ್ಮಾನ್ಯ ನಂಜೇಗೌಡರು ಹೇಳಿದರು. ನಮ್ಮ ನಮ್ಮ ಶಕ್ತಿ ಪ್ರಕಾರ ನಾವು ಮಾಡಿದ್ದೇವೆ, ಕನಾನೇಕೆ 1964ರಲ್ಲಿ ನಿರ್ಣಯ ಮೂವ್ ಮಾಡಬೇಕಾಗಿತ್ತು? ಹುಚ್ಚು ಹಿಡಿದಿ ಮಾಡಬೇಕಾಗಿತ್ತೇ? ಆಗ ನನಗೆ 29 ವರ್ಷ ಮಾನ್ಯ ಹೆಗಡೆಯವರ ಕಾಲದಲ್ಲಿ ಏಕೆ ರಾಜಿನಾಮೆ ಕೊಟ್ಟುಹೋಗಬೇಕಾಗಿತ್ತು. ಹುಚ್ಚು ಹಿಡಿದು ಹೋಗಬೇಕಾಗಿತ್ತೇ

ನನ್ನಿಂದ ಈ ರಾಜ್ಯಕ್ಕೆ ಅನ್ಯಯ ಅಗುವುದಾದರೆ ನಾನು ಈ ಸ್ಥಾನದಲ್ಲಿ ಕೂರುವುದಕ್ಕ್ ಸಾಲಾಮುಕ್ಕು. ಆದರೆ ಒಂದು ಮಾತು ಹೇಳುತ್ತೇನೆ ನಿಮಗೆ ಎಷ್ಟೇ ಪಟ್ಟಭದ್ರಹಿತಾಸಕ್ತಿಗಳನ್ನು ಮೈಮೇಲೆ ಹಾಕಿಕೊಳ್ಳುವುದಾದರೆ ಇವತ್ತು ಸಂಪನ್ಮೂಲಗಳನ್ನು ರೂಢಿಸತಕ್ಕಂಥಾದ್ದಕ್ಕೆ ಈ ರಾಜ್ಯದಲ್ಲಿ ಯಾವ ಯಾರ ಸ್ವರೂಪದಿಂದ ಅಗಲಿ ನಾನು ನಿರ್ಭಯವಾಗಿ ಹೇಳುತ್ತೇನೆ ಬಂದವರು ಯಾರು ಇದ್ದಾರೋ ಅವರ ಅರ್ಶೀವಾದ ನನಗೆ ಬೇಕು ಅಷ್ಟೇ. ಇದನ್ನು ನಾನು ಡಿಕ್ಲೇರ್ ಮಾಡಿದ್ದೇನೆ. ಪಾಪ್ಯುಲಿಸ್ಟ್‌ಪ್ರೋಗ್ರಾಂ ನನಗೆ ಗೊತ್ತು ಅಂಗವಿಕಲರು, ಹೌದು ನಮ್ಮ ಹಾಗೆ ಎರಡು ಹೊತ್ತು ಅನ್ನ

ತಿನ್ನಬೇಕು ಅವನು. ಇವತ್ತು ಬಡವರು ಅಕ್ಕಿಯನ್ನು 7-8 ರೂಪಾಯಿಕೊಟ್ಟು ಕೊಂಡುಕೊಳ್ಳುವುದಕ್ಕೆ ಆಗುವುದಿಲ್ಲ, ಹೌದು ನಮ್ಮ ಹಾಗೆ ಅವರಿ ಅನ್ನ ತಿನ್ನಬೇಕು. ಹಮಾಲಿಗಳಿಗೆ ಮನೆ ಕಟ್ಟಿಸಿಕೊಡಬೇಕೆಂದು ನಾನು ಹೇಳಿದೆ. ಹೌದು ಆಮೇಲೆ ನಾಲ್ಕುನೇ ದರ್ಜೆ ನೌಕರರಿಗೆ ಮನೆ ಕಟ್ಟಿಸಿಕೊಡಬೇಕೌದು ಹೇಳಿದ ನಾನು ಹೌದು. ಒಬ್ಬ ಚೀಫ್‌ಸೆಕ್ರೆಟರಿಗೆ 9 ಸಾವಿರ 10ಸಾವಿರ ಸಂಬಳ ಬರುತ್ತದೆ. ಅವನು ಅಲ್ಲಿ ಮಣೆಯಮೇಲೆ ಕೂತುಕೊಳ್ಳುವವನಿಗೆ ಒಂದೂವರೆ ಎರಡು ಸಾವಿರ ರೂಪಾಯಿ ಸಂಬಳ ಬರುತ್ತದೆ ಅವನಿಗೆ ಏತಕ್ಕೆ ಕೊಡಬಾರದು? Are they not human beings ? with all these programmes, I will assure this House, i will see that these programmes so far as irrigation is concerned, what the stand I have taken all these thirty years, I will take the same stand and I will see the there projects are proceeded with all sincerty and with all speed.

ಈ ಮಾತನ್ನು ಹೇಳಿ ನಾನು ಒಂದು ಮಾತನ್ನುಹೇಳುತ್ತೇನೆ ಸ್ವಾಮಿ ಇವತ್ತು ಯಾವಯಾರ ಕೆಲಸಗಳನ್ನು ನಾನು ತಾತ್ಕಾಲಿಕವಾಗಿ ತಡೆ ಹಿಡಿದಿದ್ದೇನೆ ಸ್ವಾಮಿ ಇದಕ್ಕೆ ಅರ್ಥ ಕೊಟ್ಟಿದ್ದಾರೆ ಅಂದರೆ ನಮ್ಮ ದುಡ್ಡು ವಾಪಸ್ಸು ಕಳುಹಿಸಿದ್ದಾರೆ 13 ಕೋಟಿಯನ್ನು ಲೆಕ್ಕಾಚಾರ ಬೇಡವೇ ಸನ್ಮಾನ್ಯ ನಂಜೇಗೌಡ್ರೇ? ನಾನು ಒಂದು ತಿಂಗಳ ಎರಡು ತಿಂಗಳು ಕೆಲಸ ನಿಲ್ಲಿಸಿದ್ದು ದೊಡ್ಡ ಅಪರಾಧವೇ ಹಾಗಾರದೆ? ಇವತ್ತು ನಾನು ನನ್ನ ಅಧಿಕಾರಿಗಳಿಗೆ ಕಂಪ್ಲಿಮೆಂಟ್ಸ್ ಮಾಡುತ್ತೇನೆ ನಮ್ಮ ಇರಿಗೇಶನ್‌ಸೆಕ್ರೆಟರಿಗೆ ಮತ್ತು ಹಿರಿಯ ಅಧಿಕಾರಿಗಳಿಗೆ ಅವರು ಏನು ಕೆಲವರ ಜೊತೆ ನೆಗೋಷಿಯೇಟ್ ಮಾಡಿದರು ಅದರಿಂದ 19 ಕೋಟಿ ರೂಪಾಯಿಗಳನ್ನು ಸೇವ್‌ಮಾಡಿದ್ದಾರೆ, ನಾನು ಹೇಳಲಿಲ್ಲ ಅ ಡಿಟೈಲ್ಸ್‌ನ್ನು I must compliment those officers Rs. 19 crores they have saved, and the same contractors want to Come and execute the works now and they have given agreements. Is it not a contribution I have made to the State?

ನಾನು ಇಷ್ಟೇ ಹೇಳುತ್ತೇನೆ. ಬಸ್ಸುಗಳ ಮೇಲೆ ಬರೆಸುವವರಿಗೆ ನಾನು ಹೆದರುವುದಿಲ್ಲ, ನಾನು ಇದನ್ನೆಲ್ಲಾ ನೋಡಿದ್ದೇನೆ. ಇವೆಲ್ಲಾ ನನ್ನ ಗರಡಿಯಲ್ಲಿಯೇ ತಯಾರಾದವರು. ಟ್ರಿಬೂನಲ್ ಅವಾರ್ಡ್ ಆಗುತ್ತದೆ ಎಂದು ಹೇಳಿ ಅದಕ್ಕೆ ನಾವು ಪ್ರತಿಭಟನೆ ಮಾಡೋಣ ಮೈಸೂರಿನಲ್ಲಿ ಜನ ಬರಬೇಕೆಂದು ಹೇಳಿದರೆ ಮೂಯಸಂದ್ರದ ಹತ್ತಿರ 300 ಜನ ಇಲ್ಲಲಿಯ್ಯೋ ಹೋಗಯ್ಯ 1980ರಲ್ಲಿ ಹೆಂಡ ಕುಡಿದು ಓಟು ಕೊಟ್ಟವರು ಅವರಿಗೆ ನೀರು ಬಂದರೆ ಎಷ್ಟು ಹೋದರೆ ಎಷ್ಟು ಎಂದುವಾದ ಮಾಡಿದವರು ಇವತ್ತು ಹೋಗಿ ನಾನು ಜೈಲಿನಲ್ಲಿ ಕುಳಿತುಕೊಳ್ಳುತ್ತೇನೆ ಅಂದರೆ ಹೆದರಿ ಕೊಂಡುಬಿಡುತ್ತೇನೆಯೇ ನಾನು? I have seen enough these people and I know how to fight this battle.

ಅವರು ತಿಳಿದುಕೊಂಡಿರಬಹುದು ದೇವೇಗೌಡರು ನೀರಾವರಿಗೋಸ್ಕರ ರಾಜಿನಾಮೆ ಕೊಟ್ಟರು ಅದನ್ನೇ ನಾನು ಹಿಡಿದುಕೊಂಡು ಹೋಗಿಬಿಟ್ಟರೆ ಆಗುತ್ತದೆ ಎಂದು ಈ ರಾಜ್ಯದಲ್ಲಿ ಜನ ಸ್ವಲ್ಪ ನಂಬಬೇಕಾಗುತ್ತದೆ. ಒಬ್ಬ ಮನುಷ್ಯನಿಗೆ ಯಾವುದೇ ವಿಷಯದಲ್ಲಿ ಒಂದು ಕಮಿಟ್‌ಮೆಂಟ್ ಇರಬೇಕು. ಸ್ವಾಮಿ ನಾನು ತಮ್ಮಲ್ಲಿ ಕ್ಷಮೆ ಕೇಳುತ್ತೇನೆ, ಒಂದು ಕ್ಷೇತ್ರದಲ್ಲಿ ತಾವು ಗೆದ್ದು ಬರಬೇಕಾಗಿದ್ದರೆ ಅಲ್ಲಿ ಏನು 150 ಜನ 200 ಜನ ಇದ್ದಾರೋ ನಿಮ್ಮವರು ಗೊತ್ತಿಲ್ಲ, ಆದರೆ ಏತಕ್ಕೆ ತಾವು ಗೆದ್ದು ಬರುತ್ತೀರಿ? you have got some commitment in political life.

ನಮ್ಮ ನಮ್ಮದೇ ಅದಂತಹ ಒಂದು ಕಮಿಟ್‌ಮೆಂಟ್ ಇದೆ ನನಗೆ ಈಗ ಗೌಡರು ಎಲ್ಲಿ ನಿಂತುಕೊಂಡರೂ ಗೆದ್ದು ಬರುತ್ತಾರೆ. ನಾನು ಇದನ್ನು ಮಾತನಾಡಿದರೆ

ಹೆಚ್ಚಾಗುತ್ತದೆ ಎಂದು ಹೇಳಲಿಲ್ಲ One of the maiden speech you have made , you haver enlightend the House to so many new members who have not understood the problem was able to understand it you have made that contribution to the House.

ಆದರೆ ಅವರು ಮಾಡಿದ್ದು ಏನು ಅವರು ಮಾತ್ರ ಹೇಳಿದ್ದೆಲ್ಲಾ ಹೇಳಿಸಿಕೊಳ್ಳಬೇಕು ನಾನು ತಿರುಗಿಸಿ ಕೊಡುವುದಾದರೆ ತೆಗೆದುಕೊಳ್ಳುವುದಾಕ್ಕಾಗುವುದಿಲ್ಲ ಅಲ್ಲ ಆದ್ದರಿಂದ ನಾನು ಇಷ್ಟೇ ಹೇಳುತ್ತೇನೆ ಸನ್ಮಾನ್ಯ ಅಧ್ಯಕ್ಷರೇ ಎಲ್ಲಾ ಕೆಲಸಗಳನ್ನು ಪ್ರಾರಂಭ ಮಾಡುತ್ತೇನೆ. ಇದರಲ್ಲಿ ಯಾರೂ ಯಾರ ಸಂಶಯವನ್ನು ಇಟ್ಟು ಕೊಳ್ಳುವುದುಬೇಕಾಗಿಲ್ಲ. ಮಾಡುವಾಗ ವ್ಯವಸ್ಥಿತವಾಗಿ ಮಾಡುತ್ತೇನೆ. ಕೋಡಲ್‌ರೂಲ್ಸ್ ಪ್ರಕಾರ ನೀವೇ ಕೊಟ್ಟಿರುವ ಈ ಸದನ ಕೊಟ್ಟಿರುವ ಅಧಿಕಾರವನ್ನು ಚಲಾಯಿಸುತ್ತೇವೆ. ಇದರಲ್ಲಿ ಯಾರೂ ಸಂಶಯ. ಇಟ್ಟುಕೊಳ್ಳುವುದು ಬೇಕಾಗಿಲ್ಲ. ಯಾರೂ ಪಾಪ ಜೈಲಿಗೆ ಹೋಗಿ ಕುಳಿತುಕೊಳ್ಳುವುದು ಬೇಡ. ಇನ್ನು ಬೇಕಾದರೆ ಬಸ್ಸಿನಲ್ಲಿಬರೆಸಿಕೊಂಡು ತಿರುಗುತ್ತಾ ಇರಲಿ. I am prepared to face all those things and I am going to start all those works, I will tell you very frankly, there is no question of any apprehension so far as this issue is concerned.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಅಧ್ಯಕ್ಷರೇ, ಕಮಾನ್ಯ ಮುಖ್ಯಮಂತ್ರಿಗಳು ಒಂದೆರಡು ವಿಚಾರಗಳ ಬಗ್ಗೆ ಸ್ಪಷ್ಟೀಕರಣ ಕೊಟ್ಟರೆ ನಾನು ಬಹಳ ಸಂತೋಷ ಪಡುತ್ತೇನೆ. ಮೊದಲನೆಯದಾಗಿ, ವಿಶ್ವೇಶ್ವರಯ್ಯ ನಾಲೆಯ ಆಧುನೀಕರಣದ ಬಗ್ಗ ಮಾನ್ಯ ಮುಖ್ಯಮಂತ್ರಿಗಳು ನಮಗೆ ಭರವಸೆಯನ್ನು ಕೊಟ್ಟಿದ್ದಾರೆ. ಮೂರು ವರ್ಷಗಳ ಒಳಗಾಗಿ ಈ ಕೆಲಸವನ್ನು ಪ್ರಾರಂಭ ಮಾಡಿ ಮುಗಿಸಿಕೊಡುತ್ತೇವೆ. ಸಾಕಾದಷ್ಟು ಹಣವನ್ನು ಕೊಡುತ್ತೇನೆ ಎನ್ನುವ ಆಶ್ವಾಸನೆಯನ್ನು ಈಗಾಗಲೇ ಕೊಟ್ಟಿದ್ದಾರೆ. ಆದರೆ ನಮಗೆ ಬೇಕಾಗಿರತಕ್ಕಂಥಾದ್ದು ಹೋದವರ್ಷ ಅಂದರೆ 25 ಕೋಟಿ ರೂಪಾಯಿಗಳನ್ನು ಕೊಟ್ಟು ಮಂಜೂರಾತಿ ಮಾಡಿ ಅದರಲ್ಲಿ ಕೇವಲ 7 ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎನ್ನುವ ಅಶ್ವಾಸನೆ ಕೊಟ್ಟಿದ್ದಾರೆ. ಆ 32 ಕೋಟಿ ರೂಪಾಯಿಗಳನ್ನು ಎಲ್‌ಓಸಿ ಆಗಿ ಕೊಡಬೇಕೆಂದು ನಾನು ಕಳಕಳಿಯಾಗಿ ಕೇಳಿಕೊಳ್ಳುತ್ತೇನೆ. ಇದರಿಂದ ನಮ್ಮ ಕೊನೆಯ ಭಾಗದ ರೈತರು ಯಾರು ಇದ್ದಾರೆ ಮಳವಳ್ಳಿ, ಮದ್ದೂರು ಈ ಕಡೆಟೈಲ್ ಎಂಡರ್ಸ್‌ಗಳಿಗೆ ಬಹಳ ತೊಂದರೆ ಆಗಿದೆ. ದನ ಕರುಗಳು ನೀರು ಕುಡಿಯುವುದಕ್ಕೂ ನೀರಿನ ತೊಂದರೆ ಆಗಿದೆ. ನೀರನ್ನು ಬಿಡಿಸಿಕೊಳ್ಳಬೇಕು. ಮತ್ತು ಇಗ್ಗಲೂರು ಅಣೆಕಟ್ಟಿನ ಕೆಲಸವನ್ನು 1996ರ ಒಳಗಾಗಿ ಮುಗಿಸುತ್ತೇವೆ ಎನ್ನುವ ಅಶ್ವಾಸನೆಯನ್ನು ಕೊಟ್ಟಿದ್ದರು. ಅದನ್ನು ಮುಗಿಸಿ ಯಾವಾಗ ನೀರು ಕೊಡುತ್ತಾರೆ. ಮತ್ತೆಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಅನ್ನು ನಮ್ಮ ಹಿಂದಿನ ಸರ್ಕಾರದಲ್ಲಿ ಅವರೇ ನೀರಾವರಿ ಮಂತ್ರಿಗಳಾಗಿದ್ದಾಗ ಮಾಡಿದ್ದರು, ಅದರಲ್ಲಿ ಕೆಲವು ಏತ ನೀರಾವರಿ ಯೋಜನೆಗಳನ್ನು ತೆಗೆದುಕೊಂಡಿದ್ದರು. ಅದರಲ್ಲಿ ಆಡಳಿತಾತ್ಮಕ ಮಂಜೂರಾತಿ ಮತ್ತು ತಾಂತ್ರಿಕ ಮಂಜೂರಾತಿ ಆಗಿದ್ದಾರೂ ಕೂಡ 4-5 ವರ್ಷಗಳಿಂದ ಆ ಕಲಸಗಳನ್ನು ಕಾರ್ಯರೂಪಕ್ಕೆ ತೆಗೆದುಕೊಂಡಿಲ್ಲ. ಅಂತಹ ಒಂದು ಯೋಜನೆಗಳನ್ನು ಮುಗಿಸಿಕೊಡ್ತುತ್ತಾರೆಯೇ ಎನ್ನುವ ಆಶ್ವಾಸನೆಯನ್ನು ನಮಗೆ ಕೊಡಬೇಕು.

ನಂತರ, ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಬಿ.ಜಿ.ಪುರ ನಾಲೆಯ ಕೆಲಸ ಸುಮಾರು 2.25 ಕೋಟಿ ರೂಪಾಯಿಗಳ ಅಂದಾಜು ಸರ್ಕಾರಕ್ಕೆ ಬಂದಿದೆ. ಅದು ಆಡಿಷನಲ್ ಅಚ್ಚುಕಟ್ಟು ಏನೂ ಅಲ್ಲ. ಇರುವಂತಾದ್ದೇ. ಅದಕ್ಕೆ ನೀರು ಹಿಂದೆ ಬಿಡುತ್ತಿದ್ದರು. ನೀರು ಈಗ ನಿಂತು ಹೋಗಿದೆ. ಅದರ ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆ. ಆ ಕೆಲಸವನ್ನು ಮಾಡಿಸಿಕೊಡಬೇಕೆಂದು ನಾನು ಮುಖ್ಯ ಮಂತ್ರಿಗಳಲ್ಲಿ ಕೇಳಿ ಕೊಳ್ಳುತ್ತೇನೆ.

ಶ್ರೀ ಕೆ. ವೆಂಕಟೇಶ್ (ಪಿರಿಯಾಪಟ್ಟಣ) : ಮಾನ್ಯ ಅಧ್ಯಕ್ಷರೇ, ನಮ್ಮ ಸಭಾನಾಯಕರಿಗೆ ಗೊತ್ತಿರತಕ್ಕಂಥ ವಿಚಾರ ಪಿರಿಯಾಪಟ್ಟ ಏತ ನೀರಾವರಿ ಯೋಜನೆ ಅವರ ಕಾಲದಲ್ಲಿಯೇ ಅದು ಕೆಲಸ ಪ್ರಾರಂಭ ಆಗಿದೆ. ನಾನು ಅವರಿಂದ ಒಂದು ಸ್ಪಷ್ಟೀಕರಣ ಮತ್ತು ಭರವಸೆಯನ್ನು ಬಯಸುತ್ತೇನೆ. ತಾವು ಆದಷ್ಟು ಬೇಗ ಆ ಕೆಲಸವನ್ನು ಮಾಡಬೇಕು ಮತ್ತು ಎಷ್ಟು ದಿವಸಗಳಲ್ಲಿ ಆ ಕೆಲಸವನ್ನು ಮಾಡಿ ಮುಗಿಸಿಕೊಡುತ್ತೀರಿ ಎನ್ನುವ ಮಾತನ್ನು ದಯಮಾಡಿ ಸಭಾನಾಯಕರು ಹೇಳಬೇಕು ಮತ್ತು ಆ ಯೋಜನೆ ಬಹಳ ದೊಡ್ಡ ಯೋಜನೆ. ಇದು ಅವರಿಗೆ ಎಲ್ಲಾ ಗೊತ್ತಿರತಕ್ಕಂಥ ವಿಚಾರ. ಅದು ಈಗಾಗಲೇ ಬಹಳಷ್ಟು ಕೆಲಸ ಆಗಿದೆ. ಮತ್ತು ಸಾಕಷ್ಟು ಹಣ ಸಹ ಅದಕ್ಕೆ ಖರ್ಚು ಮಾಡಿದ್ದಾರೆ. ದಯಮಾಡಿ ನಾನು ಸಭಾನಾಯಕರಲ್ಲಿ ಪ್ರಾರ್ಥನೆ ಮಾಡುತ್ತೇನೆ ಎಷ್ಟು ದಿವಸಗಳಲ್ಲಿ ಆ ಯೋಜನೆಯನ್ನು ಪೂರ್ಣ ಮಾಡುತ್ತೀರಿ ಎಂಬುದನ್ನೂ ದಯಮಾಡಿ ಹೇಳಬೇಕು.

ಶ್ರೀ ಎಸ್. ಕೃಷ್ಣಪ್ಪ (ಬನ್ನೂರು) : ಮಾನ್ಯ ಅಧ್ಯಕ್ಷರೇ, ಹಳೆಯ ಅಣೆಕಟ್ಟು ನಾಲೆಗಳೆಲ್ಲಾ ಕೆಟ್ಟು ಹೋಗಿ ಹೂಳು ತುಂಬಿಕೊಂಡು ಸರ್ಕಾರ ಅದರ ಸುಧಾರಣೆಗೋಸ್ಕರ ಕಾಮಗಾರಿ ಪಟ್ಟಿಯನ್ನು ಕೇಳಿತ್ತು. ಅದನ್ನು 4700 ಮತ್ತು ಇನ್ನೊಂದು 254ರ ಹೆಡ್‌ನ ಅಡಿಯಲ್ಲಿ ಕೆಲವು ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಸರ್ಕಾರಕ್ಕೆ ಈಗಾಗಲೇ ಅದರ ಪಟ್ಟಿ ಕೂಡ ಬಂದಿದೆ. ಕಳೆದ ಸಾರಿ ಇಟ್ಟಿದ್ದ ಹಣವನ್ನು ಇನ್ನೂ ಬಿಡುಗಡೆ ಮಾಡಿಲ್ಲ. ಆದ್ದರಿಂದ ಈ ಸಾರಿ ಆದರೂ ಈ ಹಳೆಯ ನಾಲೆಗಳನ್ನು ಶುದ್ಧೀಕರಣ ಮಾಡುವುದಕ್ಕೆ ಶೀಘ್ರವಾಗಿ ಹಣವನ್ನು ಬಿಡುಗಡೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತು ಏನು ಹಳೆಯ ನಾಲೆಗಳಿಗೆ ಮೈಂಟೆನೆನ್ಸ್ ಗ್ರ್ಯಾಂಟ್ ಎಂದು ಏನು ಇದೆ ಎಕರೆಗೆ ಬರೀ 60 ರೂಪಾಯಿಗಳಂತೆ ಕೊಡುತ್ತಿದ್ದಾರೆ, ಬಹುಶಃ ಈಗಿನ ಕಾಸ್ಟ್ ಆಫ್ ಕೆಲಸವನ್ನು ನೋಡಿದಾಗ ಆ ಹಣದಲ್ಲಿ ಹಳೆಯ ನಾಲೆಗಳಲ್ಲಿ ಹೂಳು ಎತ್ತುವುದು ಆಗಲೀ ನಾಲೆ ಏರಿಗಳನ್ನು ರಿಪೇರಿ ಮಾಡುವುದೇ ಆಗಲಿ ಮತ್ತು ಕೂಡುಗಳನ್ನು ಸರಿ ಮಾಡುವುದೇ ಆಗಲಿ ಸಾಧ್ಯವಾಗುತ್ತಿಲ್ಲ. ಆದ್ದರಿಂದ ಮೈಂಟೆನೆನ್ಸ್ ಗ್ರ್ಯಾಂಟ್ ಹೆಚ್ಚು ಮಾಡಬೇಕು. ಎಕರೆವಾರು ಜಾಸ್ತಿ ಮಾಡಿ ಹಳೆಯ ನಾಲೆಗಳನ್ನು ಶುದ್ಧೀಕರಣ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇನ್ನು ನನ್ನ ಕ್ಷೇತ್ರಕ್ಕೆ ಬರತಕ್ಕಂಥ ಬ್ರ್ಯಾಂಚ್ ಏನು ಇದೆ ಅದು ಕೆ.ಆರ್.ಎಸ್. ಕಟ್ಟಿದಾಗ ತೆಗೆದುಕೊಂಡಂತಹ ಬ್ರ್ಯಾಂಚ್ ಅದು.. ಅದು ನನ್ನ ಕ್ಷೇತ್ರದಲ್ಲಿ ಬರುತ್ತದೆ. ಅದಕ್ಕೆ ಸರ್ಕಾರ ಹಣವನ್ನು ಒದಗಿಸಿ ಈ ಕಾರ್ಯವನ್ನು ತ್ವರಿತವಾಗಿ ಮಾಡಿಕೊಡಬೇಕೆಂದು ನಾನು ಸಭಾನಾಯಕರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ) : ಮಾನ್ಯ ಅಧ್ಯಕ್ಷರೇ, ಸಣ್ಣ ನೀರಾವರಿ ಬಗ್ಗೆ ನಮಗೆ ಸ್ಪಷ್ಟವಾದಂತಹ ಉತ್ತರ ಸಿಗಲಿಲ್ಲ ಅದರಲ್ಲೂ ಮುಖ್ಯವಾಗಿ ನಮ್ಮ ಕೋಲಾರ ಜಿಲ್ಲೆ, ಬೆಂಗಳೂರು ಜಿಲ್ಲೆ ತುಮಕೂರು ಜಿಲ್ಲೆ ಹಾಗೂ ಚಿತ್ರದುರ್ಗ ಕೆರೆಗಳಲ್ಲಿ ಹೂಳು ಎತ್ತತಕ್ಕಂಥ ಕಾರ್ಯಕ್ರಮ ಏನು ಇದೆ ಅದು ಬಹಳ ಮುಖ್ಯವಾಗಿದೆ ಈ ಸಣ್ಣ ನೀರಾವರಿಯಲ್ಲಿ, ಕೆರೆಗಳಲ್ಲಿ ಧೂಳು ತುಂಬಿದೆ ಅದರ ಕಡೆ ನೋಡಬೇಕು. ನಾನು ಎರಡು ಸಲ ಈ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಮಾನ್ಯ ಮುಖ್ಯ ಮಂತ್ರಿಗಳು ಅಪ್ಪರ್ ಭದ್ರಾ ಸರ್ವೆ ಮಾಡುತ್ತೇನೆಂದು ಹೇಳಿದ್ದಾರೆ. ಸರ್ವೆ ಮಾಡುವಾಗ ನಮ್ಮ ಕೋಲಾರ ಜಿಲ್ಲೆ ಕೂಡ ಅವರ ಗಮನದಲ್ಲಿ ಇರಬೇಕು. ಅವರು ಎರಡು ಜಿಲ್ಲೆಗಳನ್ನು ಮಾತ್ರ ಪ್ರಸ್ತಾಪ ಮಾಡಿದ್ದಾರೆ, ನಮ್ಮ ಕೋಲಾರ ಜಿಲ್ಲೆ ಕೂಡ ಆ ಯೋಜನೆಯಲ್ಲಿದೆ. ಸರ್ವೆ ಮಾಡುವಾಗ ಕೋಲಾರ ಜಿಲ್ಲೆಯನ್ನು ಸರ್ವೆ ಮಾಡಿಸಬೇಕು ಎಂದು ಹೇಳತಕ್ಕಂಥಾದ್ದು ಮತ್ತು ಕಾವೇರಿಯಿಂದ ನಮ್ಮ ಜಿಲ್ಲೆಗೆ ಕುಡಿಯಲು ನೀರು ಕೊಡಬೇಕು. ...

ಅಧ್ಯಕ್ಷರು : ನಿಮಗೆ ಚಪಲ, ಕಾವೇರಿ ಎಲ್ಲಿ ಕೋಲಾರ ಎಲ್ಲಿ?

6.00 ಪಿ.ಎಂ.

ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಸನ್ಮಾನ್ಯ ಅಧ್ಯಕ್ಷರೆ, ಚಕ್ರಾ ವರಾಹಿ ಯಾವುದೇ ಪ್ರಾಜೆಕ್ಟಗಳನ್ನು ಮಾಡಿ, ತುಂಗಾ ಮೇಲ್ದಂಡೆ ಯೋಜನೆಯನ್ನು ಮಾಡಿ ನಾನು ನಮ್ಮ ಕಾಡು ಮತ್ತು ನಾಡನ್ನು ಕಳೆದುಕೊಂಡು ಒಂದು ನತದೃಷ್ಟ ಕ್ಷೇತ್ರದಿಂದ ಬಂದಿದ್ದೇನೆ. ನಮ್ಮಲ್ಲಿ ತುಂಗಾ ನದಿ, ಭದ್ರಾ ನದಿ ಹರಿಯುತ್ತಿದೆ. ಎರಡೂ ದಂಡೆಯಲ್ಲಿರುವ ನಾವು ಅದನ್ನು ನೋಡಿಕೊಂಡು ಕಣ್ಣೀರು ಸುರಿಸುತ್ತಾ ಹಾಗೇ ಇದ್ದೇವೆ. ನನ್ನ ಕ್ಷೇತ್ರದಲ್ಲಿ ಏಳು ಏತ ನೀರಾವರಿ ಯೋಜನೆಗಳನ್ನು ಬಹಳ ವರ್ಷದಿಂದ ಮಾಡಿದ್ದು, ಅದಕ್ಕೆ ಮೇನ್ಟನೆನ್ಸ್ ಗ್ರ್ಯಾಂಟ್ ಕೊಡಲಿಕ್ಕೆ ನಿಮ್ಮ ಹತ್ತಿರ ಹಣ ಇಲ್ಲ. ಇದರ ಬಗ್ಗೆ ನಾನು ಸಣ್ಣ ನೀರಾವರಿ ಸಚಿವರ ಜೊತೆ ಮಾತನಾಡಿದ್ದೇನೆ. ಅಲ್ಲಿ ಇರತಕ್ಕಂಥ ಮೋಟಾರ್ ಗಳೇ ಓಡುವುದಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : 5 ವರ್ಷಗಳಲ್ಲಿ ಹಳೆ ಲಿಫ್ಟ್ ಇರಿಗೇಷನ್ ಮೇಂಟೆನೆನ್ಸ್ಗೆ ಖರ್ಚು ಮಾಡಿರುವ ಹಣದ ಪಟ್ಟಿಯನ್ನು ತೆಗೆಸುತ್ತೇನೆ. ಓಲ್ಡ್ ಲಿಫ್ಟ್ ಇರಿಗೇಷನ್ ನ ಪಂಪ್ಸ್ ರಿಪೇರಿಗೆಂದು ಒಂದು ಲಕ್ಷ, ಒಂದೂವರೆ ಲಕ್ಷ, ಎರಡು ಲಕ್ಷ ಹೀಗೆ ಖರ್ಚು ಮಾಡಲಾಗಿದೆ. ಹಿಂದೆ ನಾನು officially I have written a letter. 60% of the money is dwindling. ಹಣ ಸೋರಿ ಹೋಗುತ್ತಿದೆ ಎಂದು ಬರೆದರೆ ಏನೂ ಉತ್ತರವಿಲ್ಲ. ಯಾರಿಗೆ ಬೇಕಾಗಿದೆ ಇದು? ಇದರ ಬಗ್ಗೆ ಒಂದು ಆಶ್ವಾಸನೆಯನ್ನು ಕೊಡುತ್ತೇನೆ, ಪಕ್ಷ ಬೇಧ ಇಲ್ಲದೆ ಎಲ್ಲಾ ಶಾಸಕರುಗಳನ್ನು ಕರೆಯಿಸಿ ಆಯಾ ಜಿಲ್ಲಾ ವೈಸ್, ಸಣ್ಣ ನೀರಾವರಿ ಸಮಸ್ಯೆ ಇರಬಹುದು, ದೊಡ್ಡ ನೀರಾವರಿ ಸಮಸ್ಯೆ ಇರಬಹುದು, ಕೂತು ಚರ್ಚೆ ಮಾಡಿ ಬಜೆಟ್ ನಲ್ಲಿ ಪ್ರಾವಿಷನ್ ಇದ್ದರೆ ಸಾಕು, ಅಮೌಂಟನ್ನು ಎನ್ಹಾನ್ಸ್ ಮಾಡುವುದಕ್ಕೆ ಪ್ರಯತ್ನ ಮಾಡಬಹುದು.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ನಾನು ತಮ್ಮ ಮೂಲಕ ಸಭಾನಾಯಕರ ಗಮನಕ್ಕೆ ತರುವುದಿಷ್ಟೇ, ಏನು ಹಣವನ್ನು ಇನ್ ವೆಸ್ಟ್ ಮಾಡಿದ್ದಾರೆ, ಅದರಲ್ಲಿ ಎಷ್ಟು ಎಕರೆಗೆ ನೀರು ಫೀಡ್ ಆಗಬೇಕೆಂದು ಗುರಿ ಹಾಕಲಾಗಿತ್ತೋ, ಆ ಭೌತಿಕ ಗುರಿಯನ್ನು ಇವರು ತಲುಪಲಿಲ್ಲ. ಅದರ ಬಗ್ಗೆ ದಯಮಾಡಿ ಆ ಭೌತಿಕ ಗುರಿಯನ್ನು ತಲುಪಿಸಬೇಕೆಂದು ಕೇಳುತ್ತೇನೆ. ಇವು ಬಹಳ ಹಳೆಯ ಯೋಜನೆಗಳು. ನಾನು ಒಂದು ವಿನಂತಿ ಮಾಡಿ ಕೊಳ್ಳುವುದೇನೆಂದರೆ, ಒಂದು ಸಂಸ್ಕೃತಿಯೇ ನಾಶವಾಗಿ ಹೋಗುತ್ತಿದೆ. ವಿಶಿಷ್ಟವಾಗಿರತಕ್ಕಂಥ, ಕುವೆಂಪುರವರು ಹುಟ್ಟಿರತಕ್ಕಂಥ, ಗೋಪಾಲರ ಗೌಡರು ಇದ್ದಂಥ ......

ಅಧ್ಯಕ್ಷರು : ಸ್ಪಷ್ಟೀಕರಣ ಕೇಳಿ ಎಂದರೆ ನೀವು ಭಾಷಣ ಹೊರಟುಬಿಟ್ಟೀರಿ; ಸ್ಪಷ್ಟೀಕರಣ ಕೇಳಿ ಅಂದರೆ, ಕುವೆಂಪು ಏಕೆ ಬರಬೇಕು ಹೇಳಿ?

ಶ್ರೀ ಅರಗ ಜ್ಞಾನೇಂದ್ರ : ನಾನು ಭಾಷಣ ಮಾಡುವುದಕ್ಕೆ ಹೋಗುವುದಿಲ್ಲ. ತುಂಗಾ ಮೇಲ್ದಂಡೆ ಯೋಜನೆಯನ್ನು ಬೇಕಾದರೆ ಮಾಡಿ. ಆದರೆ ಮಾಲತಿ ನದಿಗೆ ಡ್ಯಾಮ್ ಕಟ್ಟಿ ರಿಸರ್ವಾಯರ್ ಮಾಡುವ ಬಗ್ಗೆ ನಮ್ಮದು ಸಂಪೂರ್ಣ ಪ್ರತಿಭಟನೆ ಇದೆ. ಅದಕ್ಕಾಗಿ ಈ ಕಾರ್ಯಕ್ರಮವನ್ನು ದಯಮಾಡಿ ಹಾಕಿಕೊಳ್ಳಬೇಡಿ ಎಂದು ನನ್ನ ವಿನಂತಿ. ಕೃಷ್ಣಾ ಬೇಸಿನ್‌ನಲ್ಲಿ ಸಾವಿರಾರು ಕೋಟಿ ರೂಪಾಯಿಗಳನ್ನು ವಿನಿಯೋಗ ಮಾಡುತ್ತೇವೆಂದು ಹೇಳುತ್ತೀರಿ, ಅದರಲ್ಲಿ ಒಂದೆರಡು ಕೋಟಿ ರೂಪಾಯಿಗಳನ್ನು ಕೊಟ್ಟು ನಮ್ಮ ಕಡೆ ಐದಾರು ಏತ ನೀರಾವರಿ ಯೋಜನೆಗಳನ್ನು ಮಾಡಿ ತೀರ್ಥಹಳ್ಳಿ,

ಹೊಸನಗರ ಜನರುಗಳಿಗೆ ಉಪಕಾರ ಮಾಡಬೇಕೆಂದು ಅಧ್ಯಕ್ಷರ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಸಂಗಣ್ಣ ಅಮರಪ್ಪ ಕರಡಿ (ಕೊಪ್ಪಳ) : ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಕೊಪ್ಪಳ ತಾಲ್ಲೂಕಿನ ಹಿರೇಹಳ್ಳ ಯೋಜನೆಗೆ 95 ಕೋಟಿ ರೂಪಾಯಿಗಳನ್ನು ಅಂದಾಜು ಮಾಡಿದ್ದು ಅದರಲ್ಲಿ ಈಗಾಗಲೇ 35 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಕೆಲಸವನ್ನು ಮಾಡಲಾಗುತ್ತಿದೆ. ಈ ಯೋಜನೆಯಿಂದ ಸುಮಾರು 21 ಸಾವಿರ ಎಕರೆ ಜಮೀನಿಗೆ ನೀರಾವರಿ ಆಗತಕ್ಕಂಥ ಯೋಜನೆ ಇದೆ. ಈಗ ನಾನು ಮುಖ್ಯ ಸಭಾನಾಯಕರಲ್ಲಿ ಕೋರುವುದೇನೆಂದರೆ, ಇದಕ್ಕಾಗಿ ಈ ಸಾರಿ ಕಡಿಮೆ ಹಣ ಇಡಲಾಗಿದೆ. ಆದುದರಿಂದ ಈ ಸಾರಿ ಸ್ವಲ್ಪ ಹೆಚ್ಚಿಗೆ ಹಣ ಕೊಟ್ಟು ನಮ್ಮ ರೈತರುಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಕೇಳುತ್ತೇನೆ. ಆಮೇಲೆ, ತುಂಗಭದ್ರ ಬ್ಯಾಕ್ ವಾಟರ್ ನಲ್ಲಿ ಏತ ನೀರಾವರಿ ಮಾಡುವುದಕ್ಕೆ ಅನುಕೂಲವಿರುವುದರಿಂದ ಅದನ್ನೂ ಸಭಾನಾಯಕರು ಮಾಡುವುದಕ್ಕೆ ಸಹಾಯ ಮಾಡಬೇಕೆಂದು ಕೇಳಿಕೊಂಡು ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಶಿವಪ್ಪ (ಹರಿಹರ): ಮಾನ್ಯ ಅಧ್ಯಕ್ಷರೇ, ಭದ್ರ ನಾಲೆ ಒಡೆದು ಹೋಗಿರುವ ಬಗ್ಗೆ ಈಗಾಗಲೇ ಮಾನ್ಯ ಸದಸ್ಯರು ಹೇಳಿರುವುದರಿಂದ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ರಿಪೇರಿ ವರ್ಕನ್ನು ಎಷ್ಟು ತಿಂಗಳಲ್ಲಿ ಮುಗಿಸಿ ನೀರನ್ನು ಒದಗಿಸಲಾಗುತ್ತದೆ ಎಂದು ಕೇಳುವುದರ ಜೊತೆಗೆ ಒಂದು ವಿಷಯ ಹೇಳುವುದೇನೆಂದರೆ, ಅಲ್ಲಿ ಸಿಮೆಂಟ್ ಕೊರತೆ ಇದೆ, ಸಿಮೆಂಟ್ ಇದ್ದರೆ ಕೆಲಸವನ್ನು ತ್ವರಿತವಾಗಿ ಮಾಡಬಹುದೆಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಆದ್ದರಿಂದ ಎಷ್ಟು ದಿವಸದಲ್ಲಿ ಅಗತ್ಯವಿರುವ ಸಿಮೆಂಟನ್ನು ಒದಗಿಸಿಕೊಟ್ಟು ಎಷ್ಟು ದಿವಸದಲ್ಲಿ ಅದನ್ನು ರಿಪೇರಿ ಮಾಡಿಸಲಾಗುತ್ತದೆಂದು ಮಾನ್ಯ ಮುಖ್ಯ ಮಂತ್ರಿಗಳನ್ನು ತಮ್ಮ ಮುಖಾಂತರ ಕೇಳುತ್ತೇನೆ.

ಶ್ರೀ ಜಿ.ಬಿ. ಶಿವಕುಮಾರ್ (ಕುರುಗೋಡು) : ಮಾನ್ಯ ಅಧ್ಯಕ್ಷರೇ, ವಿಶ್ವೇಶ್ವರಯ್ಯ ನಾಲಾ ಪ್ರದೇಶದಲ್ಲಿ ಬೆಳೆದಿರತಕ್ಕಂಥ ಬೆಳೆಯನ್ನು ಉಳಿಸಿಕೊಳ್ಳುವುದಕ್ಕೆ ಕೆ.ಆರ್.ಎಸ್.ನಲ್ಲಿ ನೀರು ಇಲ್ಲದೆ ಇರುವುದರಿಂದ ಬಹಳ ತೊಂದರೆಯಾಗಿದೆ. ಆದುದರಿಂದ, ಹೇಮಾವತಿ ನದಿಯಿಂದ 5 ಟಿ.ಎಂ.ಸಿ ಎಫ್.ಟಿ.ಯಷ್ಟು ನೀರನ್ನಾದರೂ ಬಿಟ್ಟರೆ 80 ಸಾವಿರ ಎಕರೆಯಲ್ಲಿ ಬೆಳೆದಿರುವ ಕಬ್ಬು, ಭತ್ತವನ್ನು ಉಳಿಸಿಕೊಳ್ಳುವ ಹಾಗಾಗುತ್ತದೆ. ಅಧಕ್ಕಾಗಿ ಇದರ ಬಗ್ಗೆ ದಯಮಾಡಿ ಮಾನ್ಯ ಮುಖ್ಯ ಮಂತ್ರಿಗಳು ಒಂದು ಆಶ್ವಾಸನೆ ಕೊಡಬೇಕು. ಆಮೇಲೆ, ಎರಡನೆಯದಾಗಿ, 1979ನೇ ಇಸವಿಯಲ್ಲಿ ಮಂಡ್ಯ ಜಿಲ್ಲಾ ರೈತ ಮುಖಂಡರು ಹಾಗೂ ಸರ್ಕಾರದ ಅಂದಿನ ಮುಖ್ಯ ಮಂತ್ರಿಗಳಾದ್ದ ಮಾನ್ಯ ದೇವರಾಜ ಅರಸರ ಮಧ್ಯೆ ಒಂದು ಕರಾರು ಆಗಿತ್ತು, ಅದೇನೆಂದರೆ, ವರುಣಾ ನಾಲೆಗೆ ಏನು ಹಣವನ್ನು ಒದಗಿಸಲಾಗುತ್ತದೆಯೋ ಅಷ್ಟು ಪ್ರಮಾಣದ ಹಣವನ್ನು ಮಂಡ್ಯ ಜಿಲ್ಲೆಯ ನೀರಾವರಿ ಆಧುನೀಕರಣಕ್ಕೆ ಒದಗಿಸುತ್ತೇವೆಂದು ಹೇಳಿದ್ದರು. ಆದರೆ, ಅದರಲ್ಲಿ ಏರುಪೇರು ಆಗಿರುವುದರಿಂದ, ಆ ಬ್ಯಾಕ್‌ಲಾಗ್‌ನ್ನು ಪೂರ್ತಿ ಮಾಡಿ ಆಧುನೀಕರಣಕ್ಕೆ ಹಣ ಕೊಡಬೇಕೆಂದು ಒಂದು ಪ್ರಾರ್ಥನೆ. ಆಮೇಲೆ, ಸಂಪರ್ಕ ನಾಲೆ ಎನ್ನುವುದಕ್ಕೆ ಜನ್ಮ ಕೊಟ್ಟಂಥವರು ಈ ನಮ್ಮ ಮುಖ್ಯ ಮಂತ್ರಿಗಳು, ಆಗ ಅವರು ನೀರಾವರಿ ಸಚಿವರಾಗಿದ್ದರು ಅದರಿಂದ ನಮ್ಮ ವಿಶ್ವೇಶ್ವರಯ್ಯ ನಾಲೆಗೆ 800 ಕ್ಯೂಸೆಕ್ಸ್ ಹೆಚ್ಚು ನೀರು ಸಿಗುತ್ತದೆ. ಇದರಿಂದ ಮದ್ದೂರು, ಮಳವಳ್ಳಿ, ಬನ್ನೂರ್ ಕಡೆ ಇರುವ ಟೈಲ್ ಎಂಡರ್ಸ್ಗೆ ಅನುಕೂಲವಾಗುತ್ತದೆ. ಅವರೇ ಇಂದು ಮುಖ್ಯ ಮಂತ್ರಿಯಾಗಿರುವುದರಿಂದ, ಅದನ್ನು ತ್ವರಿತವಾಗಿ ಮುಗಿಸಬೇಕೆಂದು ಇನ್ನೊಂದು ಪ್ರಾರ್ಥನೆ, ಆಗಲೇ ಮಾನ್ಯ ಸದಸ್ಯರು ಹೇಳಿದ ಹಾಗೆ ಮೇಂಟೆನೆನ್ಸ್ ಹಣವನ್ನು ಜಾಸ್ತಿ ಮಾಡಬೇಕಾಗಿದೆ. ಮತ್ತೊಂದು ಏನೆಂದರೆ, ನಿರುದ್ಯೋಗಿ ಇಂಜಿನಿಯರ್‌ಗಳು ಸಣ್ಣ

ಪುಟ್ಟ ಕಂಟ್ರಾಕ್ಟಗಳನ್ನು ಮಾಡುವುದರ ಮೂಲಕ ಜೀವನವನ್ನು ನಡೆಸುತ್ತಿದ್ದರು. ಆದರೆ ಈಗ ಅವರು 2 ಲಕ್ಷ ರೂಪಾಯಿಗಳ ಸಾಲ್ವೆನ್ಸಿ ಸರ್ಟಿಫಿಕೇಟ್ ತರಬೇಕು ಮತ್ತು ಇನ್ನಿತರ ಕೆಲವು ನಿಬಂಧನೆಗಳನ್ನು ಹಾಕಿರುವುದರಿಂದ ಅವರಿಗೆ ಬಹಳ ತೊಂದರೆಯಾಗಿದೆ. ಈ ನಿಯಮಗಳನ್ನು ಸ್ವಲ್ಪ ಸಡಿಲಿಸಿ ನಿರುದ್ಯೋಗಿ ಇಂಜೀನಿಯರ್‌ಗಳಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಬೇಕೆಂದು ಕೇಳುತ್ತೇನೆ. ಆಮೇಲೆ, ನೀರಾವರಿ ಪ್ರದೇಶದ ರಸ್ತೆಗಳನ್ನು ಜಿಲ್ಲಾ ಪರಿಷತ್ತಿಗೆ ವಹಿಸಿಕೊಟ್ಟಿರುವುದರಿಂದ ಆ ರಸ್ತೆಗಳನ್ನು ಕೇಳುವವರು ಇಲ್ಲದ ಹಾಗಾಗಿದೆ. ಆದುದರಿಂದ ಆ ಪ್ರದೇಶದ ರಸ್ತೆಗಳನ್ನು ಇಲಾಖೆಗೆ ವಾಪಸ್ ತೆಗೆದುಕೊಂಡರೆ ದುರಸ್ತಿ ಮಾಡಲಿಕ್ಕೆ ಅನುಕೂಲವಾಗುತ್ತದೆ. ಇದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಸ್ಪಷ್ಟಪಡಿಸಬೇಕೆಂದು ಕೇಳುತ್ತೇನೆ.

ಡಾ. ಎಂ. ಶಂಕರನಾಯಕ್ (ನೆಲಮಂಗಲ) : ಮಾನ್ಯ ಅಧ್ಯಕ್ಷರೇ, ಕಳೆದ ಮೂರು ದಿವಸಗಳಿಂದ ಈ ಸದನದಲ್ಲಿ ನೀರಾವರಿಗೆ ಚರ್ಚೆ ಕೇಳುತ್ತಿದ್ದೇವೆ. ಬೆಂಗಳೂರು ಮತ್ತು ಕೋಲಾರ ಜಿಲ್ಲೆಗೆ ಈ ಅದೃಷ್ಟ ಇಲ್ಲವೆಂದು ನಾವು ಭಾವಿಸುತ್ತೇವೆ. ಈ ಜಿಲ್ಲೆಗಳಲ್ಲಿ ಯಾವುದೇ ನದಿಯಾಗಲೀ, ಏತ ನೀರಾವರಿಯಾಗಲಿ ಡ್ಯಾಮ್ ಗಳೂ ಇಲ್ಲ, ಈ ಎರಡೂ ಜಿಲ್ಲೆಗಳಲ್ಲಿ ಇರತಕ್ಕಂಥಾದ್ದು ಬರೀ ಕೆರೆಗಳು. ಇದು ಸಣ್ಣ ನೀರಾವರಿಗೆ ಬರುತ್ತದೆ. ತಮಗೆ ಗೊತ್ತಿದ್ದ ಹಾಗೆ ಕೆರೆಗಳಲ್ಲಿ ಹೂಳು ಎತ್ತುವ ಕಾರ್ಯಕ್ರಮದ ಬಗ್ಗೆ ಕಳೆದ ಆರೇಳು ವರ್ಷಗಳಿಂದ ಕೇಳುತ್ತಿದ್ದೇವೆ, ನಾವು ಜಿಲ್ಲಾ ಪರಿಷತ್ತಿನಲ್ಲಿದ್ದಾಗ ವರ್ಲ್ಡ್‌ಬ್ಯಾಂಕ್ ಯೋಜನೆಯಿಂದ ಈ ಕಾರ್ಯಕ್ರಮಗಳನ್ನು ಹಾಕಿ ರೈತರುಗಳಿಗೆ ಅನುಕೂಲ ಮಾಡಬೇಕೆಂದು ಹೇಳಲಾಗಿತ್ತು. ಆ ಕೆಲಸವೂ ಆಗಲಿಲ್ಲ, ಜೊತೆಗೆ ಮಾನ್ಯ ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿರುವ ಬಹಳ ಕೆರೆಗಳ ಜಮೀನನ್ನು ಒತ್ತು ಮಾಡಿಕೊಂಡಿದ್ದಾರೆ, ಈ ಬಗ್ಗೆ ಸಂಬಂಧಪಟ್ಟ ಇಲಾಖೆಯ ಇಂಜೀನಿಯರ್ಗಳೂ ಕೇಳುವುದಿಲ್ಲ, ಗ್ರಾಮಪಂಚಾಯಿತಿಯವರೂ ಕೇಳುವುದಿಲ್ಲ. ಒತ್ತುವರಿ ಮಾಡಿದ ಜಮೀನುಗಳು, ಮಳೆಗಾಲದಲ್ಲಿ ಕೆರೆಯಲ್ಲಿ ನೀರು ನಿಂತಾಗ ಮುಳುಗುತ್ತದೆಂದು ಕೆರೆಯ ಕೋಡಿಗಳನ್ನೇ ಕಿತ್ತು ಹಾಕಿರುತ್ತಾರೆ. ಆದ್ದರಿಂದ, ಒಂದು ತಾಲ್ಲೂಕಿಗೆ ಒಬ್ಬ ಸರ್ವೇಯರ್ನನ್ನಾದರೂ ಅಪಾಯಿಂಟ್ ಮಾಡಿ ಏನು ಕೆರೆ ಜಾಗಗಳು ಒತ್ತುವರಿಯಾಗಿದೆಯೋ ಅದನ್ನು ಬಿಡಿಸಲು ಕ್ರಮ ತೆಗೆದುಕೊಳ್ಳುತ್ತದೆಯೋ? ಇದರ ಬಗ್ಗೆ ತಹಶೀಲ್ದಾರ್ ರವರನ್ನು ಕೇಳಿದರೆ, ನಮ್ಮಲ್ಲಿ ಒಬ್ಬರೇ ಸರ್ವೇಯರ್ ಇರುವುದರಿಂದ ಈ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಆದ್ದರಿಂದ, ಹೆಚ್ಚುವರಿಯಾಗಿ ಸರ್ವೇಯರ್ ಗಳನ್ನು ಅಪಾಯಿಂಟ್ ಮಾಡಿಕೊಂಡು, ಕೆರೆ ಜಾಗಗಳು ಏನು ಒತ್ತುವರಿಯಾಗಿವೆಯೋ ಅದನ್ನು ಬಿಡಿಸಿಕೊಂಡು ಕಿತ್ತು ಹಾಕಿರುವ ಕೋಡಿಗಳನ್ನು ಸರಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಈ ಕೆಲಸವನ್ನು ಬೆಂಗಳೂರು, ಚಿತ್ರದುರ್ಗ ಮತ್ತು ಕೋಲಾರ ಜಿಲ್ಲೆಗಳಲ್ಲಿ ಆದ್ಯತೆ ಮೇಲೆ ಕೆಲಸ ತೆಗೆದುಕೊಳ್ಳಬೇಕು.

ಶ್ರೀ ಚಂದ್ರಶೇಖರ ಮಲ್ಲಿಕಾರ್ಜುನ ಮಾಮನಿ (ಪರಸಡಗ) : ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಬರತಕ್ಕಂಥ ಮಾದಾಯಿ ಮತ್ತು ಮಲಪ್ರಭಾ ಯೋಜನೆಯಲ್ಲಿ ಕಳೆದ 25 ವರ್ಷದಲ್ಲಿ ಕೇವಲ 5 ವರ್ಷ ಮಾತ್ರ ರಿಸರ್ವಾಯರ್‌ನಲ್ಲಿ ನೀರು ಬಂತು. ಈ ಮಾದಾಯಿ ಯೋಜನೆ ಬಗ್ಗೆ ಹಿಂದಿನ ಮುಖ್ಯ ಮಂತ್ರಿಗಳಾಗಿದ್ದ ಸನ್ಮಾನ್ಯ ಎಸ್.ಆರ್. ಬೊಮ್ಮಾಯಿಯವರು ಒಂದು ಮಾತನ್ನು ಹೇಳಿದ್ದರು, ಗೋವಾ ಮುಖ್ಯ ಮಂತ್ರಿ ಸಂಗಡ ಮಾತನಾಡಿದ್ದರು. ಅದರಿಂದ ವಿದ್ಯುತ್ತು ಉತ್ಪಾದನೆ ಮಾಡಿ, ಅಲ್ಲಿ ಬರತಕ್ಕಂಥ ವಿದ್ಯುತ್ತು ಅವರಿಗೆ ಕೊಟ್ಟು ಆ ನೀರನ್ನು ನಾವು ತೆಗೆದುಕೊಳ್ಳತಕ್ಕಂಥ ಯೋಜನೆಯ ಬಗ್ಗೆ ಮಾತುಕತೆ ನಡೆಸಿದ್ದೇವೆ ಎಂದು ಹೇಳಿದ್ದರು. ಆದ್ದರಿಂದ ಸನ್ಮಾನ್ಯ ಮುಖ್ಯ ಮಂತ್ರಿಯವರು ಗೋವಾದ ಮುಖ್ಯ ಮಂತ್ರಿಯವರ ಮೇಲೆ ಪ್ರಭಾವ ಬೀರಿ, ನಮ್ಮ ಜನರ ಕಷ್ಟನಷ್ಟಗಳನ್ನು ನೋಡಿಕೊಂಡು ಆ ನೀರನ್ನು ಉಪಯೋಗ ಮಾಡಲು ಸೂಕ್ತ ಮತ್ತು ಸ್ಪಷ್ಟ ಉತ್ತರವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ನಮ್ಮ ಪ್ರದೇಶದಲ್ಲಿ ಜವುಳು - ಸವುಳು ಪ್ರದೇಶದ ಬಗ್ಗೆ ತಾವು ಪಿಡಬ್ಲ್ಯುಡಿ ಮಂತ್ರಿಗಳಾಗಿದ್ದಾಗ ಭೇಟಿ ಕೊಟ್ಟು ಆ ಕಾರ್ಯಕ್ರಮವನ್ನು ಮಾಡುತ್ತೇನೆ ಎಂಬ ಭರವಸೆಯನ್ನು ಕೊಟ್ಟಿದ್ದೀರಿ. ಆ ಭರವಸೆಯನ್ನು ಪೂರೈಸಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಅವರೇಗೌಡ ಲಿಂಗನಗೌಡ ಪಾಟೀಲ್ (ಲಿಂಗಸುಗೂರು) : ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಬರತಕ್ಕಂಥ ಮೂರು ನೀರಾವರಿ ಯೋಜನೆಗಳ ಬಗ್ಗೆ ಕೇಳಿಕೊಳ್ಳುವುದೇನೆಂದರೆ ಮಸ್ಕಿ ನಾಲಾ ಯೋಜನೆಯು 1072ರಲ್ಲಿ ಪ್ರಾರಂಭವಾಗಿ ಮೂರು ಕೋಟಿ ರೂಪಾಯಿಗಳಲ್ಲಿ ಮುಗಿಯಬೇಕಾಗಿದ್ದ ಯೋಜನೆಯು ಈಗ 23 ಕೋಟಿಗಳಿಗೆ ತಲುಪಿದೆ. ಹೋದ ವರ್ಷದಲ್ಲಿ ಮೂರು ಕೋಟಿಗಳನ್ನು ಇದಕ್ಕಾಗಿ ಕೊಟ್ಟು ನಂತರ ಅದನ್ನು ವಾಪಸ್ ಪಡೆದಿದ್ದಾರೆ. ಇದು ಈಗ ಸ್ಥಗಿತಗೊಂಡು ನನ್ನ ಕ್ಷೇತ್ರದಲ್ಲಿ ಬರತಕ್ಕಂಥ 8000 ಸಾವಿರ ಎಕರೆಗೆ ನೀರಾವರಿ ಸೌಲಭ್ಯ ಇರಲಾರದಂಥ ಪರಿಸ್ಥಿತಿ ಬಂದಿದೆ. ನಮ್ಮ ಉತ್ತರ ಕರ್ನಾಟಕದಲ್ಲಿ ನೀರಾವರಿ ಯೋಜನೆಗಳ ಬಗ್ಗೆ ಒಂದು ರೀತಿಯಲ್ಲಿ ಮಲತಾಯಿ ಧೋರಣೆ ಇದೆ ಎಂದು ಭಾವಿಸುವ ಸ್ಥಿತಿ ಬಂದಿದೆ. ಇಂಥ ಅಭಿಪ್ರಾಯವನ್ನು ಮುಖ್ಯ ಮಂತ್ರಿಯವರು ಪರಿಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆಯೇ ಕೃಷ್ಣ ಬಲದಂಡೆ ಯೋಜನೆಯ ಬಗ್ಗೆ ಮಾನ್ಯ ಮುಖ್ಯ ಮಂತ್ರಿಯವರು ದೇವದುರ್ಗದಲ್ಲಿ ನೀರಾವರಿ ಯೋಜನೆಯ ಬಗ್ಗೆ ಹೋರಾಟ ಸಮಿತಿಯನ್ನು ಮಾಡಿ ಅಲ್ಲಿಗೆ ಕರೆಸಿದಾಗ ಅವರು ನಾನು ಮುಖ್ಯ ಮಂತ್ರಿಯಾಗಿದ್ದರೂ ಕೂಡ ಐದು ವರ್ಷಗಳಲ್ಲಿ ಇದನ್ನು ಮುಗಿಸಲು ಆಗುವುದಿಲ್ಲವೆಂಬ ಮಾತನ್ನು ಹೇಳಿದ್ದರು. ಈಗ ಅದನ್ನು ಯಾವ ರೀತಿಯಲ್ಲಿ ಮುಗಿಸಿಕೊಡುತ್ತೀರ ಎಂಬ ಬಗ್ಗೆ ಯೋಜನೆಯನ್ನು ರೂಪಿಸಬೇಕೆಂದು ಕೇಳುತ್ತೇನೆ. ನನ್ನ ಕ್ಷೇತ್ರದಲ್ಲಿನ ಪ್ರಮುಖವಾದ ಯೋಜನೆ ರಾಂಪುರ ಲಿಫ್ಟ್ ಇರಿಗೇಷನ್ ಯೋಜನೆಯೂ ಕೂಡ ಹತ್ತು ವರ್ಷಗಳ ಹಿಂದೆ ಪ್ರಾರಂಭವಾಗಿತ್ತು. ಇದರಿಂದ ನನ್ನ ಕ್ಷೇತ್ರದಲ್ಲಿನ 30 ಸಾವಿರ ಎಕರೆ ಪ್ರದೇಶಕ್ಕೆ ನೀರಾವರಿ ದೊರಕುತ್ತದೆ. ಅದನ್ನು ದಯಮಾಡಿ ಮಾಡಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್.ಡಿ.ದೇವೇಗೌಡ (ಮುಖ್ಯ ಮಂತ್ರಿಗಳು): ಮಾನ್ಯ ಅಧ್ಯಕ್ಷರೇ, ಈ ಚರ್ಚೆಯು ನಿನ್ನೆಯೇ ಮುಕ್ತಾಯವಾಗಬೇಕಾಗಿತ್ತು. ಬಹಳ ಪ್ರಾಮುಖ್ಯವಾದ ವಿಚಾರ ಎಂದು ಇವೊತ್ತು ಕೂಡ ಇಡೀ ದಿನ ತೆಗೆದುಕೊಂಡಿದೆ. ಇದು ಅತ್ಯಂತ ಪ್ರಮುಖ ವಿಚಾರವಾದ ಕಾರಣ ನಿಮ್ಮ ನಿಮ್ಮ ಕ್ಷೇತ್ರದಲ್ಲಿನ ಸಮಸ್ಯೆಗಳ ಬಗ್ಗೆ ಕೇಳುವುದು ಸಹಜವೇ. ಆದರೆ ಸಮಯಾವಕಾಶದ ಬಗ್ಗೆ ಚಿಂತಿಸಬೇಕಾಗುತ್ತದೆ. ನಾನು ತಮಗೆಲ್ಲರಿಗೂ ಆಶ್ವಾಸನೆ ಕೊಡುತ್ತೇನೆ. ನಾನು ಪ್ರತಿಯೊಂದು ಜಿಲ್ಲೆಯ ಶಾಸಕರನ್ನು ಪ್ರತ್ಯೇಕವಾಗಿ ಕರೆಯಿಸಿ, ಎಲ್ಲಾ ಕ್ಷೇತ್ರಗಳಲ್ಲಿರತಕ್ಕಂಥ ಸಣ್ಣ ಮಧ್ಯದ ದೊಡ್ಡ ನೀರಾವರಿಗಳ ಬಗ್ಗೆ ನಾನು ರಿವ್ಯೂ ಮಾಡಿ ಏನು ಮಾಡಬೇಕೆಂದು ನಿರ್ಣಯ ಮಾಡುತ್ತೇನೆ. ಆದ್ದರಿಂದ ತಾವು ಕ್ಲಾರಿಫಿಕೇಷನ್ ಕೇಳುವುದು ಬೇಡ. ಬಹಳಷ್ಟು ಜನ ಮಾನ್ಯ ಸದಸ್ಯರುಗಳು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ. ಸಾಧ್ಯವಾದಷ್ಟು ಮಟ್ಟಿಗೆ ಹೇಮಾವತಿ, ಹಾರಂಗಿ ಇಂದ ನೀರನ್ನು ಬಿಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ. ಆದ್ದರಿಂದ ಇಲ್ಲಿಗೆ ಚರ್ಚೆಯನ್ನು ಮುಕ್ತಾಯ ಮಾಡಿ ಬಿಲ್‌ಗಳನ್ನು ಮಂಡಿಸಲು ಅವಕಾಶ ಮಾಡಿಕೊಡಬೇಕಾಗಿ ಕೇಳಿಕೊಳ್ಳುತ್ತೇನೆ. ಭದ್ರಾ ಕೆಲಸವನ್ನು 1996ರ ಜೂನ್ ಒಳಗಾಗಿ ಮುಗಿಸುತ್ತೇನೆ. ತ್ವರಿತವಾಗಿ ಅಲ್ಲಿ ಕೆಲಸ ನಡೆಯುತ್ತಾ ಇದೆ. ಯಾವುದೇ ಕೊರತೆ ಇಲ್ಲದ ಹಾಗೆ ಏನು ಬೇಕೋ ಅದನ್ನು ನಾನು ವ್ಯವಸ್ಥೆ ಮಾಡುತ್ತೇನೆ. ಹಾಗೆಯೇ ಮಾದಾಯಿ ಬಗ್ಗೆ ಗೋವಾ ಮುಖ್ಯಮಂತ್ರಿಯವರ ಜೊತೆಗೆ ಚರ್ಚೆ ಮಾಡುತ್ತೇನೆ. ಮುಳವಾಡ ಲಿಫ್ಟ್ ಇರಿಗೇಶನ್ ಸ್ಕೀಮ್‌ನಲ್ಲಿ 8 ಟಿಎಂಸಿಗೆ ಏನು ಮಾಡಿಕೊಂಡಿದ್ದಾರೆ, ಅದನ್ನು ಅಲ್ಲಿಗೆ ನಿಲ್ಲಿಸುವುದಿಲ್ಲ. ಬಿಜಾಪುರ ಜಿಲ್ಲೆಯ ವಿಚಾರದಲ್ಲಿ ಇವೊತ್ತು ನಾರಾಯಣಪುರ, ಆಲಮಟ್ಟಿ, ಯೋಜನೆಗಳನ್ನು ಪೂರ್ಣಗೊಳಿಸಬೇಕಾಗಿದೆ. ಜಿಲ್ಲೆಗೆ ನೀರಾವರಿ ವಿಚಾರದಲ್ಲಿ ಅನ್ಯಾಯವಾಗಿದೆ ಎಂಬ ಮಾತನ್ನು ನಾನೇ ಸದನದಲ್ಲಿ ಹೇಳಿದ್ದೇನೆ. 2 ಲಕ್ಷ ಎಕರೆ

ಪ್ರದೇಶ ನಿಮ್ಮದ್ದು ಮುಳುಗಡೆಯಾಗಿದೆ. ಇಂಡಿ ಕೆನಾಲ್‌ನ ವಾಟರ್ ಪ್ಲಾನ್‌ನ್ನು ರಿವೈಸ್ ಮಾಡಿ ಇಂಡಿ ಕೆನಾಲ್‌ಅನ್ನು ಪ್ರಾರಂಭ ಮಾಡಿದವರು ಜನತಾ ಸರಕಾರದವರು ಎಂಬುದನ್ನು ದಯಮಾಡಿ ಅರ್ಥ ಮಾಡಿಕೊಳ್ಳಬೇಕು. 1986ರಲ್ಲಿ ನಾವು ಆ ಕೆಲಸವನ್ನು ಮಾಡದಿದ್ದರೆ ಈ ಒಂದೂವರೆ ಲಕ್ಷ ಎಕರೆಗೂ ನೀರಾವರಿ ಬರುತ್ತಾ ಇರಲಿಲ್ಲ. ನಾನು ಮುಳವಾಡ ಲಿಫ್ಟ್ ಸ್ಕೀಮ್‌ನ ಬಗ್ಗೆ ಕೂಡ ಗಮನ ಇಟ್ಟಿದ್ದೇನೆ. ನಾನು ಹಣ ಜೋಡಿಸುವುದಾದರೆ ಮೇಲ್ಭಾಗದಲ್ಲಿದ್ದು ನಾನು ಹೆದರಿಕೊಳ್ಳಬೇಕೇ? ಆ ಕಡೆಯಲ್ಲಿರುವ ನೀವು ನನಗೆ ಸಹಕಾರ ಕೊಡಬೇಕು. ನಿಮ್ಮ ಸಹಕಾರದಿಂದ ಬಾಕಿ ಕೆಲಸಗಳನ್ನು ಮಾಡಲು ನಾನು ಸಿದ್ಧನಿದ್ದೇನೆ.

ಶ್ರೀ ಜಿ. ಶಂಕರೇಗೌಡ (ಹೊಸಪೇಟೆ) : ನಮ್ಮಲ್ಲಿ ತುಂಗಭದ್ರಾ ನೀರನ್ನು ತಡೆಹಿಡಿದಿದ್ದಾರೆ. 15-4-95 ರಂದು ತಡೆಹಿಡಿದಿದ್ದಾರೆ. ಇದರಿಂದಾಗಿ ನಮಗೆ ತೊಂದರೆಯುಂಟಾದ ಬಗ್ಗೆ ಹಾಸೂ ನೀರನ್ನು ಬಿಡಿಸುವ ಬಗ್ಗೆ ತಾವುಗಳು ಉತ್ತರ ಕೊಟ್ಟಿಲ್ಲ.

ಶ್ರೀ ಹೆಚ್.ಡಿ. ದೇವೇಗೌಡ : ಆ ನೀರಿನ ಕೊನೆಯ ಡ್ರಾಫ್ಟ್‌ವರೆಗೂ ಕೊಡಲು ಏನು ಪ್ರಯತ್ನ ಮಾಡಬೇಕೋ ಅದನ್ನು ಮಾಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೇ....

ಅಧ್ಯಕ್ಷರು : ಶ್ರೀರಾಮರೆಡ್ಡಿಯವರೇ, ನಿಮಗೆ ಸಾಕಷ್ಟು ಅವಕಾಶವನ್ನು ಕೊಟ್ಟಿದ್ದೇನೆ. ಇತರರಿಗೂ ನಾನು ಅವಕಾಶ ಕೊಡಬೇಕಲ್ಲಾ? ನಾನು ಎಲ್ಲಾ ಶಾಸಕರಿಗೆ ಸಮಾನ ಅವಕಾಶ ಕಲ್ಪಿಸಿ ಕೊಡಬೇಕಾದ ಹೊಣೆಯನ್ನು ಹೊತ್ತಿದ್ದೇನೆ. ತಾವು ನನಗೆ ಸಹಕಾರ ನೀಡಬೇಕು. ತಾವು ಹೀಗೆ ಮಾಡಿದರೆ ಕಷ್ಟವಾಗುತ್ತದೆ.

ಶ್ರೀ ಸಿ.ಹೆಚ್. ವಿಜಯಶಂಕರ್ (ಹುಣಸೂರು) : ಮಾನ್ಯ ಅಧ್ಯಕ್ಷರೇ, ತಮ್ಮ ಮೂಲಕ ನನ್ನ ಮನವಿ ಏನೆಂದರೆ ಬಹಳ ದಿನಗಳಿಂದ ಕಡಲಕ್ಕನಕೆರೆ ಯೋಜನೆಯು ನೆನೆಗುದಿಗೆ ಬಿದ್ದಿರುವುದು ತಮಗೆ ಗೊತ್ತಿದೆ. ಇದನ್ನು ಹಾರಂಗಿ ಎರಡನೇ ಹಂತದ ಯೋಜನೆ ಎಂದು ಕರೆಯುತ್ತಾರೆ. ಸರ್ಕಾರ ಇದನ್ನು ಕೈಗೆತ್ತಿಕೊಂಡು ಇಧನ್ನು ಹಾರಂಗಿ ಎರಡನೇ ಹಂತದ ಯೋಜನೆ ಎಂದು ಕರೆಯುತ್ತಾರೆ. ಇದನ್ನು ಎಷ್ಟು ಸಮಯದಲ್ಲಿ ಮುಗಿಸುತ್ತೀರಿ ಎಂಬ ಬಗ್ಗೆ ಹೇಳಬೇಕು. ಇದರಿಂದ ಕೆ.ಆರ್. ನಗರ, ಪಿರಿಯಪಟ್ಟಣ ಹುಣಸೂರು ಮೂರು ತಾಲ್ಲೂಕುಗಳಿಗೆ ಪ್ರಯೋಜನವಾಗುತ್ತದೆ. ಇದನ್ನು ದಯಮಾಡಿ ಕೈಗೆತ್ತಿಕೊಂಡು ತ್ವರಿತವಾಗಿ ಮುಗಿಸಿಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ : ಆ ಎಲ್ಲಾ ಯೋಜನೆಗಳನ್ನು ಒಂದನೇಯ ಹಂತದಲ್ಲಿ ತೆಗೆದುಕೊಂಡು ಬಂದು 1980ರಲ್ಲಿ ಅವೆಲ್ಲವನ್ನು ರೀಕಾಸ್ಟ್ ಮಾಡಿದ ಉದ್ದೇಶ ಏನೆಂದರೆ ಮುಂದೆ ಟ್ರಿಬ್ಯುನಲ್ ಮುಂದೆ ಅನಾಹುತವಾದರೆ ನಮ್ಮ ಕ್ಲೈಮ್ ಏನಿಡಬೇಕೆಂದು ಮಾಡಿ ಎಲ್ಲಾ ಮುಂದಾಲೋಚನೆಯಿಂದ ಮಾಡಿದ್ದಾಗಿದೆ. ಆ ಯೋಜನೆಯನ್ನು ಮುಂದುವರಿಸಿಕೊಂಡು ಹೋಗುತ್ತೇವೆ. ಇದರಲ್ಲಿ ಮೊದಲನೆ ಯೋಜನೆ ಎರಡನೇ ಯೋಜನೆ ಎಂದು ಇಲ್ಲ.

ಅಧ್ಯಕ್ಷರು : ಇಲ್ಲಿಗೆ ಚರ್ಚೆ ಮುಕ್ತಾಯವಾಗಿದೆ.

ಪ್ರಕಟಣೆ

ಮಾನ್ಯ ಸಭಾಪತಿಯವರು, ಈ ಕೆಳಕಂಡ ಸಂದೇಶವನ್ನು ಕಳುಹಿಸಿರುತ್ತಾರೆ. "ಕರ್ನಾಟಕ ವಿಧಾನ ಪರಿಷತ್ತಿನ ಕಾರ್ಯವಿಧಾನ ಹಾಗೂ ನಡವಳಿಕೆಯ ನಿಯಮ 116ರ ಮೇರೆಗೆ ಕರ್ನಾಟಕ ವಿಧಾನಪರಿಷತ್‌ನಲ್ಲಿ 19-4-995ರಂದು ಕರ್ನಾಟಕ ಸ್ಥಳೀಯ